# 1. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಪರಿಚಯ

❖ **ಹಿನ್ನೆಲೆ :** ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡಿ, ಹಲವಾರು ಕಾರ್ಯಕ್ರಮಗಳನ್ನು ರೂಪಿಸಿವೆ. ಅವುಗಳಲ್ಲಿ ಪ್ರಮುಖವಾಗಿ ಪ್ರತ್ಯೇಕ ಹೆಣ್ಣು ಮಕ್ಕಳ ಶಾಲೆಗಳನ್ನು ಪ್ರಾರಂಭಿಸಿರುವುದು, ಒಂದರಿಂದ ಪದವಿ ತರಗತಿಯವರೆಗೆ ಉಚಿತ ಶಿಕ್ಷಣ; ಹೆಣ್ಣು ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ (ಎನ್.ಪಿ.ಇ.ಜಿ.ಇ.ಎಲ್.); ಎಂಟನೇ ತರಗತಿಯ ಎಲ್ಲಾ ಹೆಣ್ಣು ಮಕ್ಕಳಿಗೆ ಸೈಕಲ್ ವಿತರಣೆ–ಇತ್ಯಾದಿ. ಇವು ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸರ್ಕಾರ ಹೊಂದಿರುವ ಕಾಳಜಿಯನ್ನು ಬಿಂಬಿಸುತ್ತವೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಆರ್ಥಿಕ ಸಹಕಾರದೊಂದಿಗೆ ಪ್ರಾರಂಭಿಸಿರುವ ಕಸ್ತೂರಬಾ ಗಾಂಧಿ ಬಾಲಿಕಾ ಶಾಲೆಗಳ (ಕೆ.ಜಿ.ಬಿ.ವಿ) ಸ್ಥಾಪನೆಯು ಸರ್ವ ಶಿಕ್ಷಣ ಅಭಿಯಾನದ ಒಂದು ಪ್ರತಿಷ್ಠಿತ ಕಾರ್ಯಕ್ರಮವಾಗಿದೆ.

ಹೆಣ್ಣು ಮತ್ತು ಗಂಡು ಮಕ್ಕಳ ದಾಖಲಾತಿಯ ನಡುವಿನ ಅಂತರ ; ಧಾರಣ ಪ್ರಮಾಣದಲ್ಲಿನ ಅಂತರ ; ಶಾಲೆಯ ಅಂತಿಮ ತರಗತಿಗಳನ್ನು ಪೂರ್ಣಗೊಳಿಸುವಿಕೆಯಲ್ಲಿನ ಅಂತರ; ಮುಂತಾದ ಸೂಚಕಗಳನ್ನು (indicators) ಗಮನಿಸಿದಾಗ ಹೆಣ್ಣು ಮಕ್ಕಳ ಶಿಕ್ಷಣ ನಿರೀಕ್ಷಿತ ಮಟ್ಟಕ್ಕೆ ಇಲ್ಲದಿರುವುದು ಆತಂಕಕಾರಿಯಾಗಿದೆ. ಬಹುತೇಕ ದುರ್ಬಲವರ್ಗದ ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗಿರುವುದು ಅಂಕಿ ಅಂಶಗಳಿಂದ ತಿಳಿಯುತ್ತದೆ. ಇಂತಹ ತಾರತಮ್ಯಗಳನ್ನು ತೊಡೆದು ಹಾಕಲು ಹಾಗೂ ಶೈಕ್ಷಣಿಕ ಕ್ಷೇತ್ರದ ವ್ಯತ್ಯಯಗಳನ್ನು ತುಂಬಲು ಯೋಜನೆಗಳನ್ನು ರೂಪಿಸಲಾಯಿತು. ಡಿ.ಪಿ.ಇ.ಪಿ; ಇಂತಹ ನೆಲೆಯಲ್ಲಿ ರೂಪುಗೊಂಡ ಒಂದು ಕಾರ್ಯಕ್ರಮ. ತದನಂತರದಲ್ಲಿ ಸರ್ವ ಶಿಕ್ಷಣ ಅಭಿಯಾನ ಜಾರಿಯಾಯಿತು. ಸರ್ವ ಶಿಕ್ಷಣ ಅಭಿಯಾನದ ಒಂದು ಮುಖ್ಯ ಕಾರ್ಯಕ್ರಮ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಕಾರ್ಯಕ್ರಮ – ಸಂಕಷ್ಟದಲ್ಲಿ ಬದುಕುತ್ತಿರುವ ಶಾಲಾ ವಯಸ್ಸಿನ; ಶಾಲೆ ತೊರೆದ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಇದು ಬೆಳ್ಳಿ ರೇಖೆಯಾಗಿ ಪರಿಣಮಿಸಿದೆ.

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 3–12–04 ರಂದು ನಡೆದ 61ನೇ ಯೋಜನೆಯ ಅನುಮೋದನಾ ಮಂಡಳಿ ಸಭೆಯಲ್ಲಿ ಕರ್ನಾಟಕ ರಾಜ್ಯಕ್ಕೆ 58 ಕಸ್ತೂರಬಾ ಬಾಲಿಕಾ ವಿದ್ಯಾಲಯಗಳನ್ನು ಸ್ಥಾಪಿಸಲು ಅನುಮೋದನೆ ನೀಡಲಾಯಿತು. ನಂತರ 2006–07 ಕ್ಕೆ 03 ಮತ್ತು 2008–09 ಸಾಲಿಗೆ 03; ಪ್ರಸ್ತುತ ಈಗ ಕರ್ನಾಟಕ ರಾಜ್ಯದಲ್ಲಿ ಒಟ್ಟು 64 ಕೆ.ಜಿ.ಬಿ.ವಿ. ಶಾಲೆಗಳು ಪ್ರಾರಂಭವಾಗಿದೆ. ಕೆ.ಜಿ.ಬಿ.ವಿ. ಯೋಜನೆಯ ಸೌಲಭ್ಯವನ್ನು ಅರ್ಹ ಹೆಣ್ಣು ಮಕ್ಕಳಿಗೆ ತಲುಪಿಸುವ ಹೊಣೆ ಇಂದಿನ ಅಗತ್ಯವಾಗಿದೆ.

❖ **ಕೆ.ಜಿ.ಬಿ.ವಿ. ಶಾಲೆಗಳ ಸ್ಥಾಪನೆ :**

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 64 ಕಸ್ತೂರಿಬಾ ಗಾಂಧಿ ಬಾಲಿಕಾ ವಿದ್ಯಾಲಯಗಳು ರಾಜ್ಯದ ಶೈಕ್ಷಣಿಕವಾಗಿ ಹಾಗೂ ಮಹಿಳಾ ಸಾಕ್ಷರತೆಯಲ್ಲಿ ಹಿಂದುಳಿದ ಬ್ಲಾಕ್‌ಗಳಲ್ಲಿ ಸ್ಥಾಪಿತವಾಗಿವೆ. ರಾಷ್ಟ್ರೀಯ ಮಹಿಳಾ ಸಾಕ್ಷರತೆ ಮತ್ತು ಲಿಂಗ ಅಸಮಾನತೆಯ ಅಂತರಕ್ಕಿಂತ ಜಾಸ್ತಿ ಇರುವ ಬ್ಲಾಕ್‌ಗಳು ಈ ಯೋಜನೆಯ ಫಲಾನುಭವಿಗಳು. ಈ ಶಾಲೆಗಳನ್ನು ಮಾದರಿ 01 ಮತ್ತು ಮಾದರಿ 03 ರಂತೆ ಸ್ಥಾಪಿಸಲಾಗಿದೆ. 2008–09 ರಲ್ಲಿ ಸ್ಥಾಪಿತವಾದ ಯಾದಗಿರಿ, ಸಿಂಧನೂರು ಮತ್ತು ಗಂಗಾವತಿ ಬ್ಲಾಕ್‌ನ ಕೆ.ಜಿ.ಬಿ.ವಿ ಶಾಲೆಗಳು ಮಾದರಿ 01 ರಂತೆ ಮಂಜೂರಾಗಿವೆ. ಸಿಂಧನೂರು ಮತ್ತು ಗಂಗಾವತಿ ಬ್ಲಾಕ್‌ಗಳ

ಕೆ.ಜಿ.ಬಿ.ವಿ. ಶಾಲೆಗಳು ಅಲ್ಪಸಂಖ್ಯಾತ ಮಕ್ಕಳಿಗಾಗಿ ತೆರೆಯಲಾಗಿದೆ. ಉಳಿದ 61 ಶಾಲೆಗಳು ಮಾದರಿ 03 ರಂತೆ ಸ್ಥಾಪಿಸಲಾಗಿದೆ.

2009–10ನೇ ಸಾಲಿನಿಂದ ಎಲ್ಲಾ 61 ಕೆ.ಜಿ.ಬಿ.ವಿ ಶಾಲೆಗಳನ್ನು ಮಾದರಿ 01 ಕ್ಕೆ ಬದಲಾಯಿಸಲಾಗಿದೆ. ಒಟ್ಟು ಪ್ರಸ್ತುತ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ 64 ಮಾದರಿ 1 ಶಾಲೆಗಳು ಜಾರಿಯಲ್ಲಿವೆ.

ರಾಜ್ಯದಲ್ಲಿ ಪ್ರಾರಂಭಿಸಲಾಗಿರುವ 64 ಶಾಲೆಗಳಲ್ಲಿ 29 ಶಾಲೆಗಳು ಮಹಿಳಾ ಸಮಾಖ್ಯ ಸಂಸ್ಥೆಯಿಂದ ನಡೆಸಲ್ಪಡುತ್ತಿವೆ. ಉಳಿದ 35 ಶಾಲೆಗಳು ಇಲಾಖಾವತಿಯಿಂದ ನಡೆಸಲ್ಪಡುತ್ತಿವೆ.

- **ಫಲಾನುಭವಿಗಳು**
  - ಶಾಲೆಯಿಂದ ಹೊರಗುಳಿದ ಪ್ರಾಥಮಿಕ ಶಾಲಾ ಹಂತವನ್ನು ಪೂರೈಸದ ಹೆಣ್ಣುಮಕ್ಕಳು.
  - ಹಿರಿಯ ವಯಸ್ಸಿನ (10+) ವಯಸ್ಕರಿಗೆ ಆದ್ಯತೆ.
  - ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತ, ಬಡತನ ರೇಖೆಗಿಂತ ಕೆಳಗಿರುವ (B.P.L.) ಶಾಲೆ ಬಿಟ್ಟ ಹೆಣ್ಣುಮಕ್ಕಳು
  - ಶೋಷಿತ, ದೇವದಾಸಿ ಪದ್ದತಿಯಿಂದ ರಕ್ಷಿಸಲ್ಪಟ್ಟ ಹೆಣ್ಣು ಮಕ್ಕಳು.
  - ಬಾಲ ಕಾರ್ಮಿಕ ಪದ್ದತಿ, ಮಕ್ಕಳ ಮಾರಾಟ ಮತ್ತು ಸಾಗಾಣಿಕೆಯಿಂದ ರಕ್ಷಿಸಲ್ಪಟ್ಟ ಶಿಕ್ಷಣ ವಂಚಿತ ಹೆಣ್ಣು ಮಕ್ಕಳು.

- **ಯೋಜನೆಯ ಉದ್ದೇಶ :**
  - ಶೋಷಿತ ಹಾಗೂ ಹಿಂದುಳಿದ ಕುಟುಂಬಗಳ, ಮತೀಯ ಅಲ್ಪ ಸಂಖ್ಯಾತ, ಆರ್ಥಿಕ ಸಂಕಷ್ಠದಲ್ಲಿರುವ ಕುಟುಂಬಗಳ ಶಾಲೆ ಬಿಟ್ಟ ಹೆಣ್ಣು ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು
  - ಹಿರಿಯ ಪ್ರಾಥಮಿಕ ಶಾಲಾ ಹಂತದಲ್ಲಿ ಬಾಲಕಿಯರ ಹಾಗೂ ಬಾಲಕರ ದಾಖಲಾತಿಯಲ್ಲಿರುವ ಅಂತರವನ್ನು ಗಮನಾರ್ಹವಾಗಿ ಕಡಿಮೆ ಮಾಡುವುದು ಹಾಗೂ ಗ್ರಾಮೀಣ ಪ್ರದೇಶದಲ್ಲಿ ಮತ್ತು ಸೌಲಭ್ಯ ವಂಚಿತ ಸಮುದಾಯಗಳಲ್ಲಿ ಲಿಂಗ ತಾರತಮ್ಯವನ್ನು ಹೋಗಲಾಡಿಸುವುದು.
  - 6 ರಿಂದ 14 ವರ್ಷದ ಪ್ರಾಥಮಿಕ ಶಿಕ್ಷಣವನ್ನು ಪೂರೈಸದ ಹೆಣ್ಣು ಮಕ್ಕಳನ್ನು ಮುಖ್ಯವಾಹಿನಿಗೆ ತಂದು ಜೀವನ ಉಪಯುಕ್ತ ಕೌಶಲ್ಯಗಳನ್ನು ಅವರಲ್ಲಿ ಬೆಳೆಸುವುದು.
  - ಸಾಮಾಜಿಕ ಅನಿಷ್ಠ ಪದ್ದತಿಗಳಾದ ಬಾಲ್ಯ ವಿವಾಹ, ದೇವದಾಸಿ ಪದ್ಧತಿಯಲ್ಲಿ ಶಿಕ್ಷಣ ವಂಚಿತ ಮಕ್ಕಳು ಮತ್ತು ಬಾಲಕಾರ್ಮಿಕ ಪದ್ದತಿ ಹಾಗೂ ಮಕ್ಕಳ ಮಾರಾಟ ಮತ್ತು ಸಾಗಾಣಿಕೆಯಿಂದ ರಕ್ಷಿಸಿದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವುದು. ಶಾಲೆಯ ಅವಕಾಶ ಮತ್ತು ಗುಣಾತ್ಮಕ ಶಿಕ್ಷಣದ ಸೌಲಭ್ಯಗಳನ್ನು ಖಾತ್ರಿ ಪಡಿಸಿ ವಸತಿ ಸಹಿತ ಸನಿವಾಸ ಶಾಲೆಗಳನ್ನು ಪ್ರಾರಂಭಿಸುವುದು.
  - ಬಾಲಕಿಯರಿಗೆ ವಿಶೇಷ ಸೌಲಭ್ಯದ ವಿಸ್ತರಣೆಯೊಂದಿಗೆ ಒಟ್ಟಾರೆ ಮಹಿಳೆಯರಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಆಸಕ್ತಿಯನ್ನು ಹೆಚ್ಚಿಸಿ ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.

❖ **ಸಂಪನ್ಮೂಲ ನಿರ್ವಹಣೆ :**

(ಕ್ರೋಢಿಕರಣ ಹಾಗೂ ನಿರ್ವಹಣೆ; ಆರ್ಥಿಕ ಮಂಜೂರಾತಿ, ಸ್ಥಳಿಯ ಸರ್ಕಾರಗಳು)

I. ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಎಸ್.ಎಸ್.ಎ. ಮಾದರಿಯಂತೆ 75 : 25 ಅನುಪಾತದಲ್ಲಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನ ಭರಿಸುವುದು. ನಂತರ 50 : 50 ಅನುಪಾತವು ಮುಂದುವರಿಯುವುದು. ಈ ಅನುಪಾತವು ಕಾಲ ಕಾಲಕ್ಕೆ ಬದಲಾಗುತ್ತಿದೆ.

II. ಕೆ.ಜಿ.ಬಿ.ವಿ. ಪ್ರಸ್ತಾವನೆಯು ಈಗಾಗಲೇ ಪ್ರಸ್ತಾಪಿಸಿರುವ N.P.E.G.E.L. ಮತ್ತು S.S.A. ಅನುದಾನಕ್ಕೆ ಹೆಚ್ಚುವರಿಯಾಗಿ ಪ್ರತ್ಯೇಕ ಅನುದಾನಕ್ಕೊಳಪಟ್ಟಿರುತ್ತದೆ. K.G.B.V. ಯೋಜನೆಯು N.P.E.G.E.L. ಮತ್ತು ಮಹಿಳಾ ಸಮಾಖ್ಯದ ಕಾರ್ಯಕ್ರಮಗಳೊಂದಿಗೆ ಸಮನ್ವಯವಾಗುವಂತೆ S.S.A. ಸಮಿತಿಯು ಕ್ರಮ ಕೈಗೊಳ್ಳುವುದು. ಅನುದಾನವನ್ನು ನಿಗದಿತ ಚಟುವಟಿಕೆಗಳಿಗೆ ಬಳಸುವುದು. ಮತ್ತು ಚಟುವಟಿಕೆಗಳು ಪುನರಾವರ್ತನೆಯಾಗದಂತೆ ನಿಗಾ ವಹಿಸುವುದು.

III. ಕೇಂದ್ರ ಸರ್ಕಾರ ಹಣವನ್ನು ನೇರವಾಗಿ S.S.A. ಅನುಷ್ಠಾನ ಸಮಿತಿಗೆ ಬಿಡುಗಡೆ ಮಾಡುವುದು. ರಾಜ್ಯ ಸರ್ಕಾರಗಳು ಸಹ ತಮ್ಮ ಭಾಗದ ಅನುದಾನವನ್ನು ಎಸ್.ಎಸ್.ಎ. ರಾಜ್ಯ ಅನುಷ್ಠಾನ ಸಮಿತಿಗೆ ಬಿಡುಗಡೆ ಮಾಡುವುದು. ನಂತರ ಈ ಹಣವನ್ನು ಮಹಿಳಾ ಸಮಾಖ್ಯ ಸಮಿತಿಗೆ ಸದರಿ ಸಂಸ್ಥೆ ಕಾರ್ಯ ನಿರ್ವಹಿಸುವ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಿಡುಗಡೆ ಮಾಡಲಾಗುವುದು. ಮಹಿಳಾ ಸಮಾಖ್ಯ ಕಾರ್ಯ ನಿರ್ವಹಿಸದ ರಾಜ್ಯಗಳಲ್ಲಿ ಎಸ್.ಎಸ್.ಎ. ಲಿಂಗ ಘಟಕದ (Gender Unit) ಮೂಲಕ ಅನುಷ್ಠಾನಗೊಳಿಸುವುದು ಮತ್ತು ಪ್ರಸ್ತುತ ಚಾಲ್ತಿಯಲ್ಲಿರುವ ಸಂಯೋಜನೆಯನ್ನು ಬಳಸುವುದು.

IV. ರಾಜ್ಯ ಸಮಿತಿಯು K.G.B.V. ಗಾಗಿ ಪ್ರತ್ಯೇಕ ಉಳಿತಾಯ ಖಾತೆಯನ್ನು ತೆರೆಯುವುದು. ರಾಜ್ಯ ಸರ್ಕಾರವು ಸಹ ತನ್ನ ಭಾಗದ ಅನುದಾನವನ್ನು ಪ್ರತ್ಯೇಕ ಲೆಕ್ಕ ಶೀರ್ಷಿಕೆಯಲ್ಲಿ ಈ ಖಾತೆಗೆ ಜಮಾ ಮಾಡುವುದು. ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿಯೂ ಸಹ ಪ್ರತ್ಯೇಕ ಖಾತೆಗಳನ್ನು ನಿರ್ವಹಿಸುವುದು.

ಸರ್ವ ಶಿಕ್ಷಣ ಅಭಿಯಾನದಿಂದ ನಿರ್ವಹಿಸಲ್ಪಡುವ K.G.B.V. ಶಾಲೆಯಲ್ಲಿ ಸಂಬಂಧಿಸಿದ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಆ ಶಾಲೆಯ ವಿಶೇಷಾಧಿಕಾರಿಗಳ ಜಂಟಿ ಖಾತೆ ನಿರ್ವಹಿಸಲ್ಪಟ್ಟಿದ್ದು ಈ ಖಾತೆಗೆ ರಾಜ್ಯ ಕಛೇರಿ/ ಜಿಲ್ಲಾ ಕಛೇರಿಯಿಂದ ನೇರವಾಗಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

K.G.B.V. ಶಾಲೆಗಳ ಅನುದಾನವನ್ನು ಅನಾವರ್ತಕ (Non-recurring) ಆವರ್ತಕ ಅನುದಾನ (Recurring) ಅನುದಾನವಾಗಿ ವಿಂಗಡಿಸಲಾಗಿದೆ. ಅನಾವರ್ತಕ ಅನುದಾನವು ಶಾಲೆಯ ಕಾಲಾವಧಿಗೆ ಒಮ್ಮೆ ಮಾತ್ರ ನೀಡಲಾಗುವುದು. ಹಾಗೂ ಆವರ್ತಕ ಅನುದಾನವನ್ನು ಕೇಂದ್ರ ಸರ್ಕಾರದ ಅನುಮೋದನೆಯಂತೆ ಪ್ರತಿ ವರ್ಷ ಬಿಡುಗಡೆ ಮಾಡಲಾಗುವುದು. (ನೋಡಿ ಅನುಬಂಧ – 1,2)

## V ಸ್ಥಳೀಯ ಸರ್ಕಾರಗಳಿಂದ ಸಹಾಯ ಪಡೆಯುವುದು

- ✓ **N.R.E.G.S.** National Rural Employment Guarantee Scheme ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯ್ತಿಯಿಂದ ಲಭ್ಯವಿರುವ ಸೌಲಭ್ಯಗಳನ್ನು ಪಡೆಯುವುದು.
- ✓ ಸಂಘ ಸಂಸ್ಥೆಗಳಿಂದ ಸಹಾಯ ಪಡೆಯುವುದು.
- ✓ ನೀಡುವ ಅನುದಾನ ಕಡಿಮೆಯಾದರೆ ತಾಲ್ಲೂಕು ನಿರ್ವಹಣಾ ಸಮಿತಿಯ (TIC) ಅನುಮೋದನೆ ಪಡೆದು ವಿವಿಧ ಸಂಘ ಸಂಸ್ಥೆಗಳನ್ನು ಭೇಟಿ ಮಾಡಿ ಅವರಿಂದ ಮಕ್ಕಳಿಗೆ ನೋಟ್ ಪುಸ್ತಕವನ್ನು, ಜಾಮಿಟ್ರಿ ಬಾಕ್ಸ್, ಸಮವಸ್ತ್ರಗಳನ್ನು ಪಡೆದು ಮಕ್ಕಳಿಗೆ ವಿತರಣೆ ಮಾಡುವುದು ಹಾಗೂ ಸರಿಯಾದ ಲೆಕ್ಕಪತ್ರಗಳನ್ನು ರೂಪಿಸುವುದು.

❖ **ದಾನಿಗಳಿಂದ ಸಹಕಾರ** : ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿರುವ ಶ್ರೀಮಂತರು, ವಾಣಿಜ್ಯೋದ್ಯಮಿಗಳು, ಹಳೆಯ ವಿದ್ಯಾರ್ಥಿಗಳಿಂದ ಸಹಾಯ ಪಡೆದು ಮಕ್ಕಳಿಗೆ ಅವಶ್ಯವಿರುವ ವಸ್ತುಗಳನ್ನು ವಿತರಣೆ ಮಾಡುವುದು. ತಾಲ್ಲೂಕು ನಿರ್ವಹಣಾ ಸಮಿತಿ (T.I.C.) ಯ ಅನುಮೋದನೆ ಪಡೆಯುವುದು ಕಡ್ಡಾಯ. T.I.C. ಯಿಂದ ಅಂಗೀಕಾರ ಪಡೆದು ದಾನಿಗಳಿಂದ ಬರುವ ಹಣದ ರೂಪದ ಸಹಾಯವನ್ನು ಪ್ರತ್ಯೇಕವಾಗಿ ಬ್ಯಾಂಕ್ ಖಾತೆ ತೆರೆದು ಲೆಕ್ಕ ನಿರ್ವಹಣೆ ಮಾಡುವುದು. ವಸ್ತು ರೂಪದ ಕೊಡುಗೆಯನ್ನು ಪ್ರತ್ಯೇಕವಾಗಿ ದಾಖಲಿಸುವುದು.

**ಅನಾವರ್ತಕ ಅನುದಾನ** : ಅನಾವರ್ತಕ ಅನುದಾನವನ್ನು ಶಾಲೆಗಳಿಗೆ ಹಾಗೂ ಮಹಿಳಾ ಸಮಾಖ್ಯ ಸಂಸ್ಥೆಗೆ ಪೂರ್ಣವಾಗಿ ಬಿಡುಗಡೆ ಮಾಡಲಾಗುವುದು. ಈ ಅನುದಾನದ ವಿವರ ಈ ಕೆಳಕಂಡಂತೆ ಇದೆ.

- ✓ **ಕಟ್ಟಡ ನಿರ್ಮಾಣ** : ವಸತಿ ನಿಲಯ ಕಟ್ಟಡಕ್ಕೆ 08-09ಕ್ಕೆ ಮುನ್ನ ಪ್ರತಿ ಶಾಲೆಗೆ ರೂ. 15.00 ಲಕ್ಷ ಅನುಮೋದನೆಯಾಗಿದೆ. 08-09ನೇ ಸಾಲಿನಲ್ಲಿ 03 ಮಾಡೆಲ್ 01 K.G.B.V ಶಾಲೆಗಳು ಮಂಜೂರಾಗಿದ್ದು, 36.10 ಲಕ್ಷ ರೂಪಾಯಿಗಳನ್ನು ನೀಡಲಾಗುತ್ತಿದೆ. ಮಹಿಳಾ ಸಮಾಖ್ಯ ಸಂಸ್ಥೆ ನಿರ್ವಹಿಸುತ್ತಿರುವ ಶಾಲೆಗಳೂ ಸೇರಿದಂತೆ ಎಲ್ಲಾ ಶಾಲೆಗಳ ಕಟ್ಟಡ ನಿರ್ಮಾಣ ಕಾರ್ಯದ ಜವಾಬ್ದಾರಿಯನ್ನು ಜಿಲ್ಲಾ ಸರ್ವ ಶಿಕ್ಷಣ ಅಭಿಯಾನ ನಿರ್ವಹಿಸುತ್ತದೆ.
- ✓ ಜಿಲ್ಲಾ ಕಛೇರಿಗಳು Plan and Estimate ತಯಾರಿಸಿ ಕೇಂದ್ರ ಕಛೇರಿಯ ಅನುಮೋದನೆ ಪಡೆಯುವುದು. ಹೊಸ ಕೆ.ಜಿ.ಬಿ.ವಿ ಕಟ್ಟಡ ಅಥವಾ ಹೆಚ್ಚುವರಿ ಕೋಣೆ ನಿರ್ಮಾಣದ ಜವಾಬ್ದಾರಿಯನ್ನು ಜಿಲ್ಲಾ ಕಛೇರಿಗಳಿಗೆ ನೀಡಿದೆ. ಜಿಲ್ಲಾ ಕಛೇರಿಗಳು ಟೆಂಡರ್ ಮೂಲಕ ಅಥವಾ ಸರ್ಕಾರಿ ನಿರ್ಮಾಣ ಏಜನ್ಸಿ ಮೂಲಕ ಕಾಮಗಾರಿ ಕೈಗೆತ್ತಿ ಕೊಳ್ಳುವುದು. ಕಾಮಗಾರಿಯ ಗುಣಮಟ್ಟ ಮತ್ತು ಕಾಲಕಾಲಕ್ಕೆ ಟೆಂಡರುದಾರರಿಗೆ ನೀಡಬೇಕಾದ ಹಣ ವಿತರಣೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಕಛೇರಿಗಳು ನಿರ್ವಹಿಸತಕ್ಕದ್ದು.

2009-10 ನೇ ಸಾಲಿನಿಂದ ಎಲ್ಲಾ ಕೆ.ಜಿ.ಬಿ.ವಿ ಶಾಲೆಗಳನ್ನು (ಮಾದರಿ-03 ರಂತೆ ಇದ್ದ 61 ಕೆ.ಜಿ.ಬಿ.ವಿ ಶಾಲೆಗಳು) ಮಾದರಿ 01 ಕ್ಕೆ AWP ಮತ್ತು B -2009 ರಲ್ಲಿ ಮಾರ್ಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಶಾಲೆಗೆ 12-65 ಲಕ್ಷ

ರೂಪಾಯಿಗಳನ್ನು ಕಟ್ಟಡ ಕಾಮಗಾರಿಗೆ ನೀಡಿರುತ್ತಾರೆ. ಈ ಹಣವನ್ನು ಬಳಸಿ ಕನಿಷ್ಠ 04 ತರಗತಿ ಕೋಣೆಗಳನ್ನು ಕೆ.ಜಿ.ಬಿ.ವಿ ಹಾಸ್ಟೆಲ್‌ಗೆ ಹೊಂದಿಕೊಂಡಂತೆ ನಿರ್ಮಾಣ ಮಾಡುವುದು. ಅವಕಾಶವಾದರೆ ಹೆಚ್ಚು ಕೋಣೆಗಳನ್ನು ನಿರ್ಮಿಸಬಹುದು.

ಕಟ್ಟಡ ಕಾಮಗಾರಿಗೆ ಮಾತ್ರವೇ ಅಲ್ಲದೆ ಎಲ್ಲಾ 61 ಕೆ.ಜಿ.ಬಿ.ವಿ ಶಾಲೆಗಳಿಗೆ ಪ್ರತಿ ಶಾಲೆಗೆ ಪೌಳಿ ನಿರ್ಮಾಣಕ್ಕೆ ರೂ. 1.50 ಲಕ್ಷ ; ಕೊಳವೆ ಬಾವಿ ಮತ್ತು ಕೈಪಂಪಿಗಾಗಿ ರೂ–1.00 ಲಕ್ಷ ; ವಿದ್ಯುತ್ ಮತ್ತು ನೀರಿಗಾಗಿ 0.20 ಲಕ್ಷ ರೂ ; ಪೀಠೋಪಕರಣಗಳಿಗಾಗಿ ರೂ. 0.50 ಲಕ್ಷ ; ಕಲಿಕೆ ಬೋಧನೆ ಸಾಮಗ್ರಿಗಾಗಿ ರೂ. 0.50 ಲಕ್ಷ ; ಮತ್ತು 37 ಲಕ್ಷಗಳನ್ನು ಹಾಸಿಗೆ ಹೊದಿಕೆ ಸಂಬಂಧ ನೀಡಲಾಗಿದೆ. ಇದರ ಜೊತೆಗೆ 08–09 ರಲ್ಲಿ ರಾಜ್ಯ ಸರ್ಕಾರದ ವತಿಯಿಂದ ಕೆಲವು ಕೆ.ಜಿ.ಬಿ.ವಿ. ಶಾಲೆಗಳಿಗೆ ಪೌಳಿ ನಿರ್ಮಾಣ ಮತ್ತು ಕೊಳವೆ ಬಾವಿ ಮತ್ತು ಕೈಪಂಪು ಅಳವಡಿಕೆಗಾಗಿ ಹಣ ಮಂಜೂರಾತಿ ನೀಡಿದೆ. **(ನೋಡಿ–ಅನುಬಂಧ)**

ಆದ್ದರಿಂದ ಕಟ್ಟಡ ಯೋಜನೆ ತಯಾರಿಸುವಾಗ ಕಾಮಗಾರಿಗೆ ಲಭ್ಯವಿರುವ ಒಟ್ಟು ಹಣವನ್ನು ಗಣನೆಗೆ ತೆಗೆದುಕೊಂಡು ಕೊಠಡಿ ಮತ್ತು ಇತರ ಕಾಮಗಾರಿ ನಿರ್ವಹಿಸುವುದು. ಶಾಲೆಯಲ್ಲಿ –ಗ್ರಂಥ ಭಂಡಾರ ; ಗಣಕ ಕೋಣೆ ; ಪ್ರಯೋಗಾಲಯ ; ಕಲಿಕಾ–ಬೋಧನಾ ಸಾಮಗ್ರಿಗಳ ಕೋಣೆ ; ಕ್ರೀಡಾ ಕೋಣೆ ; ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರ ಕೋಣೆ ಇರುವುದು ಅನಿವಾರ್ಯ. ಆದ್ದರಿಂದ ನಿಮ್ಮ ಕಟ್ಟಡ ಯೋಜನೆಯು ಮುಂಬರುವ ದಿನಗಳಲ್ಲಿ ಹಣಕಾಸಿನ ಲಭ್ಯತೆ ಆಧರಿಸಿ– ಈ ಕೋಣೆಗಳ ನಿರ್ಮಾಣಕ್ಕೆ ಯುಕ್ತವಾದ ನಿವೇಶನ ಕಾಯ್ದಿರಿಸಿ ಯೋಜನೆ ತಯಾರಿಸುವುದು. ಸದ್ಯಕ್ಕೆ ಲಭ್ಯವಿರುವ ಅನುದಾನದಲ್ಲಿ ಅತ್ಯಂತ ಅಗತ್ಯವಿರುವ (Prioritize the needs) ಕೋಣೆಗಳನ್ನು ನಿರ್ಮಿಸಲು ಯೋಜಿಸತಕ್ಕದ್ದು. ಕಾಮಗಾರಿಗಳ ವೆಚ್ಚವು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಾ ಹೋಗುತ್ತದೆ. ಆದ ಕಾರಣ ಸಿವಿಲ್ ಕಾಮಗಾರಿಗೆ ಲಭ್ಯವಿರುವ ಎಲ್ಲ ಹಣವನ್ನು ಮಾರ್ಚ್ 2010 ರೊಳಗೆ ಬಳಸಿ ಯುಕ್ತವಾದ ಕಟ್ಟಡ ನಿರ್ಮಿಸಲು ಕ್ರಮ ಮಾಡಬೇಕೆಂದು ಸೂಚಿಸಿದೆ.

✓ **ವಿದ್ಯುತ್ ಮತ್ತು ನೀರು :**

08–09 ನೇ ಸಾಲಿನಲ್ಲಿ ಮಂಜೂರಾದ 03 ಕೆ.ಜಿ.ಬಿ.ವಿಗಳಿಗೆ ಪ್ರತಿ ಶಾಲೆಗೆ ಈ ಬಾಬ್ತು ರೂ. 1.20 ಲಕ್ಷ (ಪ್ರತಿ ಕೆಜಿಬಿವಿಗೆ) ಲಭ್ಯವಿದೆ. 61 ಕೆ.ಜಿ.ಬಿ.ವಿ ಗಳಿಗೆ ಪ್ರತಿ ಶಾಲೆಗೆ 20.000 ರೂಪಾಯಿಗಳು 09–10 ರಲ್ಲಿ ಮಂಜೂರಾಗಿದೆ. ಈ ಹಣವನ್ನು ಬಳಸಿ ವಿದ್ಯುತೀಕರಣ ಮತ್ತು ನೀರಿನ ವ್ಯವಸ್ಥೆ ಕಲ್ಪಿಸುವುದು.

✓ **ಪೀಠೋಪಕರಣ ಮತ್ತು ಅಡುಗೆ ಸಾಮಾನುಗಳು :**

08–09 ನೇ ಸಾಲಿನಲ್ಲಿ ಮಂಜೂರಾದ 03 ಕೆ.ಜಿ.ಬಿ.ವಿಗಳಿಗೆ ರೂ 3.00 ಲಕ್ಷ ಮತ್ತು 61 ಕೆ.ಜಿ.ಬಿ.ವಿ.ಗಳಿಗೆ ಈ ಬಾರಿ (09–10) ಪ್ರತಿ ಶಾಲೆಗೆ 50.000/– ಮತ್ತು ಈ ಹಿಂದೆ 2.50 ಲಕ್ಷ ರೂ ಮಂಜೂರಾಗಿರುತ್ತದೆ. ಜಿಲ್ಲಾ ಖರೀದಿ ಸಮಿತಿಯ ಅನುಮೋದನೆ ಪಡೆದು ಈ ವಸ್ತುಗಳನ್ನು ಖರೀದಿಸತಕ್ಕದ್ದು.

ರೂ.3.00 ಲಕ್ಷಗಳಲ್ಲಿ ಮಕ್ಕಳು ಶಾಲೆಯಲ್ಲಿ ಕೂಡಲು ಮತ್ತು ವಸತಿ ನಿಲಯದಲ್ಲಿ ಮಲಗಲು ಮತ್ತು ಇತರ ಪೀಠೋಪಕರಣಗಳನ್ನು ಖರೀದಿಸಿ ಬಳಸಬೇಕು. ಸ್ವಂತ ಕಟ್ಟಡ ಹೊಂದಿರುವ ಕೆ.ಜಿ.ಬಿ.ವಿಗಳು ಪೂರ್ಣ ಖರೀದಿ ಪ್ರಕ್ರಿಯೆಯನ್ನು ಇನ್ನು 03 ತಿಂಗಳಿನಲ್ಲಿ ಪೂರೈಸ ತಕ್ಕದ್ದು. ಇದೇ ಹಣದಲ್ಲಿ

ವಸತಿ ನಿಲಯಕ್ಕೆ ಬೇಕಾದ ಪಾತ್ರೆ-ಪರಿಕರ ಮತ್ತಿತರ ಅಡುಗೆ ತಯಾರಿಕೆಗೆ ಬೇಕಾದ ಸಾಮಗ್ರಿಗಳನ್ನು DPC ಅನುಮತಿ ಪಡೆದು ಖರೀದಿಸತಕ್ಕದ್ದು.

| |
|---|
| ಸೂಚನೆ- ಒಂದು ಮಗು ಮಲಗುವ ಮಂಚದ ಮೇಲೆ ಮತ್ತೊಂದು ಮಂಚ ನಿರ್ಮಿಸಿ ಬಳಸುವುದರಿಂದ ಸ್ಥಳಾವಕಾಶದ ಬಳಕೆ ಗರಿಷ್ಠ ಪ್ರಮಾಣದಲ್ಲಿ ಇರುತ್ತದೆ. ಆದರೆ ಮಕ್ಕಳು ಬೀಳದಂತೆ ತಡೆಯಲು ಮೇಲಿನ ಮಂಚಕ್ಕೆ ಕನಿಷ್ಠ ಒಂದು ಅಡಿ-ಕಬ್ಬಿಣದ ರಕ್ಷಣೆ ಇರುವಂತೆ ಪಟ್ಟಿ ನಿರ್ಮಿಸಿ. |

✓ **<u>ಕಲಿಕೆ-ಬೋಧನೆ ಸಾಮಗ್ರಿಗಳು ಮತ್ತು ಗ್ರಂಥಾಲಯದ ಪತ್ರಿಕೆಗಳು :</u>**

ಮೂರು ಹೊಸ ಕೆ.ಜಿ.ಬಿ.ವಿಗಳಿಗೆ ಲಭ್ಯವಿರುವ ಹಣ ರೂ. 3.50 ಲಕ್ಷ (ಪ್ರತಿ ಕೆಜಿಬಿವಿಗೆ) 61 ಕೆ.ಜಿ.ಬಿ.ವಿಗಳಿಗೆ ಈ ಬಾರಿ ಪ್ರತಿ ಶಾಲೆಗೆ ರೂ.50.000/- ನೀಡಿರುತ್ತಾರೆ- ಈ ಹಿಂದೆ ರೂ 3.00 ಲಕ್ಷ ಹಣವನ್ನು ನೀಡಿರುತ್ತಾರೆ. ಲಭ್ಯ ಹಣವನ್ನು DPC ಅನುಮೋದನೆ ಪಡೆದು ಖರೀದಿಸತಕ್ಕದ್ದು. ಸ್ವಂತ ಕಟ್ಟಡ ಹೊಂದಿರುವ ಕೆ.ಜಿ.ಬಿ.ವಿ.ಗಳ ಈ ಬಾಬ್ತಿನ ಸಂಪೂರ್ಣ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭದ 03 ತಿಂಗಳಿನೊಳಗೆ ಪೂರೈಸತಕ್ಕದ್ದು ವಿವಿಧ ಬಾಬ್ತುಗಳಿಗೆ ಲಭ್ಯ ವಿರುವ ಅನುದಾನವನ್ನು

ಮುಂದಿನಂತೆ ಖರ್ಚು ಮಾಡುವುದು

- ಪ್ರಯೋಗಾಲಯ – ರೂ. 16.66 %
- ಕಲಿಕಾ-ಬೋಧನೆ ಸಾಮಗ್ರಿ- ರೂ. 8.33 %
- ಆಟೋಪಕರಣ – ರೂ. 8.33 %
- ಕಂಪ್ಯೂಟರ್/ಯು.ಪಿ.ಎಸ್- ರೂ. 50.00 %
- ಗ್ರಂಥಾಲಯ ಪುಸ್ತಕಗಳು – ರೂ. 6.69 %
- ವೃತ್ತಿ ಶಿಕ್ಷಣ ಸಾಮಗ್ರಿ – ರೂ. 9.99 %

100.00 %

ಗಮನಿಸಿ : ಅ. ಪ್ರಯೋಗಾಲಯ ;ಕಲಿಕೆ-ಬೋಧನೆ ಸಾಮಗ್ರಿ ; ಆಟೋಪಕರಣ,

ಗ್ರಂಥಾಲಯ ಸಾಮಗ್ರಿ ; ವೃತ್ತಿ ಶಿಕ್ಷಣ ಸಾಮಗ್ರಿಯ ಖರೀದಿಗೆ ಸಂಬಂಧಿಸಿದಂತೆ ಆಯಾ ಕ್ಷೇತ್ರದಲ್ಲಿ ಉತ್ತಮ ಪರಿಶ್ರಮವಿರುವ 05 ಮಂದಿ ತಂಡ ನೀಡುವ ಸಲಹೆಯನ್ನು ಆಧರಿಸಿ ಖರೀದಿ ಪ್ರಕ್ರಿಯೆ ನಡೆಯತಕ್ಕದ್ದು.

ಪ್ರಯೋಗಾಲಯ ಸಮಿತಿ : ಕ.ರಾ.ವಿ.ಪ. ಶಾಖೆ ಇರುವ ಜಿಲ್ಲೆಗಳು ಇವರ

ಪ್ರತಿ ನಿಧಿಯ ಅಧ್ಯಕ್ಷತೆಯಲ್ಲಿ ಮತ್ತು ಇವು ಅಸ್ಥಿತ್ವದಲ್ಲಿ ಇಲ್ಲದ ಜಿಲ್ಲೆಗಳು ರಾಜ್ಯ/ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಪ್ರೌಢಶಾಲೆ ವಿಜ್ಞಾನ ಶಿಕ್ಷಕರ ಅಧ್ಯಕ್ಷತೆ ಹಾಗೂ ಇವೆರಡೂ ಶೂನ್ಯವಿರುವ ಜಿಲ್ಲೆಗಳ DIET ನ PSTE

ವಿಭಾಗದ ವಿಜ್ಞಾನ ಉಪನ್ಯಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸುವುದು. ಸದಸ್ಯರಾಗಿ ಒಬ್ಬ ಉತ್ತಮ ಪರಿಶ್ರಮವಿರುವ ಪಾಥಮಿಕ ಶಾಲಾ ಶಿಕ್ಷಕರು ; ಒಬ್ಬ CRP ಒಬ್ಬ ಪ್ರೌಢಶಾಲೆ BRP (ವಿಜ್ಞಾನ ಆಪೇಕ್ಷಣೀಯ) ಮತ್ತು ಒಬ್ಬ ವಿಶೇಷಾಧಿಕಾರಿ (ಕೆ.ಜಿ.ಬಿ.ವಿ) ಇರುತ್ತಾರೆ. ಇವರಿಂದ ಕೆ.ಜಿ.ಬಿ.ವಿ.ಗೆ ಬೇಕಾದ ಸಾಮಗ್ರಿಗಳ ಪಟ್ಟಿಯನ್ನು ಪಡೆಯುವುದು.

ಕಲಿಕಾ–ಬೋಧನೆ ಸಾಮಗ್ರಿ : ಮೇಲಿನ ಸಮಿತಿಯು ಸಾಮಗ್ರಿಗಳ ಪಟ್ಟಿಯನ್ನು ನೀಡುವಂತೆ ಕ್ರಮ ಮಾಡುವುದು.

ಆಟೋಪಕರಣ : ರಾಜ್ಯ/ರಾಷ್ಟ್ರ ಪ್ರಶಸ್ತಿ ವಿಜೇತ ಪ್ರೌಢಶಾಲೆಯ ದೈಹಿಕ ಶಿಕ್ಷಕರ ಅಧ್ಯಕ್ಷತೆಯಲ್ಲಿ ಇವರು ಇಲ್ಲದ ವೇಳೆ ECO (ದೈಹಿಕ ಶಿಕ್ಷಕರು) ಒಬ್ಬ ಪ್ರಾಥಮಿಕ ಶಾಲೆಯ ದೈಹಿಕ ಶಿಕ್ಷಕ ; ಜಿಲ್ಲಾ ಜೆಂಡರ್ ಕೋ ಆರ್ಡಿನೇಟರ್ ಒಬ್ಬ ಕೆ.ಜಿ.ಬಿ.ವಿ. ವಿಶೇಷಾಧಿಕಾರಿ ; ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯ ಒಬ್ಬ ತಂತ್ರಜ್ಞರು ಒಳಗೊಂಡ ಸಮಿತಿ ರಚಿಸುವುದು ಹಾಗೂ ಕ್ರೀಡಾ ಸಾಮಗ್ರಿಯ ಪಟ್ಟಿಯನ್ನು ಪಡೆಯುವುದು.

ಗ್ರಂಥಾಲಯ ಪುಸ್ತಕಗಳು : ಬೆಂಗಳೂರು ಆಯುಕ್ತರ ಕಚೇರಿಯಲ್ಲಿನ ಸಗಟು ಪುಸ್ತಕ ಖರೀದಿ ಸಮಿತಿ ಮಾಡಿರುವ ಪುಸ್ತಕಗಳ ಪಟ್ಟಿಯಂತೆ ಶೇಕಡಾ 60 ಭಾಗ ಪುಸ್ತಕಗಳನ್ನು ಖರೀದಿಸುವುದು. ಉಳಿದ ಪುಸ್ತಕಗಳನ್ನು ಜಿಲ್ಲೆಯ ಖ್ಯಾತ ಬರಹಗಾರರೊಬ್ಬರ ಅಧ್ಯಕ್ಷತೆಯಲ್ಲಿ –ಒಬ್ಬ

BRC/BEO ಮತ್ತು ಒಬ್ಬ ಪ್ರಾಥಮಿಕ ಶಾಲೆ ಶಿಕ್ಷಕರು ಸಮಿತಿ ರಚಿಸಿ ಪುಸ್ತಕಗಳ ಪಟ್ಟಿಯನ್ನು ಪಡೆಯುವುದು. ಯಾವುದೇ ಪುಸ್ತಕಗಳ ಪ್ರತಿಗಳ ಸಂಖ್ಯೆ 03 ಕ್ಕಿಂತ ಹೆಚ್ಚಿಗೆ ಆಯ್ಕೆ ಮಾಡತಕ್ಕದ್ದಲ್ಲ.

ವೃತ್ತಿ ಶಿಕ್ಷಣ ಸಾಮಗ್ರಿ : ಕಾರ್ಯಾನುಭವದಲ್ಲಿ ಉತ್ತಮ ಪರಿಶ್ರಮವಿರುವ ಅಧ್ಯಾಪಕರೊಬ್ಬರು ಅಧ್ಯಕ್ಷರಾಗಿರಲಿ. ಜಿಲ್ಲಾ ವಾಣಿಜ್ಯ ಕೈಗಾರಿಕೆ ಇಲಾಖೆಯ ತಂತ್ರಜ್ಞರೊಬ್ಬರು ;KGBV ವಿಶೇಷಾಧಿಕಾರಿ ; ಪ್ರಾಥಮಿಕ ಶಾಲಾ ಶಿಕ್ಷಕರಿಬ್ಬರು ಸದಸ್ಯರಾಗಿರುವ ಸಮಿತಿಯಿಂದ–ವಸ್ತುಗಳ ಪಟ್ಟಿಯನ್ನು ಪಡೆಯುವುದು.

ಗಣಕ ಯಂತ್ರಗಳು : DPC ಅನುಮೋದನೆ ಪಡೆದು ಖರೀದಿ ಪ್ರಕ್ರಿಯೆ ಪೂರ್ಣಗೊಳಿಸುವುದು. (ಜಿಲ್ಲಾ ಕಛೇರಿ) ಸ್ವಂತ ಕಟ್ಟಗಳಿಗೆ ಹೋಗಿರುವ ಶಾಲೆಗಳ ಎಲ್ಲಾ ಖರೀದಿ ಪ್ರಕ್ರಿಯೆ ಪ್ರಾರಂಭದ 03 ತಿಂಗಳೊಳಗೆ ಮುಗಿಸತಕ್ಕದ್ದು.

ಆ. ಶಾಲೆಗೆ ಅಗತ್ಯವಿರುವ ವಸ್ತುಗಳ ಯಾದಿಯನ್ನು ಆಯಾ ಮುಖ್ಯಸ್ಥರಿಂದ ಪಡೆದು ಸಮಿತಿ ನೀಡಿದ ಪಟ್ಟಿ ಆಧರಿಸಿ ಖರೀದಿ ಪ್ರಕ್ರಿಯೆ ನಡೆಸುವುದು. ವಿವಿಧ ಸಮಿತಿಗಳು ಗುಣಮಟ್ಟವನ್ನು ಧೃಡೀಕರಿಸುವ ಜವಾಬ್ದಾರಿಯನ್ನು ಹೊಂದಿವೆ. ಖರೀದಿಸಿದ ವಸ್ತುಗಳನ್ನು ಸ್ಥಾಯಿ ಸಂಗ್ರಹ ದಾಖಲೆಗೆ ತೆಗೆದುಕೊಳ್ಳುವುದು ಹಾಗೂ ಎಲ್ಲಾ ರಶೀತಿಗಳನ್ನು ಕಾಯ್ದಿರಿಸುವುದು. SSA ಖರೀದಿ ನಿಯಮ ಅನುಸರಿಸುವುದು.

✓ **<u>ಹಾಸಿಗೆ ಹೊದಿಕೆಗಳು</u>** : ಹೊಸ 03 ಕೆ.ಜಿ.ಬಿ.ವಿ ಗಳಿಗೆ ರೂ.75,000/– ನಂತೆ ಪ್ರತಿ ಕೆಜಿಬಿವಿಗೆ ಮಂಜೂರಾಗಿದೆ. ಉಳಿದ 61 ಕೆ.ಜಿ.ಬಿ.ವಿಗಳಿಗೆ ಈ ಬಾರಿ ಪ್ರತಿ ಶಾಲೆಗೆ ರೂ.37000/– ಮಂಜೂರಾಗಿದೆ. ಅಲ್ಲದೆ ಹಿಂದಿನ ವರ್ಷಗಳಲ್ಲಿ ಕೂಡ ಈ ಬಾಬ್ತು ಹಣ ಮಂಜೂರಾಗಿದ್ದು ಸ್ವಂತ ಕಟ್ಟಡ ಹೊಂದಿದ KGBV ಗಳು ಪೂರ್ಣ ಖರೀದಿಯನ್ನು ಇನ್ನು 03 ತಿಂಗಳಿನೊಳಗೆ ಮಾಡತಕ್ಕದ್ದು. ಜಾಗದ ಕೊರತೆಯಿರುವ KGBV ಗಳು ತಮ್ಮ ಅಗತ್ಯ ಅನುಸರಿಸಿ ವಸ್ತುಗಳ ಖರೀದಿ ಮಾಡುವುದು. ಅನುಮತಿಯನ್ನು DPC ಯಿಂದ ಪಡೆಯುವುದು ಕಡ್ಡಾಯ.

ಆವರ್ತಕ ಅನುದಾನ

✓ **ನಿರ್ವಹಣೆ ಅನುದಾನ :** ಪ್ರತಿ ಮಗುವಿನ ತಿಂಗಳ ಆಹಾರ ಪೂರೈಕೆಗಾಗಿ ರೂ.750.00 ಒದಗಿಸಲಾಗುತ್ತಿದೆ. ಕೆ.ಜಿ.ಬಿ.ವಿ. ನಿರ್ವಹಣೆ ಕೈಪಿಡಿಯಲ್ಲಿ ನೀಡಬೇಕಾದ ಆಹಾರ ಸ್ವರೂಪ ಮತ್ತು ರೂಢಿಸಬೇಕಾದ ದಾಖಲೆಗಳ ಕುರಿತು ಹಾಗೂ ಹೊರಗುತ್ತಿಗೆ ಮೂಲಕ ಆಹಾರ ಪಡೆಯುವ ಕ್ರಮ ಕುರಿತಂತೆ ವಿವರಿಸಲಾಗಿದೆ. ಈ ಅಂಶಗಳು ಈಗಲೂ ಪ್ರಸ್ತುತ. ಆದರೆ ಘಟಕ ವೆಚ್ಚ ಗರಿಷ್ಠ 750/– ರವರಗೆ ಹೋಗಬಹುದು. ಗುಣಮಟ್ಟದ ಆಹಾರ ನೀಡಿಕೆಯನ್ನು ಖಚಿತ ಪಡಿಸಿಕೊಳ್ಳಬೇಕು. ಇಲ್ಲಿ ಕಂಡು ಬರುವ ಕೊರತೆ ಕುರಿತಂತೆ ವಾರ್ಡನ್ ವರದಿ ಆಧರಿಸಿ ವಿಶೇಷಾಧಿಕಾರಿಯವರು ಕೂಡಲೇ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಕ್ತ ಸೂಚನೆ ನೀಡುವುದು. ಒಂದೆರಡು ಬಾರಿ ತಿಳಿಸಿದರೂ ತಿದ್ದಿಕೊಳ್ಳದ ಗುತ್ತಿಗೆದಾರರನ್ನು ಬದಲಾಯಿಸಲು ಕ್ರಮ ಮಾಡುವುದು. ವಿಶೇಷಾಧಿಕಾರಿಯವರು ನೀಡಿದ ವರದಿ ಆಧರಿಸಿ 01 ವಾರದೊಳಗೆ ಉತ್ತಮ ಗುಣಮಟ್ಟದ ಆಹಾರ ನೀಡಿಕೆಗೆ BEO ಮತ್ತು DDPI ಕ್ರಮ ತೆಗೆದುಕೊಳ್ಳುವುದು ಅಥವಾ ಹೊರಗುತ್ತಿಗೆ ರದ್ದು ಪಡಿಸಿ ಬೇರೆಯವರಿಗೆ ವಹಿಸಲು ಕ್ರಮ ಮಾಡತಕ್ಕದ್ದು. ಕರ್ತವ್ಯ ವ್ಯತ್ಯಯವನ್ನು ಮತ್ತು ಕಳಪೆ ಗುಣಮಟ್ಟದ ಆಹಾರ ನೀಡಿಕೆಯನ್ನು ಗಂಭೀರವಾಗಿ ಪರಿಗಣಿಸಲಾಗುತ್ತದೆ.

✓ **ವಿದ್ಯಾರ್ಥಿ ವೇತನ** : ಕೆ.ಜಿ.ಬಿ.ವಿ ನಿರ್ವಹಣಾ ಕೈಪಿಡಿಯ ಸೂಚನೆಗಳು ಈಗಲೂ ಪ್ರಸ್ತುತವಿರುತ್ತವೆ. ಪ್ರತಿ ತಿಂಗಳಿಗೆ ಪ್ರತಿ ಮಗುವಿಗೆ ರೂ. 50/– ಘಟಕ ವೆಚ್ಚ.

✓ **ಹೆಚ್ಚುವರಿ ಕಲಿಕಾ–ಬೋಧನಾ ಸಾಮಗ್ರಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳು**

ಅನಾವರ್ತಕ ವೆಚ್ಚದಲ್ಲಿ ಒಂದು ಹಂತದ (One time grant) ಅನುದಾನ ನೀಡಿದ್ದಾರೆ. ಅನೇಕ ವಸ್ತುಗಳ ಆವರ್ತಕವಾಗಿ ಶಾಲೆಗೆ ಬೇಕಾಗುತ್ತವೆ. ಇಂತಹ ಖರೀದಿಗಳಿಗೆ ಈ ಅನುದಾನ ಮೀಸಲಿರಿಸಿದೆ. ಈ ಹಣ ಬಳಸಿ ತೀರಿ ಹೋಗುವ (Exhaustible) ವಸ್ತುಗಳಾದ – ಪ್ರಯೋಗಾಲಯದ ರಾಸಾಯನಿಕಗಳು ; ಗಾಜಿನ ಉಪಕರಣಗಳು (Fragile) CD ಗಳು ; ಗಣಕಯಂತ್ರದ ಕೊಠಡಿಯಲ್ಲಿ ಬಳಕೆಯಾಗುವ ಸಾದಿಲ್ವಾರು ವಸ್ತುಗಳ ಖರೀದಿ ; ಬೋಧನೋಪಕರಣಗಳು ; ಗ್ರಂಥಾಲಯ ಪುಸ್ತಕಗಳು ; ನಿಯತಕಾಲಿಕೆಗಳು (Kannada/English/Urdu) ದಿನಪತ್ರಿಕೆಗಳು ; ಇತ್ಯಾದಿ ; ಶೈಕ್ಷಣಿಕವಾಗಿ ಶಾಲೆಗೆ ಉಪಯೋಗವಾಗುವ ವಸ್ತುಗಳ ಖರೀದಿಸುವುದು. ಶಾಲಾ ನಿರ್ವಹಣೆ ಸಮಿತಿ ಮುಂದೆ ಈ ಹಣವನ್ನು ಖರ್ಚು ಮಾಡುವ ಕುರಿತು ಉಪವಿಂಗಡಣೆ (break-up) ಮಾಡಿ ಅನುಮೋದನೆಯನ್ನು ಮೇ/ ಜೂನ್ ತಿಂಗಳಿನಲ್ಲಿ ಪಡೆದು ನಿಯಮಾನುಸಾರ ಖರೀದಿಸಿ–ಬಳಸುವುದು.

✓ **ವೇತನ :** ಅರೆಕಾಲಿಕ ಸಿಬ್ಬಂದಿ ನೇಮಕ, ಗೌರವಧನ ಇತ್ಯಾದಿ ಅಂಶಗಳು ಕೆ.ಜಿ.ಬಿ..ವಿ. ನಿರ್ವಹಣಾ ಕೈಪಿಡಿಯಲ್ಲಿರುವಂತೆ ಈಗಲೂ ಪ್ರಸ್ತುತ. ಹೊರಗುತ್ತಿಗೆ ಆಧಾರದ ಮೇಲೆ– ವಾರ್ಡನ್ ; 3 ಅರೆಕಾಲಿಕ ಶಿಕ್ಷಕರು ; ಪೂರ್ಣಕಾಲಿಕ ಅಕೌಂಟೆಂಟ್ 01 ; ಎರಡು ಮಂದಿ ಸೇವಕರು (ಒಬ್ಬರು ಸೆಕ್ಯೂರಿಟಿ) ಅಡುಗೆಯವರು 01+01 (50 ಮಂದಿಗೆ) 01+02 (100 ಮಂದಿಗೆ) ತೆಗೆದು ಕೊಳ್ಳಬಹುದು. ಆಹಾರ ಹೊರಗಡೆಯಿಂದ ಪಡೆದಾಗ ಅಡುಗೆಯವರ ನೇಮಕ ಅವಶ್ಯವಿಲ್ಲ.

✓ **ವಿದ್ಯುತ್ ಮತ್ತು ನೀರಿನ ಶುಲ್ಕ**

✓ **ವೈದ್ಯಕೀಯ ಶುಶ್ರೂಷೆ/ ಸಾದಿಲ್ವಾರು**

} ಮಂಜೂರಾಗಿರುವ ಅನುದಾನ ಅನುಸರಿಸಿ ಕೆ.ಜಿ.ಬಿ.ವಿ ಕೈಪಿಡಿಯಲ್ಲಿ ನೀಡಿರುವ ಸೂಚನೆ

✓ <u>ನಿರ್ವಹಣೆ ಅನುದಾನ</u> ಅನುಸರಿಸಿ ಖರ್ಚು ಭರಿಸುವುದು.

✓ **ವೃತ್ತಿ ಶಿಕ್ಷಣ ಮತ್ತು ನಿರ್ದಿಷ್ಟ ಕೌಶಲ್ಯ ಬೆಳವಣಿಗೆ :**
ಕೆ.ಜಿ.ಬಿ.ವಿ. ಶಿಕ್ಷಕರ ಕೈಪಿಡಿಯ ಕಾರ್ಯ ಶಿಕ್ಷಣ ಅಧ್ಯಾಯದಲ್ಲಿ– ಕೈಗೊಳ್ಳಬಹುದಾದ ಚಟುವಟಿಕೆಗಳ ಕುರಿತು ವಿಸ್ತಾರವಾಗಿ ಚರ್ಚಿಸಿದೆ.

ಕಾರ್ಯ ಪ್ರಪಂಚದ ಅರಿವನ್ನು ಮಗುವಿಗೆ ಮಾಡಿಕೊಡುವುದು ಈ ಚಟುವಟಿಕೆಯ ಮುಖ್ಯ ಉದ್ದೇಶ. ಬೋಧಿಸಬೇಕಾದ ವಸ್ತುಗಳು ಎಂಬ ಭಾಗದಲ್ಲಿ ಅಭ್ಯಾಸ ಮಾಡಿಸಬಹುದಾದ ಚಟುವಟಿಕೆ ಪಟ್ಟಿ ಮಾಡಿದೆ. ಕನಿಷ್ಠ ಮೂರು ವಿಷಯಗಳಲ್ಲಿ ಪ್ರತಿ ವರ್ಷ ಪ್ರತಿ ಮಗು ನೈಪುಣ್ಯತೆ ಸಾಧಿಸಲು ಅನುಭವ ಕೊಡಿ. ಸಾಧ್ಯವಾದರೆ ಹೆಚ್ಚಿಗೆ ಕೂಡ ಮಾಡಿಸಬಹುದು. ಆದರೆ ಕೆಲವು ವಸ್ತುಗಳ ತಯಾರಿಕೆಯನ್ನು ವ್ಯಾಪಕವಾಗಿ ಮಾಡಿಸಬಹುದು. ಉದಾಹರಣೆಗೆ

ಮಾರ್ಜಕಗಳ ತಯಾರಿಕೆ ; ಆಹಾರ ವಸ್ತುತಯಾರಿಕೆ ಇತ್ಯಾದಿ. ಹಾಗಾಗಿ ಉತ್ತಮ ಪರಿಶ್ರಮವಿರುವ ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸಿ ವಿವಿಧ ಅನುಭವ ನೀಡುವುದು ಯುಕ್ತ.

ಗೌರವಧನವನ್ನು ಹೊರಗುತ್ತಿಗೆಯಿಂದ ಪಡೆದ ಸ್ವಯಂಸೇವಕರಿಗೆ ತಿಂಗಳಿಗೆ ಗರಿಷ್ಠ ರೂ. 1000/– ನೀಡಲು ಅವಕಾಶವಿದೆ. ಸಂಪನ್ಮೂಲ ವ್ಯಕ್ತಿ ಬೇರೆಡೆಯಿಂದ ಕೆಲವು ದಿನಗಳ ಮಟ್ಟಿಗೆ ಕರೆಯಿಸುವುದಾದರೆ (03/04 ದಿನ) ಇದೇ ಹಣದಲ್ಲಿ ಅವರ ಟಿ.ಎ. ಮತ್ತು ಕನಿಷ್ಠ ಡಿ.ಎ ನೀಡಲು ಅವಕಾಶ ಕಲ್ಪಿಸಿದೆ

– ಹಾಗೂ ದಿನವೊಂದಕ್ಕೆ ರೂ. 100/– ಗೌರವ ಧನವನ್ನು ನೀಡಬಹುದು.

09–10 ನೇ ಸಾಲಗೆ ರೂ. 0.50 ಲಕ್ಷ ಹಣವನ್ನು ಪ್ರತಿ ಶಾಲೆಗೆ ನೀಡಿರುತ್ತಾರೆ. (AWP & B-09- Annexure-x) ಈ ಹಣದಲ್ಲಿ ಈ ಚಟುವಟಿಕೆಗಳಿಗೆ ಬೇಕಾದ ಸಾಮಾಗ್ರಿಗಳ ಖರೀದಿಗೆ ಹಣ ಬಳಸಬಹುದು. ಕಾರ್ಯ ಶಿಕ್ಷಣ ಬೋಧನೆಗೆ ಬೇಕಾದ ಬಟ್ಟೆ, ರಾಸಾಯನಿಕಗಳು ; ಆಹಾರ ವಸ್ತುತಯಾರಿಕೆಗೆ ಬೇಕಾದ ಸಾಮಾಗ್ರಿ ; ಮತ್ತು ಹಣ ಉಳಿತಾಯವಾದರೆ ಮೇಣದ ಬತ್ತಿ ತಯಾರಿಕೆಯ ಅಚ್ಚುಗಳಂತಹ ಸ್ಥಾಯಿ ವಸ್ತುಗಳನ್ನು ಖರೀದಿಸಬಹುದು. ಶಾಲಾ ನಿರ್ವಹಣ ಸಮಿತಿಯಲ್ಲಿ ಈ ಖರೀದಿಗಳಿಗೆ ಅನುಮೋದನೆಯನ್ನು ಪಡೆಯಬೇಕು.

✓ **ಜಾಗೃತಿ ಶಿಬಿರಗಳು :** KGBV ಕೈಪಿಡಿಯಂತೆ ಲಭ್ಯ ಅನುದಾನದಲ್ಲಿ ಶಿಬಿರ ಮೇ/ಜೂನ್‌ನಲ್ಲಿ ಏರ್ಪಡಿಸಿ, ಮಕ್ಕಳ ಸೇರ್ಪಡೆಗೆ ಅವಕಾಶ ಮಾಡುವುದು.

✓ **ಪೋಷಕ ಶಿಕ್ಷಕರ ಸಭೆ** : ಕನಿಷ್ಠ 06 ಪೋಷಕರ ಸಭೆ ನಡೆಸುವುದು. ಪ್ರತಿ ಸಭೆಗೆ ಕಾಫಿ ; ಊಟಕ್ಕೆ ಖರ್ಚಾಗುವ ಹಣವನ್ನು ಈ ಬಾಬ್ತಿನಿಂದ ಭರಿಸಬೇಕು. ನೋಡಿ KGBV ನಿರ್ವಹಣೆ ಕೈಪಿಡಿ. ಅನಿವಾರ್ಯವಿದ್ದರೆ– ಪೋಷಕರ ಬಸ್ ಚಾರ್ಜ್ ಕೂಡ ನೀಡಬಹುದು– ಹಣಕಾಸಿನ ಮಿತಿಯಲ್ಲಿ.

✓ **ಕೆ.ಜಿ.ಬಿ.ವಿ ಕಟ್ಟಡ ಬಾಡಿಗೆ** : ಅನುಮೋದಿತ ಹಣದಿಂದ ವಾಸ್ತವಿಕ ಬಾಡಿಗೆಯನ್ನು ಮಾತ್ರ ಪಾವತಿಸಬಹುದು.

✓ **ಸಾಮರ್ಥ್ಯ ಅಭಿವೃದ್ಧಿ** : ಮುಂದೆ ಸೂಚಿಸಿರುವ ನೇರದಲ್ಲಿನ ಚಟುವಟಿಕೆಗಳನ್ನು ಯೋಜಿಸಿ.

ಸೈಕಲ್ ಸವಾರಿ ; ಮೊಫೆಡ್ ಸವಾರಿ ಕಲಿಕೆ (ಶಾಲೆ ಆವರಣದಲ್ಲಿ ಮಾತ್ರ ಕಲಿಸಿ) ; ಸಂಗೀತ ಕಲಿಕೆ ; ಸ್ಥಳೀಯ NIIT ಯಂತಹ ಸಂಸ್ಥೆಗಳ ಸಹಯೋಗ ಸಾಧಿಸಿ ಗಣಕ ಶಿಕ್ಷಣದಲ್ಲಿ ವಿವಿಧ ಕೋರ್ಸುಗಳನ್ನು ಕಲಿಯಲು ಅವಕಾಶ ನೀಡುವುದು ; ಕನ್ನಡ ;ಹಿಂದಿ ;ಸಂಸ್ಕೃತ ಪರೀಕ್ಷೆಗೆ ಕೂರಲು ವ್ಯವಸ್ಥೆ ಮಾಡುವುದು; ಕರಾಟೆ ; ಯೋಗ ;

ಈಜು ಕಲಿಕೆ ; ವ್ಯಕ್ತಿತ್ವ ಬೆಳವಣಿಗೆ ತರಬೇತಿ (ಮಂಗಳೂರಿನ ಅಭಿಯಾನ ಸಂಸ್ಥೆಯಂತಹ ಸಂಸ್ಥೆಗಳ ಸಹಯೋಗದಿಂದ ಸಾಧಿಸಬಹುದು) ; ನಾಟಕಾಭ್ಯಾಸ ; ನೃತ್ಯಾಭ್ಯಾಸ ಇತ್ಯಾದಿ.

ಸಾಮರ್ಥ್ಯ ಅಭಿವೃದ್ಧಿ ವ್ಯಕ್ತಿತ್ವದ ವಿವಿಧ ಮುಖಗಳು ವೃದ್ಧಿಯಾಗಲು ಇರುವ ಚಟುವಟಿಕೆಗಳು. ವಾಸ್ತವಿಕವಾಗಿ ಇವು ಪಠ್ಯ ವಸ್ತುವಿನ ಕಕ್ಷೆಯನ್ನು ಮೀರಿರುತ್ತವೆ.

ಇಡೀ 100 ಮಕ್ಕಳಿಗೆ ಒಂದೇ ಕಾರ್ಯಕ್ರಮ ನಡೆಸುವುದು ಯುಕ್ತವೆನಿಸದು. ಮಕ್ಕಳ ಆಯ್ಕೆಗೆ / ಐಚ್ಛಿಕ ಅಂಶಕ್ಕೆ ಅವಕಾಶ ಕಲ್ಪಿಸಿ. ಶಿಕ್ಷಕರ ಗೌರವಧನ ; ಪ್ರಯಾಣ ವೆಚ್ಚ (ಟಿ.ಎ/ಡಿ.ಎ) ಗೌರವಧನ–ಆ ಸಂಬಂಧದ ವಸ್ತುಗಳ ಖರೀದಿಗೆ ಅವಕಾಶವಿದೆ. ಎರಡನೇಯ ಆಧ್ಯತೆಯಾಗಿ ಶಿಕ್ಷಕರ ಸಾಮರ್ಥ್ಯ ಅಭಿವೃದ್ಧಿಗೆ ಕೂಡ ಈ ಹಣವನ್ನು ಬಳಕೆ ಮಾಡಬಹುದು. ಶಾಲಾ ನಿರ್ವಹಣೆ ಸಮಿತಿ ಅನುಮತಿ ಪಡೆದು ಖರ್ಚು ಭರಿಸುವುದು.

**ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ಖರ್ಚು ಮಾಡಲು ವಿವರವಾದ ಒಂದು ಯೋಜನೆಯನ್ನು ಜೂನ್ ತಿಂಗಳಿನಲ್ಲಿಯೇ ತಯಾರಿಸಿ ಶಾಲಾ ನಿರ್ವಹಣಾ ಸಮಿತಿಯಲ್ಲಿಟ್ಟು ಅನುಮೋದನೆ ಪಡೆಯುವುದು. ಈ ಸಮಿತಿ ಪ್ರತಿ ತಿಂಗಳು ಸಭೆ ಸೇರಿ ಪ್ರಗತಿ ಪರಿಶೀಲಿಸಿ ಹಿಮ್ಮಾಹಿತಿ ನೀಡತಕ್ಕದ್ದು. ಈ ಯೋಜನೆಯು ವಿವಿಧ ಕಾರ್ಯಕ್ರಮಗಳ ಹೆಸರು ; ಈ ಕಾರ್ಯಕ್ರಮಗಳ ಸಂಬಂಧ ಯಾವ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ ; ಯಾವಾಗ ಹಮ್ಮಿಕೊಳ್ಳಲಾಗುತ್ತದೆ ; ಯಾವ ಸ್ಥಳದಲ್ಲಿ ; ಯಾವ ದಿನಾಂಕ ; ಯಾರು ಹಮ್ಮಿಕೊಳ್ಳುತ್ತಾರೆ ; ಖರ್ಚಾಗುವ ಹಣ ಇತ್ಯಾದಿ ಅಂಶಗಳು ಇರುವಂತೆ ರಚಿಸತಕ್ಕದ್ದು.**

VII **ಶಾಲಾ ಸಂಘಟನೆ :**

- **ಕಲಿಕಾ ಬೋಧನೆ ಸಾಮಗ್ರಿಗಳ ನಿರ್ವಹಣೆ :** ನಕ್ಷೆ, ಚಿತ್ರಪಟಗಳು, ಗ್ಲೋಬ್, ವಿಜ್ಞಾನಕ್ಕೆ ಸಂಬಂದಿಸಿದ ಮೈಕ್ರೋ ಸ್ಕೋಪ್, ಉಷ್ಣತಾ–ಮಾಪಕ, ಅಯಸ್ಕಾಂತ, ಶೃತಿಕವೆ, ದಿಕ್ಸೂಚಿ. ಮುಂತಾದ ಕಲಿಕಾ ಬೋಧನೆ ಸಾಮಗ್ರಿಗಳನ್ನು ರ್‍ಯಾಕ್‌ನಲ್ಲಿ ಸಂರಕ್ಷಿಸಿಡಬೇಕು. ಬೋಧನಾ ಸಂದರ್ಭದಲ್ಲಿ ಮಕ್ಕಳಿಗೆ ಬೋಧನಾ ಸಾಮಗ್ರಿಗಳನ್ನು ತೋರಿಸಬೇಕು ಮಕ್ಕಳೇ ಮುಟ್ಟಿ ಬಳಸುವಂತಹ ಅವಕಾಶ ಕಲ್ಪಿಸಿಕೊಡಬೇಕು. ಕಲಿಕಾ ಸಾಮಗ್ರಿಗಳ ನಿರ್ವಹಣೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು.

- **ಗ್ರಂಥಾಲಯ :** ಅನಾವರ್ತಕ ಅನುದಾನದಲ್ಲಿ ಕೊಳ್ಳಲಾದ ಗ್ರಂಥಾಲಯ ಪುಸ್ತಕಗಳು ಮಕ್ಕಳಿಗೆ ವಿತರಣೆ ಯಾಗಬೇಕು. ಹೆಚ್ಚು ಸಾಧನೆ ಮಾಡಿರುವ ಮಹಿಳೆಯರ ಜೀವನ ಚರಿತ್ರೆ ಇರುವ ಪುಸ್ತಕಗಳನ್ನು ಮಕ್ಕಳಿಗೆ ಕೊಟ್ಟು ಓದಿಸಿ ಪ್ರೇರೇಪಿಸಬೇಕು.

- **ಲ್ಯಾಬೋರೇಟರಿ ನಿರ್ವಹಣೆ :** ವಿಜ್ಞಾನಕ್ಕೆ ಸಂಬಂದಿಸಿದ ವಸ್ತುಗಳನ್ನು ಪ್ರತ್ಯೇಕ ಕೋಠಡಿಯಲ್ಲಿ ನಿರ್ವಹಿಸಲು ಕ್ರಮ ವಹಿಸುವುದು. ವಿಜ್ಞಾನ ವಿಷಯದಲ್ಲಿ ಆಸಕ್ತಿ ಇರುವ ಶಿಕ್ಷಕರಿಗೆ ಜವಾಬ್ದಾರಿಯನ್ನು ಮುಖ್ಯ ಶಿಕ್ಷಕರು ಕ್ರಮ ವಹಿಸುವುದು.

- **ಗಣಕಯಂತ್ರ :** ಗಣಕಯಂತ್ರವನ್ನು ಪ್ರತ್ಯೇಕ ಕೊಠಡಿಯಲ್ಲಿ Insatllation ಮಾಡಿ ಗಣಕ ಯಂತ್ರ ಶಿಕ್ಷಕರನ್ನು ನಿಯೋಜನೆ ಮಾಡಿ K.G.B.V. ಮಕ್ಕಳಿಗೆ ಗಣಕ ಯಂತ್ರ ಶಿಕ್ಷಣವನ್ನು ನೀಡಲು ಕ್ರಮ ವಹಿಸುವುದು.
- **ಶಾಲಾ ಯೋಜನೆ :** K.G.B.V. ಶಾಲೆಯಲ್ಲಿ ಜೂನ್ ತಿಂಗಳಲ್ಲಿ ಪೂರ್ವ ಪರೀಕ್ಷೆ ಸೇತುಬಂಧ, ಸಾಫಲ್ಯ ಪರೀಕ್ಷೆ, ಮಾಡಿ ದಾಖಲೀಕರಣ ಮಾಡುವುದು. ವೇಳಾ ಪಟ್ಟಿ, ವಾರ್ಷಿಕ ಪಾಠಗಳ ಹಂಚಿಕೆ, ಶಾಲಾ ಪಂಚಾಂಗ, K.S.Q.A.O.

ಫಲಿತಾಂಶ ವಿಶ್ಲೇಷಣೆ, ಅತೀ ಕಡಿಮೆ ಸಾಧನೆ ಮಾಡಿರುವ ಸಾಮರ್ಥ್ಯಗಳ ಪಟ್ಟಿ ಮಾಡಿ ಕ್ರಿಯಾ ಯೋಜನೆ ತಯಾರು ಮಾಡುವುದು. ಶಾಲಾ ಶೈಕ್ಷಣಿಕ ಯೋಜನೆ ತಯಾರಿ. ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಪರಿಹಾರ ಬೋಧನೆ ಕೈಗೊಳ್ಳುವುದು.

- **ಇಲಾಖೆಯ ವಿವಿಧ ಸೌಲಭ್ಯಗಳ ವಿಸ್ತರಣೆ :** K.G.B.V. ಶಾಲೆಯನ್ನು ಒಂದು ಶಾಲೆ ಎಂದು ಪರಿಗಣಿಸಿ ಪಠ್ಯ ಪುಸ್ತಕ, ಸಮವಸ್ತ್ರ, ವಿತರಣೆಗೆ ಬೇಡಿಕೆಯನ್ನು ಪಡೆದು ಮಕ್ಕಳಿಗೆ ಸೌಲಭ್ಯಗಳನ್ನು ತಲುಪಿಸಲು ಕ್ರಮಕೈಗೊಳ್ಳುವುದು. ಸೈಕಲ್ ವಿತರಣೆ ಮಾಡಲು ಬೇಡಿಕೆ ಪಟ್ಟಿಯಲ್ಲಿ 8 ನೇ ತರಗತಿ ಮಕ್ಕಳನ್ನು ಸೇರಿಸಿ ಅವರಿಗೂ ಸಹ ಸೈಕಲ್‌ಗಳನ್ನು ವಿತರಿಸಲು ಕ್ರಮ ವಹಿಸುವುದು.

# 2. ಕಸ್ತೂರಬಾ ಗಾಂಧಿ ಬಾಲಕಿಯರ ಶಾಲೆಗಳ ಮಕ್ಕಳ ವೈಶಿಷ್ಟ್ಯಗಳು

ಕೆ.ಜಿ.ಬಿ.ವಿ. ಶಾಲೆಗಳು ಶಾಲೆಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇಲ್ಲಿ ಕರೆ ತರುವ ಮಕ್ಕಳು ಮೂಲತಃ ಬಡ ಕುಟುಂಬಗಳ ಪರಿಶಿಷ್ಠ ಜಾತಿ, ವರ್ಗಗಳ, ಅಲ್ಪ ಸಂಖ್ಯಾತ ಹಾಗೂ ಹಿಂದುಳಿದ ವರ್ಗಗಳ ಮಕ್ಕಳಾಗಿದ್ದು ಈ ಮಕ್ಕಳ ಹಿನ್ನೆಲೆಯನ್ನು ಗಮನಿಸಿದಾಗ ಸಾಮಾನ್ಯವಾಗಿ ಈ ಮುಂದಿನ ಅಂಶಗಳು ಕಂಡು ಬರುತ್ತವೆ.

- **ಕುಟುಂಬದ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ :**

ಕೆ.ಜಿ.ಬಿ.ವಿ. ಶಾಲೆಗೆ ದಾಖಲಾಗುವ ಮಕ್ಕಳು ಶೈಕ್ಷಣಿಕವಾಗಿ ಹಿಂದುಳಿದ ಜಿಲ್ಲೆ ಹಾಗೂ ತಾಲೂಕುಗಳಿಗೆ ಸೇರಿರುತ್ತಾರೆ. ಶೈಕ್ಷಣಿಕವಾಗಿ ರಾಷ್ಟ್ರೀಯ ಮಹಿಳಾ ಸಾಕ್ಷರತೆ ಕಡಿಮೆ ಇರುವ ಹಿಂದುಳಿದ ಬ್ಲಾಕ್‌ಗಳಾಗಿದ್ದು ಲಿಂಗ ಅಸಮಾನತೆಯಿಂದ ಕೂಡಿರುವ ಪ್ರದೇಶಗಳಾಗಿರುತ್ತವೆ. ಇವರ ಪೋಷಕರು ಸಾಮಾಜಿಕವಾಗಿ ಅನೇಕ ಕಟ್ಟು ಪಾಡುಗಳಿಗೆ ಒಳಗಾಗಿದ್ದು ಅಜ್ಞಾನ, ಅನಕ್ಷರತೆ, ಮೂಢನಂಬಿಕೆಗಳಿಂದ ಮಕ್ಕಳ ಶಿಕ್ಷಣದ ಬಗ್ಗೆ ಅರಿವಿಲ್ಲದೆ ಮಕ್ಕಳನ್ನು ಶಾಲೆಗೆ ಕಳುಹಿಸಿರುವುದಿಲ್ಲ. ಕೆಲವು ಬ್ಲಾಕ್‌ಗಳು ಬರಪೀಡಿತವಾಗಿದ್ದು ಆರ್ಥಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದು ದೈನಂದಿನ ಜೀವನಕ್ಕೆ ಜನರು ಕೂಲಿ ಮಾಡಿ ಜೀವನೋಪಾಯ ಮಾಡುತ್ತಿರುತ್ತಾರೆ. ಮನೆ ಮಂದಿಯಲ್ಲಾ ದುಡಿದರೂ ಎರಡು ಹೊತ್ತಿನ ಊಟಕ್ಕೆ ಕೊರತೆಯಾಗಿರುತ್ತದೆ. ಅವರಿಗೆ ಮಕ್ಕಳ ಶಿಕ್ಷಣ ನಂತರದ ಆದ್ಯತೆ. ಇಂತಹ ಸಂದರ್ಭಗಳಲ್ಲಿ ಮಗುವನ್ನು ಶಾಲೆಗೆ ಕಳುಹಿಸದೆ ತಮ್ಮೊಂದಿಗೆ ಕೂಲಿ ಕೆಲಸಕ್ಕೆ ಅಥವಾ ಸಣ್ಣ ಮಗುವಿನ ಆರೈಕೆಗೆ, ಮನೆ ಕೆಲಸಕ್ಕೆ ಎಂದು ಶಾಲೆ ತಪ್ಪಿಸುತ್ತಾರೆ.

**ಭಾವನಾತ್ಮಕ ಸ್ಥಿತಿ :**

ಇಂತಹ ಪರಿಸರದಲ್ಲಿ ಬೆಳೆದ ಮಕ್ಕಳು ಬಾಲ್ಯ ಸಹಜವಾದ ಅನೇಕ ಅವಕಾಶಗಳಿಂದ ವಂಚಿತರಾಗುವುದು ಸಹಜ. ಭಾವನಾತ್ಮಕವಾಗಿ ಅತಂತ್ರತೆ ಹಾಗೂ ಮಾನಸಿಕ ತುಮುಲವನ್ನು ಕೆಲವು ಮಕ್ಕಳು ಹೊಂದಿರಬಹುದು. ಗುಡಿಸಿಲಿನಲ್ಲಿ ಗಂಜಿಯುಂಡು ಬೆಳೆಯುವ ಮಗುವಿನ ಮನೋಭಾವನೆಗಳಿಗೆ ಮಧ್ಯಮ ಹಾಗೂ ಶ್ರೀಮಂತ ವರ್ಗಗಳ ಮಕ್ಕಳ ಭಾವನೆಗಳಿಗೂ ಅಜಾಗಜಾಂತರವಿರುತ್ತದೆ. ಬಡ ಕುಟುಂಬದ ಮಗು ಸಹಜವಾಗಿ ಆತ್ಮಸ್ಥೈರ್ಯ ಸ್ವಾವಲಂಬನೆ ಧೈರ್ಯ, ಕಷ್ಠ ಸಹಿಷ್ಣುತೆ, ಹಣದ ಬೆಲೆ ಮುಂತಾದ ಗುಣಗಳನ್ನು ತನ್ನ ಪರಿಸರದಿಂದ ರೂಢಿಸಿಕೊಳ್ಳುತ್ತಾಳೆ. ಆದರೆ ಕೆಲವೊಮ್ಮೆ ಕೀಳರಿಮೆ ಇವರನ್ನು ಬಾಧಿಸಬಹುದು.

ಬಡ ಕುಟುಂಬದ ಮಕ್ಕಳಲ್ಲಿ ಪರಸ್ಪರ ಸಹಕಾರ, ಅನ್ಯೋನ್ಯತೆಯ ಮನೋಭಾವ ಹೆಚ್ಚಾಗಿದ್ದು, ತಮ್ಮ ಕುಟುಂಬದ ಸದಸ್ಯರೊಂದಿಗೆ ಭಾವನಾತ್ಮಕ ಸಂಬಂಧ ಇರುತ್ತದೆ. ಬಡತನ, ಕಷ್ಠಗಳಲ್ಲಿಯೇ ಬದುಕುವುದರಿಂದ ಕಷ್ಟ ಸಹಿಷ್ಣುತೆ ಸಾಮಾನ್ಯವಾಗಿ ಹೆಚ್ಚಾಗಿರುತ್ತದೆ. ಅಂದರೆ ಬದುಕಿನ ಅನೇಕ ಒಳಸುಳಿಗಳ ಅರಿವು ಇವರಿಗಿರುತ್ತದೆ. ಇಂತಹ ಮಕ್ಕಳನ್ನು ಮುಖ್ಯ ವಾಹಿನಿಗೆ ಕರೆ ತಂದು ಉತ್ತಮ ಶಿಕ್ಷಣ ನೀಡಿದಾಗ ಉತ್ತಮ ಸಾಧನೆ ಮಾಡುವುದರಲ್ಲಿ ಸಂದೇಹವಿಲ್ಲ. ಕುಟುಂಬದೊಂದಿಗೆ ಭಾವನಾತ್ಮಕ ಸಂಬಂಧವುಳ್ಳ ಮಗು ಕೆ.ಜಿ.ಬಿ.ವಿ.ಗೆ ಬಂದಾಗ ಪೋಷಕರನ್ನು ಬಿಟ್ಟು ಬದಲಾದ ಪರಿಸರಕ್ಕೆ ಹೊಂದಿಕೊಳ್ಳಲು

ಸಾಕಷ್ಟು ಸಮಯ ಬೇಕು. ಇದು ಸಾಮಾನ್ಯವಾಗಿ ಎಲ್ಲ ವರ್ಗದ ವಿವಿಧ ಆರ್ಥಿಕ ಸ್ತರದಿಂದ ಬಂದ ಮಗುವಿಗೆ ಆಗುವ ಅನುಭವ. ಶಿಕ್ಷಕರಿಗೆ ಇದೊಂದು ಸವಾಲು. **ಪೋಷಕರ ಮೇಲಿರುವಷ್ಟು ಪ್ರೀತಿಯನ್ನು ಮಕ್ಕಳು ತಮ್ಮ ಮೇಲೆ ಇಡುವಂತೆ ಮಾಡಲು ಶಿಕ್ಷಕರು ಮಕ್ಕಳೊಂದಿಗೆ ಭಾವನಾತ್ಮಕವಾಗಿ, ಸೂಕ್ಷ್ಮವಾಗಿ ವರ್ತಿಸಬೇಕು. ಇಲ್ಲದಿದ್ದಲ್ಲಿ ಮಗು ಮನೆಯ ನೆನಪಿನಲ್ಲಿ ಶಾಲೆಯಿಂದ ಓಡಿಹೋಗಬಹುದು ಅಥವಾ ಕಾಯಿಲೆ ಬೀಳಬಹುದು, ಇಲ್ಲವೆ ಮಂಕಾಗಬಹುದು.**

- **ಮಕ್ಕಳ ಕುಟುಂಬಗಳ ಹಿನ್ನೆಲೆ :**

ಕೆ.ಜಿ.ಬಿ.ವಿ.–ಗೆ ದಾಖಲಾಗುವ ಮಕ್ಕಳ ಜೀವನಾನುಭವ ವೈವಿಧ್ಯತೆಗಳಿಂದ ಕೆಲವೊಮ್ಮೆ ದಯನೀಯತೆಯಿಂದ ಕೂಡಿರುತ್ತದೆ. ಇದಕ್ಕೆ ಅವರ ಸಾಮಾಜಿಕ ಪರಿಸರ ಕಾರಣವಾಗಿರುತ್ತದೆ. ಸರಳ (ಹೆಸರು ಬದಲಿಸಿದೆ) ಎಂಬ ಹತ್ತು ವರ್ಷದ ಮಗು K.G.B.V.ಯಲ್ಲಿ ಓದುತ್ತಿದ್ದು, ಈಕೆಯ ತಂದೆ ಕೌಟುಂಬಿಕ ಕಲಹದಲ್ಲಿ ತಾಯಿಯನ್ನು ಕೊಲೆ ಮಾಡಿ ಜೈಲು ಸೇರಿದ್ದಾನೆ. ಈ ಮಗು ಈಗ ಶಿಕ್ಷಣ ಮುಂದುವರಿಸುತ್ತಿದೆ.

ಶಾಂತಿಯ ತಂದೆ ಎರಡು ವರ್ಷದ ಹಿಂದೆ ತೀರಿ ಹೋಗಿದ್ದು ತಾಯಿಗೆ ಮೂರು ಮಕ್ಕಳು ಈಗ ಬೇರೆಯವನನ್ನು ಮದುವೆಯಾಗಿ ಚಿಕ್ಕ ಮಗುವನ್ನು ಕರೆದುಕೊಂಡು ಊರು ಬಿಟ್ಟಿದ್ದಾಳೆ. ಶಾಂತಿ ಮತ್ತು ಅವಳ ಅಕ್ಕ ಸೌಮ್ಯರನ್ನು ಕೆ.ಜಿ.ಬಿ.ವಿಗೆ ದಾಖಲಿಸಿದೆ.

ಸೌಮ್ಯಳ ತಂದೆ ಚಿಕ್ಕ ಟೀ ಅಂಗಡಿಯ ಮಾಲೀಕ. ಬರುವ ಆದಾಯ ಅಲ್ಪ. ಸೌಮ್ಯಳನ್ನು ಲೋಟ ತೊಳೆಯಲು ಕಾಫಿ, ಟೀ ಸರಬರಾಜು ಮಾಡಲು ಶಾಲೆ ಬಿಡಿಸಿದ್ದ. ಈ ಮಗು ಈಗ KGBV ಯಲ್ಲಿದೆ.

ರಮ್ಯಳನ್ನು ಶಾಲೆ ಬಿಡಿಸಿದ ಪೋಷಕರು ಅಥವಾ ಪಾಲಕರು ವರ್ಷಕ್ಕೆ ಆರು ನೂರು ರೂಪಾಯಿ ಪಡೆದು ಜೀತಕ್ಕೆಂದು ಹೋಟೆಲ್ ಕೆಲಸಕ್ಕೆ ಸೇರಿಸಿದ್ದರು. ಮಾಲೀಕರ ಮನವೊಲಿಸಿ ಈ ಮಗುವನ್ನು KGBVಗೆ ದಾಖಲಿಸಲಾಯಿತು. ಇಂತಹ ಪ್ರಸಂಗಗಳು ನೂರಾರು. KGBVಗೆ ದಾಖಲಿಸಿಕೊಳ್ಳಲಾದ ಕೆಲವು ಮಕ್ಕಳ ಜೀವನದ ಭಿತ್ತಿ ಇಂತಹ ಕನಿಕರದ ಕಥೆಗಳನ್ನು ಹೊಂದಿದೆ.

ಹೀಗೆ ಹಲವು ಹಿನ್ನೆಲೆಗಳಿಂಧ ಬರುವ ಶಾಲೆ ಬಿಟ್ಟ ಮಕ್ಕಳು KGBV ಯಲ್ಲಿ ದಾಖಲಾಗಿರುತ್ತಾರೆ. ಹಲವು ಜಾತಿ, ಪಂಗಡ, ವರ್ಗ, ಅಂತಸ್ತುಗಳ ಭಿನ್ನತೆಗಳನ್ನು ಹೊಂದಿರುವ ಈ ಮಕ್ಕಳ ಉಡುಪು, ಆಹಾರ, ಭಾಷೆ, ಶೈಲಿ, ನಡವಳಿಕೆ ಮುಂತಾದ ಹಲವಾರು ವಿಚಾರಗಳಲ್ಲಿ ಭಿನ್ನತೆಯನ್ನು ಹೊಂದಿರುವುದು ಸ್ವಾಭಾವಿಕ. ಈ ಮಕ್ಕಳು KGBV ಯ ವಾತಾವರಣಕ್ಕೆ ಹೊಂದಿಕೊಳ್ಳುವುದು ನಾವಂದುಕೊಂಡಷ್ಟು ಸುಲಭವಲ್ಲ. ಸ್ವಚ್ಛಂದವಾಗಿ ಬೆಳೆದ ಮಗುವಿಗೆ KGBV ವಾತಾವರಣ ಸೆರೆಯಾಗಬಹುದು. ಇವರು ನಿಧಾನವಾಗಿ ಶಾಲೆಯ ವಾತಾವರಣಕ್ಕೆ ಒಗ್ಗುತ್ತಾರೆ ಎಂಬ ಒಳನೋಟ ಅಧ್ಯಾಪಕನಿಗೆ ಇರಬೇಕು. ಮಕ್ಕಳ ಸಂಸ್ಕೃತಿ – ಸಂಪ್ರದಾಯಗಳಿಗೆ, ಭಾವನಾತ್ಮಕ ಸಂಬಂಧಗಳಿಗೆ ಧಕ್ಕೆ ಉಂಟಾಗದಂತೆ ಎಳೆ ಮನಸ್ಸಿಗೆ ನೋವಾಗದಂತೆ ನಿಧಾನವಾಗಿ ತಿದ್ದಿ – ತೀಡಿ ನಯಗೊಳಿಸಬೇಕಾಗಿದೆ. ಇದು ಅಧ್ಯಾಪಕನಿಗೆ ಸವಾಲಾಗುವ ಸಂಗತಿ. ಅಸೀಮ ತಾಳ್ಮೆ, ಮಾತೆಯ ಮಮತೆ, ಆತ್ಮವಿಶ್ವಾಸವನ್ನು ಅಧ್ಯಾಪಕಿ ಹೊಂದಿದ್ದರೆ ಮಾತ್ರ ಈ ಮಕ್ಕಳಿಗೆ ನೆರವಾಗಬಲ್ಲರು.

- ✓ **ಆಹಾರದಲ್ಲಿ ಭಿನ್ನತೆ** : ಬಡ ಕುಟುಂಬಗಳಿಂದ ಬಂದ ಮಕ್ಕಳು ತಮ್ಮ ತಮ್ಮ ಪ್ರದೇಶಗಳಿಗೆ ಸಂಬಂಧ ಪಟ್ಟಂತೆ ಆಹಾರ ಸೇವಿಸುತ್ತಾರೆ. ಒಂದು ಮಗುವಿನ ಮನೆ ಊಟ ತಿಂಡಿಗೂ ಮತ್ತೊಂದು ಮಗುವಿನ ಮನೆಯ ಊಟ ತಿಂಡಿಗೂ ಗಾತ್ರ, ಗುಣಮಟ್ಟ, ರುಚಿ, ಮಾಡುವ ರೀತಿ, ಬಳಸುವ ಸಾಮಗ್ರಿಗಳು ಭಿನ್ನವಾಗಿರುತ್ತವೆ. ಇಂತಹ ಭಿನ್ನತೆಗಳೇ ಕೆಲವೊಮ್ಮೆ ಹಿಂಜರಿಕೆಗೆ ಕಾರಣವಾಗಬಹುದು. ಅಂತಹ ಸಂಗತಿಗಳನ್ನು ಕಲೆ ಹಾಕುವಾಗ ಅಧ್ಯಾಪಕ ನಿರುದ್ವೇಗದಿಂದ – ವಿಶಾಲತೆಯಿಂದ ಮಗುವಿನ ಉತ್ತರ ಸ್ವೀಕರಿಸಬೇಕು.

- ➢ **ಭಾಷಾ ಶೈಲಿ:** ಗ್ರಾಮ್ಯ ಪರಿಸರದಿಂದ ಬಂದ ಮಗು ಸಹಜವಾಗಿ ಭಾಷೆಯನ್ನು ಆಡು ಭಾಷೆಯಲ್ಲಿ ಬಳಸುತ್ತದೆ. ಧ್ವನಿಯ ಏರಿಳಿತದಲ್ಲಿ ಶಿಸ್ತು, ಸ್ಪಷ್ಟ ಉಚ್ಚಾರ, ಗ್ರಾಂಥಿಕ ಶೈಲಿ, ಉತ್ತಮ ಶಬ್ದಗಳ ಬಳಕೆಯಲ್ಲಿ ಕೊರತೆ ಕಾಣುತ್ತದೆ. ಮನೆಯ ಪರಿಸರದಿಂದ ರೂಢಿಸಿಕೊಂಡ ಅವಾಚ್ಯ ಶಬ್ಧಗಳ ಬಳಕೆ ; ಮಕ್ಕಳ ವರ್ತನೆಯಲ್ಲಿ ಕೆಲವು ದುರಭ್ಯಾಸಗಳನ್ನು ಕಾಣಬಹುದು. ಉದಾ.: ಮೂಗು, ಕಿವಿ, ಬಾಯಿಗಳಲ್ಲಿ ಬೆರಳು ತೂರಿಸುವುದು, ಕದಿಯುವುದು, ಕೊಳಕಾಗಿರುವುದು, ವೈಯುಕ್ತಿಕ ಸ್ವಚ್ಛತೆಗೆ ಗಮನ ನೀಡದಿರುವುದು, ಸರತಿ ಪಾಲಿಸದಿರುವುದು, ಸಂಕೋಚ ಭಾವನೆಯಿಂದ ಏಕಾಂಗಿಯಾಗುವುದು ಇತ್ಯಾದಿ. ಬೆಳಿಗ್ಗೆ ಏಳುವುದು, ಮಲಗುವುದು ಮತ್ತು ಸೂಚನೆ ಪಾಲಿಸುವುದು ಇತ್ಯಾದಿಗಳಲ್ಲಿ ಒಂದು ಮಗುವಿನಿಂದ ಇನ್ನೊಂದು ಮಗುವಿಗೆ ಭಿನ್ನತೆ ಇರುತ್ತದೆ. ವ್ಯವಹಾರ ಜ್ಞಾನ, ಸಾಮಾನ್ಯ ಜ್ಞಾನಗಳಲ್ಲಿ ಕೂಡಾ ಭಿನ್ನತೆಯನ್ನು ಕಾಣಬಹುದು. ಕಲಿಕೆಯ ವೇಗದಲ್ಲಿ, ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವುದರಲ್ಲಿ ಪರಸ್ಪರ ಭಿನ್ನತೆಗಳನ್ನು ಮಗು ಹೊಂದಿರುತ್ತದೆ.

  ಆರೋಗ್ಯದ ಬಗ್ಗೆ, ಪೋಷಕಾಂಶಗಳ ಬಗ್ಗೆ ಪೌಷ್ಠಿಕ ಆಹಾರದ ಬಗ್ಗೆ ಈ ಮಕ್ಕಳಿಗೆ ಅರಿವು ಇರುವುದಿಲ್ಲ. ಸಾಮಾಜಿಕವಾಗಿ, ವ್ಯಕ್ತಿಗತವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಬೌದ್ಧಿಕವಾಗಿ, ಭಿನ್ನತೆಗಳನ್ನು ಹೊಂದಿರುವ ಮಕ್ಕಳು ಕೆ.ಜಿ.ಬಿ.ವಿ ಶಾಲೆ ಸೇರಿದಾಗ ಅವರನ್ನು ಹೊಂದಾಣಿಕೆಗೊಳಿಸಿ ಅವರ ವರ್ತನೆಯನ್ನು ಆಪೇಕ್ಷಿತ ದಾರಿಗೆ ತರಬೇಕಾಗಿರುವುದು ಅಧ್ಯಾಪಕರ ಜವಾಬ್ದಾರಿಯಾಗಿದೆ.

### ❖ ಮಕ್ಕಳನ್ನು ಹೊಂದಾಣಿಕೆಗೊಳಿಸಲು ಶಿಕ್ಷಕರು ಮಾಡಬೇಕಾದ ಕ್ರಮ

ವಿವಿಧ ಹಿನ್ನೆಲೆ ಹೊಂದಿರುವ ಮಕ್ಕಳನ್ನು ಹೊಂದಾಣಿಕೆಗೊಳಿಸಲು ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಸಾಕಷ್ಟು ಶ್ರಮ ವಹಿಸಬೇಕಾಗುತ್ತದೆ. ಪೋಷಕರನ್ನು ಪಾಲಕರನ್ನು ತೊರೆದು ಬಂದಿರುವ ಮತ್ತು ಪಾಲಕರಿಲ್ಲದ ಮಕ್ಕಳಿಗೆ ತಮ್ಮ ಮಕ್ಕಳಷ್ಟೆ ಪ್ರೀತಿ ನೀಡಿ ನೋಡಬೇಕಾಗುತ್ತದೆ. "ಪ್ರೀತಿಯಿಂದ ಗೆಲ್ಲಲಾಗದ ವಸ್ತು. ಜಗತ್ತಿನಲ್ಲಿ ಯಾವುದು ಇಲ್ಲ" ಹಾಗಾಗಿ ಮೊದಲಿಗೆ ಮಕ್ಕಳೊಂದಿಗೆ ಮಕ್ಕಳಾಗಿ ಆಟ ಊಟ ಪಾಠಗಳಲ್ಲಿ ಪ್ರೀತಿಯಿಂದ ಜೊತೆ ಜೊತೆಯಾಗಿ ಭಾಗವಹಿಸಿ ಅವರ ಸಮಸ್ಯೆಗಳನ್ನು ಸಹನೆಯಿಂದ ಕೇಳಿ ಸೂಕ್ತ ಅಭಿಪ್ರಾಯ/ಪರಿಹಾರ – ಧೈರ್ಯ ಹೇಳಿ ಅವರನ್ನು ಗೆಲ್ಲಬೇಕು. ಒಳ್ಳೆಯ ಸಣ್ಣ ಕೆಲಸವನ್ನು ಪ್ರಶಂಸಿಸುವುದು ; ಶಿಕ್ಷೆ ನೀಡದಿರುವುದು ಪ್ರತಿ ಮಗುವಿಗೆ ವೈಯಕ್ತಿಕ ಗಮನ ನೀಡಿ ಆ ಮಗುವಿನ ಕುಟುಂಬದ ವಿವರ, ಇಷ್ಟವಾದ ಊಟ ತಿಂಡಿ ನೋಟ ಆಟಗಳ ಬಗ್ಗೆ ವಿಚಾರಿಸುವುದು ಹಾಗೂ ಪೂರೈಸುವುದು ಒಬ್ಬ ಅಧ್ಯಾಪಕಿ ಮಾಡಬಹುದಾದ ಕೆಲಸಗಳು. 8ನೇ ತರಗತಿ ಮಕ್ಕಳ ಉದಾಹರಣೆ ನೀಡಿ ಆತ್ಮ ವಿಶ್ವಾಸ ಮೂಡಿಸುವುದು. ಕಥೆ ಹೇಳುವ ಮೂಲಕ ಜೀವನದ ಗುರಿ/ಆಯ್ಕೆ ಮಾಡಿಕೊಳ್ಳಲು, ಮೌಲ್ಯಗಳನ್ನು ರೂಢಿಸಿಕೊಳ್ಳಲು ಸಹಕರಿಸುವುದು. ಉದಾ : ಪಾಲಕರಿಲ್ಲದ ಮಕ್ಕಳೊಂದಿಗೆ ಮುಕ್ತವಾಗಿ ವೈಯಕ್ತಿಕವಾಗಿ

ಚರ್ಚೆ ಮಾಡಿ ಅವರಲ್ಲಿ ಧೈರ್ಯ ತುಂಬ ಬೇಕು. ನಾವೂ ಪೋಷಕರೆಂಬ ಮನೋಭಾವನೆ ಮೂಡಿಸಿ ಮಕ್ಕಳಿಗಿರುವ ಭಾವಾನಾತ್ಮಕ ಸಂಬಂಧಗಳ ಕೊರತೆಯನ್ನು ನೀಗಿಸಿ ಉತ್ತಮ ಗುರಿಗಳನ್ನು ಆಯ್ಕೆ ಮಾಡಿಕೊಳ್ಳಲು, ಅವರು ಎದುರಿಸಿರುವ ನೋವು ದುಃಖಗಳನ್ನು ಮರೆಯಲು ಎಲ್ಲಾ ಮಕ್ಕಳೊಂದಿಗೆ ಸಮಾನವಾಗಿ ಕಲೆತು, ಬೆರೆತು ನಡೆಯುವಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ.

ಕೂಲಿ ಕೆಲಸಗಳಿಗೆ ಮನೆಗೆಲಸಗಳಿಗೆ ತೊಡಗಿದ್ದ ಮಕ್ಕಳ ಪೋಷಕರನ್ನು ಭೇಟಿ ಮಾಡಿ ಶಿಕ್ಷಣದ ಸೌಲಭ್ಯಗಳನ್ನು, ಅನುಕೂಲಗಳನ್ನು ವಿವರಿಸಿ ಹೇಳುವ ಮೂಲಕ ಪೋಷಕರಲ್ಲಿ ಜಾಗೃತಿ ಮೂಡಿಸುವುದು, ಊರಿನ ಮುಖಂಡರು ಗ್ರಾಮ ಪಂಚಾಯತಿ ಪದಾಧಿಕಾರಿಗಳು, ಕೌನ್ಸಿಲರ್ ಮುಂತಾದ ಗಣ್ಯರೊಂದಿಗೆ ಆ ಮಕ್ಕಳ ಮನೆಗೆ ತೆರಳಿ ಪೋಷಕರಿಗೆ ತಿಳಿ ಹೇಳುವುದು. ಶಾಲೆಯಲ್ಲಿ ಓದುತ್ತಿರುವ ಬೇರೆ ಮಕ್ಕಳನ್ನು ಕರೆದು ಕೊಂಡು ಹೋಗಿ ಶಾಲೆಗೆ ಕಳಿಸದ ಮಕ್ಕಳ ಮನೆಯ ಮುಂದೆ ಧರಣಿ ಮಾಡಿಸುವುದು. ಶಿಕ್ಷಣಕ್ಕೆ ಸಂಬಂಧಿಸಿದ ಮತ್ತು ಶೈಕ್ಷಣಿಕವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ ಬೌದ್ಧಿಕವಾಗಿ ಉನ್ನತ ಸ್ಥಾನದಲ್ಲಿರುವ ಹೆಣ್ಣು ಮಕ್ಕಳ ಸಾಕ್ಷ್ಯ ಚಿತ್ರಗಳು, ಭಾವಚಿತ್ರ ಪತ್ರಿಕೆಗಳಲ್ಲಿನ ವರದಿ ಮುಂತಾದವುಗಳನ್ನು ತೋರಿಸಿ ಪೋಷಕರ ಮನಗೆಲ್ಲುವುದು. ಕೂಲಿಗೆ/ಜೀತಕ್ಕೆ ಕೊಂಡು ಕೊಂಡಿರುವ ಮಾಲಿಕರ ಮನೆ ಹೋಟೆಲ್ ಕಾರ್ಖಾನೆಗಳಿಗೆ ಮೆರವಣಿಗೆಯಲ್ಲಿ ತೆರಳಿ ಮಾಲೀಕರ ಮನವೊಲಿಸಿ ಶಾಲೆಗೆ ಕಳುಹಿಸಲು ಪ್ರೇರೇಪಿಸುವುದು. ಮನಗೆಲ್ಲಲು ಆಗದಿದ್ದಲ್ಲಿ ಪೋಲಿಸರ ನೆರವಿನಿಂದ ಮಕ್ಕಳನ್ನು ಮುಕ್ತಗೊಳಿಸಿ ಮುಖ್ಯ ವಾಹಿನಿಗೆ ತರುವುದು. ಕಸ್ತೂರ ಬಾ, ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸೀ ರಾಣಿ ಲಕ್ಷ್ಮೀಬಾಯಿ, ಒನಕೆ ಓಬವ್ವ, ಪಿ.ಟಿ.ಉಷಾ, ಮೇಡಂ ಕ್ಯೂರಿ, ಫ್ಲಾರೇನ್ಸ್ ನೈಟೆಂಗೇಲ್, ಭುವನೇಶ್ವರಿದೇವಿಯವರಂತಹ ಸಮಾಜಮುಖಿ ಮಹಿಳೆಯರ ಬದುಕಿನ ಘಟನೆಗಳನ್ನು ಪ್ರಾಸಂಗಿಕವಾಗಿ ಮಕ್ಕಳ ಗಮನಕ್ಕೆ ತರಬೇಕು. ಉನ್ನತವಾದ ಗುರಿಗಳನ್ನು ಹೊಂದಿ ಅವುಗಳ ಸಾಧನೆಗೆ – ಕೆ.ಜಿ.ಬಿ.ವಿ. ವ್ಯವಸ್ಥೆ ಶ್ರಮಿಸಬೇಕು.

**ಭಾಗಿದಾರರ ಪಾತ್ರ (ವಾರ್ಡನ್, ಪಾಲಕರು, ಮಕ್ಕಳು ಹಾಗೂ ಶಾಲೆಯ ಕಾರ್ಯಕರ್ತರು)**

ಸಮಯ ಸಂದರ್ಭಕ್ಕನುಸಾರವಾಗಿ ಮಕ್ಕಳನ್ನು ಶಾಲೆಗೆ ಕರೆತರಲು ಮುತುವರ್ಜಿ ವಹಿಸುವುದು. ಶಾಲೆಗೆ ಸೇರಿಸಿಕೊಂಡ ತರುವಾಯ ಹೆಚ್ಚು ಸಮಯ ಅವರಿಗಾಗಿಯೇ ಕಳೆಯಿರಿ. ಪ್ರೀತಿಯಿಂದ ನಯವಾಗಿ ಮಕ್ಕಳ ಮನಸ್ಸನ್ನು ನಿಮ್ಮೆಡೆ ಸೆಳೆಯಿರಿ. ಕಲಿಕೆಯ ವಾತಾವರಣ ನಿರ್ಮಿಸಿ, ಮಗುವಿನಲ್ಲಿ ಕಲಿಕೆಯ ಬಗೆಗೆ ಆಸಕ್ತಿ ಮೂಡಿಸಿ ತನ್ನ ಗುರಿ ಸಾಧಿಸಲು ಸಹಕರಿಸಿ. ಈ ನಿಟ್ಟಿನಲ್ಲಿ ಶಾಲೆಯ ವಿಶೇಷಾಧಿಕಾರಿಗಳು ಹಾಗೂ ವಾರ್ಡನ್‌ರವರ ಪಾತ್ರ ದೊಡ್ಡದು. ಮಕ್ಕಳೊಂದಿಗೆ ಅನುಗಾಲವೂ ಇರುವ ವಾರ್ಡನ್ ಮತ್ತು ಶಾಲೆಯ ಮೇಟಿಯಾಗಿ ಪಾತ್ರ ನಿರ್ವಹಿಸುವ ವಿಶೇಷ ಅಧಿಕಾರಿಗಳು ಮಕ್ಕಳ ಸಮಸ್ಯೆಗಳನ್ನು ಅರಿತು ಪ್ರೀತಿಯಿಂದ ಮನೆಯ ವಾತಾವರಣ ಮರೆಸಿ ಶಾಲಾ ವಾತಾವರಣಕ್ಕೆ ಹೊಂದಿಕೊಳ್ಳಲು ಸೂಕ್ತ ಚಟುವಟಿಕೆಗಳನ್ನು ಆಯೋಜಿಸುವುದು. ಮಕ್ಕಳಿಗೆ ಆಸಕ್ತಿ ಇರುವ ಕ್ರೀಡೆ, ಹೊರಸಂಚಾರ, ಪ್ರವಾಸ, ಪುಸ್ತಕ, ಮನೋರಂಜನೆ ಕಾರ್ಯಕ್ರಮಗಳಾದ ನೃತ್ಯ, ನಾಟಕ, ನೀತಿ ಕಥೆಗಳ ಮೂಲಕ ಮಕ್ಕಳ ಮನ ಪರಿವರ್ತನೆ ಮಾಡುವ ಕಾರ್ಯದಲ್ಲಿ ನಿರತರಾಗಬೇಕು. ಗಮನಿಸಿ – ಹೊರಾಂಗಣ ಚಟುವಟಿಕೆಗಳು ಮಕ್ಕಳು ನಿರ್ಭೀತಿಯಿಂದ ವರ್ತಿಸಲು ಅವಕಾಶ ಮಾಡಿಕೊಡುತ್ತವೆ. ಉತ್ತಮ ಸಾಮಾಜೀಕರಣಕ್ಕೆ ಅವು ಪ್ರಮುಖ ಸಾಧನಗಳು.

**ಪಾಲಕರ ಪಾತ್ರ :** ತಿಳಿದೊ ತಿಳಿಯದೆಯೋ ಮಕ್ಕಳ ಓದನ್ನು ಕುಂಠಿತಗೊಳಿಸಿ ಶಾಲೆಯನ್ನು ಬಿಡಿಸಿದ ಪೋಷಕರು KGBV ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸಿದ ನಂತರ ಆಗಾಗ್ಗೆ ಬಂದು ಯೋಗಕ್ಷೇಮ ವಿಚಾರಿಸಬೇಕು. ಮೊದಲು, ಮೊದಲು ವಾರಕ್ಕೊಮ್ಮೆ, 15 ದಿನಕ್ಕೊಮ್ಮೆ, ಕ್ರಮೇಣ

ತಿಂಗಳಿಗೊಮ್ಮೆ ಶಾಲೆಗೆ ಭೇಟಿ ನೀಡಿ ತಮ್ಮ ಮಕ್ಕಳ ಯೋಗ ಕ್ಷೇಮ ಕಲಿಕಾ ಪ್ರಗತಿ ; ದೊರೆತಿರುವ ಸೌಲಭ್ಯಗಳು ; ಬಗ್ಗೆ ಮನವರಿಕೆ ಮಾಡಿಕೊಳ್ಳಬೇಕು. ಮಕ್ಕಳಿಗೆ ಮನೆಯ ಮೇಲಿನ ವ್ಯಾಮೋಹವನ್ನು ಕಡಿಮೆ ಮಾಡಿ ಓದಿನ ಕಡೆ ಗಮನ ಹರಿಸಲು ಬುದ್ಧಿ ಹೇಳಬೇಕು. ಮಕ್ಕಳಿಗೆ ದೊರೆತಿರುವ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಮಕ್ಕಳ ಪುರೋಭಿವೃದ್ಧಿಗೆ ಶ್ರಮಿಸುವುದು ಪ್ರತಿಯೊಬ್ಬ ಪಾಲಕರ ಕರ್ತವ್ಯವಾಗಬೇಕು. ಪೋಷಕರು ಸಭೆಗೆ ಹಾಜರಾಗುವುದು; ರಜೆಗೆ ತೆರಳಿದ ಮಕ್ಕಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಶಾಲೆಗೆ ಕಳಿಸುವುದು ಶಾಲಾ ಪರಿಸರಕ್ಕೆ ಮಕ್ಕಳು ಹೊಂದಿಕೊಳ್ಳಲು ಉತ್ತೇಜನ ನೀಡುವುದು, ಶಾಲೆ ಶಿಕ್ಷಕರು ಸಿಬ್ಬಂದಿ ಅಧಿಕಾರಿಗಳ ಬಗ್ಗೆ ಉತ್ತಮ ಭಾವನೆ ಹೊಂದಿ, ಅವರನ್ನು ಪ್ರೋತ್ಸಾಹಿಸುವುದು.

**ಮಕ್ಕಳು** : ವಿವಿಧ ಹಿನ್ನಲೆಯಿಂದ ಹಲವಾರು ಸಂಕಷ್ಟಗಳನ್ನು, ಕೊರತೆಗಳನ್ನು ಎದುರಿಸಿ ಎಳೆಯ ವಯಸ್ಸಿನಲ್ಲಿ ಮೂಲಭೂತ ಸೌಕರ್ಯದಿಂದ ವಂಚಿತರಾಗಿ ಎಲ್ಲೊ ಹುಟ್ಟಿ ಎಲ್ಲೊ ಅರಳಿ ಕಮರಿ ಹೋಗಬೇಕಾಗಿದ್ದ ಮೊಗ್ಗೊಂದು KGBV ಕೈದೋಟದಲ್ಲಿ ಅರಳಿ ಪರಿಮಳ ಹೊರ ಚೆಲ್ಲ ಬೇಕಾದರೆ ಮಕ್ಕಳು ತಮ್ಮ ಮನೆಯಲ್ಲಿನ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಂಡು ದೊರಕಿರುವ ಸೌಕರ್ಯ ಸದುಪಯೋಗ ಪಡಿಸಿಕೊಳ್ಳಬೇಕು. ಅಪವರ್ತನೆಗಳನ್ನು ತ್ಯಜಿಸಿ ಒಳ್ಳೆ ಅಭ್ಯಾಸಗಳನ್ನು ಬೆಳೆಸಿಕೊಂಡು ಪೋಷಕರಿಗೆ, ಶಿಕ್ಷಕರಿಗೆ, ಶಾಲೆಗೆ ಒಳ್ಳೆಯ ಹೆಸರನ್ನು ತರುವಲ್ಲಿ ಕಾರ್ಯ ಪ್ರವೃತ್ತರಾಗಬೇಕು. ವಿವಿಧ ಹಿನ್ನಲೆಗಳ ಕಾರಣದಿಂದ ಕಳೆದುಕೊಂಡ ಸುಖ ಸಂತೋಷಗಳನ್ನು ಮರಳಿ ಪಡೆಯುವ ದಿಶೆಯಲ್ಲಿ ಒಳ್ಳೆಯ ಅಭ್ಯಾಸಗಳನ್ನು ಶಾಲೆಯ ದಿನಚರಿಯಲ್ಲಿ ಅಳವಡಿಸಿಕೊಂಡು ಉತ್ತಮ ವಿದ್ಯಾರ್ಥಿನಿಯಾಗಿ ಹೆಸರುಗಳಿಸುವುದು.

**ಶಾಲೆಯ ಸಿಬ್ಬಂದಿ :**

ಶಿಕ್ಷಕರ ವರ್ಗ ಮತ್ತು ಸಿಬ್ಬಂದಿ ವರ್ಗದವರು ಮಕ್ಕಳನ್ನು ಪ್ರತಿ ಹಂತದಲ್ಲಿಯೂ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಾ ಯಾವುದೇ ದುರ್ಘಟನೆಗಳು ನಡೆಯದಂತೆ ವೈಯಕ್ತಿಕ ಗಮನ ನೀಡುವುದು. ದುರಭ್ಯಾಸಗಳನ್ನು ಬಿಡಿಸಿ ಕಲಿಕೆಯಲ್ಲಿ ಆಸಕ್ತಿ ಮೂಡಿಸಲು ವಿವಿಧ ಚಟುವಟಿಕೆಗಳಿಂದ ಕೂಡಿದ ಬೋಧನಾ ವಿಧಾನಗಳನ್ನು ಕಾರ್ಯ ತಂತ್ರಗಳನ್ನು ಬಳಸುವುದು. ಅಡಿಗೆ ಸಿಬ್ಬಂದಿಯವರು ಮಕ್ಕಳನ್ನ ಪ್ರೀತಿಯಿಂದ ನೋಡಿಕೊಳ್ಳಬೇಕು. ಉತ್ತಮ ಪೋಷಕಾಂಶಗಳಿಂದ ಕೂಡಿದ ಆಹಾರ ತಯಾರಿಸಿ ಪ್ರೀತಿಯಿಂದ ಬಡಿಸಿ, ನೀಡಬೇಕು. ವಾರ್ಡನ್‌ರವರು ಮಕ್ಕಳ ವೈಯಕ್ತಿಕ ಶುಚಿತ್ವದಡೆಗೆ ಪ್ರತ್ಯೇಕ ಗಮನ ನೀಡಬೇಕು. ವಾರಕ್ಕೊಮ್ಮೆ ಕಡ್ಡಾಯವಾಗಿ ಉಗುರು ಕತ್ತರಿಸಲು, ದಿನಕ್ಕೊಂದು ಬಾರಿ ಹಲ್ಲುಜ್ಜಲು, ಮುಖ ತೊಳೆಯಲು ಪ್ರತಿ ದಿನ ಸ್ನಾನ ಮಾಡಲು ತಮ್ಮ ತಮ್ಮ ಬಟ್ಟೆ ಬರೆಗಳನ್ನು ಶುಭ್ರವಾಗಿಟ್ಟುಕೊಳ್ಳಲು ಮೂರು ತಿಂಗಳಿಗೊಮ್ಮೆ ಕೂದಲನ್ನು ಕತ್ತರಿಸಿ ವಾರಕ್ಕೊಮ್ಮೆ ಸ್ವಚ್ಛಗೊಳಿಸಿಕೊಳ್ಳಲು ಮಕ್ಕಳಿಗೆ ತಿಳಿಹೇಳಬೇಕು. ಜೊತೆಗೆ ಶಾಲೆ ಮತ್ತು ವಸತಿ ನಿಲಯದಲ್ಲಿ ಸ್ವಚ್ಛತೆ, ಶಿಸ್ತು ಕಾಪಾಡಿಕೊಳ್ಳುವ ಮೂಲಕ ವಿವಿಧ ಸಾಂಕ್ರಾಮಿಕ ರೋಗಗಳಿಂದ ಮುಕ್ತವಾಗಿ ಆರೋಗ್ಯಪೂರ್ಣವಾಗಿ ಮಕ್ಕಳು ಇರುವುದನ್ನು ಖಾತ್ರಿ ಪಡಿಸಬೇಕು. ಉತ್ತಮ ನಾಗರಿಕರನ್ನಾಗಿ ಈ ಮಕ್ಕಳನ್ನು ರೂಪುಗೊಳಿಸುವುದಕ್ಕೆ ವಾರ್ಡನ್, ವಿಶೇಷಾಧಿಕಾರಿ, ಪೋಷಕರು, ಹಾಗೂ ಶಿಕ್ಷಕರು ಜವಾಬ್ದಾರರಾಗಿರುತ್ತಾರೆ. ಅಧಿಕಾರಿಗಳ ಯುಕ್ತ ಮಾರ್ಗದರ್ಶನ ಈ ಪ್ರಕ್ರಿಯೆಯಲ್ಲಿ ನೆರವು ನೀಡುತ್ತದೆ.

**ವಿಶೇಷ ಸೂಚನೆ :** ಅನುಬಂಧ 05 ರ ಸಂಗತಿಗಳನ್ನು ಓದಿ ಮಕ್ಕಳು ಕೆ.ಜಿ.ಬಿ.ವಿ. ಪರಿಸರಕ್ಕೆ ಹೊಂದಿಕೊಳ್ಳಲು ಸಂಜ್ಞೆ ಮತ್ತು ಮುಖಭಾವಗಳು ಹೇಗೆ ಸಹಕಾರಿಯಾಗುತ್ತವೆ ಎನ್ನುವುದನ್ನು ಗಮನಿಸಿ.

# 3. ಸಮುದಾಯ ಜಾಗೃತಿ–ಮಕ್ಕಳ ದಾಖಲಾತಿ – ಹಾಜರಾತಿ

- **ಸಮುದಾಯದ ಭಾಗವಹಿಸುವಿಕೆ :** ಕೆ.ಜಿ.ಬಿ.ವಿ. ಶಾಲಾ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಿಸುವಲ್ಲಿ ಸಮುದಾಯ ಭಾಗವಹಿಸುವಿಕೆ ಪ್ರಮುಖವಾದದ್ದು. ಏಕೆಂದರೆ ಸಮಾಜದ ಕೇಂದ್ರ ಬಿಂದು ಸಮುದಾಯ, ಸಮುದಾಯದ ಕಮ್ಮಟವೇ ಶಾಲೆ. ಹೀಗಿದ್ದಾಗ ಬಹುಪಾಲು ಸಮುದಾಯ ಭಾಗವಹಿಸಲು ಪ್ರತಿಯೊಂದು ಗ್ರಾಮಗಳಲ್ಲಿ ಜಾಗೃತಾ ಶಿಬಿರಗಳನ್ನು ಏರ್ಪಡಿಸುವುದು. ಜಾಗೃತಿ ಮೂಡಿಸಲು ಕಲಾಜಾತಾ, ಹಾಡು, ಕುಣಿತ, ಬೀದಿ ನಾಟಕ, ಘೋಷಣೆ, ಕರಪತ್ರಗಳು ಹಂಚಿಕೆ ಇತ್ಯಾದಿಗಳ ಮೂಲಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಬಹುದು, ಯಾವುದೇ ಮಾಧ್ಯಮ ಬಳಸಿದರೂ ಅದು ಹೃದಯಕ್ಕೆ ಹತ್ತಿರವಾಗಿರುವಂತಹ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸುವುದು ಅಗತ್ಯ.
- ✓ ಪ್ರತಿ ಊರು–ಗ್ರಾಮಗಳಲ್ಲಿ ಮಾ–ಬೇಟಿ ಮೇಳಗಳಂತಹ ಕಾರ್ಯಾಗಾರವನ್ನು ಹಮ್ಮಿಕೊಂಡು ಆ ಕಾರ್ಯಾಗಾರದಲ್ಲಿ ಉದಾಹರಣೆಗೆ–ಮಹಿಳೆಯರ ಇಂದಿನ ಸ್ಥಿತಿ–ಗತಿ ಪ್ರಸ್ತುತ ಸನ್ನಿವೇಶದಲ್ಲಿ ಹೆಣ್ಣು ಮಗು ಎದುರಿಸುತ್ತಿರುವ ಸಮಸ್ಯೆಗಳು. ಕಾನೂನು ಮತ್ತು ಮಹಿಳೆ ಇತ್ಯಾದಿ ವಿಷಯಗಳ ಕುರಿತು ಮಹಿಳಾ ಉಪನ್ಯಾಸಕರನ್ನು ಕರೆಯಿಸಿ ತಾಯಂದಿರ ಹೃದಯಕ್ಕೆ ತಟ್ಟುವ ಹಾಗೆ ತಿಳುವಳಿಕೆ ನೀಡುವುದರಿಂದ ಇಡೀ ಸಮುದಾಯ ಜಾಗೃತಗೊಳ್ಳುತ್ತದೆ. ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಚೋದನೆ ನೀಡುತ್ತದೆ. ಈ ಜಾಗೃತಿ ಶಿಬಿರಗಳನ್ನು ಎಲ್ಲಿ ಹೆಣ್ಣು ಮಕ್ಕಳು ಶಾಲೆ ಬಿಡುವ ಪ್ರಮಾಣ ಹೆಚ್ಚಿರುವುದೋ ಅಂತಹ ಸ್ಥಳಗಳನ್ನು ಗುರುತಿಸಿ ಅಲ್ಲಿ ಹೆಚ್ಚಿನ ಜಾಗೃತಾ ಶಿಬಿರಗಳನ್ನು ಏರ್ಪಡಿಸುವುದರಿಂದ ಮಕ್ಕಳ ದಾಖಲಾತಿ–ಹಾಜರಾತಿ ಹೆಚ್ಚಳ ಸಾಧಿಸಲು ಅನುಕೂಲ.

  ಪ್ರತಿ ಊರಿನಲ್ಲಿ, ಓಣಿಗೊಬ್ಬ ಸಮಾಜ ಸುಧಾರಕಿಯರು ಅಥವಾ ಪ್ರೇರಕಿಯರನ್ನು ಗುರುತಿಸಿ ಅವರ ಮನವೊಲಿಸಿ, ತಮ್ಮೂರಿನ ಪ್ರತಿಯೊಂದು ಓಣಿಯಲ್ಲಿ ಬರುವಂತಹ ಶಾಲೆ ಬಿಟ್ಟ, ಶಾಲೆಗೆ ಸೇರದ, ವಲಸೆ ಮಕ್ಕಳು ಮತ್ತು ವಯೋಮಾನ ಮೀರಿದ ಶಾಲೆಗೆ ಹೋಗದ ಬಾಲಕಿಯರನ್ನು ಗುರುತಿಸಿ ಕೆ.ಜಿ.ಬಿ.ವಿ. ಶಾಲೆಗೆ ಸೇರಿಸಲು ಪ್ರೇರೆಪಿಸುವುದು. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಅಡ್ಡಿಯುಂಟು ಮಾಡುವ ಅನೇಕ ಸಮಸ್ಯೆಗಳು ಇರಬಹುದು. ಉದಾಹರಣೆಗೆ ಹೆಣ್ಣುಮಗುವಿನ ಶಿಕ್ಷಣದ ಕುರಿತು ಲಘುವಾದ ಭಾವನೆ, ಬಾಲ್ಯವಿವಾಹ, ಆರೋಗ್ಯದ ಕುರಿತು ನಿಷ್ಕಾಳಜಿ ಇತ್ಯಾದಿ. ಉಸ್ತುವಾರಿದಾರರು ಇಂತಹ ಅಂಶಗಳಿಗೆ ತೀವ್ರವಾಗಿ/ ಅನಪೇಕ್ಷಿತ ಪ್ರತಿಕ್ರಿಯೆ ನೀಡಬೇಕಾದ ಅಗತ್ಯವಿಲ್ಲ. ಪೋಷಕರ ತಿಳುವಳಿಕೆಯ ಕ್ಷೇತ್ರದಲ್ಲಿ ಅವರ ಆಲೋಚನೆ ಸರಿಯಿರಬಹುದು. ಆದರೆ ಇವುಗಳನ್ನು ಬದಲಾಯಿಸುವ ನಿಟ್ಟಿನಲ್ಲಿ ಉಪನ್ಯಾಸ, ಪ್ರದರ್ಶನ, ಹಾಡು, ನೃತ್ಯ, ಮಾಧ್ಯಮಗಳ ಬಳಕೆಯನ್ನು ಸಮರ್ಥವಾಗಿ ಮಾಡಿಕೊಳ್ಳಬೇಕು.

### ❖ ಗೈರುಹಾಜರಾಗಿರುವಂತಹ ಮಕ್ಕಳ ಗುರುತಿಸುವಿಕೆ ಮತ್ತು ಸಮಸ್ಯೆಗೆ ಪರಿಹಾರ – ಮಕ್ಕಳ ಸ್ವೀಕೃತಿ

ಕೆ.ಜಿ.ಬಿ.ವಿ ಮಕ್ಕಳ ದಾಖಲಾತಿಯ ಗುರುತಿಸುವಿಕೆಯ ಕಾರ್ಯತಂತ್ರಗಳು ಮಾರ್ಚ್ ತಿಂಗಳಿನಲ್ಲಿಯೇ ಪ್ರಾರಂಭವಾಗಬೇಕು. ಮಕ್ಕಳ ಗಣತಿ ಕಾರ್ಯ ಮಾಡುವಾಗ – ಶಾಲೆ ಬಿಟ್ಟ/ಶಾಲೆಗೆ ಸೇರದ/ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಲಾಗುವುದು. ಆ ಮಕ್ಕಳನ್ನು ಬೇಸಿಗೆ ರಜೆಯಲ್ಲಿ ನಡೆಸಲಾಗುವ ಚಿಣ್ಣರ ಅಂಗಳದ ಶಾಲೆಗಳಿಗೆ ಸೇರಿಸಬೇಕಾಗುತ್ತದೆ. ಚಿಣ್ಣರ ಅಂಗಳದ ಅರ್ಹ ಹೆಣ್ಣು ಮಕ್ಕಳನ್ನು ಜೂನ್ 16ಕ್ಕೆ ಕೆ.ಜಿ.ಬಿ.ವಿ

ಶಾಲೆಗಳಿಗೆ ದಾಖಲು ಮಾಡಬೇಕು. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ CAEO ಹಾಗೂ ತಾಲೂಕಿನ ಎಲ್ಲ BGC & CGC, BEO & BRC, ECO ಅಧಿಕಾರಿಗಳು ಮಕ್ಕಳ ದಾಖಲಾತಿ ಮತ್ತು ಹಾಜರಾತಿಗೆ ಶ್ರಮಿಸುವುದು. ಈ ಪ್ರಕ್ರಿಯೆ ಸರಳವಾದ ಕಾರ್ಯವಲ್ಲ. ತಂದೆ – ತಾಯಿ ಮತ್ತು ಮಗುವಿಗೆ ನಿರಂತರ ಆಪ್ತ ಸಲಹೆ ಮತ್ತು ಆತ್ಮವಿಶ್ವಾಸ ಮತ್ತು ಭರವಸೆಯನ್ನು ಎಲ್ಲ ಹಂತದ ಉಸ್ತುವಾರಿದಾರರು ತುಂಬಬೇಕು.

❖ **ದಾಖಲಾತಿ ನಿಯಮಗಳು**

- ಪ್ರಾಥಮಿಕ ಹಂತದಲ್ಲಿ 10+ ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ ಬಾಲಕಿಯರಿಗೆ ಆದ್ಯತೆ ನೀಡುವುದು.
- ಕ್ಲಿಷ್ಟಕರವಾದ ವಲಯಗಳಲ್ಲಿ (ವಲಸೆ, ಚದುರಿ ಹೋದ ಜನವಸತಿ, ನಿರ್ಗತಿಕರು ಇತ್ಯಾದಿ) ಕಿರಿಯ ವಯಸ್ಸಿನ ಮಕ್ಕಳಿಗೂ ಆದ್ಯತೆ ನೀಡಬಹುದು.
- SC/ST ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳಿಗೆ ಶೇ. 75 ರಷ್ಟು ಮತ್ತು ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವವರಿಗೆ ಶೇ.25 ಮೀಸಲಾತಿ ನೀಡುವುದು.
- ಅಂಗವಿಕಲತೆಯಿಂದಾಗಿ ಶಾಲೆಯಿಂದ ಹೊರಗೆ ಉಳಿದಿರುವ ಹೆಣ್ಣು ಮಕ್ಕಳಿಗೂ ಈ ಶಾಲೆಗಳಲ್ಲಿ ಆದ್ಯತೆ ನೀಡುವುದು.
- ಶಾಲೆಗೆ ಸೇರಿಲ್ಲದ ಹಾಗೂ ಒಂದು ವರ್ಷಕ್ಕೂ ಹೆಚ್ಚು ಕಾಲ ಶಾಲೆ ಬಿಟ್ಟ ಬಾಲಕಿಯರಿಗೆ ಪ್ರಾಧಾನ್ಯತೆ ನೀಡಿ ದಾಖಲು ಮಾಡುವುದು.
- ಪೋಷಕ/ಪಾಲಕರಿಲ್ಲದ ಅಥವಾ ವಲಸೆ ಹೋದ ಕುಟುಂಬಗಳ ಹೆಣ್ಣು ಮಕ್ಕಳಿಗೆ ಆದ್ಯತೆ ನೀಡುವುದು.
- ಗ್ರಾಮ ಸಭೆಗಳಲ್ಲಿ ಬಾಲಕಿಯರನ್ನು ದಾಖಲಿಸುವ ಬಗ್ಗೆ ಚರ್ಚಿಸುವುದು ಹಾಗೂ ಗ್ರಾಮಗಳಲ್ಲಿ ಶಿಕ್ಷಕರ ಹಾಗೂ ಸಮುದಾಯದ ಸಹಕಾರದೊಂದಿಗೆ ದಾಖಲಾತಿ ಆಂದೋಲನಗಳನ್ನು ಏರ್ಪಡಿಸುವುದು.

❖ **ಹಾಜರಾತಿ–ಮಕ್ಕಳ ವೈಯುಕ್ತಿಕ ಸಮಸ್ಯೆಯ ವಿಶ್ಲೇಷಣೆ ಮತ್ತು ಓಲೈಕೆ –**

ಹಾಜರಾತಿ ಹೆಚ್ಚಿಸುವಲ್ಲಿ ಮಕ್ಕಳ ವೈಯುಕ್ತಿಕ ಸಮಸ್ಯೆಗಳು ಕೂಡ ಅಡೆ ತಡೆಯನ್ನು ಉಂಟು ಮಾಡುತ್ತದೆ. ಹೇಗೆಂದರೆ– ಬಾಲಕಿಯರ ಪ್ರೌಢಾವಸ್ಥೆ ಋತುಮತಿಯಾಗುವುದೇ ಒಂದು ವೈಯುಕ್ತಿಕ ಸಮಸ್ಯೆ. ಅದರಿಂದ ಅವಳಿಗೆ ಸಂಕೋಚ, ಮನೆ ತೊರೆದು ಅಲ್ಲಿ (ಕೆ.ಜಿ.ಬಿ.ವಿ) ಯಾವ ರೀತಿ ಇರುವುದು, ತಾನೂ ಅಪರಾಧಿ ಎನ್ನುವ ಭಾವನೆ ಮೂಡುತ್ತದೆ. ದೈಹಿಕ ಬೆಳವಣಿಗೆಯಲ್ಲಿ ಬದಲಾವಣೆ ಕಂಡು ಅಸಹ್ಯ/ಮುಜುಗರವಾಗಬಹುದು. ಇಂತಹ ಸಂದರ್ಭ ನಿಭಾಯಿಸುವಾಗ ಕೆ.ಜಿ.ಬಿ.ವಿ ಸಿಬ್ಬಂದಿಯು ಮಮತೆಯಿಂದ ಮಗುವನ್ನು ನಡೆಸಿಕೊಳ್ಳಬೇಕು. ಆಸರೆಯಾಗಿ ನಿಲ್ಲಬೇಕು. ಬಾಲಕಿಯರ ಪಾಲಕ–ಪೋಷಕರಿಗೆ ವಿಷಯ ಮನವರಿಕೆ ಮಾಡಬೇಕು. ಮನೆಗೆ ಮಗುವನ್ನು ಕೆಲ ಸಮಯ ಕಳುಹಿಸಬಹುದು. ಅಥವಾ ಪೋಷಕರು ಕೆಲವು ದಿನ ಶಾಲೆಯಲ್ಲಿದ್ದು ಮಗುವಿಗೆ ಭರವಸೆ ತುಂಬಲು ಅವಕಾಶ ನೀಡಬೇಕು. ಮಕ್ಕಳಿಗೆ ನೈರ್ಮಲ್ಯದ ಕುರಿತು ಸೂಕ್ಷ್ಮವಾಗಿ ತಿಳಿ ಹೇಳಬೇಕು. ನ್ಯಾಪಕಿನ್ ಪ್ಯಾಡುಗಳನ್ನು ಬಳಸುವ ಕುರಿತು, ಅದರಿಂದಾಗುವ ಪ್ರಯೋಜನ ತಿಳಿಸುವುದು ಸಹಕಾರಿ. ಇದೊಂದು ನೈಸರ್ಗಿಕ ಕ್ರಮ ಭಯ ಪಡುವ ಅಗತ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಬೇಕು. ಮಹಿಳಾ ವೈದ್ಯರಿಂದಲೂ ಆಪ್ತ ಸಲಹೆಯನ್ನು ಕೊಡಿಸುವುದು ಉತ್ತಮ. ಮಗು ಆರೋಗ್ಯದಿಂದ ಇರಲು ಪೂರಕ ವ್ಯವಸ್ಥೆ ಶಾಲೆಯಲ್ಲಿ ಕಲ್ಪನೆಯಾಗಬೇಕು.

ವೈದ್ಯಕೀಯ ಖರ್ಚು ನಿರ್ವಹಿಸಲು ನೀಡಿರುವ ಹಣವನ್ನು ಸದ್ವಿನಿಯೋಗ ಮಾಡಿ ಮಕ್ಕಳ ಆರೋಗ್ಯ ಕಾಪಾಡಬೇಕು.

ವಿಭಿನ್ನ ಹಬ್ಬ ಹರಿದಿನಗಳನ್ನು ಆಚರಿಸುವುದರಿಂದ ಮಕ್ಕಳಲ್ಲಿ ಸಮಾನತೆ–ಪರಸ್ಪರ ಗೌರವವನ್ನು ಬೆಳೆಸಬಹುದು. ಇದರಿಂದ ಕೆ.ಜಿ.ಬಿ.ವಿ. ಶಾಲೆ ತನ್ನ ಮನೆಯ ಸಾಂಸ್ಕೃತಿಕ ಪರಿಸರಕ್ಕಿಂತ ಬೇರೆಯಲ್ಲ ಎಂಬ ಭಾವ ಮಗುವಿಗೆ ಬರುತ್ತದೆ. ಪರದೇಶಿ ಪ್ರಜ್ಞೆ ದೂರವಾಗುತ್ತದೆ.

ಆಗತ್ಯಕ್ಕಿಂತ ಹೆಚ್ಚು ದಿನ ಮನೆಗೆ ಹೋಗಲು ಮಗುವಿಗೆ ಅವಕಾಶ ಕೊಡಬೇಡಿ. ಅಂತಹ ಪ್ರಸಂಗ ಎದುರಾದರೆ ಕೂಡಲೇ ಮಗುವನ್ನು ಕರೆತರುವ ವ್ಯವಸ್ಥೆ ಆಗಬೇಕು. ಇದಕ್ಕಾಗಿ ಕ್ಷೇತ್ರದ ಉಸ್ತುವಾರಿ ಅಧಿಕಾರಿಗಳ ಸಹಕಾರ ಪಡೆಯಬೇಕು. ಭೀತಿ ಹುಟ್ಟಿಸಿ ಮಗುವನ್ನು ಕರೆತರುವ ಪ್ರಯತ್ನ ಮಾಡಬೇಡಿ. ಇದು ಋಣಾತ್ಮಕ ಪರಿಣಾಮ ಉಂಟು ಮಾಡುತ್ತದೆ. ಬದಲಾಗಿ ಪೋಷಕರು ಮಗುವಿನ ಜೊತೆಗೆ ಶಾಲೆಗೆ ಬರಲು ಅವಕಾಶ ಕೊಡಿ. ಕೆಲವು ಗಂಟೆ ಮಗು ತನ್ನ ಸ್ನೇಹಿತರೊಡನೆ ಬೆರೆತರೆ–ಶಾಲೆಯಲ್ಲಿ ಉಳಿಯುತ್ತೇನೆ ಎಂದು ಹೇಳುತ್ತದೆ. ಇದು ನಿಮ್ಮ ಅನುಭವ ಕೂಡ ಆಗಿದೆ.

- **ಸ್ವಯಂ ಸೇವಾ–ಸಂಘ ಸಂಸ್ಥೆಗಳ ಪಾತ್ರ :**

ಸಮುದಾಯವನ್ನು ಜಾಗೃತಿಗೊಳಿಸಿ ಮಕ್ಕಳ ದಾಖಲಾತಿ–ಹಾಜರಾತಿ ಹೆಚ್ಚಿಸುವಲ್ಲಿ ಸ್ವಯಂ ಸೇವಾ ಸಂಘ ಸಂಸ್ಥೆಗಳ ಪಾತ್ರ ತುಂಬಾ ಮಹತ್ತರವಾದದ್ದಾಗಿದೆ. ಪ್ರತಿಯೊಂದು ಊರುಗಳಲ್ಲಿ NGO ಗಳು ತಮ್ಮದೇ ಆದ ಕಾರ್ಯವನ್ನು ಮಾಡುತ್ತಿರುತ್ತವೆ. ಉದಾಹರಣೆಗೆ ಯುವಕ ಸಂಘ/ಯುವತಿಯರ ಸಂಘ/ಮಹಿಳಾ ಸಂಘ/ ಸ್ತ್ರೀ ಶಕ್ತಿ ಸಂಘ/ ಹಾಲು ಉತ್ಪಾದಕರ ಸಂಘ ಇತ್ಯಾದಿ. ಇವರು ಸ್ಥಳಿಯ ಸಮುದಾಯದ ಒಳಹೊರಗನ್ನು ಅರಿತಿರುತ್ತಾರೆ. ಇವರು ಮಕ್ಕಳ ದಾಖಲಾತಿ–ಹಾಜರಾತಿಯನ್ನು ಉತ್ತಮ ಪಡಿಸಲು ಪ್ರಧಾನ ಪಾತ್ರವನ್ನು ವಹಿಸಬಲ್ಲರು. ಇವರ ಸಹಕಾರವನ್ನು ಕೆ.ಜಿ.ಬಿ.ವಿ. ಶಾಲೆಗಳು ಪಡೆಯಬಹುದು.

ಪೋಷಕರಲ್ಲಿರುವ ಸದಾವಕಾಶಗಳನ್ನು ಉಲ್ಲೇಖಿಸಿ ಅಂತಹ ಸಾಧ್ಯತೆಯಿಂದ ಮಕ್ಕಳ ದುಡಿಮೆಯನ್ನು ನಿಯಂತ್ರಿಸಬಹುದೆಂದು ಅವರಿಗೆ ಮನವರಿಕೆ ಮಾಡಿಕೊಡಬೇಕು. ಹಾಗೂ ಮಗುವನ್ನು ಶಾಲೆಗೆ ಕಳುಹಿಸಲು ಮನವೊಲಿಸಬೇಕು. ಮಗು ಶಾಲೆಗೆ ಬರದಿರಲು ಎರಡು ಕಾರಣಗಳಿವೆ. ಮೊದಲನೆಯದು ಪೋಷಕ. ಎರಡನೆಯದು ಮಗು. ಪೋಷಕ ಮಗುವನ್ನು ಶಾಲೆಗೆ ಕಳುಹಿಸದೇ ಇರಲು ಹಲವಾರು ಕಾರಣಗಳಿವೆ. ಉದಾಹರಣೆಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳುವಳಿಕೆ ಇಲ್ಲದೇ ಇರುವುದು ಅಥವಾ ಮಗುವನ್ನು ದುಡಿಮೆಗೆ ಹಚ್ಚಿರುವುದು. ಈ ಎರಡು ಸನ್ನಿವೇಶಗಳಲ್ಲಿ ಪೋಷಕರಿಗೆ ನೀಡಬೇಕಾದ ತಿಳುವಳಿಕೆ ಭಿನ್ನವಾಗಿರುತ್ತದೆ. ಮೊದಲನೆಯದು ಜಾಗೃತಿಯನ್ನು ಆಪೇಕ್ಷಿಸಿದರೆ, ಎರಡನೇ ಕಾರಣ ನಮ್ಮ ಪ್ರಯತ್ನ ಇನ್ನೂ ತಳಮಟ್ಟ ತಲುಪಬೇಕು. ಎಂತಹ ದುಡಿಮೆಯಲ್ಲಿ ಮಗು ತೊಡಗಿದೆ. ಅದರಿಂದ ಮುಕ್ತಗೊಳಿಸಬೇಕಾದರೆ ಯಾವ ಕ್ರಮ ಮಾಡಬೇಕು ಎಂಬ ಅರಿವು ಅಧಿಕಾರಿಗಳು ಹೊಂದಿರಬೇಕು. ಉದಾಹರಣೆಗೆ ದನ ಅಥವಾ ಕುರಿ ಕಾಯಲು ಮಗು ಹೋಗುತ್ತಿದ್ದಾನೆ. ದನ ಕುರಿ ಕಾಯಲು ಆ ಊರಲ್ಲಿ ಸಾಮೂಹಿಕ ವ್ಯವಸ್ಥೆ ಇದೆಯೇ ಇದ್ದರೇ ಅದನ್ನು ಬಳಸಿ–ಆ ಮಗುವನ್ನು ಕೆಲಸದಿಂದ ಮುಕ್ತಗೊಳಿಸಬಹುದೇ– ಸಾಮೂಹಿಕ ವ್ಯವಸ್ಥೆಗೆ ಹಣವನ್ನು ನೀಡಲು ಯಾರಾದರೂ ದಾನಿಗಳು ಇರುವರೇ ಅಥವಾ ಪೋಷಕನೇ ಸಶಕ್ತನೇ ಎಂದು ನಿರ್ಧರಿಸಿ ಕಾರ್ಯತಂತ್ರಗಳನ್ನು ಹಮ್ಮಿಕೊಳ್ಳಬೇಕು. ಇಂತಹ ವಿಚಕ್ಷಣತೆ ಮಾರ್ಗದರ್ಶಕನಿಗೆ ಇರಬೇಕು.

**ಭಾಗಿದಾರರ ಪಾತ್ರ:** ಭಾಗೀದಾರರ ಪಾತ್ರ ಕುರಿತಂತೆ ಎರಡನೇ ಅಧ್ಯಾಯದಲ್ಲಿ ಪ್ರಸ್ತಾಪಿಸಿದೆ. ವಾರ್ಡನರ ಪಾತ್ರ ಇಲ್ಲಿ ಬಹು ಪ್ರಮುಖ. ಅವರಲ್ಲಿರುವ ಭಾವನಾತ್ಮಕ ಗುಣಗಳು ಮಗುವಿನ ಮೇಲೆ ಪರಿಣಾಮ ಬೀರುತ್ತವೆ. ಮಕ್ಕಳೊಡನೆ ಸೌಹಾರ್ದಯುತದಿಂದ ವರ್ತಿಸಬೇಕು. ಮಕ್ಕಳನ್ನು ಬಯ್ಯುವುದು, ಹೀಯಾಳಿಸುವುದು, ನಿಂದಿಸುವುದು, ಹೊಡೆಯುವುದು ಮಾಡಬಾರದು. ಅದು ನಿಷಿದ್ಧ. ಮಗು ವ್ಯಕ್ತಪಡಿಸುವ ಒಳ್ಳೆಯ ವರ್ತನೆ ಪ್ರೋತ್ಸಾಹಿಸಿ. ಅವರ ವರ್ತನೆಯಲ್ಲಿ ಬದಲಾವಣೆ ತರಬೇಕು.

ಚುನಾಯಿತ ಪ್ರತಿನಿಧಿಗಳು CAEO/CRP ಪ್ರಾಥಮಿಕ ಶಾಲೆಯ ಅಧ್ಯಾಪಕರು ಕೆಜಿಬಿವಿ ಮಕ್ಕಳ ಸಂಪರ್ಕಕ್ಕೆ ಅನೇಕ ವೇಳೆ ಬರುತ್ತಾರೆ. ಇವರೆಲ್ಲರೂ ಮಗುವಿನ ಇರುವಿಕೆ ಮತ್ತು ಅದರ ಸದ್ವರ್ತನೆಯನ್ನು ಪ್ರೋತ್ಸಾಹಿಸಬೇಕು. ಮಗುವಿನ ಕಲಿಕೆಗೆ ಇಂಬಾಗಿ ನಿಲ್ಲಬೇಕು. ಋಣಾತ್ಮಕ ವರ್ತನೆಗಳಿಂದ (ಭಯ/ಅವಮಾನವನ್ನು ಮಗುವಿನಲ್ಲಿ ತರುವುದು) ಮಗುವಿಗೆ ಯಾವುದೇ ಪ್ರಯೋಜನವಾಗದು. ಬದಲಾಗಿ ಶಾಲೆಯಿಂದ ವಿಮುಖವಾಗುವ ಸಾಧ್ಯತೆ ಹೆಚ್ಚು.

**ಚಟುವಟಿಕೆ – 1**

ಸಮುದಾಯ ಜಾಗೃತಿ ಕಾರ್ಯಕ್ರಮವನ್ನು ಹೇಗೆ ಹಮ್ಮಿಕೊಳ್ಳಲಾಯಿತು. ಇದರ ಪರಿಣಾಮಗಳು ಏನು? ಎಂಬ ಕುರಿತು ಶಿಬಿರಾರ್ಥಿಗಳ ಅನುಭವ ಹಂಚಿಕೊಳ್ಳಿ. ಅದನ್ನು ಸಾಮಾನ್ಯೀಕರಿಸಿ.

**ಚಟುವಟಿಕೆ – 2**

ಶಾಲೆಗೆ ಕಳುಹಿಸಲು ಒಪ್ಪದ ಪೋಷಕರನ್ನು ಯಾವ ರೀತಿ ಓಲೈಸಿ, ಮಗುವನ್ನು ಶಾಲೆಗೆ ಕರೆತಂದರು ಎಂಬ ಘಟನೆಗಳನ್ನು ಶಿಬಿರಾರ್ಥಿಗಳು ಸ್ಮರಿಸುವಂತೆ ಮಾಡಿ – ಸಾಮಾನ್ಯೀಕರಿಸಿ.

**ಚಟುವಟಿಕೆ – 3**

ಧನಾತ್ಮಕ ಪುನರ್ಬಲನ ಮಗುವಿನಲ್ಲಿ ಒಳ್ಳೆಯ ವರ್ತನೆಗಳನ್ನು ಸುಲಭವಾಗಿಯೂ ಋಣಾತ್ಮಕ ಪುನರ್ಬಲನ ಮಗುವಿನಲ್ಲಿ ಒಳ್ಳೆಯ ವರ್ತನೆಗಳನ್ನು ನಿಧಾನವಾಗಿ ತರುತ್ತದೆ; ಅಥವಾ ಸೋಲುತ್ತದೆ ಎಂಬುದನ್ನು ಶಿಬಿರಾರ್ಥಿಗಳ ಅನುಭವವನ್ನು ಕೇಳಿ ಸಾಮಾನ್ಯೀಕರಿಸಿ.

# 4. ತರಗತಿಯ ಆಚರಣೆಗಳು ಮತ್ತು ಬೋಧನಾಕಾರ್ಯದ ಸಂಘಟನೆ

**ಕಲಿಕೆ ಹೇಗೆ ಉಂಟಾಗುತ್ತದೆ?**

ಮೇಲಿನ ಪ್ರಶ್ನೆ ಆಶ್ಚರ್ಯ, ಹಾಗೂ ಕುತೂಹಲ ಉಂಟುಮಾಡುತ್ತದೆ. ಅಲ್ಲವೇ? ನಾವೆಲ್ಲಾ ಕಲಿತದ್ದು ಹೇಗೆ ಜ್ಞಾಪಿಸಿಕೊಳ್ಳಿ. ಬಹುಶ: ಏನನ್ನು ಕಲಿತದ್ದು ಎನ್ನುವ ಪ್ರಶ್ನೆ ಮೂಡುತ್ತದೆ. ಅಲ್ಲವೇ? ಎಲ್ಲವನ್ನೂ! ತಿನ್ನಲು ಕಲಿತದ್ದು, ನಡೆಯಲು ಕಲಿತದ್ದು, ಮಾತನಾಡಲು ಕಲಿತದ್ದು, ಬರೆಯಲು ಕಲಿತದ್ದು, ವ್ಯವಹರಿಸಲು ಕಲಿತದ್ದು, ವಿಮರ್ಶಿಸಲು ಕಲಿತದ್ದು, ಇತ್ಯಾದಿ............. ಇವೆಲ್ಲಾ ಹೇಗೆ ಉಂಟಾದವು! ಕಲಿಕೆ ಹೇಗೆ ಉಂಟಾಗುತ್ತದೆ? ಎನ್ನುವುದನ್ನು ತಿಳಿಯುವ ಮುಂಚೆ, ಕಲಿಕೆ ಎಂದರೇನು? ಎಂದು ತಿಳಿಯುವ.

**ಕಲಿಕೆ ಎಂದರೇನು?**

ಕಲಿಕೆ ಎಂದರೆ ವ್ಯಕ್ತಿಯ ವರ್ತನೆಯಲ್ಲಿ ಬದಲಾವಣೆಯನ್ನು ತರುವುದಾಗಿದೆ. ಇದು ಹುಟ್ಟಿನಿಂದ ಅಂತ್ಯದವರೆಗೆ ನಿರಂತರ ಮತ್ತು ಅನಿವಾರ್ಯ. ಇದನ್ನು ವ್ಯವಸ್ಥಿತ ರೀತಿಯಲ್ಲಿ ಹೇಳಿಕೊಡುವುದೇ ಶಿಕ್ಷಣದ ಮುಖ್ಯ ಕರ್ತವ್ಯ. ಆದುದರಿಂದ ಶಿಕ್ಷಣದ ಯಾವುದೇ ಹಂತದಲ್ಲಿ ಕಲಿಕೆ ಮುಖ್ಯವಾಗುತ್ತದೆ. ವಿವಿಧ ಅನುಭವಗಳಿಂದ ಮಕ್ಕಳು ಕಲಿಯುತ್ತಾರೆ. ಇದರಿಂದ ವರ್ತನೆಯಲ್ಲಿ ಅನೇಕ ಬದಲಾವಣೆಗಳಾಗುತ್ತವೆ. ಇದನ್ನೇ 'ಕಲಿಕೆ' ಎನ್ನುತ್ತಾರೆ. ಆದರೂ ಕಲಿಕೆಗೆ ಎಲ್ಲರೂ ಒಪ್ಪುವ ವ್ಯಾಖ್ಯೆ ನೀಡುವುದು ಕಷ್ಟ. ವಿವಿಧ ಮನೋವಿಜ್ಞಾನಿಗಳು ನೀಡಿರುವ ವ್ಯಾಖ್ಯೆಗಳು ಇಂತಿವೆ.

'ಅನುಭವಗಳಿಂದ ವರ್ತನೆಯಲ್ಲಿ ಉಂಟಾಗುವ ಹೆಚ್ಚು ಕಡಿಮೆ ಶಾಶ್ವತ ಬದಲಾವಣೆಯೇ ಕಲಿಕೆ. **–ಗೇಟ್ಸ್**

"ತರಬೇತಿ ಮತ್ತು ಅಭ್ಯಾಸಗಳ ಮೂಲಕ ವರ್ತನೆಯ ಉಗಮ ಮತ್ತು ಮಾರ್ಪಾಟನ್ನು ಉಂಟುಮಾಡುವ ಪ್ರಕ್ರಿಯೆಯೇ ಕಲಿಕ**"**. **–ಕ್ರಾನ್ ಬ್ಯಾಂಕ್**"

"ಹವ್ಯಾಸಗಳು, ಜ್ಞಾನ, ಮನೋಭಾವನೆಗಳ ಗಳಿಕೆಯೇ ಕಲಿಕೆ. ಇದು ಹೊಸ ರೀತಿಯಲ್ಲಿ ತಡೆಗಳನ್ನು ನಿವಾರಿಸಿಕೊಳ್ಳುವುದು, ಹೊಸ ಸನ್ನಿವೇಶಗಳನ್ನು ಸೃಷ್ಟಿಸುವುದು ಇವುಗಳನ್ನು ಒಳಗೊಂಡಿದೆ. ಇದು ವರ್ತನೆಯ ಪ್ರಗತಿಪರ ಬದಲಾವಣೆಯನ್ನು ಸೂಚಿಸುತ್ತದೆ ಮತ್ತು ವ್ಯಕ್ತಿಗೆ ತನ್ನ ಆಸಕ್ತಿಗಳನ್ನು ಪೂರೈಸಲು ಗುರಿ ಸಾಧಿಸಲು ಸಹಾಯ ಮಾಡುತ್ತವೆ." **–ಕ್ರೋ ಮತ್ತು ಕ್ರೋ.**

"ಒಬ್ಬ ವ್ಯಕ್ತಿಯ ವರ್ತನೆ, ಒಳನೋಟ, ಆಸಕ್ತಿ, ಚಿಂತನೆ, ಇವುಗಳಲ್ಲಿ ಉಂಟಾಗುವ ಬದಲಾವಣೆಯೇ ಕಲಿಕೆ."

**–ಬ್ಲೇರ್ ಮತ್ತು ಸಿಂಪ್ಸನ್**

"ಸನ್ನಿವೇಶದ ಅವಶ್ಯಕತೆಗಳನ್ನು ಪೂರೈಸಲು ವರ್ತನೆಯಲ್ಲಿ ಆಗುವ ಎಲ್ಲಾ ಏರ್ಪಾಡುಗಳನ್ನೂ ಕಲಿಕೆ ಎನ್ನುವರು". –ಗಾರ್ಡನ್ ಮತ್ತು ಮರ್ಫಿ.

"ಪೂರ್ವ ವರ್ತನೆಯ ಆಧಾರದ ಮೇಲೆ ವ್ಯಕ್ತಿಯ ವರ್ತನೆಯಲ್ಲಿ ಹೆಚ್ಚು ಕಾಲ ನೆಲಸಿರುವಂತಹ ಬದಲಾವಣೆಯೇ ಕಲಿಕೆ".

**–ಮೇಲ್ವಿನ್. ಹೆಚ್. ಮಾರ್ಕ್ಸ್.**

"ಪರಿಪಕ್ವತೆ ಮತ್ತು ಅನುಭವದ ಪರಿಣಾಮವಾಗಿ ಉಂಟಾಗುವ ಶಾಶ್ವತ ಬದಲಾವಣೆಯೇ ಕಲಿಕೆ" **– ವಿಂಗ್‌ಹ್ಯಾಮ್**

ಮೇಲಿನ ವ್ಯಾಖ್ಯೆಗಳನ್ನು ಗಮನಿಸಿದಾಗ. "ವರ್ತನಾ ಸಂಘಟನೆಯಲ್ಲಾಗುವ ಬದಲಾವಣೆಯೇ ಕಲಿಕೆ". ಅನುಭವದ ಆಧಾರದಲ್ಲಿ ಶಾಶ್ವತ ಬದಲಾವಣೆಗಳೇ ಕಲಿಕೆ ಎನ್ನಬಹುದು. ಆದರೂ ವರ್ತನೆಯ ಎಲ್ಲಾ ಬದಲಾವಣೆಗಳು ಕಲಿಕೆ ಅಲ್ಲ. ಅಂದರೆ ಔಷಧಿ, ಮಾದಕದ್ರವ್ಯ ಅಪಘಾತ

ಇವುಗಳಿಂದಾದ ಬದಲಾವಣೆ ಕಲಿಕೆ ಆಗುವುದಿಲ್ಲ. ಮೇಲಿನ ವ್ಯಾಖ್ಯೆಗಳಿಂದ ಜ್ಞಾನವನ್ನು, ಹೊಸ ವರ್ತನೆಗಳನ್ನು, ಕೌಶಲವನ್ನು, ಗುರಿಗಳನ್ನು ಪರಿಚಯಿಸಿಕೊಳ್ಳುವುದು ಮೊದಲ ಭಾಗ. ಆನಂತರ ಕಲಿತಿದ್ದನ್ನು ದೃಢಪಡಿಸಿಕೊಳ್ಳುವುದು ಎರಡನೇ ಭಾಗ. ಅಂದರೆ ಹೊಸ ಪರಿಚಯವನ್ನು ಆನಂತರ ದೃಢಪಡಿಸಿಕೊಳ್ಳುವುದನ್ನು "ಕಲಿಕೆ" ಎಂದು ಕರೆಯುತ್ತೇವೆ.

**ಕಲಿಕೆಯ ಬಗ್ಗೆ ಸಿದ್ಧಾಂತಗಳು :**

ಮನೋವಿಜ್ಞಾನಿಗಳು ನೀಡಿದ ಸಿದ್ಧಾಂತಗಳ/ಮಾಡಿದ ಪ್ರಯೋಗಗಳ ಆಧಾರದ ಮೇಲೆ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಬಹುದೆಂಬುದಕ್ಕೆ ಕೆಲವು ಉದಾಹರಣೆಗಳನ್ನು ನೀಡಲಾಗಿದೆ. ಮುಖ್ಯವಾಗಿ ಮನುಷ್ಯನ ಕಲಿಕೆ ಮೂರು ಬಗೆಯಲ್ಲಿ ಜರುಗುತ್ತದೆ ಎನ್ನುತ್ತಾರೆ ಮನೋವಿಜ್ಞಾನಿಗಳು.

1. ಅನುಕರಣೆಯ ಮೂಲಕ ಕಲಿಕೆ.
2. ಪ್ರಯತ್ನ – ಪ್ರಮಾದದ ಮೂಲಕ ಕಲಿಕೆ.
3. ಒಳನೋಟದ ಮೂಲಕ ಕಲಿಕೆ.

- ✓ **ಅನುಕರಣೆಯ ಮೂಲಕ ಕಲಿಕೆ : (Learning by imitation)**

ಮಾತನಾಡುವ ಶೈಲಿ ; ಓದುವ – ಬರೆಯುವ ಶೈಲಿ ; ನಡೆಯುವ ಕ್ರಮ ಇತ್ಯಾದಿ – ಅನೇಕ ವರ್ತನೆಗಳಿಗೆ ನಮಗೆ ಯಾರೋ ಮಾದರಿಯಾಗಿದ್ದಾರೆ. ತಂದೆ, ತಾಯಿ, ಅಧ್ಯಾಪಕ, ಮಿತ್ರ. . . . ಹೀಗೆ. ಆದ್ದರಿಂದ ಮಗುವಿಗೆ ಯಾವಾಗಲೂ ಒಳ್ಳೆಯ ಮಾದರಿಗಳನ್ನೇ ನೀಡುವುದು ಉಚಿತ. ಸುಂದರ ಬರವಣಿಗೆ ಹೊಂದಿದ ಅಧ್ಯಾಪಕ ಮಕ್ಕಳ ಬರಹವನ್ನು ಸುಂದರಗೊಳಿಸಬಲ್ಲ.

- ✓ **ಪ್ರಯತ್ನ – ಪ್ರಮಾದ ಕಲಿಕೆ : (Trial and Error Learning)**

ಥಾರ್ನ್‌ಡೈಕ್ ಎಂಬ ಮನೋವಿಜ್ಞಾನಿ ತನ್ನ 'ಸಂವೇದನಾಗತಿ ಕಲಿಕೆ ಅಥವಾ ಪ್ರಯತ್ನ – ಪ್ರಮಾದ ಕಲಿಕೆಯಲ್ಲಿ' ಹೀಗೆ ಸೂಚಿಸಿರುತ್ತಾರೆ. "ಯಾವ ಅನುಕ್ರಿಯೆಗಳು ಪುನರ್ಬಲನ (ಗುರುತಿಸಲ್ಪಡುವಿಕೆ) ಪಡೆಯುತ್ತವೆಯೋ ಅಂತಹ ವರ್ತನೆಗಳು ಭವಿಷ್ಯದಲ್ಲಿ ಹೆಚ್ಚಾಗಿ ಕಂಡು ಬರುತ್ತವೆ."

ಜೀವಿಗೆ ಯುಕ್ತ ಪ್ರೇರಣೆಯಿದ್ದಾಗ ದತ್ತ ಉದ್ದೀಪಕಕ್ಕೆ ವಿವಿಧ ಅನುಕ್ರಿಯೆಗಳನ್ನು ಮೊದಲು ತೋರುತ್ತದೆ. ಅನೇಕ ಬಾರಿ ಪ್ರಯತ್ನಿಸಿ ಕ್ರಮೇಣ ಅನುಪಯುಕ್ತ ಚಟುವಟಿಕೆಗಳನ್ನು ತ್ಯಜಿಸಿ ಯುಕ್ತ ಅನುಕ್ರಿಯೆಯನ್ನು ಪತ್ತೆಹಚ್ಚಿ ಪುನರಾವರ್ತಿಸುತ್ತದೆ. ಹೀಗೆ ಪ್ರಯತ್ನ–ಪ್ರಮಾದ ವಿಧಾನದಲ್ಲಿ ನಿರ್ದಿಷ್ಟ ಉದ್ದೀಪಕಕ್ಕೆ ನಿರ್ದಿಷ್ಟ ಅನುಕ್ರಿಯೆ ತೋರಲು ಕಲಿಯುತ್ತದೆ.

ಈ ಸಂಗತಿಗಳಿಂದ ವೇದ್ಯವಾಗುವುದೆಂದರೆ– ಕಲಿಕೆ – ಬೋಧನೆಯ ಸಂದರ್ಭದಲ್ಲಿ ಮಗುವಿಗೆ ಉತ್ತೇಜನಕಾರಿ ಮಾತುಗಳನ್ನಾಡುವುದರಿಂದ; (ಸುಳ್ಳು ಹೊಗಳಿಕೆ ಅಲ್ಲ) ಮಗು ತೋರಿಸಿದ ಅಲ್ಪ ಪ್ರಮಾಣದ ಗೆಲುವನ್ನು ಗುರುತಿಸಿ, ಗೌರವಿಸುವುದರಿಂದ – ಮಗು ಕಲಿಕೆಯ ಕಡೆ ಆಸಕ್ತಿ ಬೆಳೆಸಿಕೊಳ್ಳುತ್ತದೆ. ಮತ್ತು ವೇಗವಾಗಿ ಕಲಿಯುತ್ತದೆ.

- **ಸೋಪಾದಿತ ಅನುಬಂಧ ಕಲಿಕೆ : (Learning by Classical Conditioning)**

ಜೀವಿಯು ಸಹಜವಾಗಿ ತೋರುವಂತಹ ಯಾವುದೇ ಅನುಕ್ರಿಯೆಯನ್ನು ನಾವು ಇಚ್ಛಿಸುವಂತಹ ಯಾವುದೇ ಉದ್ದೀಪಕಕ್ಕೆ ಅನುಬಂಧಿಸಬಹುದು–ಇದು ಐ.ಬಿ. ಪಾವ್‌ಲೋವ್

ಮತ್ತು ಜೆ.ಬಿ.ವಾಟ್ಸನ್ ಮೊದಲಾದ ವರ್ತನಾವಾದಿಗಳು ಪ್ರತಿಪಾದಿಸಿದ ದಿತ ಸೋಪಾಧಿಕ ಅನುಬಂಧನ ಕಲಿಕೆಯ ವಾದದ ತಿರುಳು.

ಇದರ ನಿಹಿತಾರ್ಥಗಳ ಪ್ರಕಾರ

1. ಅಳಿವಿನ ತತ್ವದ ಬಳಕೆಯಿಂದ ಕೆಟ್ಟ ಹವ್ಯಾಸಗಳನ್ನು ತೊರೆದು ಹಾಕಬಹುದು. ಮತ್ತು ಅಪಸಮಾಯೋಜಿತ ಮಕ್ಕಳ ಉದ್ವೇಗ ಮತ್ತು ಭಯಗಳನ್ನು ಹತ್ತಿಕ್ಕಬಹುದು. ವಿದ್ಯಾರ್ಥಿಗಳ ಕಲಿಕೆ ; ಶಾಲೆ ಹಾಗು ಶಿಕ್ಷಕರ ಬಗ್ಗೆ ಧನಾತ್ಮಕ ಮನೋಧೋರಣೆಗಳನ್ನು ರೂಢಿಸಲು ಈ ತತ್ವಗಳನ್ನು ಬಳಸಬಹುದು.

2. ಅನುಬಂಧನ ಕಲಿಕೆ ಬಲಗೊಳ್ಳಬೇಕಾದರೆ ಅನುಭವಗಳ ಪುನರಾವರ್ತನೆ ಆಗಬೇಕು, ಪುಷ್ಟೀಕರಣಗಳನ್ನು (ಗುರುತಿಸುವಿಕೆ–/ ಗೌರವಿಸುವಿಕೆ) ಸಮಯೋಜಿತವಾಗಿ ಒದಗಿಸಬೇಕು. ಓದುವಿಕೆ, ಬರೆಯುವಿಕೆ, ಕಾಗುಣಿತ ಮತ್ತು ಶಾಲಾ ವಿಷಯಗಳನ್ನು ಪುನರಾವರ್ತಿಸುವುದರ ಮೂಲಕ ಮತ್ತು ಮಗು ಸರಿಯಾದ ವರ್ತನೆಯನ್ನು ತೋರಿಸಿದಾಗ ಸೂಕ್ತ ಪುಷ್ಟೀಕರಣವನ್ನು ನೀಡುವುದರಿಂದ ಕಲಿಕೆಯನ್ನು ಬಲಗೊಳಿಸಬಹುದು.

## ➢ ಕ್ರಿಯಾಜನ್ಯ ಅನುಬಂಧ ಕಲಿಕೆ : (Learning by Operant Conditioning)

**ಪುಷ್ಟೀಕರಣ ಅಥವಾ ಪನರ್ಬಲಗಳು:–** ಸ್ಕಿನ್ನರ್‌ರವರ ಕ್ರಿಯಾಜನ್ಯ ಅನುಬಂಧನ ಕಲಿಕೆಯ ಕೇಂದ್ರ ಬಿಂದುವೇ ಪುಷ್ಟೀಕರಣದ ಕಲ್ಪನೆ. ಥಾರ್ನ್‌ಡೈಕ್ ಮತ್ತು ಪಾವ್‌ಲೋವ್‌ರವರು ಸಹ ಪುಷ್ಟೀಕರಣವನ್ನು ತಮ್ಮ ಪ್ರಯೋಗಗಳಲ್ಲಿ ಬಳಸುತ್ತಾರೆ; ಆದರೆ ಸ್ಕಿನ್ನರ್‌ರವರ ವಿಧಾನದಲ್ಲಿ ವೈಶಿಷ್ಟ್ಯತೆಯನ್ನು ಕಾಣುವುದು, ಅವರು ಸೂಚಿಸಿದ ಪುಷ್ಟೀಕರಣ/ಪುನರ್ಬಲನ ನೀಡುವ ಕ್ರಮದಲ್ಲಿ ಕಲಿಕೆ ಸ್ಥಿರವಾಗಿ ನೆಲೆಗೊಳ್ಳಲು ಕಾರಣವಾಗುವ ತೃಪ್ತಿಕಾರಕಗಳನ್ನು ಪುಷ್ಟೀಕರಣಗಳು ಅಥವಾ ಪುನರ್ಬಲಗಳು ಎಂದು ಕರೆಯುತ್ತಾರೆ. ಪುನರ್ಬಲಗಳು ಅನುಕ್ರಿಯೆಯ ವೇಗ ಮತ್ತು ಪ್ರಮಾಣವನ್ನು ಹೆಚ್ಚಿಸುತ್ತವೆ.

ಸ್ಕಿನ್ನರ್‌ರವರ ಪ್ರಯೋಗಗಳಲ್ಲಿ ಸ್ಥಿರ ಮತ್ತು ಅಸ್ಥಿರ ಪ್ರಮಾಣದ ಪುಷ್ಟೀಕರಣಗಳಿಂದ ತೀವ್ರ ಚಟುವಟಿಕೆ ಪ್ರಕಟವಾಗುವುದು ಸಾಬೀತಾಗಿದೆ. ಪ್ರತೀ ಹಂತದಲ್ಲಿ ಕಲಿಯುವ ವ್ಯಕ್ತಿಗೆ ತಾನು ಸರಿಯಾದ ದಾರಿಯಲ್ಲಿ ಮುನ್ನಡೆಯುತ್ತಿದ್ದೇನೆ ಎಂದು ತಿಳಿದು ಬಂದರೆ ಆತ ಹೆಚ್ಚು ಉತ್ಸಾಹದಿಂದ ಕಲಿಯುತ್ತಾನೆ, ಆದ್ದರಿಂದ ವಿದ್ಯಾರ್ಥಿಗಳಿಗೆ ಪ್ರತಿ ಹಂತದಲ್ಲಿ ತಮ್ಮ ಪ್ರಗತಿಯ ಅರಿವನ್ನು ನೀಡುತ್ತಿರಬೇಕು. ಆಗ ಅವರು ನಿರಂತರವಾಗಿ ಮತ್ತು ಉತ್ಸಾಹದಿಂದ ಕಲಿಯಲು ಸಾಧ್ಯವಾಗುತ್ತದೆ.

ಸ್ಕಿನ್ನರ್‌ನ ಪ್ರಯೋಗಗಳಿಂದ ತಿಳಿದುಬರುವುದೇನೆಂದರೆ ಕಲಿಯಬೇಕಾದ ವಸ್ತುವನ್ನು ಕ್ರಮಾಗತವಾಗಿ ಮತ್ತು ಚಿಕ್ಕ ಚಿಕ್ಕ ಭಾಗಗಳಾಗಿ ಕಲಿಸುವುದು ಒಳ್ಳೆಯದು. ಹಾಗೂ ಮಗು ಕಲಿಯುತ್ತಿರುವ ಕ್ರಮ ಕುರಿತು ಹಿಮ್ಮಾಹಿತಿ ನೀಡುತ್ತಿದ್ದರೆ ಕಲಿಕೆ ವೇಗವಾಗುತ್ತದೆ ಮತ್ತು ಧೃಢವಾಗುತ್ತದೆ ಎಂಬುದಾಗಿದೆ. ಆದ ಕಾರಣ ಕಲಿಸುವಾಗ ಹಂತ ಹಂತವಾಗಿ ಬೋಧಿಸುವುದು ಮತ್ತು ಮಕ್ಕಳು ಸರಿಯಾಗಿ ಅರ್ಥ ಮಾಡಿಕೊಂಡರೆ ಅದು ಸರಿ ಎಂದು ಹೇಳುವುದರಿಂದ ಮಗು ಕಲಿಯುತ್ತದೆ. ಉದಾರಹಣೆಗೆ ಎರಡಂಕಿ ಗುಣಾಕಾರವನ್ನು ಮಾಡುವಾಗ ಯಾವ ಅಂಕಿಯಿಂದ ಯಾವ ಅಂಕಿಯನ್ನು ಗುಣಿಸಬೇಕು. ಎರಡನೇ ಅಂಕಿ ಯಾವುದನ್ನು ತೆಗೆದುಕೊಂಡು ಯಾವ ಅಂಕಿಗಳನ್ನು ಗುಣಿಸಬೇಕು. ಗುಣಲಬ್ಧವನ್ನು ಯಾವ ಸ್ಥಾನದಲ್ಲಿ ಬರೆಯಬೇಕು – ಏಕೆ ಬರೆಯಬೇಕು. ಯಾವ ಕಡೆಯಿಂದ ಕೂಡಬೇಕು. ಹೀಗೆ ಒಂದೊಂದೆ ಹಂತಗಳನ್ನು ಹೇಳುವುದರಿಂದ ಮಗು ನಮ್ಮನ್ನು ಅನುಸರಿಸುತ್ತದೆ. ಅದನ್ನು ಬಿಟ್ಟು ನೀವು ಒಂದೇ ಬಾರಿ ಗುಣಿಸಿ ಉತ್ತರವನ್ನು ಬರೆದರೆ ಮಗು ನಿಮ್ಮ ಬೋಧನೆಯನ್ನು ಅನುಸರಿಸಲಾರದು.

## ➢ ಒಳನೋಟ ಕಲಿಕೆ:– (Learning by Insight)

ಗೆಸ್ಟಾಲ್ಟ್‌ವಾದದ ಪ್ರಕಾರ ಕಲಿಕೆಯನ್ನು ಒಂದು ಉದ್ದೇಶಪೂರ್ವಕವಾದ, ಅನ್ವೇಷಣಾತ್ಮಕವಾದ, ಸೃಜನಾತ್ಮಕ ಅನುಭವ ಎಂದು ಅರ್ಥೈಸುತ್ತಾರೆ, ಇಲ್ಲಿ ಕಲಿಯುವ ವ್ಯಕ್ತಿ ಸಾಮಾನ್ಯವಾಗಿ ಸನ್ನಿವೇಶವನ್ನು ಸಮಗ್ರವಾಗಿ ಗ್ರಹಿಸುತ್ತಾನೆ. ಸನ್ನಿವೇಶದ ಪೂರ್ಣ ಅರಿವಿನಿಂದ, ಅನುಭವ ಕ್ಷೇತ್ರದ ಪುನರ‍್ರಚನೆಯಿಂದ ಒಳನೋಟ ಉಂಟಾಗುತ್ತದೆ. ಈ ಒಳನೋಟದಿಂದ ದೊರೆತ ಜ್ಞಾನ ವರ್ತನೆಯ ರೂಪದಲ್ಲಿ ಪ್ರಕಟವಾದರೆ ಕಲಿಕೆ ಉಂಟಾಗುತ್ತದೆ ಎಂದರ್ಥ. ಕೆಲವು ಬಾರಿ ಮನಸ್ಸಿನ ಅಜಾಗ್ರತ ಭಾಗದಲ್ಲಿ ಅನುಭವ ಕ್ಷೇತ್ರದ ಪುನರ‍್ರಚನೆಯಾಗಿ ಫಲಿತ ಮನಸ್ಸಿನ ಜಾಗ್ರತ ಭಾಗಕ್ಕೆ ಬರುತ್ತದೆ. ಇಂತಹ ಸಂದರ್ಭದಲ್ಲಿ ವ್ಯಕ್ತಿಯನ್ನು ಕಾಡುತ್ತಿರುವ ಸಮಸ್ಯೆಗೆ ಇದ್ದಕ್ಕಿದ್ದ ಹಾಗೆ ಉತ್ತರ ಹೊಳೆಯುತ್ತದೆ. ಹೀಗೆ ಸಮಸ್ಯೆಗೆ ಪರಿಹಾರ ಸಿಗುವುದರ ಮೂಲಕ ನಡೆಯುವ ಕ್ರಿಯೆಗೆ 'ಒಳನೋಟ ಕಲಿಕೆ' ಎಂದು ಕರೆಯುವರು.

'ಒಳನೋಟ ಕಲಿಕೆ' ಎಂದು ಹೇಳುವಾಗ ಮಗು/ವ್ಯಕ್ತಿ ಈಗಾಗಲೇ ಕಲಿತಿರುವ ಜ್ಞಾನದ ಸಹಾಯದಿಂದ ಎದುರಾಗಿರುವ ಸಮಸ್ಯೆ (ಕಲಿಕೆಯ ಸಂದರ್ಭ ಇರಬಹುದು) ಯನ್ನು ಬಗೆಹರಿಸುತ್ತಾನೆ. ಇಲ್ಲಿ ಸಮಸ್ಯೆಯ ವಿವಿಧ ಮಗ್ಗಲುಗಳನ್ನು ಅರ್ಥ ಮಾಡಿಕೊಂಡು ತಾನು ಈಗಾಗಲೇ ಪಡೆದಿರುವ ಜ್ಞಾನವನ್ನು ತರ್ಕಬದ್ಧವಾಗಿ ಜೋಡಿಸಿ ಸಮಸ್ಯೆಗೆ ಉತ್ತರ ಕಂಡುಹಿಡಿಯುತ್ತಾರೆ.

ಉದಾಹರಣೆ –(1). ಒಂದು ಬುಟ್ಟಿಯಲ್ಲಿ 5 ಮಾವಿನ ಹಣ್ಣುಗಳಿವೆ. ಒಟ್ಟು 5 ಬುಟ್ಟಿಗಳು ಇದ್ದಾಗ ಎಷ್ಟು ಮಾವಿನ ಹಣ್ಣುಗಳಿವೆ ಎಂದಾಗ ಮಗುವಿಗೆ ಕೂಡುವುದು/ ಗುಣಿಸುವುದನ್ನು ಮಾಡಬೇಕು ಎಂದು ಹೊಳೆಯುವುದು ಒಳನೋಟ ಕಲಿಕೆ. ಈ ಒಳನೋಟಗಳನ್ನು ತರಲು ಅಧ್ಯಾಪಕ ವಿಷಯವನ್ನು ಹಿಂಜುವ ಕೌಶಲ್ಯ ಹೊಂದಿರಬೇಕು – ಮಕ್ಕಳಿಗೆ ಕೆಲವು ಸುಳಿವು (Clue) ನೀಡಬೇಕು.

ಉದಾಹರಣೆ (2). ನೀವು ಸಾಂಕ್ರಾಮಿಕ ರೋಗಗಳ ಕುರಿತು ಪಾಠ ಮಾಡಿರುವಿರಿ. ಪತ್ರಿಕೆಯಲ್ಲಿ ಕಾಲರಾದಿಂದ ಹತ್ತು ಜನ ಆಸ್ಪತ್ರೆಗೆ ಎಂಬ ಸುದ್ದಿ ಇದೆ ಎಂದುಕೊಳ್ಳೋಣ. ಇದಕ್ಕೆ ಕಾರಣವನ್ನು ಒಳನೋಟದ ಕಲಿಕೆಯ ಮೂಲಕ ಹೇಗೆ ಬಗೆಹರಿಸಬಹುದು ಚಿಂತಿಸಿ.

## ಕಲಿಕೆಯ ನಿರ್ಧಾರಕಗಳು (ಕಲಿಕೆ ಹೇಗೆ ಉಂಟಾಗುತ್ತದೆ.)

ಕಲಿಕೆ ಕುರಿತಂತೆ ಮನೋವಿಜ್ಞಾನಿಗಳ ಅಭಿಪ್ರಾಯವನ್ನು ಹಿಂದಿನ ಪ್ಯಾರಾಗಳಲ್ಲಿ ಗಮನಿಸಿರುವಿರಿ. ಈ ಅಭಿಪ್ರಾಯಗಳನ್ನು ಸಂಗ್ರಾಹ್ಯವಾಗಿ ಹೇಳುವುದಾದರೆ – ಕಲಿಕೆ ಮುಂದಿನ ಸಂದರ್ಭಗಳಲ್ಲಿ ಜರುಗುತ್ತದೆ.

- ಕಲಿಕೆಯಲ್ಲಿ ಗುರಿ ನಿರ್ಧಾರದ ಪಾತ್ರ ಬಹಳ ಮುಖ್ಯ. ಸ್ಪಷ್ಟ ಗುರಿಯನ್ನು ಹೊಂದಿರುವ ವ್ಯಕ್ತಿ ಅದನ್ನು ಸಾಧಿಸಲು ಸದಾ ಕಾಲ ಕಾರ್ಯೋನ್ಮುಖನಾಗಿರುತ್ತಾನೆ/ಳೆ. ಒಂದು ವಿಧದ ಚಡಪಡಿಕೆ ಅವರಲ್ಲಿ ಕಾಣುತ್ತದೆ. ನಿದ್ರೆ ಎಲ್ಲರಿಗೂ ಸಹಜ ತಾನೆ? ಅದರಲ್ಲೂ ಕೆಲವರು ನಸುಕಿನಲ್ಲಿ ಎದ್ದು ಕೆಲಸ ಕಾರ್ಯಗಳಲ್ಲಿ ತೊಡಗಿರುತ್ತಾರೆ. ಕೆಲವೊಮ್ಮೆ ಅನೇಕರು ಮನರಂಜನೆ ತೊರೆದು ತಮ್ಮ ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಇಂತಹ ತದೇಕ ಮಗ್ನತೆಗೆ ಕಾರಣ ವ್ಯಕ್ತಿ ಹೊಂದಿರುವ ಗುರಿ.

ಆದ್ದರಿಂದ ಗುರಿ ನಿರ್ಧಾರವನ್ನು ಹಿರಿಯರು ಮಗುವಿನಲ್ಲಿ ಮೂಡಿಸಲು ಪ್ರಯತ್ನಿಸಬೇಕು. ಕಲಿಕೆಯಿಂದ ಆಗುವ ಪ್ರಯೋಜನಗಳ ಅರಿವನ್ನು ಮಗುವಿನಲ್ಲಿ ತರಬೇಕು. ಅತಿ ಉತ್ಸಾಹದಲ್ಲಿ – ಕೆಲವೊಮ್ಮೆ ಅಸಂಗತ ವಿಚಾರಗಳನ್ನು ಮಗುವಿನ ತಲೆಗೆ ತುಂಬುತ್ತಾರೆ. ಉದಾಹರಣೆಗೆ ನೀನು ಕಲಿಯದೇ ಹೋದರೆ.......... ಕೆಲಸ ಮಾಡಬೇಕಾಗುತ್ತದೆ. ಇತ್ಯಾದಿ...

ಈ ಮಾತು ಪೂರ್ಣ ಅಸತ್ಯ ಅಲ್ಲ – ಆದರೂ ಮಗುವಿನಲ್ಲಿ ಅಂತಹ ಕೆಲಸಕ್ಕೆ ಮಾನ್ಯತೆ ಇಲ್ಲ ಎಂಬ ಭಾವ ಮೂಡುತ್ತದೆ. ಪ್ರತಿಯೊಂದು ಕೆಲಸಕ್ಕೂ ತನ್ನದೇ ಆದ ಕಾರ್ಯ ಗೌರವ ಇರುತ್ತದೆ. ಮಗುವಿಗೆ ಆಪ್ತ ಸಮಾಲೋಚನೆ ಮಾಡುವ ಭರದಲ್ಲಿ ಇಂತಹ ಅ ಪ್ರಬುದ್ಧ ಭಾವವನ್ನು ತುಂಬಬಾರದು. ಸಮಾಲೋಚನೆಗಳಲ್ಲಿ ಎಚ್ಚರಿಕೆ ಅಗತ್ಯ.

- ಗುರಿ ನಿರ್ಧಾರದ ತರುವಾಯ ಕೆಲಸ ಮಾಡಬೇಕೆಂಬ ಹುಮ್ಮಸ್ಸು, ಆಸಕ್ತಿ, ಮೂಡುವುದು ಇದನ್ನು 'ಅಭಿಪ್ರೇರಣ' ಅನ್ನುತ್ತಾರೆ. ಅಂದರೆ ಗುರಿಯ ಕಡೆಗೆ ನಿರಂತರವಾಗಿ ಚಲಿಸುವಂತೆ ಮಾಡುವ ಸುಪ್ತ ಶಕ್ತಿ. ಇದು ವ್ಯಕ್ತಿಯಲ್ಲಿ ನಶಿಸದಂತೆ ಕಾಪಾಡಿಕೊಳ್ಳಬೇಕಾಗಿರುವುದು ಅಗತ್ಯ. ಇದನ್ನ ವ್ಯಕ್ತಿಯ (ಮಗುವಿನ) ಪರಿಸರದಲ್ಲಿ ಬರುವ ವ್ಯಕ್ತಿಗಳ – ವಿಶೇಷವಾಗಿ ಪೋಷಕರು ಮತ್ತು ಅಧ್ಯಾಪಕರು ಗಮನದಲ್ಲಿಡಬೇಕು.

  ಅಭಿಪ್ರೇರಣೆ ಮಗುವಿನಲ್ಲಿ ಉಳಿಯುವಂತೆ ಮಾಡಲು ಅಧ್ಯಾಪಕಿ ಆಗಾಗ್ಗೆ ಮಗುವಿನ ಮುಂದೆ ಇರುವ ಗುರಿಗಳನ್ನು ಜ್ಞಾಪಿಸುತ್ತಿರಬೇಕು. ಜೊತೆಗೆ ಮಗು ಮಾಡಿರುವ ಸಣ್ಣ ಪುಟ್ಟ ಸಾಧನೆಯನ್ನು ಶ್ಲಾಘಿಸಬೇಕು. ಹಾಗೂ ಮಗುವಿನ ಸಾಧನೆಯ ಹಾದಿಯಲ್ಲಿ ಉಂಟಾಗುವ ತೊಡಕುಗಳ ನಿವಾರಣೆಗೆ ಪ್ರಯತ್ನ ಮಾಡಬೇಕು.

- ವ್ಯಕ್ತಿಗೆ (ಮಗುವಿಗೆ) ದೊರೆಯುವ ಅಭಿಪ್ರೇರಣೆಯಲ್ಲಿ 'ಪುನರ್ಬಲನ'ಕ್ಕೆ ಪ್ರಾಮುಖ್ಯತೆ ಇದೆ. ಪುನರ್ಬಲನ ಎಂದರೆ ಮಗು ಮಾಡುತ್ತಿರುವ ಕೆಲಸಕ್ಕೆ ಸಮ್ಮತಿ ಸೂಚಿಸುವುದು. ಸರಿಯಿದೆ, ಮುಂದುವರೆ – ಚೆನ್ನಾಗಿ ಮಾಡಿದೆ – ಹೀಗೆಯೇ ಮುಂದುವರೆ – ಭೇಶ್ / ಶಹಬ್ಬಾಸ್ ಇತ್ಯಾದಿ ಹೇಳಿಕೆಗಳು ಮಗುವಿನಲ್ಲಿ ಭರವಸೆ ಮೂಡಿಸುತ್ತದೆ. ಆತ್ಮವಿಶ್ವಾಸವುಳ್ಳ ವ್ಯಕ್ತಿ (ಮಗು) ಮಾತ್ರ ಗುರಿಯನ್ನು ಸಾಧಿಸಬಲ್ಲ /ಳು.

- ಪುನರ್ಬಲನದಲ್ಲಿ ಎರಡು ಬಗೆ – ಮೊದಲನೆಯದು 'ಧನಾತ್ಮಕ', ಎರಡನೆಯದು 'ಋಣಾತ್ಮಕ'. ಧನಾತ್ಮಕ ಪುನರ್ಬಲನ ಮಗುವಿಗೆ ಯಾವಾಗಲೂ ಮುದ ನೀಡುತ್ತದೆ. ಮುದಗೊಂಡ ಮನಸ್ಸಿಗೆ ಗ್ರಹಿಕೆಯ ತೀವ್ರತೆ ಹೆಚ್ಚು. ಇಲ್ಲಿ ಸ್ವಾಭಾವಿಕವಾಗಿ ಕಲಿಕೆ ಆಗುತ್ತದೆ. ಅದರ ಪ್ರಮಾಣವು ಅಧಿಕ. ಆದರೆ ಋಣಾತ್ಮಕ ಪುನರ್ಬಲನದ ಪರಿಣಾಮ ಇದಕ್ಕೆ ವ್ಯತಿರಿಕ್ತವಾಗಿರುತ್ತದೆ. ಈ ಸಂದರ್ಭದಲ್ಲಿ ಕಲಿಕೆ ಆಗಬಹುದು. ಆದರೆ ಅದು ಯಾವಾಗಲೂ ಕಡಿಮೆ ಮತ್ತು ಅದರ ಬಾಳಿಕೆ ಕೂಡ ಕಡಿಮೆ ಅವಧಿಯದು. ಇದಕ್ಕೆ ಕಾರಣ ವ್ಯಕ್ತಿಯ ಮನಸ್ಸು ನೋವಿನ ಪ್ರಸಂಗಗಳನ್ನು ಮರಿಯಲೆತ್ನಿಸುತ್ತದೆ. ಇಲ್ಲಿ ನೋವಿನ ಪ್ರಸಂಗದ ಜೊತೆಗೆ ಕಲಿತ ಅಂಶಗಳನ್ನು (ನಡೆದಿದ್ದರೆ) ಮರೆಯುತ್ತದೆ. ಆದ್ದರಿಂದ ಕಲಿಕೆ ಸಂತಸದಾಯಕವಾಗಿರುವಂತೆ ಕಲಿಕೆಯ ಸನ್ನಿವೇಶಗಳನ್ನು ನಿರ್ಮಿಸುವುದು ಯುಕ್ತ.

- ವ್ಯಕ್ತಿತ್ವ ರೂಪಗೊಳ್ಳಲು ವ್ಯಕ್ತಿಗೆ ದೊರೆಯುವ ಪುನರ್ಬಲನಗಳೂ ಕಾರಣ ಎಂದು ಹೇಳುತ್ತಾರೆ. ವ್ಯಕ್ತಿಯ ಪ್ರತಿಯೊಂದು ವರ್ತನೆ ರೂಪುಗೊಳ್ಳುವ ವೇಳೆ – ಆ ವರ್ತನೆಗೆ ಅಂಗೀಕಾರ ದೊರೆತಿರುತ್ತದೆ. ಅಂಗೀಕಾರ ಬೇರೆ ಬೇರೆಯವರಿಂದ ದೊರೆತಿರುತ್ತದೆ. ಆದ್ದರಿಂದ ಯಾವ ವರ್ತನೆಗೆ ಎಂತಹ ಪುನರ್ಬಲನ ದೊರೆತಿದೆ – ದೊರೆಯುತ್ತಿದೆ ಎಂಬ ಅರಿವು ಪೋಷಕ / ಅಧ್ಯಾಪಕಿಗೆ ಇದ್ದರೆ ಮಗುವಿನಲ್ಲಿನ ಕೆಲವು ಅಪವರ್ತನೆಗಳನ್ನು ಮಾರ್ಪಾಡಿಸಲು ಯತ್ನಿಸಬಹುದು.

- ಪುನರ್ಬಲನಕ್ಕೆ ಇಷ್ಟೆಲ್ಲ ಮಹತ್ವ ಇದೆ. ಆದರೆ ಪುನರ್ಬಲನಗಳನ್ನು ಯುಕ್ತವಾಗಿ ಬಳಸದಿದ್ದರೆ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಬಹುತೇಕ ಮಕ್ಕಳು ಇಷ್ಟಪಡುವ ಅಧ್ಯಾಪಕಿಯರಲ್ಲಿ – ಯುಕ್ತವಾದ ಪುನರ್ಬಲನ ನೀಡುವ ಕೌಶಲ್ಯವನ್ನು

ಕಾಣಬಹುದು. ಮಗುವಿನ ಎಲ್ಲ ವರ್ತನೆಗೂ good – very good – Excellant ಅಂದರೆ ಆ ಪದಗಳಿಗೆ ಇರುವ ಮಹತ್ವ ಕಳೆದುಹೋಗುತ್ತದೆ. ಮಗುವಿಗೆ ಇದೂ ಕೂಡ ಒಂದು ಪದ ಅನಿಸುತ್ತದೆ. ಅದರಿಂದ ಹೆಚ್ಚಿನ ಪ್ರಯೋಜನ ಇಲ್ಲ. ಜೊತೆಗೆ ಕೇವಲ ಇಂತಹ ಪದ ಪ್ರಯೋಗ ಮಾತ್ರ ಪುನರ್ಬಲನ ಎಂಬ ತಿಳುವಳಿಕೆ ಬೇಡ. ಮುಖಭಾವ – ಕಣ್ಣು – ತುಟಿಯಲ್ಲಿ – ಸಂತೋಷಭಾವ – ಆಶ್ಚರ್ಯ ಆರಾಧನಾಭಾವವನ್ನು ಮಗುವಿನ ಸರಿ ವರ್ತನೆಗಳಿಗೆ ಸೂಚಿಸಿದಾಗಲೂ ಕೂಡ ಪುನರ್ಬಲನ ನೀಡಿದಂತೆ ಆಗುತ್ತದೆ. ಪುನರ್ಬಲನ ಮೌಖಿಕ ಮತ್ತು ಸಂಜ್ಞಾತ್ಮಕವಾಗಿರುವುದು ತರಗತಿಯ ಕಲಿಕೆಯ ದೃಷ್ಟಿಯಿಂದ ಅಪೇಕ್ಷಣೀಯ.

- ಕಲಿಕೆ ಪ್ರಜ್ಞಾಪೂರ್ವಕವಾಗಿ ಮತ್ತು ಅಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ಉದಾಹರಣೆಗೆ ಸಸ್ಯದ ಭಾಗಗಳನ್ನು ವಿವರಿಸವಾಗ ನಿಜವಾದ ಸಸ್ಯವನ್ನು ಹಿಡಿದು ಭಾಗ ಗುರುತಿಸುತ್ತೀರಿ. ಇದು ಪ್ರಜ್ಞಾಪೂರ್ವಕ, ಸಂಜೆ ವೇಳೆ ಮಗ್ಗಿ ಹೇಳುವುದು ರೂಢಿ. ಹದಿನಾರ್ರೈದಲ ಎಂಭತ್ತು ಅನ್ನುವಾಗ ಎಲ್ಲ ಮಕ್ಕಳು ಅರ್ಥ ಮಾಡಿಕೊಂಡು ಹೇಳಿದ್ದಾರೆ ಎಂದೇನೂ ಇಲ್ಲ. ಆದರೂ ಕಲಿಕೆ ಆಗಿರುತ್ತದೆ. ಕಲಿಕೆಯ ಮಟ್ಟ ಬೇರೆ ಬೇರೆಯದು ಅಷ್ಟೆ.

- ಕಲಿಕೆ ಯಾವುದೇ ಸಂದರ್ಭವಿರಲಿ ಅದು ಮಾದರಿಯಾಗಿರುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ "ಹದಿನಾರ್ರೈದಲ ಎಂಭತ್ತೆರಡು" ಎಂದು ಹೇಳಿದರೆ – ಮಗು ಹಾಗೆಯೇ ಕಲಿಯುತ್ತದೆ. ಆದ್ದರಿಂದ ತಪ್ಪು ಮಾದರಿಯನ್ನು ಒದಗಿಸಕೂಡದು.

ಜೀವಂತ ಮಾದರಿ (Role Model) ಎಂಬ ಪದವನ್ನು ಆಗಾಗ್ಗೆ ಬಳಸುತ್ತೇವೆ. ಇದು ಸರಿ ಮಾದರಿಯನ್ನು ಕಲಿಕೆಯಲ್ಲಿ ಒದಗಿಸಬೇಕು ಎನ್ನುವುದನ್ನು ಸೂಚಿಸುತ್ತದೆ. ಮಗು ತಂದೆ, ತಾಯಿ, ಅಧ್ಯಾಪಕರನ್ನು ಅನುಕರಣೆ ಮಾಡುತ್ತದೆ. ಅಂತಹ ವರ್ತನೆಯನ್ನು ಮೈಗೂಡಿಸಿಕೊಳ್ಳುತ್ತದೆ. ಜೀವಂತ ಮಾದರಿ ಕೊಡುವಾಗ ಆ ಮಾದರಿ ಸುಸಂಸ್ಕೃತವಾಗಿರಲಿ. ಗಾಂಧೀಜಿಯುವರಿಗೆ ದೊರೆತ (Kettle ಸಂದರ್ಭ ಜ್ಞಾಪಿಸಿಕೊಳ್ಳಿ) ಮಾದರಿ ನಮಗೆ ಬೇಡ.

ಮೊರಾರ್ಜಿ ದೇಸಾಯಿಯವರು ತಂದೆಯ ಮಾದರಿ (ಪಾಠ ಮುಗಿಸಿದ ಬಳಿಕವೇ ಶಾಲಾ ನಿರೀಕ್ಷರನ್ನು ಮಾತನಾಡಿಸಿದ ಪ್ರಕರಣ) ಕುವೆಂಪುರಂತಹ ಮಾದರಿ (ರಾಜಕುಮಾರರು ತಾವಿರುವಲ್ಲಿಗೆ ಬಂದು ಪಾಠ ಹೇಳಿಸಿಕೊಳ್ಳಲು) ಮಗುವಿನಲ್ಲಿ ಸ್ವಾಭಿಮಾನ; ಆತ್ಮ ವಿಶ್ವಾಸ ಬೆಳೆಸಲು ಸಹಕಾರಿ. ಜೀವಂತ ಮಾದರಿಗಳು ಮಗುವಿನಲ್ಲಿ ಮೌಲ್ಯಗಳ ಸಂಘಟನೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

- ಮಗುವಿನ ಪೂರ್ವಾನುಭವ – ಕಲಿಕೆಯಲ್ಲಿ ಪೂರ್ವಾನುಭವದ ಸಂಗತಿ ತುಂಬಾ ಮಹತ್ವವುಳ್ಳದ್ದು. ಮಗುವಿನ ಅನುಭವದ ಪರಿಧಿ ಸೀಮಿತ. ವಾಸ್ತವಿಕವಾಗಿ ಕೆ.ಜಿ.ಬಿ.ವಿ. ಮಕ್ಕಳ ಅನುಭವ ಸಾಮಾನ್ಯ ಶಾಲೆಗಳ ಮಕ್ಕಳ ಅನುಭವಕ್ಕಿಂತ ವಿಸ್ತೃತ. ಆದರೂ ಕೆಲವು ಅಪಕಲ್ಪನೆಗಳು ಕೆಲವು ಪದ ಅಥವಾ ಸಂಗತಿ ಕುರಿತು ಇರುತ್ತವೆ. ಇವುಗಳನ್ನು ಮೊದಲು ತೊಡೆದು ಹಾಕಬೇಕು. ಉದಾಹರಣೆಗೆ ಪರಮಾಣು ಅಂದರೆ ಹಿಟ್ಟಿನ ಕಣದ ಗಾತ್ರದ ವಸ್ತು ಎಂದು ಅರ್ಥ ಮಾಡಬಹುದು. ಇಂತಹ ಅಪಕಲ್ಪನೆಗಳನ್ನು ಮಾರ್ಪಾಡಿಸುವ ಕೆಲಸವನ್ನು ಅಧ್ಯಾಪಕ ಮಾಡಬೇಕಾಗುವುದು.

- **ವೈಯಕ್ತಿಕ ಭಿನ್ನತೆ** : ಯಾವ ಎರಡು ಮಕ್ಕಳೂ ಒಂದೇ ರೀತಿ ಇರುವುದಿಲ್ಲ. ಇದು ತದ್ರೂಪ ಅವಳಿ ಮಕ್ಕಳ ಸಂದರ್ಭದಲ್ಲಿಯೂ ಸತ್ಯ. ರೂಪ, ಎತ್ತರ, ಬಣ್ಣ, ಧ್ವನಿ, ಬುದ್ಧಿಮತ್ತೆ, ವರ್ತನೆಗಳು – ಇತ್ಯಾದಿ ವರ್ತನೆಗಳನ್ನು ಮಗು ತನ್ನ ಪರಿಸರದಿಂದ ರೂಢಿಸಿಕೊಂಡಿರುತ್ತದೆ.

- ಹಿಂಜರಿಕೆಯುಳ್ಳ ಮಗು ಅರ್ಥವಾಗಿಲ್ಲದ ವಿಷಯವನ್ನು ತನ್ನ ಸಹಪಾಠಿಗಳಲ್ಲಿ ಅಥವಾ ಶಿಕ್ಷಕರಲ್ಲಿ ಪ್ರಸ್ತಾಪಿಸುವುದು ಕಡಿಮೆ. ಆ ಮಟ್ಟಿಗೆ ಆ ಮಗುವಿನ ಕಲಿಕೆಯ ವೇಗದಲ್ಲಿ ಕೊರತೆ ಕಾಣುತ್ತದೆ. ಇದೇ ರೀತಿ ಬುದ್ಧಿಮತ್ತೆ ಮಗುವಿನ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ. ಈ ಹಿಂದೆ ತಿಳಿಸಿದಂತೆ ಮಗುವಿನ ಪೂರ್ವಾನುಭವ ಕೂಡ ಮಗುವಿನ ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ.

- ಈ ಅಂಶಗಳನ್ನು ಗಮನಿಸಿದಾಗ ಪ್ರತಿಯೊಂದು ಮಗು ತನ್ನದೇ ವೇಗ, ಮತ್ತು ತನ್ನದೇ ಆದ ಕ್ರಮದಲ್ಲಿ ಕಲಿಯುತ್ತದೆ. ಈ ಅಂಶಗಳು ಕಲಿಕೆಯ ವಿಧಾನವನ್ನು ವೈಯಕ್ತೀಕರಣಗೊಳಿಸಬೇಕು ಎಂಬ ಆಶಯವನ್ನು ಬಿಂಬಿಸುತ್ತವೆ. ಶಿಕ್ಷಣ ಕ್ಷೇತ್ರದ ಈಚಿನ ಪ್ರಯತ್ನಗಳು ಮಗುವಿನಲ್ಲಿ ಕಂಡು ಬರುವ ವೈವಿಧ್ಯತೆಗಳಿಗೆ ಪೂರಕವಾಗಿ ಕಲಿಕೆಯ ಸನ್ನಿವೇಶಗಳನ್ನು ಒದಗಿಸಬೇಕು ಎಂಬ ನಿಟ್ಟಿನಲ್ಲಿ ಸಾಗಿವೆ. ಆದ್ದರಿಂದ ತರಗತಿಯ ಎಲ್ಲ ಮಕ್ಕಳು ಒಂದೇ ವೇಗದಲ್ಲಿ ಕಲಿಯುವುದಿಲ್ಲ ಮತ್ತು ವಿವಿಧ ರೀತಿಯ ಚಟುವಟಿಕೆಗಳು ಅಗತ್ಯ ಎಂಬ ಸಾಮಾನ್ಯ ಅರಿವು ನಮಗೆ ಬೇಕು.

❖ **ತರಗತಿಯ ಆಚರಣೆಗಳು :**

- ತರಗತಿಯಲ್ಲಿ ಅಧ್ಯಾಪಕಿ ಮತ್ತು ಮಕ್ಕಳು ಯಾವೆಲ್ಲ ಚಟುವಟಿಕೆಗಳನ್ನು ಕಲಿಕೆಗಾಗಿ ಮಾಡುತ್ತಾರೋ ಅವೆಲ್ಲಾ ತರಗತಿ ಆಚರಣೆಗಳು. ಕಲಿಕೆಯ ನಿರ್ಧಾರಗಳ ತಿಳುವಳಿಕೆ ಅಧ್ಯಾಪಕನಿಗೆ ತಾನು ಬೋಧಿಸಬೇಕಾದ ರೀತಿಗಳ ಆಯ್ಕೆಗೆ ಸಹಾಯ ಮಾಡುತ್ತದೆ. ಕಲಿಕೆ ಬೋಧನೆಯ ಸಂದರ್ಭದಲ್ಲಿ ಬೋಧನಾ ತಂತ್ರ, ವಿಧಾನ, ಕ್ರಮ, ಎಂಬ ಪದಗಳನ್ನು ಬಳಸುತ್ತೇವೆ.

  ಬೋಧನಾ ತಂತ್ರವೆನ್ನುವುದು ಒಂದು ಸರಳ ಕಲಿಕಾಂಶವನ್ನು ಬೋಧಿಸಲು ಅಥವಾ ಮಗು ಅರ್ಥ ಮಾಡಿಕೊಂಡಿರುವುದೇ ಎಂದು ತಿಳಿಯಲು ಬಳಸುವ ಸಾಧನ. ಉದಾಹರಣೆಗೆ ಪ್ರಶ್ನಿಸುವಿಕೆ, ವಿವರಿಸುವಿಕೆ ಇತ್ಯಾದಿ. ಹೇಗೆ ಪ್ರಶ್ನಿಸಬೇಕು ? ಹೇಗೆ ವಿವರಿಸಬೇಕು ಎಂಬುದು ಬೋಧನಾ ತಂತ್ರ. ತರಗತಿಯ ಆಚರಣೆಯಲ್ಲಿ ಹಲವು ಬೋಧನಾ ತಂತ್ರಗಳನ್ನು ಬಳಸಿ ಬೋಧಿಸಲಾಗುತ್ತದೆ. ಅದು ಬೋಧನ ವಿಧಾನವಾಗುತ್ತದೆ. ಉದಾಹರಣೆಗೆ ಕಥನ ವಿಧಾನ ; ಚಟುವಟಿಕೆ ವಿಧಾನ ; ಪ್ರದರ್ಶನ ವಿಧಾನ ; ಇತ್ಯಾದಿ. ಹಲವು ವೇಳೆ ತರಗತಿ ಅವಧಿಯಲ್ಲಿ ಹಲವು ಬೋಧನಾ ವಿಧಾನಗಳನ್ನು ಬಳಸುತ್ತೇವೆ. ಇದನ್ನು ಬೋಧನಾ ಕ್ರಮ (approaches) ಅನ್ನುತ್ತಾರೆ. ಉದಾಹರಣೆಗೆ ಶಿಶು ಕೇಂದ್ರಿತ ಬೋಧನಾ ಕ್ರಮ ( ಅನುಗಮನ ಬೋಧನಾ ಕ್ರಮ); ಶಿಕ್ಷಕ ಕೇಂದ್ರಿತ ಬೋಧನಾ ಕ್ರಮ (ನಿಗಮನ ಬೋಧನಾ ಕ್ರಮ).

  ಒಂದು ವಿಷಯವನ್ನು ಕಲಿಸಲು ಯಾವುದೇ ನಿರ್ದಿಷ್ಟ ಬೋಧನಾ ವಿಧಾನವೆಂಬುದು ಇಲ್ಲ. ಕಲಿಕಾಂಶದ ಸ್ವರೂಪ ; ಮಕ್ಕಳ ಆಸ್ತಕಿ, ಸಾಮರ್ಥ್ಯ ; ಶಾಲೆಯಲ್ಲಿ ದೊರೆಯುವ ಸೌಲಭ್ಯಗಳು ಮತ್ತು ಸಂಪನ್ಮೂಲಗಳನ್ನು ಆಧರಿಸಿ, ಒಂದು ಬೋಧನಾ ವಿಧಾನ ಅಥವಾ ಬೋಧನಾ ಕ್ರಮಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಪ್ರಾಥಮಿಕ ಹಂತದಲ್ಲಿ ಶಿಶುಕೇಂದ್ರಿತ ಬೋಧನಾ ಕ್ರಮ ಅಥವಾ ಅನುಗಮನ ಕ್ರಮ ಹೆಚ್ಚು ಪರಿಣಾಮಕಾರಿ. ಪ್ರಾಥಮಿಕ ಶಾಲಾ ಹಂತದ ಬೋಧನೆಯಲ್ಲಿ ಅನುಸರಿಸುವ ಕೆಲವು ತರಗತಿ ಆಚರಣೆಗಳನ್ನು ಪಟ್ಟಿ ಮಾಡಿದೆ. ಉದಾ: ಗುಂಪು ಕೆಲಸ/ ಕಲಿಕೆ, ನಾಟಕಾಭಿನಯ ; ಕಥನ ಪದ್ಧತಿ ; ಚರ್ಚಾ ಪದ್ಧತಿ ; ಸಂಭಾಷಣೆ, ಹೊರಾಂಗಣ ಆಟಗಳು, ಸರಳ ಪ್ರಯೋಗಗಳೂ, ಪ್ರಶ್ನೋತ್ತರ ವಿಧಾನ ; ಕ್ರಾಫ್ಟ್, ಕ್ಷೇತ್ರ ಅಧ್ಯಯನ ; ಚಿತ್ರ ರಚನೆ ; ಹಾಡು, ಅಭಿನಯ ಗೀತೆಗಳು – ಇತ್ಯಾದಿ. ತರಗತಿ ಆಚರಣೆಗಳನ್ನು ಯುಕ್ತವಾಗಿ ಆಯ್ಕೆ ಮಾಡಿ ಬಳಸುವುದರಿಂದ ಕಲಿಕೆ –

ಬೋಧನೆಯನ್ನು ಪರಿಣಾಮಕಾರಿಯಾಗಿ ಮಾಡಬಹುದು. ಇವುಗಳ ಜೊತೆಗೆ ಕೆಲವು ನಿರ್ವಹಣಾ ಕೌಶಲ್ಯಗಳಿಗೆ ಗಮನಹರಿಸಿದರೆ ಕಲಿಕೆ – ಬೋಧನೆ ಇನ್ನೂ ಉತ್ತಮಗೊಳ್ಳಲು ಸಾಧ್ಯ.

- **ತರಗತಿ ನಿರ್ವಹಣೆ :** ಗರಿಷ್ಠ ಪ್ರಮಾಣದ ಕಲಿಕೆ – ಬೋಧನೆ ತರಗತಿಯಲ್ಲಿ ನಡೆಯಬೇಕು ಎಂಬ ಹಿನ್ನೆಲೆಯಲ್ಲಿ **"ತರಗತಿ ನಿರ್ವಹಣೆ"** ಎಂಬ ಪದವನ್ನು ಬಳಸಿದೆ. ಕೇವಲ ನಿಶ್ಯಬ್ಧವಾಗಿ ಕುಳಿತು ಕೇಳುವುದು ಅಥವಾ ಅಂತಹ ವಾತಾವರಣದಲ್ಲಿ ವಿವರಿಸುವುದು ಎಂದಲ್ಲ.

ತರಗತಿ ನಿರ್ವಹಣೆಯಲ್ಲಿ ಕೆಲವು ಪ್ರಾಥಮಿಕ ಸಂಗತಿಗಳನ್ನು ಅಧ್ಯಾಪಕ ಗಮನಿಸುವುದರಿಂದ ಒಳ್ಳೆಯ ಕಲಿಕೆ ಬೋಧನೆ ತರಗತಿಯಲ್ಲಿ ನಡೆಯಲು ಅವಕಾಶ ಮಾಡಿಕೊಡಬಹುದು. ಉದಾ :

- ✓ **ಕೂರಿಸುವ ವಿಧಾನ:** ಸಂಪ್ರದಾಯಿಕ ತರಗತಿಗಳಲ್ಲಿ ಮಕ್ಕಳು ಒಂದು ಕಡೆ ಹಾಗೂ ಶಿಕ್ಷಕರು ಇನ್ನೊಂದು ಕಡೆ ಇದ್ದು, ಬೋಧನೆ, ಕಲಿಕೆಯ ಪ್ರಕ್ರಿಯೆ ನಡೆಯುತ್ತದೆ. ಆದರೆ ಇದರಿಂದ ಮಕ್ಕಳು ಹೆಚ್ಚು ಚಟುವಟಿಕೆಯಿಂದ ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಇದರ ಬದಲು, ಮಕ್ಕಳನ್ನು ವೃತ್ತಾಕಾರ ಅಥವಾ ಚಿಕ್ಕ ಗುಂಪು ಅಥವಾ 'ಯು' ಆಕಾರ ಅಥವಾ ಇನ್ನಿತರ ರೀತಿಯಲ್ಲಿ ಮಕ್ಕಳನ್ನು ಕೂರಿಸಿದರೆ, ವಿದ್ಯಾರ್ಥಿ–ವಿದ್ಯಾರ್ಥಿಗಳ ಸಂವಹನ, ಬೋಧನೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆ ಹೆಚ್ಚುತ್ತದೆ.

- ✓ **ಬೋಧನಾ ಉಪಕರಣಗಳು ಮತ್ತು ಅವುಗಳ ಬಳಕೆ** ; ತರಗತಿಯಲ್ಲಿ ಬಳಸುವ ಬೋಧನಾ ಉಪಕರಣಗಳು ಎಲ್ಲಾ ಮಕ್ಕಳಿಗೆ ಕಾಣುವಂತೆ ಇರಲಿ. ಅವುಗಳನ್ನು ಸರಿಯಾಗಿ ನೋಡಲು ಅವಕಾಶ ಮಾಡಿಕೊಡಿ. ಮುಟ್ಟಲು ಅವಕಾಶ ಕೊಡಿ. ಇದು ಪ್ರಿಸಂ ಎಂದು ತೋರಿಸಿ ಥಕ್ಕನೆ ಮುಚ್ಚಿಡುವುದು ಸೂಕ್ತವಲ್ಲ. ಇದರ ಬಳಕೆ ಮೊದಲ ಬಾರಿಯಾಗಿದ್ದರೆ ಸೂಕ್ಷ್ಮವಾಗಿ ನೋಡಲು, ಮುಟ್ಟಲು, ಬಳಸಿ ಪ್ರಯೋಗ ಮಾಡಲು ಅವಕಾಶ ಕೊಡಿ.

  ಬೋಧನಾ ಉಪಕರಣಗಳನ್ನು ಅಧ್ಯಾಪಕರೇ ತಯಾರಿಸಿ ಬಳಸುವ ಕ್ರಮ ಅತ್ಯುತ್ತಮ. ಏಕೆಂದರೆ ತಯಾರಿಕೆಯ ವೇಳೆ ಪರಿಕಲ್ಪನೆಯ ಒಳ – ಹೊರಗು ಅಧ್ಯಾಪಕರಿಗೆ ಆಗಿರುತ್ತದೆ. ಮಕ್ಕಳೇ ಉಪಕರಣ ತಯಾರಿಸಿದರೆ ಇನ್ನೂ ಉತ್ತಮ.

- ✓ ಶೈಕ್ಷಣಿಕ ತಂತ್ರಜ್ಞಾನದ ಬಳಕೆಯಿಂದ ಕ್ಲಿಷ್ಟ ವಿಷಯಗಳನ್ನು ಸರಳವಾಗಿ ಬೋಧಿಸಬಹುದು. ಗಣಕ ಯಂತ್ರಗಳು ನಿಮ್ಮಲ್ಲಿ ಇವೆ. ಉಪಯುಕ್ತವಾದ ಸಿ.ಡಿ.(C.D) ಗಳನ್ನು ಖರೀದಿಸಿ ಬಳಸಬಹುದು. ಮೊಳಕೆ ಒಡೆಯುವ ; ಹೂ ಅರಳುವ ಅಪರೂಪದ ಪ್ರಾಣಿ ಪಕ್ಷಿಗಳನ್ನು ತೋರಿಸಲು ಗಣಕಯಂತ್ರ ಸಹಕಾರಿ. ಜೊತೆಗೆ ಪ್ರಕ್ಷೇಪಕಗಳ ಬಳಕೆಯನ್ನು ತಪ್ಪದೇ ಮಾಡಬೇಕು. ಇದರಿಂದ ಚಟುವಟಿಕೆಗಳಲ್ಲಿ ಭಿನ್ನತೆ ಉಂಟಾಗುತ್ತದೆ. ತನ್ಮೂಲಕ ಮಕ್ಕಳ ಅವಧಾನವನ್ನು ಸುಲಭವಾಗಿ ಸೆಳೆಯಬಹುದು.

- ✓ **ಪ್ರಶ್ನಿಸುವಿಕೆ :** ಅತ್ಯಂತ ಗಮನಾರ್ಹವಾದ ತಂತ್ರ. ಅವಧಾನ ಕೇಂದ್ರೀಕರಣ ಸುಲಭ. ಯಾಂತ್ರಿಕ ಕಲಿಕೆ ಇಲ್ಲವಾಗಿ – ವಿಚಾರ ಮಾಡುವ, ವಿಶ್ಲೇಷಿಸುವ ಸಾಮರ್ಥ್ಯ ಹೆಚ್ಚುತ್ತದೆ. ಇಂತಹ ಕಲಿಕೆಗೆ ಬಾಳಿಕೆ ಹೆಚ್ಚು. ಎಲ್ಲರನ್ನು ಗಮನಿಸಿ ಪ್ರಶ್ನಿಸಿ ; ಗುಂಪು ಉತ್ತರ ಪಡೆಯಬೇಡಿ ; ಸರಳ ಪ್ರಶ್ನೆಗಳನ್ನು ಕಲಿಕೆಯಲ್ಲಿ ಹಿಂದುಳಿದವರಿಗೆ ಕೇಳಿ ; ಪ್ರಶ್ನೆಗಳು ಸಮಾನವಾಗಿ ಹಂಚಿಕೆಯಾಗಿರಲಿ; ಚದುರಿದಂತೆ ಪ್ರಶ್ನೆ ಹಾಕಿ, ಯುಕ್ತವಾಗಿ

ಪ್ರಶಂಸಿಸಿ; ಇಂಬಾದ (Prompting) ಉತ್ತರಗಳನ್ನು ಜೋಡಿಸಿ ; ಮಗುವಿನ ಮನಸ್ಸುಗಳನ್ನು ಘಾಸಿಗೊಳಿಸಬೇಡಿ ; (ಉತ್ತರ ಹೇಳಲು ತವಕಿಸುವ ಸುಮ್ಮನೇ ಇರುವ ವಿದ್ಯಾರ್ಥಿಗಳಿಬ್ಬರೂ) ಉತ್ತರಿಸುವ ವಿದ್ಯಾರ್ಥಿಗೆ ಕೊನೆಗೆ ಉತ್ತರಿಸಲು ಅವಕಾಶ ಕೊಡಿ.

✓ **ಚಟುವಟಿಕೆಗಳು :** ಪುಟಿಯುವ ಚಿಲುಮೆ ಮಗು, 5 ಗಂಟೆ ಒಂದೆಡೆ ಕೂಡಿಸುವುದು ಮಗುವಿಗೆ ಸೆರೆವಾಸ. ನಿರ್ವಾಹವಿಲ್ಲ. ಆದರೆ ಸಂತಸದಾಯಕವಾಗಿ ಕಲಿಸಬಹುದೇ ? ಅದಕ್ಕೆ ಉತ್ತರ – ಚಟುವಟಿಕೆಗಳು. ಚಟುವಟಿಕೆಗಳು ಕಲಿಕೆಯ ಸಾಮರ್ಥ್ಯವನ್ನು ಕಲಿಯಲು ಸಹಕಾರಿಯಾಗಿರಲಿ, ಸರಳವಾಗಿರಲಿ. ಎಲ್ಲ ಮಕ್ಕಳ ಭಾಗವಹಿಸುವಂತೆ ಇರಲಿ ; ಸ್ಪರ್ಧಾತ್ಮಕವಾಗಿರಲಿ. ಚಟುವಟಿಕೆಯ ಕೊನೆಗೆ ಮಕ್ಕಳಿಂದ ಕಲಿತ ಅಂಶಗಳನ್ನು ಸಾಮಾನ್ಯೀಕರಣ (Generalisation) ಮಾಡಿಸಿ.

## ✓ ತರಗತಿಯಲ್ಲಿ ಅಂತರಕ್ರಿಯೆ ಮತ್ತು ಶಿಸ್ತು :

ಮೂರು ಬಗೆಯ ಅಂತರ ಕ್ರಿಯೆ ತರಗತಿಯಲ್ಲಿ ನಡೆಯುತ್ತವೆ. ಸಾಂಕೇತಿಕವಾಗಿ ಮುಂದೆ ಚಿತ್ರಣ ಮಾಡಿದೆ.

ಶಿಕ್ಷಕ → ವಿದ್ಯಾರ್ಥಿ. ಇದು ಸಾಮಾನ್ಯ. ಇದು ಆದಷ್ಟು ಮಿತಿಯಲ್ಲಿರಲಿ.

ವಿದ್ಯಾರ್ಥಿ → ವಿದ್ಯಾರ್ಥಿ ಇದರ ಬಳಕೆ ಸಾಕಷ್ಟು ಇರಲಿ.

ವಿದ್ಯಾರ್ಥಿ → ಶಿಕ್ಷಕ. ಕಲಿಕೆ ಬೋಧನೆ ಯಶಸ್ವಿಯಾಗಿ ನಡೆಯುತ್ತಿದೆ. ಎನ್ನುವುದರ ಸೂಚಕ ಈ ಕ್ರಿಯೆ.

| **ಚಟುವಟಿಕೆ :** ಯಾವ ರೀತಿಯ ಚಟುವಟಿಕೆ ತನ್ನ ತರಗತಿಯಲ್ಲಿರಬೇಕು ಅದನ್ನು ಹೇಗೆ ಸಾಧಿಸಬೇಕು. ಚರ್ಚಿಸಿ. |
|---|

**ಗಮನಿಸಿ :** ಮೇಲಿನ ಎಲ್ಲಾ ಅಂತರ ಕ್ರಿಯೆಗಳು ಕಲಿಕೆಯ ಸಂದರ್ಭದಲ್ಲಿ ಆಗುತ್ತವೆ ಎಂಬ ದೃಷ್ಟಿಯಲ್ಲಿ ವಿವರಿಸಿದೆ. ಇವು ಉಭಯ ಕುಶಲೋಪರಿಗಳೂ ಅಲ್ಲ.

ಇಂತಹ ಅಂತರ ಕ್ರಿಯೆಯ ವೇಳೆಯಲ್ಲಿ ಸಹಜವಾಗಿ ತರಗತಿಯಲ್ಲಿ ಶಬ್ದ ಉಂಟಾಗುತ್ತದೆ. ಅದು ಸಹ್ಯ ಕೂಡ. ಆದರೆ ಪಕ್ಕದ ತರಗತಿಗೆ ತೊಂದರೆಯಾಗದಿರಲಿ.

- ಪುನರ್ಬಲನ ಕುರಿತಂತೆ ಹಿಂದಿನ ಪ್ಯಾರಗಳಲ್ಲಿ ವಿವರಿಸಿದೆ. ಪುನರ್ಬಲನಗಳನ್ನು ಯುಕ್ತವಾಗಿ ಬಳಸಿ. ಮಗು ತನ್ನ ಬಗ್ಗೆ ಭರವಸೆಯನ್ನು ತಳೆಯುವಂತೆ ಮಾಡಿದರೆ ಅಧ್ಯಾಪಕನ ಅರ್ಧ ಕೆಲಸ ಮುಗಿದಂತೆ. ಯುಕ್ತ ಪುನರ್ಬಲನ ಈ ಕೆಲಸವನ್ನು ಪರಿಣಾಮಕಾರಿಯಾಗಿ ಮಾಡುತ್ತದೆ.

- ತರಗತಿಯಲ್ಲಿ ನಡೆಯುವ ಮೌಲ್ಯಮಾಪನ ಎರಡು ಬಗೆಯದು. ಪರಿಕಲ್ಪನೆಗಳನ್ನು ಪರಿಚಯಿಸುವಾಗ ಮತ್ತು ಪರಿಚಯಿಸಿದ ಬಳಿಕ ಕೇಳುವ ಪ್ರಶ್ನೆಗಳು / ಚಟುವಟಿಕೆಗಳೂ ಮೊದಲನೆಯ ಬಗೆ (ರೂಪಣ ಅಭ್ಯಾಸ ಚಟುವಟಿಕೆ) ಪಾಠ ಮುಗಿದ ತರುವಾಯ ಮಾಡುವ ಮೌಲ್ಯಮಾಪನ –ಎರಡನೆಯದು ಇದರ ಸ್ವರೂಪ ಸ್ವಲ್ಪ ಜಟಿಲವಾಗಿರುತ್ತದೆ. (ಅಂತಿಮ ಮೌಲ್ಯಮಾಪನ /ಅನ್ವಯನ ಚಟುವಟಿಕೆಗಳು)

  ಮೌಲ್ಯಮಾಪನ – ಪ್ರಶ್ನೋತ್ತರ ಕ್ರಮವಾಗಿದ್ದರೆ – ಪ್ರಶ್ನಿಸುವಾಗ ಅನುಸರಿಸಬೇಕಾದ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಿ. ಇದು ಚಟುವಟಿಕೆಯ ಮೂಲಕವಾದರೆ – ಚಟುವಟಿಕೆಗಳು ಅನ್ವರ್ಥವಾಗಿರುವಂತೆ ಗಮನವಿಡಿ.

## ತರಗತಿಯ ನಿರ್ವಹಣೆಗೆ ಕೆಲವು ಸಲಹೆಗಳು

- ✓ ಮಕ್ಕಳ ಬಗ್ಗೆ ಒಳ್ಳೆಯ ಭಾವನೆ, ಧನಾತ್ಮಕ ಮನೋಭಾವ ಹೊಂದಿರಬೇಕು.
- ✓ ಮಗುವಿನ ತಪ್ಪನ್ನು ಎತ್ತಿ ಹಿಡಿಯುವುದಕ್ಕೆ ಬದಲಾಗಿ ಆ ಕಾರ್ಯವನ್ನು, ಕಲಿಕೆಯನ್ನು ಹೇಗೆ ಸಾಧಿಸಬಹುದಿತ್ತೆಂಬುದನ್ನು ಮನವರಿಕೆ ಮಾಡಿಸಿ.
- ✓ ತರಗತಿಯಲ್ಲಿ ಕಲಿಕೆಗೆ ಸಂತಸ ವಾತಾವರಣ ನಿರ್ಮಾಣ ಮಾಡಿ.
- ✓ ಸಹಕಾರ ಸ್ವಾತಂತ್ರ್ಯಗಳ ಮನೋಭಾವದಿಂದ ವಿದ್ಯಾರ್ಥಿಗಳು ಸದಾ ಉಲ್ಲಸಿತರಾಗಿರುವಂತೆ ನೋಡಿ
- ✓ ಮಕ್ಕಳಿಗೆ ಪ್ರಶ್ನೆ ಕೇಳಿ ಉತ್ತರ ಪಡೆಯಿರಿ. ಮಕ್ಕಳ ಹಿಂಜರಿಕೆ, ಸಂಕುಚಿತ ಭಾವನೆಗಳನ್ನು ಹೋಗಲಾಡಿಸಿ, ನಿರ್ಭೀತಿಯಿಂದ ಅವರೂ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವಂತಹ ಮಧುರವಾದ ಸಂಬಂಧ ಇಟ್ಟುಕೊಳ್ಳಿ.
- ✓ ನೀವೂ ಅವರ ಜೊತೆಯಲ್ಲಿ ಕುಳಿತುಕೊಂಡು ಆತ್ಮೀಯವಾಗಿ ಸಂಭಾಷಿಸಿ, ಸ್ನೇಹಿತರಂತೆ ವರ್ತಿಸಿರಿ. ಆ ಮೂಲಕ ಅವರ ಅಭಿಪ್ರಾಯಗಳು, ಅನಿಸಿಕೆಗಳನ್ನು ಸಹನೆಯಿಂದ ಕೇಳಿ ತಿಳಿದುಕೊಳ್ಳಿ. ಪ್ರಶ್ನೆ ಕೇಳಲು ಮಗುವನ್ನು ಪ್ರೋತ್ಸಾಹಿಸಿ.
- ✓ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಯಾವಾಗ, ಎಲ್ಲಿ ಸಮಸ್ಯೆ ತಲೆದೋರುತ್ತದೆಯೋ ಆಗ ಮಾರ್ಗದರ್ಶನ ಮಾಡಿಸಿ.
- ✓ ಸಾಂಸ್ಕೃತಿಕ ಹಾಗೂ ಸಾಹಿತ್ಯಾತ್ಮಕ ಚಟುವಟಿಕೆಗಳನ್ನು ಆಗಾಗ್ಗೆ ಏರ್ಪಡಿಸಿ ವಿದ್ಯಾರ್ಥಿಗಳಿಂದಲೇ ಅಭಿವ್ಯಕ್ತವಾಗುವಂತೆ ಉತ್ಸಾಹದಿಂದ ಕಲಿಕೆಯಲ್ಲಿ ಪ್ರದರ್ಶಿಸುವ ಅವಕಾಶ ಕಲ್ಪಿಸಿದರೆ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುತ್ತಾರೆ. ಈ ರೀತಿ ಮಕ್ಕಳನ್ನು ಕಲಿಕೆಗೆ ಪ್ರೇರೇಪಿಸಬಹುದಾಗಿದೆ.
- ✓ ಮಕ್ಕಳೊಂದಿಗೆ ಮಗುವಾಗಿ, ಅವರೊಂದಿಗೆ ನೀವೂ ಕಲಿಯಿರಿ.
- ✓ ನೀವು ಅಣ್ಣ, ಅಕ್ಕ, ತಮ್ಮ, ಅಂಕಲ್ ವಿನಃ ಶಿಕ್ಷಕರೆಂಬ ಭ್ರಮೆ ಬೇಡ.
- ✓ ಪ್ರತಿ ಅರ್ಧ ಗಂಟೆಯ ನಂತರ ಮಾನಸಿಕ ವಿಶ್ರಾಂತಿ (Mental relax) ನೀಡುವ ಚಟುವಟಿಕೆಯನ್ನು 2–3 ನಿಮಿಷ ಮಾಡಿಸಿ.
- ✓ ಮಗುವಿನ ಪ್ರಶ್ನೆ ಕೇಳಲು ಪ್ರೋತ್ಸಾಹಿಸಿ, ಪ್ರಶ್ನೆಕೇಳಿ ಕಲಿತಾಗ ಕಲಿಕೆ ಹಸನಾಗುತ್ತದೆ. ಮತ್ತು ಆಕರ್ಷಕವಾಗುತ್ತದೆ.
- ✓ ಮಗುವಿನ ಪ್ರಶ್ನೆಗೆ ಉತ್ತರ ಗೊತ್ತಿಲ್ಲದಿದ್ದರೆ, ಮಗುವನ್ನು ನಿರಾಸೆಪಡಿಸಬೇಡಿ, ಅಥವಾ ನಿಂದಿಸಬೇಡಿ. ಉತ್ತಮ ಪ್ರಶ್ನೆಗಾಗಿ ಬೆನ್ನು ತಟ್ಟಿ, ಮುಂದಿನ ಅವಧಿಯಲ್ಲಿ ತಿಳಿಸುವುದಾಗಿ ಹೇಳಿ. ಬೇರೆಯವರಿಂದ ತಾವು ತಿಳಿದು ಮರೆಯದೆ ಉತ್ತರನೀಡಿ.

  (ಎಲ್ಲಾ ಪ್ರಶ್ನೆಗಳಿಗೂ ಎಲ್ಲರಿಗೂ ಉತ್ತರ ಗೊತ್ತಿರುವುದಿಲ್ಲ. ಆತಂಕ ಅಥವಾ ಕೀಳರಿಮೆ ಬೇಡ.)
- ✓ ಎಲ್ಲಾ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸುವಂತೆ ಗಮನಿಸಿ. ಮತ್ತು ಪ್ರೇರೇಪಿಸಿ.

- ✓ ಉತ್ತಮ ಸಾಧನೆ ಮಾಡಿದ ಮಕ್ಕಳಿಗೆ ಬಹುಮಾನ ನೀಡಿ. ಮಗುವಿಗೆ ಚಪ್ಪಾಳೆ, ಪ್ರೋತ್ಸಾಹದ ನುಡಿ, ಶಹಬ್ಬಾಸ್ ಮೊದಲಾದ ಪ್ರಶಂಸೆಗಳೇ ಬಹುಮಾನವೆಂದು ತಿಳಿಯಿರಿ.
- ✓ ಜಾತಿ ಸೂಚಕ, ಲಿಂಗ ಸೂಚಕವಾದ ಪದಗಳಿಂದ ಸಂಭೋದಿಸಬೇಡಿ. ಮಕ್ಕಳ ದೈಹಿಕ ನ್ಯೂನತೆಯ ಆಧಾರದ ಮೇಲೆ ಮಗುವನ್ನು ಕರೆಯಬೇಡಿ.
- ✓ ದೈಹಿಕ, ಮಾನಸಿಕವಾಗಿ ಅಶಕ್ತರಾಗಿರುವ ಮಕ್ಕಳನ್ನು ವಿಶೇಷ ಆತ್ಮೀಯತೆಯಿಂದ ಮಾತನಾಡಿಸಿ. ಆದರೆ ಅದು ಕೀಳರಿಮೆಗೆ ಅಥವ ಕೆಲಸ ಕದಿಯಲು ಅವಕಾಶ ಮಾಡಬಾರದು.
- ✓ ಮಕ್ಕಳನ್ನು ಆತ್ಮೀಯತೆಯಿಂದ, ಗೌರವದಿಂದ ಪ್ರೀತಿಯಿಂದ ಕರೆಯಿರಿ : ಅವರು ನಿಮ್ಮೆಡೆಗೆ ಆಕರ್ಷಿತರಾಗಿ ನಿಮ್ಮನ್ನು ಅಪೇಕ್ಷಿಸುತ್ತಾರೆ.
- ✓ ಕುರ್ಚಿಯನ್ನು ಬಳಸದೆ ಮಗುವಿನೊಂದಿಗೆ ಕುಳಿತುಕೊಳ್ಳಿ.
- ✓ ಕಲಿಕೆಯನ್ನು ಉಲ್ಲಾಸಭರಿತವಾಗಿರುವಂತೆ ವಾತಾವರಣ ನಿರ್ಮಾಣ ಮಾಡಲು ತರಗತಿಯಲ್ಲಿ ಮನಸ್ಸನ್ನು ರಂಜಿಸಲು ಆಗಾಗ್ಗೆ ಕೆಲವು ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುವುದರಿಂದ ಪರಿಣಾಮ ಉತ್ತಮವಾಗಿರುತ್ತದೆ.
- ✓ ಮೌಲ್ಯಗಳನ್ನೊಳಗೊಂಡ; ಮಕ್ಕಳಿಗೆ ಹಿತವೆನಿಸುವ ಕಥೆಗಳನ್ನು ಹೇಳಬೇಕು. ಇದರಿಂದ ಮಕ್ಕಳಲ್ಲಿ ಸಂಸ್ಕೃತಿಯ ಕೌಶಲಗಳು ವೃದ್ಧಿಸಿ, ಮನರಂಜನೆಯ ಜೊತೆಗೆ ಅವರ ವರ್ತನೆಗಳಲ್ಲಿ ಬದಲಾವಣೆ ನಿರೀಕ್ಷಿಸಬಹುದಾಗಿದೆ. (ಶಿವಾಜಿ, ಗಾಂಧೀಜಿ, ವಿವೇಕಾನಂದ, ಕಿರಣ್ ಬೇಡಿ, ಇಂದಿರಾಗಾಂಧಿ, ಕಲ್ಪನಾ ಚಾವ್ಲ, ಸಾಲು ಮರದ ತಿಮ್ಮಕ್ಕ ಇತ್ಯಾದಿ)
- ✓ ಇದಕ್ಕಾಗಿ ನೀವು ಕನಿಷ್ಟ 100 ಕಥೆಗಳನ್ನಾದರೂ ಕಲಿಯಿರಿ. ಪ್ರಾಣಿ / ಪಕ್ಷಿಗಳು, ಮಹಾಪುರುಷರ ಕಥೆಗಳನ್ನು ಆಗಾಗ್ಗೆ ಹೇಳಿ, ಚೆನ್ನಾಗಿ ಹಾಡುವುದನ್ನು ಅಭ್ಯಾಸ ಮಾಡಿಕೊಳ್ಳಿ, ಸಂಕೋಚವನ್ನು ದೂರ ಸರಿಸಿ ಹಾಡುಗಳಿಗೆ ಹೆಜ್ಜೆ ಹಾಕಲು, ಆಂಗಿಕ ಅಭಿನಯ ಅಭ್ಯಾಸ ಮಾಡಿಕೊಳ್ಳಿ.
- ✓ ಮಕ್ಕಳಿಂದಲೂ ಕಥೆಗಳನ್ನು ಹೇಳಿಸಬೇಕು. ಅಪೂರ್ಣ ಕಥೆಗಳನ್ನು ಪೂರ್ಣಗೊಳಿಸುವುದು, ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದ ಚಿಕ್ಕ ಚಿಕ್ಕ ಕಥೆಗಳನ್ನು ಮಹಾನುಭಾವರ ಆತ್ಮಕಥೆಗಳನ್ನು ಓದುವಂತೆ ಪ್ರೋತ್ಸಾಹಿಸಬೇಕು. ಇದರಿಂದ ಮಕ್ಕಳ ಸೃಜನಾತ್ಮಕ ಚಟುವಟಿಕೆಗಳು ಬೆಳೆಯುತ್ತವೆ.
- ✓ ಮಕ್ಕಳ ಮನೆಗಳಲ್ಲಿ, ಪರಿಸರದಲ್ಲಿ ಅನೂಚಾನವಾಗಿ ನಡೆದು ಬಂದಿರುವ ಜಾನಪದ ಗೀತೆಗಳು, ನೃತ್ಯಗಳನ್ನು ಅವರಲ್ಲೆ ಗುಂಪು ಮಾಡಿ ಪ್ರದರ್ಶಿಸುವ ಏರ್ಪಾಡು ಮಾಡಿ ಅವರ ಉತ್ಸಾಹ ಗರಿಗೆ ದರುವಂತೆ ಮನದಣಿಸಬೇಕು. ಮಕ್ಕಳು ಇಂತಹ ಚಟುವಟಿಕೆಗಲ್ಲಿ ಭಾಗವಹಿಸುವುದರಿಂದ ಅವರ ದೇಹ ಮನಸ್ಸುಗಳು ಪುಳಕಿತಗೊಂಡು ಸಾಂಸ್ಕೃತಿಕ ಮೌಲ್ಯಗಳನ್ನು ಸಧೃಢಪಡಿಸಿಕೊಳ್ಳಲು ನೆರವಾಗುತ್ತದೆ. (ಅಶ್ಲೀಲ ಗೀತೆಗಳ ನೃತ್ಯ ಪ್ರದರ್ಶನಕ್ಕೆ ಅವಕಾಶ ನೀಡಬಾರದು/ಚಲನಚಿತ್ರ ಗೀತೆಗೆ ಅಭಿನಯ ಮಾಡಿಸುವುದನ್ನು ನಿಯಂತ್ರಿಸಬೇಕು)
- ✓ ನಾಟಕ ಆಂಗಿಕ ಅಭಿನಯಗಳಿಂದ ಕೂಡಿದ ಸಂಭಾಷಣೆ, ವ್ಯಕ್ತಿಗಳ ಅನುಕರಣೆ ಮೊದಲಾದ

ಚಟುವಟಿಕೆಗಳಿಂದ ಮಕ್ಕಳು ವ್ಯಕ್ತಿ ಮಾದರಿಗಳನ್ನು ಅನುಸರಿಸಲು, ಭಾಷಣ ಮೊದಲಾದ ಕಲೆಗಳನ್ನು ವೃದ್ಧಿಸಿಕೊಳ್ಳಲು, ಧೈರ್ಯವಾಗಿ ಸಂಭಾಷಿಸಲು, ಆತ್ಮವಿಶ್ವಾಸ ಕುದುರಿಸಿಕೊಳ್ಳಲು ಸಹಕಾರಿಯಾಗುತ್ತದೆ.

✓ ಸ್ಥಳೀಯ ಕಥೆಗಳು, ಹಾಡುಗಳು, ಒಗಟುಗಳು ಇವುಗಳನ್ನು ಸಂದರ್ಭಾನುಸಾರ ಬಳಸಿಕೊಳ್ಳಿ. (ಅವು ಅಶ್ಲೀಲವಾಗಿಲ್ಲದಿರುವುದನ್ನು ಖಚಿತ ಮಾಡಿಕೊಳ್ಳಿ).

| ತರಗತಿಯಲ್ಲಿ ಹೀಗಿರಬೇಕು. | ತರಗತಿಯಲ್ಲಿ ಹೀಗಿರಬಾರದು |
|---|---|
| 1. ಪ್ರೀತಿಯಿಂದ ವರ್ತಿಸಬೇಕು | 1. ದಂಡನೆ ವಿಧಿಸಬಾರದು |
| 2. ಮಕ್ಕಳೊಂದಿಗೆ ಮಗುವಾಗಿರಬೇಕು. | 2. ಗುರುವಿನಂತೆ ಬೀಗಬಾರದು |
| 3. ಮಗುವನ್ನು ಆಕರ್ಷಿಸುವ ಚಟುವಟಿಕೆ ಹಮ್ಮಿಕೊಳ್ಳಬೇಕು | 3. ಆಕ್ರೋಶದಿಂದ ವರ್ತಿಸಬಾರದು, ನಿಂದಿಸಬಾರದು. |
| 4. ತಪ್ಪುಗಳನ್ನು ತಿದ್ದಿ ಮಾರ್ಗದರ್ಶನ ಮಾಡಬೇಕು. | 4. ತಪ್ಪನ್ನು ಎತ್ತಿ ತೋರಿಸಿ ಅವಹೇಳನ ಮಾಡಬಾರದು. |
| 5. ಅರ್ಧ ಗಂಟೆಗೊಮ್ಮೆ ಮಾನಸಿಕ ವಿಶ್ರಾಂತಿಗಾಗಿ ಚಟುವಟಿಕೆ ನೀಡಬೇಕು. | 5. ಏಕತಾನತೆಯಿಂದ ಸತತವಾಗಿ ರುವ ಚಟುವಟಿಕೆ ನೀಡಬಾರದು. |
| 6. ಎಲ್ಲಾ ಮಕ್ಕಳು ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು. | 6. ಕೆಲವರನ್ನು ಮಾತ್ರ ಗಮನಿಸಿ ಉಳಿದವರು ಮಂಕಾಗಿ ಕುಳಿತು ಕೊಳ್ಳುವ ವಾತಾವರಣ ನಿರ್ಮಾಣ ಮಾಡಬಾರದು. |
| 7. ತರಗತಿಯಲ್ಲಿ ಮನರಂಜನೆ ಇರುವಂತೆ ನೋಡಿಕೊಳ್ಳಬೇಕು. | 7. ಉಲ್ಲಾಸವಿಲ್ಲದ ಚಟುವಟಿಕೆ ನೀಡಿ ಮನ ನೋಯಿಸಬಾರದು. |
| 8. ಸಹಕಾರ, ಸ್ವಾತಂತ್ರ್ಯಗಳ ಮನೋಭಾವದ ವಾತಾವರಣವಿರಬೇಕು. | 8. ನಿರ್ಬಂಧ ಹೇರಬಾರದು, ತಪ್ಪಿಗಾಗಿ ಪುನರಾವರ್ತನೆ ಅಭ್ಯಾಸ ಗಳನ್ನು ನೀಡಬೇಡಿ. |
| 9. ಅಧ್ಯಾಪಕರ ಮಾತಿನ ಧ್ವನಿ, ಏರಿಳಿತ ವಿಷಯ ಮಂಡನೆ ಪರಿಣಾಮಕಾರಿಯಾಗಿರಬೇಕು. | 9. ಮಾತು ಕರ್ಕಶವಾಗಿರಬಾರದು. ಅರ್ಥವಾಗದ ರೀತಿಯಲ್ಲಿ ಗೊಂದಲ ವಾಗುವಂತೆ ಮಂಡನೆ ಮಾಡಬಾರದು. |

✓ ಯಾವುದೇ ಮಗುವಿಗೆ ಉತ್ತೇಜನ, ಪ್ರೋತ್ಸಾಹ ನೀಡಿದಲ್ಲಿ ಅದು ಯಾವುದೇ ಕೆಲಸವನ್ನು ಸ್ಫೂರ್ತಿಯಿಂದ ಮಾಡುತ್ತದೆ ಎಂಬುದು ಸಾಮಾನ್ಯ ಸಂಗತಿ. ಉತ್ತೇಜನವು ಮಾನಸಿಕವಾಗಿ ಕೆಲಸ ಮಾಡುವ ಸ್ಥೈರ್ಯವನ್ನು, ಸ್ಫೂರ್ತಿಯನ್ನು, ಛಲವನ್ನು, ಹಂಬಲವನ್ನು ತುಂಬುತ್ತದೆ. ಅದರಲ್ಲೂ ಬೆಳಿಗ್ಗೆಯಿಂದ ಸಂಜೆಯವರೆವಿಗೂ ಕಲಿಕೆಯಲ್ಲಿ ಅಥವಾ ಶಾಲಾ ಚಟುವಟಿಕೆಯಲ್ಲಿ ತೊಡಗಿರುವ ಮಗು ಸಹಜವಾಗಿ ಕಲಿಕೆಯಿಂದ ಅಥವಾ ಏಕತಾನತೆಯಿಂದ ವಿಮುಖಗೊಳ್ಳಲು ಹಾತೊರೆಯುತ್ತಿರುತ್ತದೆ. ಇದು ಮಾನವ ಸಹಜ ಗುಣ. ಇಂತಹ ಹೊತ್ತಿನಲ್ಲೂ ಮಗುವನ್ನು

ಕಲಿಕೆಯಡೆಗೆ ಆಕರ್ಷಿಸುವುದು ಒಂದು ಸವಾಲು. ಕಲಿಕೆಯಲ್ಲಿ ಹಿಂದುಳಿದ ಮಗುವು ಸಹಜವಾಗಿ ಇತರೆ ಕೌಶಲಗಳಲ್ಲಿ ಮುಂದುವರೆದಿರುತ್ತಾಳೆ ಈ ಅಂಶವನ್ನು ಗಮನಿಸಿದಾಗ ಚಟುವಟಿಕೆಗಳಿಂದ ಮಗುವನ್ನು ಉತ್ತೇಜಿಸಿ ಕಲಿಕೆಯೆಡೆಗೆ ಮನಸ್ಸನ್ನಾಕರ್ಷಿಸಬಹುದು ಎಂಬುದು ತಿಳಿಯುತ್ತದೆ.

✓ ಮಗುವಿಗೆ ಆಕರ್ಷಕವಾದ ಆಟವನ್ನು ಐದು ನಿಮಿಷಗಳ ಕಾಲ ಆಡಿಸಿ (ಉದಾ: ಮಾರ್ಗದರ್ಶಕನ ಹಿಂದೆ ರೈಲಿನಂತೆ ಓಡುವುದು, ಸಾಮೂಹಿಕವಾಗಿ ನೆಗೆತ (ಸ್ಫೂರ್ತಿಯ ಸ್ಪರ್ಧೆ ಇರಲಿ) ಮಾನಸಿಕ ಹಿತನೀಡುವ ಆಟಗಳು (relaxation games ) ಓಂಕಾರ ಮಂತ್ರವನ್ನು ಲಯಬದ್ಧವಾಗಿ ಮೂರು ಬಾರಿ ಹೇಳಿಸಿ, ಮೂರು ನಿಮಿಷ ಮೌನವಾಗಿ ಕುಳಿತು ಕೊಳ್ಳಲು ತಿಳಿಸಿ.

✓ ನಿಮಗೆ ಪರಿಚಯವಿದ್ದರೆ ಪ್ರಾಣಾಯಾಮ ಮಾಡಿಸಿ.

✓ ಆಯಾ ದಿನದಲ್ಲಿ ಬೋಧಿಸುವ ವಿಷಯಕ್ಕೆ ಸಂಬಂಧಿಸಿದಂತೆ ಬಾಯಿಪಾಠ (ಕಂಠಪಾಠ) ಮಾಡಿಸುವ ಚಟುವಟಿಕೆ ಮಾಡಿಸಿ. (ಆಯಾ ವಿಷಯಕ್ಕೆ ಸಂಬಂಧಿಸಿದಂತೆ ಪ್ರತಿದಿನ ಈ ಚಟುವಟಿಕೆ ಕಡ್ಡಾಯ)

- **ಕನ್ನಡ ಭಾಷೆ :**

– ಮುದನೀಡವ, ಪಠ್ಯಪುಸ್ತಕದಲ್ಲಿರುವ ಪದ್ಯ, ಗೀತೆಗಳನ್ನು ಹಾಡಿಸಿರಿ.

– ಇತರೆ ಕನ್ನಡದ ಜನಪ್ರಿಯ ಶಿಶುಗೀತೆ/ ಪ್ರಾಸ ಗೀತೆಗಳನ್ನು ಹೇಳಿಕೊಡಿ,

– ಕಾಗುಣಿತಾಕ್ಷರಗಳನ್ನು ಹೇಳಿಸಿ. ಹಾಗೆಯೇ ಗುಣಿತಾಕ್ಷರಗಳನ್ನು ಹೇಳಿಸಿ.

– ವಿರುದ್ಧ ಪದಗಳನ್ನು ಹೇಳಿಸಿ.

– ವಚನಗಳನ್ನು ಹೇಳಿಸಿ.

– ಪದಬಂಧ ಮಾಡಿಸಿ.

– ವಾರ, ತಿಥಿ, ನಕ್ಷತ್ರ, ಮಾಸ, ಸಂವತ್ಸರಗಳನ್ನು ಹೇಳಿಸಿ.

- **ಗಣಿತ:–**

– 1 ರಿಂದ 20 ರ ವರೆಗೆ ಮಗ್ಗಿಗಳನ್ನು ಹೇಳಿಸಿ.

– ಉದ್ದಳತೆ, ತೂಕ, ಗಾತ್ರದ ಮೂಲಮಾನದ ಕೋಷ್ಠಕ ಹೇಳಿಸಿ.

– ಸರಿ–ಬೆಸ ಸಂಖ್ಯೆಯ ಆಟವನ್ನು ಆಡಿಸಿ.

– ವೇಳೆ ಹೇಳುವುದನ್ನು ಅಭ್ಯಾಸ ಮಾಡಿಸಿ.

– ಮಗ್ಗಿ ಆಟವನ್ನು ಆಡಿಸಿ................. ಇತ್ಯಾದಿ.

- **ಪರಿಸರ ಅಧ್ಯಯನ:–**

– ತನ್ನ ಊರು, ಗ್ರಾಮ ಪಂಚಾಯಿತಿ, ಹೋಬಳಿ ತಾಲ್ಲೂಕು, ಜಿಲ್ಲೆ ರಾಜ್ಯ ದೇಶ ಇವುಗಳನ್ನು ಹೇಳಿಸಿ

– ರಾಜ್ಯದ, ರಾಷ್ಟದ ಪ್ರಮುಖ ಮಂತ್ರಿಗಳ/ಮುಖ್ಯಸ್ಥರ ಹೆಸರನ್ನು ಪರಿಚಯಿಸಿ, (ಉದಾರಣೆ: ಮುಖ್ಯಮಂತ್ರಿಗಳು, ರಾಜ್ಯಪಾಲರು, ರಾಷ್ಟ್ರಪತಿಗಳು ಇತ್ಯಾದಿ.)

– ರಾಜ್ಯದಲ್ಲಿರುವ ಜಿಲ್ಲೆಗಳನ್ನು ಹೇಳಿಸಿ.
– ನದಿಗಳನ್ನು ಹೇಳಿಸಿ.
– ಆಹಾರದ ಪೋಷಕಾಂಶಗಳನ್ನು ಹೇಳಿ.
– ಸಜೀವ–ನಿರ್ಜೀವ ವಸ್ತುಗಳನ್ನು ಹೇಳಿಸಿ.
– ಸಸ್ಯಹಾರಿ–ಮಾಂಸಹಾರಿ ಪ್ರಾಣಿಗಳನ್ನು ಹೆಸರಿಸಲು ತಿಳಿಸಿರಿ.
– ದೇಹದ ಭಾಗಗಳ ಕಾರ್ಯ............................ಇತ್ಯಾದಿ.

## ❖ ಬೋಧನಾ ಕಾರ್ಯದ ಸಂಘಟನೆ

ಬೋಧನೆಯನ್ನು ನಿರ್ವಹಿಸಲು – ಅನೇಕ ಹಂತಗಳಲ್ಲಿ ಅಥವಾ ಆಯಾಮಗಳಲ್ಲಿ ಅಧ್ಯಾಪಕ ಕಾರ್ಯ ನಿರ್ವಹಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂದೆ ಸೂಚಿಸಿರುವ ಸಂಗತಿಗಳ ಕುರಿತು ಪರಿಚಯ ಮಾಡಿಕೊಳ್ಳುತ್ತೀರಿ.

✓ ಯೋಜನೆಗಳು : – ಶಾಲಾ ಶೈಕ್ಷಣಿಕ ಯೋಜನೆ / ಶಾಲಾ ಪಂಚಾಂಗ
  – ವಾರ್ಷಿಕ ಪಾಠ ಯೋಜನೆಯ ತಃಖ್ತೆ
  – ವೇಳಾಪಟ್ಟಿ
  – ದೈನಂದಿನ ವೇಳಾಪಟ್ಟಿ

✓ ಕಲಿಕೆಯ ವಾತಾವರಣ
✓ ಪಾಠ ಯೋಜನೆ ಮತ್ತು ಅದರ ಹಂತಗಳು
✓ ಕಲಿಕಾ ಚಟುವಟಿಕೆಗಳು
✓ ಕಲಿಕೆಯ ಸಾಮಗ್ರಿಗಳು
✓ ಸಾಪಲ್ಯ ಪರೀಕ್ಷೆ
✓ ಪರಿಹಾರ ಬೋಧನೆ ಮತ್ತು ಚಿಣ್ಣರ ಅಂಗಳದ ಸಂಘಟನೆ
✓ ಶಾಲಾ ಕಾರ್ಯದ ಜವಾಬ್ದಾರಿ ಹಂಚಿಕೆ
✓ ಸಹ ಪಠ್ಯ ಚಟುವಟಿಕೆಗಳು
✓ ಕಲಿಕೆಯ ಕನಿಷ್ಠ ಮಟ್ಟಗಳು – ಸಂಕ್ಷಿಪ್ತ ಪರಿಚಯ
✓ ಮೌಲ್ಯ ಮಾಪನ – ಪರಿಕಲ್ಪನೆ
  – ಸಾಮರ್ಥ್ಯಾಧಾರಿತ ಮೌಲ್ಯಮಾಪನ
  – ಶಾಲೆಯಲ್ಲಿ ನಡೆಯುವ ಮೌಲ್ಯಮಾಪನಗಳು
  – ಪ್ರಗತಿ ಪತ್ರಗಳು
  – ಹಿಮ್ಮಾಹಿತಿ ಮತ್ತು ಅದರ ಪ್ರಾಮುಖ್ಯತೆ
✓ ಬೋಧನಾ ಕಾರ್ಯದಲ್ಲಿ ಅಧ್ಯಾಪಕ ರೂಢಿಸಬೇಕಾದ ದಾಖಲೆಗಳು

✓ ಮುಖ್ಯೋಪಾಧ್ಯಾಯರು (ವಿಶೇಷಾಧಿಕಾರಿಯವರು) ನಡೆಸುವ ಮೇಲ್ವಿಚಾರಣೆ ಮತ್ತು ಶೈಕ್ಷಣಿಕವಾಗಿ

ನಿರ್ವಹಿಸಬೇಕಾದ ದಾಖಲೆಗಳು.

✓ **ಯೋಜನೆಗಳು :**

ವಿಶೇಷಾಧಿಕಾರಿ ಮತ್ತು ಅಧ್ಯಾಪಕರು ಸೇರಿ ಶಾಲೆ ಪ್ರಾರಂಭವಾಗುವ ಮುನ್ನ ಯೋಜನೆಗಳನ್ನು ತಯಾರಿಸಿಕೊಳ್ಳಬೇಕು. ಕೆ.ಜಿ.ಬಿ.ವಿ. ಶಾಲೆಗಳಲ್ಲಿ ತಯಾರಿಸಬೇಕಾದ ಯೋಜನೆಗಳು ಮುಂದಿನಂತೆ ಇವೆ.

- **ಶಾಲಾ ಶೈಕ್ಷಣಿಕ ಯೋಜನೆ : (ಶಾಲಾ ಪಂಚಾಂಗ)**

ಇಡೀ ಶೈಕ್ಷಣಿಕ ವರ್ಷದಲ್ಲಿ ಯಾವ ಯಾವ ಕಾರ್ಯಗಳನ್ನು ಯಾವಾಗ ಯಾರು ನಿರ್ವಹಿಸುತ್ತಾರೆ ಎಂಬ ವಿವರ ಈ ದಾಖಲೆಯಲ್ಲಿ ದೊರೆಯುತ್ತದೆ. ಈ ದಾಖಲೆಯನ್ನು ಪ್ರಾಥಮಿಕ ಶಾಲಾ ಮಾರ್ಗಸೂಚಿಯ ಅನುಸಾರ ರೂಪಿಸಬಹುದು.

ಇದರ ಜೊತೆಗೆ ಪರಿಹಾರ ಬೋಧನೆ ಕುರಿತಂತೆ 08–09ನೇ ಸಾಲಿನಲ್ಲಿ ನಮೂನೆಯನ್ನು ನೀಡಲಾಗಿದೆ. ಪ್ರಚಲಿತ ಸೂಚನೆಗಳ ಅನುಸಾರ ಈ ದಾಖಲೆಯನ್ನು ರೂಪಿಸಬೇಕು.

- **ಶಾಲಾ ಪಂಚಾಂಗ :**

| ಚಟುವಟಿಕೆಯ ವಿವರ : | ಚುಟುವಟಿಕೆ ನಡೆಯುವ ದಿನಾಂಕ | ಜವಾಬ್ದಾರರು | ಹಣಕಾಸಿನ ಗುರಿ | ಚಟುವಟಿಕೆ ನಿರ್ವಹಿಸಲಾದ ದಿನಾಂಕ ಇಲ್ಲವಾದರೆ ಕಾರಣ |
|---|---|---|---|---|
| | | | | |

ಶಾಲಾ ಪಂಚಾಂಗವು ಶಾಲೆಗಳಲ್ಲಿ ನಡೆಯುವ ಚಟುವಟಿಕೆಗಳನ್ನು ಸಂಗ್ರಹ ರೂಪದಲ್ಲಿ ತಿಳಿಸುವ ದಾಖಲೆ. ಶಾಲೆಯ ಶೈಕ್ಷಣಿಕ ವರ್ಷದ ಅವಧಿ, ದಿನಾಚರಣೆಗಳೂ, ರಜೆಗಳೂ, ಪರೀಕ್ಷೆ, ಕಿರು ಪರೀಕ್ಷೆಗಳು, ಸಾಂಸ್ಕೃತಿಕ–ಸಾಹಿತ್ಯ ಕಾರ್ಯಕ್ರಮಗಳೂ, ಕ್ರೀಡಾ ಚಟುವಟಿಕೆಳು, ವಿದ್ಯಾರ್ಥಿಸಂಘದ ಚಟುವಟಿಕೆಗಳು, ಮೀನಾ ಸಂಘದ ಚಟುವಟಿಕೆಗಳು, ಪ್ರವಾಸ, ಕೆ.ಜಿ.ಬಿ.ವಿ. ಶಾಲೆಯ ಚಟುವಟಿಕೆಗಳು (ಜಾಗೃತಿ ಶಿಬಿರ, ವೈದ್ಯಕೀಯ ಶಿಬಿರ, ಪೋಷಕರ ಸಭೆ ಅನುಷ್ಠಾನ ಸಮಿತಿ ಸಭೆ,....... ಇತ್ಯಾದಿ) ಸಮುದಾಯದತ್ತ ಶಾಲೆ, ಇತ್ಯಾದಿ ಸಂಗತಿಗಳನ್ನು ಸಂಗ್ರಹ ರೂಪದಲ್ಲಿ ದಾಖಲಿಸಿ – ಅನುಷ್ಠಾನಗೊಳಿಸಬೇಕು.

- **ವಾರ್ಷಿಕ ಪಾಠ ಹಂಚಿಕೆಯ ತಃಖ್ತೆ :**

ಅಧ್ಯಾಪಕ/ಕಿ ತಾನು ಬೋಧಿಸುವ ವಿಷಯವನ್ನು ತಿಂಗಳುವಾರು ಹಂಚಿಕೆ ಮಾಡಿಕೊಂಡ ವಿವರ ಈ ದಾಖಲೆಯಲ್ಲಿ ದೊರೆಯುತ್ತದೆ. ಮುಂದಿನ ನಮೂನೆ ಬಳಸಬಹುದು.

| ತಿಂಗಳು | ಪರಿಕಲ್ಪನೆ/ಬೋಧನಾಂಶಗಳು | ಅವಧಿಗಳ ಸಂಖ್ಯೆ | ಬೋಧಿಸಲಾದ ದಿನಾಂಕ ಇಲ್ಲವಾದರೆ ಕಾರಣ | ಪೂರ್ಣಗೊಳಿಸಲು ಯೋಜಿಸಿರುವ ತಿಂಗಳು |
|---|---|---|---|---|
| | | | | |

- **ವೇಳಾ ಪಟ್ಟಿ :**

ಸಾಮಾನ್ಯ ಶಾಲೆಗಳಲ್ಲಿ ರೂಪಿಸಿರುವಂತೆ ತರಗತಿವಾರು ವೇಳಾಪಟ್ಟಿಯನ್ನು ತಯಾರಿಸಬೇಕು. ಈ ದಾಖಲೆಯನ್ನು ವಿಶೇಷಾಧಿಕಾರಿಯವರ ಕೋಣೆಯಲ್ಲಿ ಇಡುವುದರ ಜೊತೆಗೆ ಪ್ರತಿ ತರಗತಿಯಲ್ಲಿಯೂ – ವೇಳಾಪಟ್ಟಿಯನ್ನು ಪ್ರದರ್ಶಿಸುವುದು.

- **ದಿನದ ವೇಳಾಪಟ್ಟಿ**

| **ಸಮಯ :** | **ಚಟುವಟಿಕೆಯ ವಿವರ** |
|---|---|
| ಬೆಳಿಗ್ಗೆ. 5.45ಕ್ಕೆ | ಏಳುವುದು |
| 5.45 ರಿಂದ 7.00 | ನಿತ್ಯ ಕರ್ಮಗಳು |
| 7.00 ರಿಂದ 7.45 | ಪ್ರಾರ್ಥನೆ, ವ್ಯಾಯಾಮ, ಯೋಗ |
| 7.45 ರಿಂದ 8.30 | ಬೆಳಗಿನ ಉಪಹಾರ |
| 8.30 ರಿಂದ 9.45 | ಪರಿಹಾರ ಬೋಧನೆ / ಪಠ್ಯ ಅಭ್ಯಾಸ |
| 9.45 ರಿಂದ 10.00 | ಬಿಡುವು / ವಾಚನಾಲಯದಲ್ಲಿ ಓದುವುದು /ತರಗತಿಗಳಿಗೆ ತಯಾರಾಗುವುದು. |
| 10.00 ರಿಂದ 10.20 | ಶಾಲೆಯ ಪ್ರಾರ್ಥನೆ, ಸುದ್ಧಿವಾಚನ, ದಿನದ ವಿಶೇಷತೆಯ ಪ್ರಸ್ತಾಪ ; ಚಿಂತನ. |
| 10.20 ರಿಂದ 11.40 | ಶಾಲಾ ಅವಧಿ |
| 11.40 ರಿಂದ 11.50 | ಲಘು ವಿರಾಮ |
| 11.50 ರಿಂದ 1.10 | ಶಾಲಾ ಅವಧಿ |
| 1.10 ರಿಂದ 2.00 | ಮಧ್ಯಾಹ್ನದ ಭೋಜನ |
| 2.00 ರಿಂದ 3.20 | ಶಾಲಾ ಅವಧಿ |
| 3.20 ರಿಂದ 3.30 | ಲಘು ವಿರಾಮ |
| 3.30 ರಿಂದ 4.50 | ಶಾಲಾ ಅವಧಿ |
| 4.50 ರಿಂದ 5.30 | ವೈಯಕ್ತಿಕ ಕಾರ್ಯಗಳು, ಲಘು ಉಪಹಾರ, ವಾಚನಾಲಯದ ಕಾರ್ಯ ಇತ್ಯಾದಿ. |
| 5.30 ರಿಂದ 6.30 | ಕ್ರೀಡೆಗಳು |
| 6.30 ರಿಂದ 7.00 | ಸ್ವಚ್ಛತೆ / ಪಾರ್ಥನೆ |
| 7.00 ರಿಂದ 8.00 | ಪಠ್ಯ ಅಭ್ಯಾಸ |
| 8.00 ರಿಂದ 8.45 | ರಾತ್ರಿಯ ಊಟ |
| 8.45 ರಿಂದ 10.00 | ಪಠ್ಯ ಅಭ್ಯಾಸ |

| | |
|---|---|
| 10.00 ರಿಂದ | ದೀಪದೂರ |

✓ **ಶಾಲಾ ಕಾರ್ಯದ ಜವಾಬ್ದಾರಿ ಹಂಚಿಕೆ :**

ಶಾಲೆ ನಿರ್ವಹಿಸಬೇಕಾದ ಕಾರ್ಯದ ಆಗಾಧತೆಯನ್ನು ಗಮನಿಸಿದಾಗ ಇದು ಹಲವು ವ್ಯಕ್ತಿಗಳ ಸಂಘಟಿತ ಯತ್ನದಿಂದ ಮಾಡಬೇಕಾದ ಕಾರ್ಯ ಎಂದು ಅನಿಸುತ್ತದೆ. ಆದ್ದರಿಂದ ಶಾಲೆಯಲ್ಲಿ ನಿರ್ವಹಿಸಲಾಗುವ ಎಲ್ಲಾ ಕೆಲಸ ಕಾರ್ಯಗಳನ್ನು ಪಟ್ಟಿ ಮಾಡಿ– ವರ್ಷದ ಆರಂಭದಲ್ಲಿ ಕಾರ್ಯ ಹಂಚಿಕೆ ಮಾಡಿ. ಉದಾಹರಣೆಗೆ ಯೋಜನೆಗಳನ್ನು ಸಿದ್ದಪಡಿಸುವುದು. ಅಂಕಿಅಂಶಗಳನ್ನು ಸಂಚಯಿಸಿ ಕಳುಹಿಸುವ ಕೆಲಸ ಕಾರ್ಯಗಳು, ವಿದ್ಯಾರ್ಥಿ ಸಂಘದ ಚಟುವಟಿಕೆ ಮುಂತಾದ ಕಾರ್ಯಕ್ರಮ ಮತ್ತು ಸಹ ಪಠ್ಯ ಚಟುವಟಿಕೆಗಳ ಆಯೋಜನೆ, ವಿಜ್ಞಾನ ಸಂಘ ಪ್ರಯೋಗಾಲಯ, ಕ್ಷೇತ್ರ ಅಧ್ಯಯನ, ರಸಪ್ರಶ್ನೆ, ಕಂಪ್ಯೂಟರ್, ದೃಕ್ ಶ್ರವಣ ಉಪಕರಣಗಳಿಗೆ ಜವಾಬ್ದಾರಿ, ಪ್ರಾರ್ಥನೆ, ಕವಾಯಿತು, ಕ್ರೀಡೆ, ಆವರಣ ಸ್ವಚ್ಛತೆ, ಕೈತೋಟ ನಿರ್ವಹಣೆ, ಸ್ಕೌಟ್ಸ್/ಗೈಡ್ಸ್/ಸೇವಾದಳ ಚಟುವಟಿಕೆ, ಪ್ರಥಮ ಚಿಕಿತ್ಸೆ, ಆರೋಗ್ಯ ಶಿಬಿರ, ಸಮಾಜ ಸೇವೆ ಜವಾಬ್ದಾರಿ. ಜವಾಬ್ದಾರಿ ಹಂಚಿಕೆ ಸಹ ಶಿಕ್ಷಕರಿಗೆ ಇದ್ಯಾಗ್ಯೂ ಎಲ್ಲ ಚಟುವಟಿಕೆಗಳು ಮುಖ್ಯೋಪಾಧ್ಯಯರ ನೇತೃತ್ವದಲ್ಲಿಯೇ ಸಾಗಬೇಕು.

✓ **ಸಹಪಠ್ಯ ಚಟುವಟಿಕೆಗಳ ಸಂಘಟನೆ :**

ಸಹ ಪಠ್ಯ ಚಟುವಟಿಕೆಗಳು ಸಮುದಾಯದ ಮೇಲೆ ಧನಾತ್ಮಕ ಪರಿಣಾಮ ಬೀರುತ್ತವೆ. ತಮ್ಮ ಮಕ್ಕಳನ್ನು ಶಾಲೆಯ ಚಟುವಟಿಕೆಯಲ್ಲಿ ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳಲು ಪೋಷಕರು ಅವಕಾಶ ಮಾಡಿಕೊಡುತ್ತಾರೆ. ಇದು ನುರಿತ ಅಧ್ಯಾಪಕರ ಅನುಭವ. ಕೆಲವು ಸಹಪಠ್ಯ ಚಟುವಟಿಕೆಗಳ ಸಂಘಟನೆಯನ್ನು ಹೇಗೆ ನಿರ್ವಹಿಸಬಹುದು ಎಂದು ಸಲಹೆ ನೀಡಿದೆ. ಶಾಲೆಯ ಎಲ್ಲಾ ಸಹಪಠ್ಯ ಚಟುವಟಿಕೆಗಳು ವಿದ್ಯಾರ್ಥಿ ಸಂಘದ ಅಡಿಯಲ್ಲಿ ಜರುಗುವುದು ಯುಕ್ತ. ಇಲ್ಲಿ ಬೇರೆ – ಬೇರೆ ಸಂಘಗಳನ್ನು ರಚಿಸಿ. ಈ ಸಂಘಗಳಲ್ಲಿ 05ರಿಂದ 10 ಮಂದಿ ಇರುವಂತೆ ವ್ಯವಸ್ಥೆಗೊಳಿಸಿ, ರಚಿಸಬಹುದಾದ ಕೆಲವು ಸಂಘಗಳು ಮತ್ತು ನಿರ್ವಹಿಸಬಹುದಾದ ಕೆಲವು ಕಾರ್ಯಗಳನ್ನು ಪಟ್ಟಿ ಮಾಡಿದೆ. ಈ ಸಂಘದ ಚಟುವಟಿಕೆಗೆ ಒಬ್ಬ ಶಿಕ್ಷಕರು ಮಾರ್ಗದರ್ಶಕರಾಗಿರುತ್ತಾರೆ.

| ಮುಖ್ಯ ಸಂಘ | ಉಪ ಸಂಘಗಳು | ನಿರ್ವಹಿಸುವ ಕಾರ್ಯಗಳು |
|---|---|---|
| | ಮೀನಾ ಸಂಘ | ಜಾಗೃತಿ ಕಾರ್ಯಕ್ರಮ, ಪ್ರಹಸನ, ಏಕಪಾತ್ರಾಭಿನಯ, ಬೀದಿ ನಾಟಕಗಳೂ, ಸಹಪಾಠಿ ಹೆಣ್ಣು ಮಕ್ಕಳಿಗೆ ಮಾನಸಿಕ ಬೆಂಬಲ ನೀಡಿಕೆ. ವಿಕಲ ಚೇತನರಿಗೆ ನೆರವು. ಸಣ್ಣ ಉಳಿತಾಯ (ಅಂಚೆ ಆರ್.ಡಿ. ಮಗು ಮಾಡಿಸುತ್ತದೆ) ಮೇಳಗಳ ಸಂಘಟನೆ ಇತ್ಯಾದಿ. |
| | ವಿಜ್ಞಾನ ಸಂಘ | TLM ತಯಾರಿಕೆ, ಕ್ಷೇತ್ರ ಅಧ್ಯಯನ, ಹೊರಸಂಚಾರ, ಪ್ರವಾಸ, ಸುಧಾರಿತ ಉಪಕರಣಗಳ ತಯಾರಿಕೆ, ರಸ ಪ್ರಶ್ನೆ, ಕಂಪ್ಯೂಟರ್ ಕೊಠಡಿ ನಿರ್ವಹಣೆ, ಮೇಳಗಳ ಸಂಘಟನೆ ಇತ್ಯಾದಿ. |
| ವಿದ್ಯಾರ್ಥಿ ಸಂಘ | ಕ್ರೀಡಾ ಸಂಘ | ಯೋಗ/ಸ್ಕೌಟ್ಸ/ಗೈಡ್ಸ್/ಸೇವಾದಳ/ಕ್ರೀಡೆ/ಆವರಣ ಸ್ವಚ್ಛತೆ/ ಕೈತೋಟ/ ಸಮಾಜ ಸೇವೆ/ ಪ್ರಾರ್ಥನೆ ಇತ್ಯಾದಿ. |
| | ಕಲಾ ಸಂಘ | ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳು, ಸ್ಪರ್ಧೆಗಳ ಸಂಘಟನೆ, ನಿರ್ಮಿತ ಸನ್ನಿವೇಶಗಳ ಪ್ರದರ್ಶನ, ತಜ್ಞರಿಂದ ಉಪನ್ಯಾಸ, ತರಗತಿಗೆ/ಶಾಲೆಯ ಹಸ್ತ ಪ್ರತಿ, ಮ್ಯಾಗ್ಜಿನ್, ಇತ್ಯಾದಿ ಕೋಲಾಟ, |

| | | |
|---|---|---|
| | | ನಾಟಕ, ನೃತ್ಯ ಚಟುವಟಿಕೆಗಳಿಗೆ ಆದ್ಯತೆ ಇರಲಿ. |
| | ಮಕ್ಕಳ ಹಕ್ಕು ಕೋಶ | ಚರ್ಚೆ, ವಿಚಾರ ಗೋಷ್ಠಿ, ತಜ್ಞರ ಸಂದರ್ಶನ ಜಾಗೃತಿ ಶಿಬಿರ, ಪ್ರಹಸನಗಳು, ಆರೋಗ್ಯ ಸಲಹೆ, ಸಲಹಾ ಕೇಂದ್ರ, ಜೀವನ ಕೌಶಲ್ಯ ಇತ್ಯಾದಿ, ವಿದ್ಯಾರ್ಥಿ/ಸಮುದಾಯಕ್ಕೆ ಉಪಯುಕ್ತವೆನಿಸುವ ವಿಷಯಗಳ ಕುರಿತು ವಿಚಾರ ವಿನಿಮಯ ನಡೆಸಿ – ನೈಸರ್ಗಿಕ ಕೃಷಿ ಇತ್ಯಾದಿ. |

**ಗಮನಿಸಿ :–**

- ಅಧ್ಯಾಯ 05– ನೋಡಿ.
- ಸ್ಪರ್ಧೆ, ಮೇಳ, ಶಿಬಿರ ಇಂತಹ ಸಮೂಹ ಚಟುವಟಿಕೆಗಳ ಸಂದರ್ಭದಲ್ಲಿ ದಾನಿ/ಸಮುದಾಯವನ್ನು ತೊಡಗಿಸಿ–ಸಹಾಯ ಪಡೆಯಿರಿ.
- ಪ್ರತಿ ಮೂರು ತಿಂಗಳಿಗೊಮ್ಮೆ ಸಂಘದ ಸದಸ್ಯರನ್ನು ಅಗತ್ಯವಿದ್ದರೆ ಬದಲಾಯಿಸಿ
- ವಾರ್ಷಿಕ ಕ್ರಿಯಾ ಯೋಜನೆಯನ್ನು ಸಂಘಗಳು/ಅಧ್ಯಾಪಕರು ತಯಾರಿಸಲಿ ಈ ಅಂಶಗಳು ಶಾಲಾ ಶೈಕ್ಷಣಿಕ ಯೋಜನೆಯಲ್ಲಿ ಬಿಂಬಿತವಾಗಲಿ.
- ಸಭೆ/ಸಮಾರಂಭಗಳನ್ನು ವಿದ್ಯಾರ್ಥಿ ರೂಪಿಸಿ – ನಿರೂಪಿಸಲು ಅವಕಾಶ ಕೊಡಿ.

**(ಆ) ಪ್ರಾರ್ಥನೆ ಮತ್ತು ಸಂಬಂಧಿಸಿದ ಚಟುವಟಿಕೆಗಳು**

ನೆರಳಿನಲ್ಲಿ ಮಾಡಿಸಿ ಶಾಲೆಯ ಸ್ವಚ್ಚತೆಯಲ್ಲಿ ಭಾಗವಹಿಸಿದವರು ಖಡ್ಡಾಯವಾಗಿ ಸ್ವಚ್ಚಗೊಂಡು ಪ್ರಾರ್ಥನೆಗೆ ಬರಲು ವ್ಯವಸ್ಥೆಗೊಳಿಸಿ. ಎತ್ತರವಾರು ಸಾಲಾಗಿ ನಿಲ್ಲಲಿ. ಆರೋಗ್ಯ ತಪಾಸಣೆ ನಡೆಸಿ, ಪ್ರಾರ್ಥನೆ ಗೀತೆ, ನಾಡಗೀತೆ ಹಾಡಿಸಿ ತರುವಾಯ ಸುದ್ದಿಯ ಮುಖ್ಯಾಂಶಗಳನ್ನು ಓದಿಸಿ. ಸುಭಾಷಿತ ಹೇಳಿಸಿ, ಘೋಷಣೆಗಳಿದ್ದರೆ ಹೇಳಿಸಿ, ರಾಷ್ಟ್ರಗೀತೆ ಹಾಡಿಸಿ, ಸಾಲಾಗಿ ವರ್ಗಕೋಣೆಗೆ ತೆರಳಲಿ.

**ಗಮನಿಸಿ** :೧. ವರ್ಗಕೋಣೆ, ಶೌಚಾಲಯ ಆವರಣ ಸ್ವಚ್ಚತೆಗೆ ವೇಳಾಪಟ್ಟಿ ಮಾಡಿ. ವಿದ್ಯಾರ್ಥಿಗಳು ತರಗತಿವಾರು ದಿನದಿಂದ ದಿನಕ್ಕೆ ಬದಲಾಯಿಸಿ. ಸರದಿಯಂತೆ 6/7/8 ನೇ ತರಗತಿಯಿಂದ ಮಕ್ಕಳನ್ನು ಈ ಕಾರ್ಯಕ್ಕೆ ತೊಡಗಿಸಿ. [ಶಾಲೆ ನೇಮಿಸಿರುವ ಸ್ವಚ್ಚತೆಯವರು ಬೆಳಗಿನ ಅವಧಿಯಲ್ಲಿ ಸ್ವಚ್ಛ ಮಾಡುತ್ತಾರೆ. ದಿನದ ಉಳಿದ ಭಾಗದ ಸ್ವಚ್ಛತೆಯನ್ನು ಮಕ್ಕಳು ಮಾಡಲಿ].

೨. ಪ್ರಾರ್ಥನೆಯಲ್ಲಿ ಜರುಗುವ ವಿವಿಧ ಚಟುವಟಿಕೆಗಳ ಪರಿಶೀಲನೆಗೆ ಮಕ್ಕಳ ವೇಳಾಪಟ್ಟಿ ಸಿದ್ಧಮಾಡಿ–ಅನುಸರಿಸಿ.

**(ಇ) ಶಾಲಾ ಹಂತದ ಕಾರ್ಯಕ್ರಮಗಳ ಸಂಘಟನೆ :**

ಶಾಲೆಯಲ್ಲಿ ನಡೆಯುವ ಎಲ್ಲಾ ಕಾರ್ಯಗಳೂ ಶಾಲೆಯ ಹಂತದ ಕಾರ್ಯಕ್ರಮಗಳೇ ಆಗಿವೆ. ಆದರೆ ಸಾರ್ವಜನಿಕರನ್ನು ಆಹ್ವಾನಿಸಿ ನೀಡುವ/ತೊಡಗಿಸಿಕೊಳ್ಳುವ ಕಾರ್ಯಕ್ರಮಗಳನ್ನು ಮಾತ್ರ ಮುಂದಿನಂತೆ ಪಟ್ಟಿ ಮಾಡಿದೆ.

- ದಾಖಲಾತಿ ಆಂದೋಲನ – ಮೇ/ಜೂನ್ ತಿಂಗಳಿನಲ್ಲಿ (ಆಯಾ ಸ್ಥಳಗಳಲ್ಲಿ)
- ವಿಶೇಷ ದಾಖಲಾತಿ ಆಂದೋಲನ – ಜುಲೈ (ಅದೇ–)
- ಮನೆ ಮನೆಗೆ ಭೇಟಿ (ಗೈರುಹಾಜರಿ ಮಗು) – ಪ್ರತಿ ಸೋಮವಾರ ಶಾಲಾ ಅವಧಿಗೆ ಮೊದಲು. ಉಸ್ತುವಾರಿದಾರರು ಈ ಕಾರ್ಯವನ್ನು ಮಾಡುವುದು.
- ಕ್ರೀಡಾ ಸ್ಪರ್ಧೆಗಳು – ಆಗಸ್ಟ್/ನವೆಂಬರ್/ಫೆಬ್ರವರಿ
- ಸಾಹಿತ್ಯಿಕ ಸ್ಪರ್ಧೆಗಳು – ಆಗಸ್ಟ್/ನವೆಂಬರ್/ಫೆಬ್ರವರಿ
- ನಾಟಕಗಳು+ಕೋಲಾಟ – ಸಮುದಾಯದತ್ತ ಶಾಲೆ ದಿನದಂದು ಕನಿಷ್ಠ 40 ನಿಮಿಷಗಳ 2/3 ನಾಟಕಗಳು+ಕೋಲಾಟ
- ರಾಷ್ಟ್ರೀಯ ಹಬ್ಬಗಳು – ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಇರುವಂತೆ
- ಸಮುದಾಯದತ್ತ ಶಾಲೆ – ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಇರುವಂತೆ
- ಖ್ಯಾತನಾಮರ ದಿನಾಚರಣೆಗಳು – ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿಯಲ್ಲಿ ಇರುವಂತೆ
- ಕೈ ಬರಹದ ಶಾಲಾ ಪತ್ರಿಕೆ – ಅಕ್ಟೋಬರ್ ಮತ್ತು ಫೆಬ್ರವರಿ

**(ಈ) ಸಮಾಜ ಸೇವೆಯ ಸಂಘಟನೆ**

ಸಾರ್ವಜನಿಕ ಸ್ಥಳಗಳ ಸ್ವಚ್ಛತೆ, ಪರಿಸರ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು, ಸಮಾಜದಲ್ಲಿ ಕಂಡು ಬರುವ ಅವೈಜ್ಞಾನಿಕ ಆಚರಣೆಗಳ ವಿರುದ್ಧ ಜಾಗೃತಿ ಮೂಡಿಸುವಿಕೆ ಮುಂತಾದ ಕಾರ್ಯಕ್ರಮಗಳನ್ನು ಮೀನಾ ತಂಡ ಮತ್ತು ಕಲಾ ಸಂಘದಿಂದ ಹಮ್ಮಿಕೊಳ್ಳಬಹುದು.

**(ಉ) ಯೋಜನೆ ಕಾರ್ಯದ ಸಂಘಟನೆ**

ಭಾಗ – ಬಿ ನಲ್ಲಿ ಯೋಜನಾ ಕಾರ್ಯ ಮಾಡಬೇಕಿದೆ. ಹಿರಿಯ ವರ್ಗದ ವಿದ್ಯಾರ್ಥಿಗಳು ತಮ್ಮ ಊರಿನ ಇತಿಹಾಸ, ಭೂಗೋಳ, ಶಿಲೆ – ಮಣ್ಣು, ಸಸ್ಯ ಮತ್ತು ಪ್ರಾಣಿ ವರ್ಗ, ಖ್ಯಾತನಾಮರ ವಿವರ, ಇತ್ಯಾದಿ ಅಂಶಗಳನ್ನು ಕಲೆಹಾಕಿ ಸಂಘಟಿಸುವುದರಿಂದ ವಿಷಯ ಜ್ಞಾನ ಮತ್ತು ಪರಂಪರೆಯ ಕುರಿತು ಅಭಿಮಾನ ಹೊಂದಲು ನೆರವಾಗುತ್ತದೆ.

✓ **ಕಲಿಕೆಯ ವಾತಾವರಣ :**

ಈ ಅಂಶವನ್ನು ಎರಡು ದೃಷ್ಟಿಕೋನದಲ್ಲಿ ನೋಡೋಣ. ಮೊದಲನೆಯದು ತರಗತಿಯ ಕಲಿಕೆಯ ವಾತಾವರಣ. ಒಳ್ಳೆಯ ಕರಿಹಲಗೆ, ತರಗತಿಯ ಮೊದಲ ಅಗತ್ಯ. ಅದು ಹಸಿರು ಬಣ್ಣ ಹೊಂದಿದ್ದರೆ ಕಣ್ಣಿಗೆ ಒಳ್ಳೆಯದು. ಕಪ್ಪು ಹಲಗೆಯ ಇಕ್ಕೆಲಗಳಲ್ಲಿ ಫ್ಲಾನೆಲ್ ಬೋರ್ಡ್ ಹಾಕಿಸಿ. ಮಕ್ಕಳು ಬರೆದ ಸೃಜನಶೀಲ ಬರಹಗಳನ್ನು ಹಾಕಿ. ಜೊತೆಗೆ ತರಗತಿ ಮಕ್ಕಳಿಗೆ ಅನುಕೂಲವಾಗುವ ಚಿತ್ರ, ಬರಹ ಹಾಕಿ, ಆಗಾಗ್ಗೆ ಇವುಗಳನ್ನು ಬದಲಾಯಿಸಿ. ನಕ್ಷೆ / ಚಾರ್ಟುಗಳ ಪ್ರದರ್ಶನಕ್ಕೆ ಸರಿಯಾದ ಮೊಳೆ ಇಡಿ. (ಗೋಡೆ ಹಾಳು ಮಾಡಬೇಡಿ)

ತರಗತಿಗೆ ತಕ್ಕಂತೆ ಕಲಿಕೆಯ ಸಾಮಗ್ರಿಗಳನ್ನು ಕ್ರಮವಾಗಿ ಗೋಡೆಯ ಮೇಲೆ ಪ್ರದರ್ಶಿಸಿ – ಒಪ್ಪ ಓರಣ ಇರಲಿ–ಬಾಲಾ ಅಂಶಗಳು ಇದ್ದರೆ ಚೆನ್ನ.

ಎರಡನೆಯದು ಕಲಿಕೆಗೆ ಪೂರಕವಾದ ವಾತಾವರಣ (ಸೌಲಭ್ಯಗಳು ಮತ್ತು ಸಂಪನ್ಮೂಲ) ಗ್ರಂಥ ಭಂಡಾರ, ಗಣಕ ಯಂತ್ರಗಳು, ವಿಜ್ಞಾನ ಉಪಕರಣಗಳು, ವಿಕಲ ಚೇತನ ಮಕ್ಕಳಿಗೆ ಬಳಸುವ ಕಲಿಕೆಯ ಸಾಧನಗಳು, ಕ್ರೀಡಾ ಸಾಮಗ್ರಿಗಳು, ಇವುಗಳ ವ್ಯವಸ್ಥಿತ ಜೋಡಣೆ ಮತ್ತು ಬಳಕೆಯ ಕಡೆ ನಿಗಾ ಇಡಬೇಕು. ಜೊತೆಗೆ ಶಾಲಾ ಕೈತೋಟದಲ್ಲಿ ಗಿಡಗಳನ್ನು ಬೆಳೆಸುವಾಗ–ಪಾಠಕ್ಕೆ ಉಪಯೋಗವಾಗುವ ಸಸ್ಯಗಳನ್ನು (ಝರಿ ಸಸ್ಯ, ಸೈಕಾಸ್, ಜಲಸಸ್ಯ, ಬಣ್ಣದ ಎಲೆಗಳುಳ್ಳ ಸಸ್ಯ ಇತ್ಯಾದಿ) ಬೆಳೆಸಲು ಸಾಧ್ಯತೆ ; ಒಂದು ಪ್ರದೇಶದ (ಭಾರತ ಭೂಖಂಡ) ಭೌಗೋಳಿಕ ಪ್ರದೇಶವನ್ನು ಮೂರು ಆಯಾಮಗಳಲ್ಲಿ ರಚಿಸಿದ ಸಾಮಗ್ರಿ ಇತ್ಯಾದಿ ಕಲಿಕೆಯ ವಾತಾವರಣವನ್ನು ಶ್ರೀಮಂತಗೊಳಿಸುತ್ತದೆ.

✓ **ಪಾಠಯೋಜನೆ :**

ಪಾಠ ಯೋಜನೆ ಮಾಡದೆ ಪಾಠ ಮಾಡಲು ದಯವಿಟ್ಟು ಹೋಗಬೇಡಿ. ಮುಖ್ಯ ಆಯಾಮಗಳು– ಏಕೆ ಬೋಧಿಸುವೆ ? ಏನನ್ನು ? ಹೇಗೇ ? ಬೋಧಿಸಿರುವೆನೆ ? ಎಂಬ ಪ್ರಶ್ನೆಗಳಿಗೆ ತಯಾರಿಸಿರುವ ಪಾಠ ಯೋಜನೆ ಉತ್ತರಿಸುವಂತೆ ಇರಬೇಕು. ವರ್ಗ ಕೋಣೆಯಲ್ಲಿ ಪ್ರಸ್ತಾಪಿಸಬೇಕಾದ ; ಮಗು ಕಲಿಯಬೇಕಾದ ಘಟಕ, ಉಪಘಟಕ, ಸಾಮರ್ಥ್ಯ, ಉಪಸಾಮರ್ಥ್ಯಗಳನ್ನು ಮಗು ಹೊಂದುವಂತೆ ಮಾಡಲು ಹಂತವಾರು ಕಾರ್ಯಚಟುವಟಿಕೆಗಳನ್ನು ಬಳಸಲು ತಯಾರಿಸಿದ ನೀಲನಕ್ಷೆಯನ್ನು ಪಾಠ ಯೋಜನೆ ಎನ್ನಬಹುದು.

**ಪಾಠ ಯೋಜನೆಯ ಹಂತಗಳು**

ಪಿಯಾಜೆಯವರ ಮಾನಸಿಕ ವಿಕಾಸದ ಸಿದ್ಧಾಂತದ ಪ್ರಕಾರ ಪ್ರಾಥಮಿಕ ಶಾಲೆಯ ಕಿರಿಯ ತರಗತಿಯ ಮಕ್ಕಳ ಕಲಿಕೆ ಸಾಮಾನ್ಯವಾಗಿ ಮೂರ್ತರೂಪದ್ದೇ ಆಗಿರುತ್ತದೆ. 11–12 ವರ್ಷದ ತರುವಾಯ ಅಮೂರ್ತ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳಲು ಶಕ್ತವಾಗುತ್ತದೆ. ಕೆ.ಜಿ.ಬಿ.ವಿ. ಶಾಲೆಯ ಹಂತದ ಮಕ್ಕಳು ಈ ಎರಡು ಘಟ್ಟಗಳು ಪರ್ವ ಕಾಲದಲ್ಲಿ ಇರುವ ವಯಸ್ಸಿನವರು. ಆದ್ದರಿಂದ ಕಲಿಕೆ – ಬೋಧನೆಯ ಕ್ರಮ / ವಿಧಾನಗಳಲ್ಲಿ ಮೂರ್ತ ಮತ್ತು ಅಮೂರ್ತ ಮಾಧ್ಯಮಗಳು ಸಂತುಲಿತ ಪ್ರಮಾಣದಲ್ಲಿ ಇರುವುದು ಯುಕ್ತ. ಪಾಠ ಯೋಜನೆಗಳನ್ನು ತಯಾರಿಸುವಾಗ ಈ ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು.

| **ಹಂತಗಳು** | **ಪರಿಣಾಮಗಳು** |
|---|---|
| – ಪೂರ್ವ ಸಿದ್ಧತಾ ಹಂತ<br>– ಕಲಿಕಾ ಪೂರ್ವ ಹಂತ | ಅವಧಾನ ಕೇಂದ್ರೀಕರಣ ಹಾಗೂ ಪೂರ್ವಜ್ಞಾನದ<br>ಖಚಿತತೆಗಾಗಿ ಚುಟುವಟಿಕೆಗಳು |
| – ಕಲಿಕಾ ಹಂತ | ಸಾಮರ್ಥ್ಯದ ಕಲಿಕೆಗಾಗಿ ಯೋಚಿಸಿದ ಚಟುವಟಿಕೆಗಳು |
| – ಅಭ್ಯಾಸ ಹಂತ<br>– ಬಳಕೆ ಹಂತ | ಅಭ್ಯಾಸ ; ಬಳಕೆಯ ಖಚಿತತೆಗಾಗಿ ಆಯೋಜಿಸಿದ |

| | |
|---|---|
| | ಚಟುವಟಿಕೆಗಳು |
| – ಮೌಲ್ಯಮಾಪನ ಹಂತ | ಕಲಿಕಾ – ತೊಂದರೆಗಳನ್ನು ಗುರುತಿಸುವ ಶಿಕ್ಷಕ ನಿರ್ಮಿತ ಚಟುವಟಿಕೆಗಳು |

ಈ ಎಲ್ಲಾ ಹಂತಗಳಲ್ಲಿ ಶಿಕ್ಷಕರು ಸೂತ್ರಧಾರಿಗಳಾಗಿರಬೇಕೆ ಹೊರತು ಪಾತ್ರಧಾರಿಗಳಾಗಿ ಕಲಿಕಾರ್ಥಿಗಳನ್ನು ಮೂಕ ಪ್ರೇಕ್ಷಕರನ್ನಾಗಿಸಬಾರದು. ಕಲಿಯುವ ಮಗುವು ವರ್ಗಕೋಣೆಯ ಶೇ. 80ರಷ್ಟು ವೇಳೆಯಲ್ಲಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಂತೆ ಅವರ ಪೂರ್ವ ಜ್ಞಾನದ ಹಿನ್ನೆಲೆಯಲ್ಲಿ ಶಿಕ್ಷಕರು ಕಾರ್ಯಕ್ರಮ ರೂಪಿಸಬೇಕು.

ಅ) **ಪೂರ್ವಸಿದ್ಧತೆಯ ಹಂತ:** ವಿದ್ಯಾರ್ಥಿಗಳನ್ನು ಶಾಲಾ ಸನ್ನಿವೇಶ/ತರಗತಿಯ ಸನ್ನಿವೇಶಕ್ಕೆ ಸಜ್ಜುಗೊಳಿಸುವ ಹಂತ. ಶಾಲೆಗೆ ಬರುವಾಗ ಬೇರೆ ಬೇರೆ ಸನ್ನಿವೇಶದಿಂದ ಬಂದ ಮಗು ಕಲಿಕಾ ಪ್ರಕ್ರಿಯೆಗೆ ಹೊಂದಿಕೊಳ್ಳುವಂತೆ ಮಾಡುವುದು ಇದರ ಉದ್ದೇಶ. ಈ ಹಂತದಲ್ಲಿ ಹಾಡು, ಕಥೆ, ಆಟ, ಅಭಿನಯ, ಸರಳ ಸಂಭಾಷಣೆ, ಆಟಿಕೆ ತಯಾರಿಸುವುದು, ಸೃಜನ ಶೀಲ ಚಟುವಟಿಕೆಗಳು, ಚಿತ್ರ ಬಿಡಿಸುವುದು ಚಿತ್ರಕ್ಕೆ ಬಣ್ಣ ಹಚ್ಚುವುದು, ಇತ್ಯಾದಿ. ಈ ಹಂತದಲ್ಲಿನ ಚಟುವಟಿಕೆಗಳು ಮುಂದಿನ ಕಲಿಕಾ ಪ್ರಕ್ರಿಯೆಯ ವಿಷಯಕ್ಕೆ ಸಂಬಂಧಿಸಿ ಇರಬೇಕಾದುದಿಲ್ಲ. ಇದು ಕೇವಲ ವಿದ್ಯಾರ್ಥಿಯನ್ನು ತರಗತಿಯ ವಾತಾವರಣಕ್ಕೆ ಹೊಂದಿಸುವ ಪ್ರಕ್ರಿಯೆಯಾಗಿದೆ.

ಆ) **ಕಲಿಕೆಗೆ ಪೂರಕ ಹಂತ:** ಈ ಹಂತದಲ್ಲಿ ಅಂದಿನ ಕಲಿಕೆಗೆ ಸಂಬಂಧಿಸಿದಂತೆ ಪೂರ್ವಜ್ಞಾನವನ್ನೂ ಜಾಗೃತಗೊಳಿಸಲಾಗುತ್ತದೆ. ಇದನ್ನು ಚಟುವಟಿಕೆಗಳ ಮೂಲಕ ಮಾಡಲಾಗುತ್ತದೆ. ಇಲ್ಲಿ ಕಲಿಕಾಂಶಕ್ಕೆ ಪೂರಕವಾದ ಪ್ರಶ್ನೆಗಳು, ಸರಳ ಆಟಗಳು, ಕ್ರಾಫ್ಟ್ ಚಟುವಟಿಕೆಗಳು. ವಸ್ತು ಸಂಗ್ರಹಣೆ, ಹೊರಾವರಣ, ಚಟುವಟಿಕೆ; ಬಣ್ಣ ಹಚ್ಚುವುದು, ಮಾಹಿತಿ ಸಂಗ್ರಹಣೆ; ಕಥೆ, ರೇಖಾಭ್ಯಾಸ, ಮಿಂಚು ಪಟ್ಟಿಗಳ ಜೋಡಣೆ, ಅಕ್ಷರ ಮಾದರಿಗಳು ಇತ್ಯಾದಿ ಚಟುವಟಿಕೆಗಳ ಮೂಲಕ ಅಂದಿನ ಕಲಿಕಾಂಶಕ್ಕೆ ಸರಯೋಜನೆ ಮಾಡುವ ಪ್ರಯತ್ನ ಈ ಹಂತದಲ್ಲಿ ನಡೆಯುತ್ತದೆ.

ಇ) **ಕಲಿಕೆಯ ಹಂತ;** ಈ ಹಂತವು ಪರಿಕಲ್ಪನೆಯನ್ನು (ಸಾಮರ್ಥ್ಯ/ಕಲಿಕಾಂಶ) ಸಾಕಾರಗೊಳಿಸಲು ಮಾಡುವ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಇದು ಅತಿ ಮುಖ್ಯವಾದ ಹಂತವಾಗಿದೆ. ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳು ಇಲ್ಲಿವೆ. ಸಾಮರ್ಥ್ಯದ/ಕಲಿಕಾಂಶದ ಗಳಿಕೆಗೆ ಮತ್ತು ಪರಿಪೂರ್ಣ ಕಲಿಕೆಗೆ ಅನುವಾಗುವ ವಿವಿಧ ಚುಟುವಟಿಕೆಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಚಟುವಟಿಕೆಗಳು ಸರಳವಾಗಿದ್ದು ಮಕ್ಕಳ ಮನೋಮಟ್ಟಕ್ಕೆ ನಿಲುಕುವಂತಿರಬೇಕು. ಇಲ್ಲಿ ಹೆಚ್ಚು ಸ್ವಕಲಿಕೆಗೆ ಆದ್ಯತೆ ಇರಲಿ.

ಉದಾ: ಬರವಣಿಗೆ, ಓದುವುದು, ಮೂಲಕಲಿಕೆಗಳು, ರೇಖಾಕೃತಿಗಳ ರಚನೆ, ಸರಳ ಪ್ರಯೋಗಗಳು, ಆಟಗಳು, ವೀಕ್ಷಣೆ, ದಾಖಲೀಕರಣ, ಮೂರ್ತ ವಸ್ತುಗಳನ್ನು ಬಳಸಿಕೊಂಡು ಮಾಡಬಹುದಾದ ಚಟುವಟಿಕೆಗಳು, ಎಣಿಕೆ ಇತ್ಯಾದಿ. ಈ ಹಂತದಲ್ಲಿ ಸ್ವಯಂಸೇವಕರ ಪಾತ್ರ ಪ್ರಮುಖವಾಗಿದ್ದು, ಕಲಿಕಾ ಸಾಮಗ್ರಿ/ ವಿದ್ಯಾರ್ಥಿಗಳನ್ನು ಬಳಸಿ ಕಲಿಕಾಂಶವನ್ನು ಅರ್ಥಮಾಡಿಸಬೇಕು.

ಈ) **ಅಭ್ಯಾಸದ ಹಂತ:** ಕಲಿಕಾಂಶದಲ್ಲಿ ಕಲಿತ ಪರಿಕಲ್ಪನೆಯನ್ನು ಧೃಢೀಕರಿಸಲು ಮಾಡಬಹುದಾದ ಚಟುವಟಿಕೆಗಳನ್ನು ಈ ಹಂತ ಒಳಗೊಂಡಿರುತ್ತದೆ. ಸ್ವಯಂಸೇವಕರ ಭಾಗಶಃ ಸಹಕಾರ ಅಥವಾ ಹಿರೇಮಣಿ ಸಹಕಾರದೊಂದಿಗೆ ಈ ಚಟುವಟಿಕೆಗಳು ರೂಪಗೊಂಡಿರಲಿ.

**ಉದಾ :** ಓದುವುದು, ಅಭ್ಯಾಸದ ಹಾಳೆಗಳು, ಪಠ್ಯ ಪುಸ್ತಕದ ಅಭ್ಯಾಸಗಳು, ಚಿತ್ರನೋಡಿ ಪದ ಬರೆ, ಅಭ್ಯಾಸ ಪುಸ್ತಕದ ಚಟುವಟಿಕೆಗಳು, ಕಿರು ಟಿಪ್ಪಣಿ, ಪದಬಂಧ, ಲೇಖನ ಚಿನ್ಹೆಗಳ ಬಳಕೆ, ಗಣಿತದ ಸಮಸ್ಯೆಗಳನ್ನು ಬಿಡಿಸುವುದು. ಆಶಾ ಆಟ ಇತ್ಯಾದಿ. (ಪಠ್ಯ ಪುಸ್ತಕ ಬಳಸಿಕೊಳ್ಳಿ.)

ಉ) **ಅನ್ವಯ/ಬಳಕೆಯ ಹಂತ :** ಇದು ಸ್ವಕಲಿಕೆಯ ಹಂತವಾಗಿದ್ದು ಮಗುವು ಸ್ವತಃ ಕಲಿತಿರುವುದನ್ನು ಇನ್ನೂ ಹೆಚ್ಚು ಧೃಡಪಡಿಸಿಕೊಳ್ಳುತ್ತದೆ. ಈ ಹಂತದಲ್ಲಿ ವಿದ್ಯಾರ್ಥಿಗಳು ಶಿಕ್ಷಕರ ಸಹಾಯವಿಲ್ಲದೇ ಸ್ವತಃ ಮಾಡುವ ಚಟುವಟಿಕೆಗಳು ಸೇರಿರುತ್ತವೆ. ಈ ಚಟುವಟಿಕೆಗಳನ್ನು ಮಗು ತನ್ನ ನಿತ್ಯ ಜೀವನದಲ್ಲಿ ಅಥವಾ ಹೊಸ ಪರಿಸರದಲ್ಲಿ ಕಲಿತದ್ದನ್ನು ಅನ್ವಯಿಸಿಕೊಳ್ಳಲು ಸಹಾಯಕವಾಗುತ್ತದೆ.

ಉದಾ: ನೆನಪಿನ ಆಟ, ಪದಬಂಧ, ಹವಾಮಾನ ನಕ್ಷೆ, ಗ್ಲೋಬ್‌ನಲ್ಲಿ ಸ್ಥಳಗಳ ಗುರುತಿಸುವಿಕೆ, ಗೆಲುವಿನ ಆಟ.

(ಊ) **ಮೌಲ್ಯಮಾಪನ ಹಂತ :** ಕಲಿತ ಎಲ್ಲಾ ಚಟುವಟಿಕೆಗಳು ಪುನರ್ ಮನನವಾಗಿದೆ ಎನ್ನುವುದನ್ನು ಪರೀಕ್ಷಿಸಲು ಮಾಡುವ ಚಟುವಟಿಕೆಗಳು ಈ ಹಂತದಲ್ಲಿರಬೇಕು.

- ಲಿಖಿತ ಮೌಖಿಕ ಪ್ರಶ್ನೆಗಳು
- ಆಟಗಳು/ಚಟುವಟಿಕೆಗಳು

**ಗಮನಿಸಿ:**

- ಕೆಲವು ಸಾಮರ್ಥ್ಯಗಳನ್ನು ಕಲಿಸುವಾಗ 6 ಹಂತಗಳು ಬೇಡವೆನಿಸಿದಲ್ಲಿ 4 ಹಂತಗಳನ್ನು – ಪೂರ್ವಸಿದ್ಧತಾ ಹಂತ, ಕಲಿಕೆಯ ಹಂತ, ಅಭ್ಯಾಸದ ಹಂತ, ಮೌಲ್ಯಮಾಪನ ಹಂತಗಳನ್ನು ಮಾತ್ರ ಬಳಸಬಹುದು.
- ಕಲಿಕೆ ಮತ್ತು ಮೌಲ್ಯ ಮಾಪನಕ್ಕೆ ಉಳಿದ ಹಂತದ ಚಟುವಟಿಕೆಗಳು ಪೂರಕ ಮತ್ತು ಅವಶ್ಯ ಎಂಬುದನ್ನು ಗಮನಿಸಿ.
- ಈ ಎಲ್ಲ ಹಂತಗಳನ್ನು ಒಂದೇ ಅವಧಿಯಲ್ಲಿ ನಿರ್ವಹಿಸಬೇಕೆ? ಅಥವಾ ಒಂದೊಂದು ಹಂತವನ್ನು ಒಂದೊಂದು ಹಂತದ ಚಟುವಟಿಕೆಗಳನ್ನೇ ನಿರ್ವಹಿಸಬೇಕೆ? ಎಂಬ ಗೊಂದಲಕ್ಕೆ ಒಳಗಾಗಬೇಡಿ.
- ಕೆಲವೊಮ್ಮೆ ಪೂರ್ವಸಿದ್ದತೆ, ಕಲಿಕಾ ಪೂರಕ ಚಟುವಟಿಕೆ ಒಂದೇ ಅವಧಿಯಲ್ಲಿ ಮುಗಿಯಬಹುದು. ಕೆಲವೊಮ್ಮೆ ಎರಡು ಹಂತಗಳ ಜೊತೆ ಸ್ವಲ್ಪ ಕಲಿಕೆಯ ಚಟುವಟಿಕೆಯೂ ಸೇರಬಹುದು.
- ಕೆಲವೊಮ್ಮೆ ಪೂರ್ವ ಸಿದ್ದತಾ ಚಟುವಟಿಕೆಯನ್ನು ನಿರ್ವಹಿಸಲು ಒಂದು ಅವಧಿ ಬೇಕಾಗಬಹುದು.
- ಕೆಲವು ಸಾಮರ್ಥ್ಯವನ್ನು ಕಲಿಸಲು 3–4 ಅವಧಿ ಅಥವಾ ಹೆಚ್ಚು ಅವಧಿಯನ್ನು ಕಲಿಕೆಯ ಹಂತಗಳಲ್ಲಿ ಬಳಸಬಹುದು.

- ಕೆಲವೊಮ್ಮೆ ಒಂದೇ ಅವಧಿಯಲ್ಲಿ 6 ಹಂತಗಳೂ ಮುಗಿಯಬಹುದು.
- ಅನ್ವಯ ಮತ್ತು ಅಭ್ಯಾಸದ ಚಟುವಟಿಕೆಯನ್ನು ಒಂದೇ ಅವಧಿಯಲ್ಲಿ ಮುಗಿಯಬಹುದು ಅಥವಾ 2–3 ಅವಧಿಗಳು ಒಂದೊಂದೇ ಹಂತಕ್ಕೆ ಬೇಕಾಗಬಹುದು.
- ಕೆಲವೊಮ್ಮೆ ಎಲ್ಲಾ ಹಂತಗಳೂ ಬರಬಹುದು. ಇಲ್ಲವೇ ಒಂದೊಂದೇ ಹಂತ ಸಾಗಬಹುದು. ಒಟ್ಟಾರೆ ಪಾಠದ ನಿರ್ವಹಣೆ ಯಾವ ರೀತಿ ಇದೆ ಎಂದು ಗಮನಿಸಿ. ಕಲಿಕೆ ಉತ್ತಮವಾಗುವ ಹಾಗೆ ಕಲಿಸಿ.

✓ **ಕಲಿಕೆ ಬೋಧನೆಯಲ್ಲಿ ಬಳಸುವ ಚಟುವಟಿಕೆಗಳು :**

ಕಲಿಕೆಯ ದೃಷ್ಟಿಯಿಂದ ಮಗು ಏನೆಲ್ಲ ಮಾಡುತ್ತದೋ ಅದನ್ನು ಚಟುವಟಿಕೆ ಎನ್ನಬಹುದು. ಸಾಮರ್ಥ್ಯಗಳನ್ನು ಬೆಳೆಸಲು ಪೂರಕವಾದ ಕಲಿಕೆಯ ಸಾಮಗ್ರಿಗಳಿವೆ. ಒಂದು ನಿರ್ದಿಷ್ಟ ಸಾಮರ್ಥ್ಯ ಹೊಂದಲು ಕಲಿಕೆಯ ಸಾಮಗ್ರಿ ಬಳಸಿಕೊಂಡು ಹೇಗೆ ಚಟುವಟಿಕೆ ಮಾಡಬಹುದು ಎಂದು ಮೊದಲು ಶಿಕ್ಷಕರು ತೋರಿಸುತ್ತಾರೆ. ಇದು ಶಿಕ್ಷಕರ ಚಟುವಟಿಕೆ. ಅನಂತರ ವಿದ್ಯಾರ್ಥಿಗಳು ತಮ್ಮ ತಮ್ಮ ಗುಂಪುಗಳಲ್ಲಿ ಕುಳಿತು, ಗುಂಪಿನ ನಾಯಕರ ಉಸ್ತುವಾರಿಯಲ್ಲಿ ಕಲಿಕೆಯ ಸಾಮಗ್ರಿಗಳನ್ನು ಬಳಸಿಕೊಂಡು ಶಿಕ್ಷಕರು ತೋರಿಸಿಕೊಟ್ಟಂತೆ ಚಟುವಟಿಕೆಗಳನ್ನು ಮಾಡುತ್ತ, ನಿರ್ದಿಷ್ಟ ಸಾಮರ್ಥ್ಯಗಳನ್ನು ಗಳಿಸುವರು. ಮಕ್ಕಳಲ್ಲಿ ಕಲಿಕೆಯಾಗುವುದೇ ಚಟುವಟಿಕೆಗಳ ಮೂಲಕ.

- ಚಟುವಟಿಕೆಗಳು ಮಕ್ಕಳ ಮಾನಸಿಕ ಮಟ್ಟಕ್ಕೆ ಮತ್ತು ಸಾಮರ್ಥ್ಯಕ್ಕೆ ಅನುಗುಣವಾಗಿರಬೇಕು. ಸರಳವಾಗಿರಬೇಕು ಮತ್ತು ಪೂರಕವಾಗಿರಬೇಕು.
- ಮಕ್ಕಳಲ್ಲಿ ಆಸಕ್ತಿ, ಕುತೂಹಲ ಕೆರಳಿಸುವಂತಿರಬೇಕು.
- ಅವಧಿ ಪೂರ್ತಿ ಎಲ್ಲ ಮಕ್ಕಳು ಲವಲವಿಕೆಯಿಂದ ಇದ್ದು, ಚಟುವಟಿಕೆಯಲ್ಲಿ ಭಾಗವಹಿಸುವಂತಿರಬೇಕು.
- ಮನೋರಂಜನಾತ್ಮಕವಾಗಿರಬೇಕು ಮತ್ತು ಸೃಜನಶೀಲತೆಗೆ ಅವಕಾಶವಿರಬೇಕು.
- ಚಟುವಟಿಕೆಗಳು ಆನಂದದಾಯಕವಾಗಿದ್ದು, ಸ್ವಕಲಿಕೆಗೆ ಆಸ್ಪದ ನೀಡುವಂತಿರಬೇಕು.
- ಚಟುವಟಿಕೆಗಳಿಗೆ ಬೇಕಾದ ಕಲಿಕಾ ಸಾಮಗ್ರಿಗಳನ್ನು ಸ್ಥಳೀಯ ಸಂಪನ್ಮೂಲದಿಂದ ಸಂಗ್ರಹಿಸಿದಲ್ಲಿ ಅನುಕೂಲ.
- ಚಟುವಟಿಕೆ ಸ್ಪರ್ಧೆಯನ್ನು ನಿರ್ಮಿಸುವುದು ಆಪೇಕ್ಷಣೀಯ.

ಚಟುವಟಿಕೆಗಳನ್ನು ಮಾಡುವಾಗ ಮಕ್ಕಳು ಕಲಿಕೆಯ ಸಾಮಗ್ರಿಗಳನ್ನು ನೋಡುತ್ತಾರೆ, ಮೆಚ್ಚುತ್ತಾರೆ,ವರ್ಗೀಕರಿಸುತ್ತಾರೆ. ಗುಂಪು ಮಾಡುತ್ತಾರೆ. ಇದರಿಂದ ಸ್ವ–ಅನುಭವ, ಸ್ವ–ಕಲಿಕೆಯಾಗುತ್ತದೆ.

**ಕೆಲವು ಚಟುವಟಿಕೆಗಳನ್ನು ಪಟ್ಟಿ ಮಾಡಿದೆ.**

* ಪದಗಳ ಆಟ
* ಆಶಾ ಆಟ
* ಚೌಕಾಬಾರ ಆಟ
* ಹವಾಮಾನ ಓದುವುದು

* ಕಥೆ ಕಟ್ಟುವುದು
* ವಸ್ತುಗಳ ಪರಿಚಯ
* ಆತ್ಮಕಥನ
* ನದಿ ದಾಟುವುದು
* ಹೂ ಹಣ್ಣು ತರಕಾರಿ ಆಟ
* ಹೇಳಿದ ಅಕ್ಷರಕ್ಕೆ ಪದ ರಚನೆ
* ಪ್ರಾಸಗೀತೆ ಹೇಳುವುದು
* ಡೋವಿನೋರ್ ಜೋಡಣೆ
* ಗುಣಿತಾಕ್ಷೆ
* ಅಭ್ಯಾಸದ ಹಾಳೆ ಬರೆಯುವುದು
* ವಿಷಯ ಸಂಗ್ರಹಣೆ
* ಸರಳ ಪ್ರಯೋಗಗಳು
* ಸರಳ ಕ್ರಾಫ್ಟ್
* ಮೂಕಾಭಿನಯ
* ವಸ್ತುಗಳ ವರ್ಗೀಕರಣ
* ಬೆನ್ನ ಮೇಲೆ ಬರಹ
* ರಂಗ ಕಲೆ
* ಚೆಂಡು ಪುಟಿ ಹೇಳಿಸುವುದು
* ಕಥೆಯ ಹಂದರ ಹೆಣೆಯುವುದು
* ಅಭಿನಯ
* ಕೋತಿ ಬಾಳೆಹಣ್ಣು ಆಟ
* ಗಾಳ ಮೀನು ಆಟ
* ಅಂತ್ಯಾಕ್ಷರಿ
* ಕಥೆ ಹೇಳುವುದು
* ಚಿಕ್ಕ ಮಡಿಕೆ – ದೊಡ್ಡ ಮಡಿಕೆ
* ಚಿತ್ರ ಬಿಡಿಸುವುದು – ಬಣ್ಣ ಹಾಕುವುದು
* ಹಾಡು ಹೇಳಿಸುವುದು
* ವೀಕ್ಷಣೆ
* ಪಟ್ಟಿ ಮಾಡುವುದು
* ಸಮೀಕ್ಷೆ
* ರಿಲೇ ಆಟ
* ವಸ್ತುಗಳ ಸಂಗ್ರಹಣೆ
* ಹೊರಸಂಚಾರ
* ಗಾಳಿಯಲ್ಲಿ ಬರಹ
* ಸೀ.ಸಾ. ಆಟ
* ಸ್ಥಾನಬೆಲೆ ಆಟ ಇತ್ಯಾದಿ.

✓ **ಕಲಿಕೆಯ ಸಾಮಗ್ರಿಗಳು**

ಪರಿಕಲ್ಪನೆಗಳನ್ನು ಉಂಟುಮಾಡಲು ಸಾಮರ್ಥ್ಯಗಳನ್ನು ಬೆಳೆಸಲು, ಚಟುವಟಿಕೆಗಳನ್ನು ಮಾಡಿಸಲು, ಸತತ ಅಭ್ಯಾಸದಿಂದ ಕೌಶಲಗಳನ್ನು ಬೆಳೆಸಲು, ಸ್ವಕಲಿಕೆಯನ್ನು ಉಂಟು ಮಾಡಲು, ಸ್ವ ಅನುಭವ ನೀಡಲು, ಕ್ರಿಯಾತ್ಮಕ ಮನೋಭಾವ ಬೆಳೆಸಲು ಕಲಿಕೆಯ ಸಾಮಗ್ರಿಗಳು ಪೂರಕವಾಗಿವೆ. ಕಲಿಕೆಯ ಸಾಮಗ್ರಿಗಳಿಲ್ಲದೆ ಚಟುವಟಿಕೆಗಳಿಲ್ಲ. ಚಟುವಟಿಕೆಗಳಿಲ್ಲದೆ ಸಾಮರ್ಥ್ಯದ ಬೆಳವಣಿಗೆ ಇಲ್ಲ. ಸಾಮರ್ಥ್ಯದ ಬೆಳವಣಿಗೆ ಇಲ್ಲದೆ ಗುಣಾತ್ಮಕ ಕಲಿಕೆ ಇಲ್ಲ. ಇವು ಒಂದಕ್ಕೊಂದು ಪೂರಕ. ಕಲಿಕೆಯಲ್ಲಿ ಕಲಿಕೆಯ ಸಾಮಗ್ರಿಗಳ ಪಾತ್ರ ಅಮೋಘ.

ಕಲಿಕೆಯ ಸಾಮಗ್ರಿಗಳು ಎಲ್ಲಿಯೋ ಕಾರ್ಖಾನೆಗಳು ತಯಾರಿಸಿದ ವಸ್ತುಗಳೇ ಆಗಬೇಕೆಂದಿಲ್ಲ. ಇವು ಪರಿಸರದಲ್ಲಿ ಪುಕ್ಕಟೆ ಸಿಗುವ ವಸ್ತುಗಳು, ಕಡಿಮೆ ವೆಚ್ಚದಲ್ಲಿ ಮಕ್ಕಳ ಸಹಾಯದಿಂದ ಶಿಕ್ಷಕರೇ ತಯಾರಿಸಿಕೊಂಡ ವಸ್ತುಗಳಾಗಿರಬಹುದು. ತಾವೇ ತಯಾರಿಸಿಕೊಳ್ಳುವುದರಿಂದ ಇವು ತಮ್ಮವು ಎಂಬ ಭಾವನೆ ಶಿಕ್ಷಕರಲ್ಲಿ ಮತ್ತು ಮಕ್ಕಳಲ್ಲಿ ಮೂಡುತ್ತದೆ. ಇವುಗಳನ್ನು ಚಟುವಟಿಕೆಗಳಲ್ಲಿ ಬಳಸುವಾಗ, ಆಕಸ್ಮಾತ್ ಮುರಿದರೆ ; ಹಾಳಾದರೆ ; ಅದರಿಂದ ಶಿಕ್ಷಕರಿಗೆ ಭಯವಿಲ್ಲ. ಅದೇ ಇಲಾಖೆ ಒದಗಿಸಿದ ವಸ್ತುಗಳಾದರೆ, ಬಳಸಲು ಹೆದರುತ್ತಾರೆ. ಎಲ್ಲಿ ಕಳೆದುಹೋಗುತ್ತವೋ ; ಹಣ ಕಟ್ಟಬೇಕಾಗಿದೆ ಎಂದು. (ವಾಸ್ತವಿಕವಾಗಿ ಹಾಗೆ ಇಲ್ಲ. ಕೆಲವು ವಿನಾಯಿತಿಗಳು ಇವೆ.)

ಚಟುವಟಿಕೆಗಳನ್ನು ಮಾಡುವಾಗ ಮಕ್ಕಳು ಈ ಕಲಿಕೆಯ ಸಾಮಗ್ರಿಗಳನ್ನು ನೋಡುತ್ತಾರೆ. ಮೆಚ್ಚುತ್ತಾರೆ. ವರ್ಗೀಕರಿಸುತ್ತಾರೆ. ಗುಂಪು ಮಾಡುತ್ತಾರೆ. ನಿರ್ದಿಷ್ಠ ಆಕೃತಿ ಪಡೆಯಲು ಜೋಡಿಸುತ್ತಾರೆ. ಹೀಗೆ ಕಲಿಕೆಯ ಸಾಮಗ್ರಿಗಳನ್ನು ಬಳಸಿ ಚಟುವಟಿಕೆ ಮಾಡುವುದರಿಂದ, ಸ್ವ – ಅನುಭವ ಪಡೆಯುತ್ತಾರೆ. ಸ್ವ–ಕಲಿಕೆ ಹೊಂದುತ್ತಾರೆ, ಸ್ಪಷ್ಟ ಪರಿಕಲ್ಪನೆಗಳನ್ನು ಪಡೆಯುತ್ತಾರೆ.

ಸಂಗ್ರಹಣೆ, ವೀಕ್ಷಣೆ, ವಿಶ್ಲೇಷಣೆ, ಸಂಶ್ಲೇಷಣೆ, ತಾರ್ಕಿಕ ಚಿಂತನೆ ಮತ್ತು ತೀರ್ಮಾನಗಳೆಂಬ ವೈಜ್ಞಾನಿಕ ವಿಧಾನವನ್ನು ಮೈಗೂಡಿಸಿಕೊಳ್ಳುತ್ತಾರೆ. ಜೀವನದಲ್ಲಿ ಈ ಜ್ಞಾನವನ್ನು ಅಳವಡಿಸಿಕೊಳ್ಳುವ ಕೌಶಲವನ್ನು ಬೆಳೆಸಿಕೊಳ್ಳುತ್ತಾರೆ.

✓ **ಕಲಿಕೆಯ ಸಾಮಗ್ರಿಗಳ ವಿಧಗಳು**

ಕಲಿಕೆಯ ಸಾಮಗ್ರಿಗಳನ್ನು ಪ್ರಮುಖವಾಗಿ ಮೂರು ಗುಂಪುಗಳಾಗಿ ಮಾಡಬಹುದು.

೧. **ಸುಧಾರಿತ ಉಪಕರಣ**

ಅ. ಪರಿಸರದಲ್ಲಿ ಸಿಗುವ ವಸ್ತುಗಳು : ಉದಾ : ಕಲ್ಲು, ಹುಣಸೆ ಬೀಜ, ಗಜ್ಜುಗ, ಕಡ್ಡಿಗಳು, ಎಲೆಗಳು, ಸಸ್ಯಗಳು, ಪೌಡರ್ ಡಬ್ಬಿಗಳು, ಖಾಲಿ ಇಂಜೆಕ್ಷನ್ ಟ್ಯೂಬ್‌ಗಳು, ಸಿರಂಜ್‌ಗಳು, ಇತ್ಯಾದಿ.

ಆ. ಕಡಿಮೆ ವೆಚ್ಚದಿಂದ ತಯಾರಿಸಿದ ವಸ್ತುಗಳು : ಉದಾ :– ಮಿಂಚು ಪಟ್ಟಿಗಳು, ರಟ್ಟಿನಲ್ಲಿ ತಯಾರಿಸಿದ ಆಕೃತಿಗಳು, ಅಭ್ಯಾಸದ ಹಾಳೆಗಳು ಇತ್ಯಾದಿ.

೨. **ಮಾರುಕಟ್ಟೆಯಲ್ಲಿ ದೊರೆಯುವ ಉಪಕರಣಗಳು ( ಶಾಲೆಯಲ್ಲಿನ ಸೌಲಭ್ಯ)**

ಪ್ರಯೋಗಾಲಯದ ವಸ್ತುಗಳು, ಗ್ಲೋಬ್, ಛಾರ್ಟುಗಳು ; ನಕ್ಷೆಗಳು, ಎಲೆಕ್ಟ್ರಾನಿಕ್ ಉಪಕರಣಗಳು ಇತ್ಯಾದಿ.

೩. **ಶಾಲೆಯ ಪರಿಸರದಲ್ಲಿರುವ ಸಂಪನ್ಮೂಲಗಳು**

ಕೆರೆ, ನದಿ, ಹಳ್ಳ, ಗುಡ್ಡ, ಗಿಡ–ಮರ, ಪ್ರಾಣಿ ಪಕ್ಷಿ, ಶಿಲೆ – ಖನಿಜ, ಭೂದೃಶ್ಯ, ಕಾರ್ಖಾನೆ, ಆಸ್ಪತ್ರೆ, ಬ್ಯಾಂಕ್, ಪೋಸ್ಟಾಫೀಸು ಇತ್ಯಾದಿ.

✓ **ಸೇತುಬಂಧ :**

ಶಾಲೆ ಪ್ರಾರಂಭವಾದ ತರುವಾಯ ಸುಮಾರು 10 ರಿಂದ 15 ದಿನಗಳವರೆಗೆ ಈ ಕಾರ್ಯಕ್ರಮ ಎಲ್ಲಾ ಶಾಲೆಗಳಲ್ಲಿ ನಡೆಯುತ್ತದೆ. ಇದು ಕೆ.ಜಿ.ಬಿ.ವಿ. ಶಾಲೆಗಳಿಗೂ ಅನ್ವಯಿಸುತ್ತದೆ. ಹಿಂದಿನ ವರ್ಷ ಕಲಿತ ವಿಷಯಗಳಲ್ಲಿ ಮಕ್ಕಳಿಗೆ ಪರಿಹಾರ ಬೋಧನೆಯನ್ನು ಕೈಗೊಳ್ಳಬೇಕು. ಸೇತುಬಂಧ 03 ಹಂತಗಳಲ್ಲಿ ನಡೆಯುತ್ತದೆ.

– ನೈದಾನಿಕ ಪರೀಕ್ಷೆ

– ಪರಿಹಾರ ಬೋಧನೆ

– ಸಾಫಲ್ಯ ಪರೀಕ್ಷೆ

**ನೈದಾನಿಕ ಪರೀಕ್ಷೆ :**

ನೈದಾನಿಕ ಪರೀಕ್ಷೆಯನ್ನು ವಿದ್ಯಾರ್ಥಿಯ ಕಲಿಕೆಯ ಕೊರತೆಗಳನ್ನು ಗುರುತಿಸಲು ನೀಡಲಾಗುತ್ತದೆ. ಆದ್ದರಿಂದ ಈ ಪರೀಕ್ಷೆ ಸೆಮಿಸ್ಟರ್ ಪರೀಕ್ಷೆಗಿಂತ ವಿಸ್ತೃತವಾಗಿದೆ ಎನ್ನುವುದನ್ನು ಗಮನಿಸಬೇಕು. ಸೆಮಿಸ್ಟರ್ ಪರೀಕ್ಷೆಯ ಉದ್ದೇಶ – ಮಗು ಕಲಿತಿರುವುದೆಷ್ಟು – ಉತ್ತೀರ್ಣತೆ ನೀಡಬಹುದೇ ಎಂಬ ಅಂಶಗಳು ಪ್ರಧಾನವಾಗುತ್ತವೆ. ನೈದಾನಿಕ ಪರೀಕ್ಷೆಯಲ್ಲಿ ಕಲಿವಿನ ಕೊರತೆ/ಕಂದರಗಳನ್ನು ಗುರುತಿಸಬೇಕಿರುವುದರಿಂದ ಪರೀಕ್ಷೆಯ ಸಾಧನಗಳ ಸ್ವರೂಪ ಮತ್ತು ಸಂಖ್ಯೆ ವಿಸ್ತಾರವಾಗಿರುತ್ತದೆ.

ಪ್ರತಿ ಪರಿಕಲ್ಪನೆಯನ್ನು ಮಗು ತಿಳಿದಿದೆಯೇ ಇಲ್ಲವೇ ಎಂಬ ಕುರಿತು ತಿಳಿಯಬೇಕಿರುತ್ತದೆ. ಹಾಗಾಗಿ ಪರೀಕ್ಷೆಯ ಸಮಯ ಕೂಡಾ ಹೆಚ್ಚಿಗೆ ಇರುತ್ತದೆ. ಪ್ರಶ್ನೆಗಳನ್ನು ಕೇಳುವಾಗ ಪರಿಕಲ್ಪನೆಯ ವಿವಿಧ ಆಯಾಮಗಳ ತಿಳುವಳಿಕೆ ಇದೆಯೇ ಎಂದು ತಿಳಿಯಲು ಸಾಧ್ಯವಾಗುವ ಪ್ರಶ್ನೆಗಳನ್ನು ಕೇಳುವುದು ಯುಕ್ತ. ಉದಾಹರಣೆಗೆ –

- ನವೀಕರಣಗೊಳ್ಳುವ ಶಕ್ತಿಯ ಮೂಲಗಳು ಯಾವುವು?
- ಅವುಗಳಿಗೆ ಉದಾಹರಣೆ ಕೊಡಿ
- ಏಕೆ ಅವುಗಳನ್ನು ನವೀಕರಣಗೊಳ್ಳುವ ಶಕ್ತಿಯ ಮೂಲಗಳೆನ್ನುತ್ತಾರೆ ?

ಇಲ್ಲಿ ಕೇವಲ ಸ್ಮರಣೆಯೇ ಅಲ್ಲದೆ ಮಗು ವಿಶ್ಲೇಷಣಾತ್ಮಕವಾದ ಅಥವಾ ಅನ್ವಯನ ಮಾಡುವ ಹಂತ ತಲುಪಿದೆ ಎನ್ನುವುದನ್ನು ಸೂಚಿಸುತ್ತದೆ. ಪರೀಕ್ಷೆಯ ನಂತರ (ಲಿಖಿತ/ಮೌಖಿಕ) ಕಲಿಕೆಯ ಕೊರತೆಯ ಕ್ಷೇತ್ರಗಳನ್ನು ಅಧ್ಯಾಪಕರು ಗುರುತಿಸಿ – ಪರಿಹಾರ ಯೋಜನೆಯನ್ನು ಯೋಚಿಸಬೇಕು. ಕೆ.ಎಸ್.ಕ್ಯೂ.ಎ.ಓ. ಫಲಿತಾಂಶಗಳನ್ನು ಕೂಡ ಕಲಿಕೆಯ ಕೊರತೆ ಗುರುತಿಸಲು ಬಳಸಬಹುದು.

**ಪರಿಹಾರ ಬೋಧನೆ (ಚಿಕಿತ್ಸೆಯ ಹಂತ)**

ಪರಿಹಾರ ಬೋಧನೆ – "ರೋಗಕ್ಕೆ ಯುಕ್ತವಾದ ಚಿಕಿತ್ಸೆ ಕೊಡು ' ಎಂಬಂತೆ ಇದು ಮರು ಬೋಧನೆ ಅಲ್ಲ. ಕೊರತೆಯನ್ನು ಅನುಸರಿಸಿ ಕಲಿಕೆಯನ್ನು ವೈಯಕ್ತೀಕರಣಗೊಳಿಸುವುದಾಗಿದೆ.

**ಪರಿಹಾರ ಬೋಧನೆ**

- ಸ್ವಯಂ ಕಲಿಕೆ
- ಮುಖಾಮುಖಿ
- ಸರಳ ಉದಾಹರಣೆ ಕೊಡುವುದು.
- ಮೂರ್ತ ಅನುಭವಗಳ ಹೋಲಿಕೆಗಳನ್ನು ನೀಡುವುದು.
- ಸಹಕಾರಿ ಚಟುವಟಿಕೆಗಳನ್ನು ಕೈಗೊಳ್ಳುವುದು.
- ಪುನರ್ಬಲನ, ಅಭ್ಯಾಸ, ಮನೆಗೆಲಸ – ನಿರಂತರ ತಿದ್ದುವಿಕೆ.
- ಸಮೂಹ ಬೋಧನೆ.
- ಸಹಕಾರಿ ಕಲಿಕೆ.
- ಪೋಷಕರಿಂದ ಸಹಾಯ.

ಸೇತುಬಂಧ ಅವಧಿಯಲ್ಲಿ ಪರಿಹಾರ ಬೋಧನೆಯು ಇಡೀ ದಿನ ನಡೆಯುತ್ತದೆ. ಇದನ್ನು ಘಟಕ ಬೋಧನೆಯ ನಂತರದ ಪರಿಹಾರ ಬೋಧನೆಗೆ ಅಥವಾ ಕಲಿಕೆಯಲ್ಲಿ ಹಿಂದುಳಿದಿರುವವರಿಗೆ ನಡೆಸುವ ಒಂದು ಗಂಟೆ ಅಧಿಕ ಬೋಧನೆಗಾಗಲೀ ಹೋಲಿಸಬೇಡಿ. ಸೇತುಬಂಧ ಸಂದರ್ಭದಲ್ಲಿ ಸರಿಯಾದ ಕೆಲಸವಾದರೆ ಅನೇಕ ಮಕ್ಕಳಿಗೆ ಒಂದು ಗಂಟೆಯ ಅಧಿಕ ಪರಿಹಾರ ಬೋಧನೆ ಮಾಡುವ ಅಗತ್ಯ ಕಂಡು ಬರುವುದಿಲ್ಲ. ಈ ಹಂತದ ಬಳಿಕ ಸಾಫಲ್ಯ ಪರೀಕ್ಷೆ ನಡೆಸುವುದು.

**– ಸಾಫಲ್ಯ ಪರೀಕ್ಷೆ :**

ಸಾಫಲ್ಯ ಪರೀಕ್ಷೆಯೂ ಕೂಡ ನೈದಾನಿಕ ಪರೀಕ್ಷೆಯಂತೆಯೆ ವಿಸ್ತೃತವಾಗಿ ಇರುತ್ತದೆ. ಸಾಫಲ್ಯ ಪರೀಕ್ಷೆಯಲ್ಲಿಯೂ ಕೂಡ ಕಲಿಕೆಯ ಕೊರತೆಗಳನ್ನು ಗುರುತಿಸಬೇಕು. ಇಲಾಖೆ ನೀಡುವ ಸೂಚನೆಯನುಸಾರ ಕೊರತೆಯ ಕ್ಷೇತ್ರಗಳಲ್ಲಿ ಪರಿಹಾರ ಬೋಧನೆ ಮಾಡುವುದು.

**ಗಮನಿಸಿ :** 3 ಹಂತದಲ್ಲಿ ಪರಿಹಾರ ಬೋಧನೆಯನ್ನು ಮಾಡುತ್ತಿರುವಿರಿ.

- ಸೇತುಬಂಧದ ಅವಧಿಯ ಪರಿಹಾರ ಬೋಧನೆ (ಶಾಲೆಯ ಇಡೀ ಅವಧಿ)
- ಘಟಕ ಅಥವಾ ಸಾಮರ್ಥ್ಯ ಪರೀಕ್ಷೆಯ ನಂತರ ಶಾಲಾ ಅವಧಿಯಲ್ಲಿ ಕೈಗೊಳ್ಳುವ ಪರಿಹಾರ ಬೋಧನೆ (ಘಟಕ ಬೋಧನೆ = ಘಟಕದ ಮುಖ್ಯಾಂಶಗಳ ಅವಲೋಕನ ; ಬೋಧನೆ; ಪುನರವಲೋಕನ ಅವಧಿ ; ಘಟಕ ಪರೀಕ್ಷೆ ; ಪರಿಹಾರ ಬೋಧನೆ
- ಕಲಿಕೆಯಲ್ಲಿ ತೀರಾ ಹಿಂದುಳಿದ ವಿದ್ಯಾರ್ಥಿಗಳಿಗೆ ಶಾಲೇತರ ಅವಧಿಯಲ್ಲಿ ಅಥವಾ ಒಂದು ಅವಧಿಯ ಅಧಿಕ ಬೋಧನೆ/ಪರಿಹಾರ ಬೋಧನೆ.

✓ **ಪರಿಹಾರ ಬೋಧನೆ ಮತ್ತು ಚಿಣ್ಣರ ಅಂಗಳದ ಸಂಘಟನೆ**

ಸೇತುಬಂಧ ಕಾರ್ಯಕ್ರಮದ ತರುವಾಯವೂ ನಿರೀಕ್ಷಿತ ಮಟ್ಟಕ್ಕೆ ಕಲಿಕೆಯಾಗದ ಮಕ್ಕಳಿಗೆ ಪರಿಹಾರ ಬೋಧನೆಯನ್ನು ಶಾಲೇತರ ಅವಧಿಯಲ್ಲಿ ಕೈಗೊಳ್ಳಬೇಕಾದ ಅಗತ್ಯವಿದೆ. ಯಾವ ವಿದ್ಯಾರ್ಥಿ ಯಾವ ಸಾಮರ್ಥ್ಯ ಅಥವಾ ವಿಷಯಾಂಶಗಳನ್ನು ಕಲಿತಿರುವುದಿಲ್ಲ ಎಂಬುದನ್ನು ಗುರುತಿಸಿ ಯಾವ ಚಟುವಟಿಕೆಯ ಮೂಲಕ ಇಂತಹ ವಿದ್ಯಾರ್ಥಿಗಳಿಗೆ ಕಲಿಸಬಹುದು; ಯಾವ ಅವಧಿಯೊಳಗೆ ಬೋಧಿಸಬಹುದು ಎಂಬ ಯೋಜನೆಯಲ್ಲಿ ತಯಾರಿಸಿ. ನಮೂನೆಯನ್ನು 08–09ನೇ ಸಾಲಿನ ಶಾಲಾ ಶೈಕ್ಷಣಿಕ ಯೋಜನೆ ಎಂಬ ಹೆಸರಿನಲ್ಲಿ ಈಗಾಗಲೇ ಬಳಸಿರುತ್ತೀರಿ. ಇದನ್ನೇ (ನಮೂನೆ 5(A)) ಈ ಬಾರಿಯೂ ಬಳಸಬಹುದು.

**ಕೆ.ಜಿ.ಬಿ.ವಿ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ನೀಡುತ್ತಿರುವುದು ನಿಮಗೆ ತಿಳಿದ ವಿಷಯವಾಗಿದೆ.**

**ಇಲ್ಲಿಗೆ ಬರುವ ಮಕ್ಕಳ ಶೈಕ್ಷಣಿಕ ಹಿನ್ನೆಲೆ 5ನೇ ತರಗತಿಯ ಮಟ್ಟಕ್ಕೆ ಸರಿದೂಗಲಾರದು.**

**ಸಾಮಾನ್ಯವಾಗಿ ಕಡಿಮೆ ಇರುವ ಅಥವಾ ಶೂನ್ಯವಿರುವ ಸಾಧ್ಯತೆಯೇ ಹೆಚ್ಚು. ಇಂತಹ ಮಕ್ಕಳು**

**6ನೇ ತರಗತಿಗೆ ಸೇರಿದರೆ ಕಲಿಕೆಯಲ್ಲಿ ಹಿನ್ನಡೆಯಾಗುವುದರ ಜೊತೆಗೆ ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಳೆದುಕೊಂಡು ಶಾಲೆ ತೊರೆಯುತ್ತಾರೆ. ಆದ್ದರಿಂದ ಇವರ ಅನುಕೂಲಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ಕೆ.ಜಿ.ಬಿ.ವಿಗಳಲ್ಲಿ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಸಮಸ್ಯೆಯನ್ನು ಎರಡು ಬಗೆಯಲ್ಲಿ ಪರಿಹರಿಸಬಹುದು.**

ಬೇಸಿಗೆ ರಜೆಯಲ್ಲಿ ನಡೆಯುವ ಚಿಣ್ಣರ ಅಂಗಳ ಕೇಂದ್ರಕ್ಕೆ ಅರ್ಹ ಹೆಣ್ಣುಮಕ್ಕಳನ್ನು ದಾಖಲು ಮಾಡಲು ಎಲ್ಲಾ ಬಗೆಯ ಕ್ರಮಗಳನ್ನು ಮಾಡಬೇಕು. ಚಿಣ್ಣರ ಅಂಗಳದ ಪಠ್ಯಕ್ರಮವು 5ನೇ ತರಗತಿಯ ಕಲಿಕಾ ಮಟ್ಟಕ್ಕೆ ಹೊಯ್ ಕೈಯ್ಯಾಗಿದೆ.

**ಗಮನಿಸಿ:** ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳೂ, ಬ್ಲಾಕ್ ಜೆಂಡರ್ ಕೋ ಆರ್ಡಿನೇಟರ್, ಕ್ಲಸ್ಟರ್ ಜೆಂಡರ್ ಕೋ ಆರ್ಡಿನೇಟರುಗಳು ಇಂತಹ ಮಕ್ಕಳನ್ನು ಚಿಣ್ಣರ ಅಂಗಳಕ್ಕೆ ಸೇರಿಸಲು ಕ್ರಮ ಮಾಡುವಂತೆ ವಿಶೇಷಾಧಿಕಾರಿಯವರು ಹಿರಿಯ ಅಧಿಕಾರಿಗಳ ಗಮನಕ್ಕೆ ಆಗಿಂದಾಗ್ಗೆ ಪ್ರಸ್ತಾಪಿಸಬೇಕು

ಹೀಗೆ ಬೇಸಿಗೆಯ ಚಿಣ್ಣರ ಆಂಗಳದ ಮೂಲಕ ಬಂದ ಮಕ್ಕಳನ್ನು ಕೆ.ಜಿ.ಬಿ.ವಿ. ಶಾಲೆಗಳಿಗೆ ಸೇರ್ಪಡೆ ಮಾಡುವುದರಿಂದ 6ನೇ ತರಗತಿಯ ಪಠ್ಯಕ್ರಮದ ಕಾರ್ಯಾಚರಣೆಗೆ ಸುಲಭವಾಗಿ ಒಗ್ಗುತ್ತಾರೆ. ಇದು ಮೊದಲನೆಯ ಬಗೆ.

ಎರಡನೆಯದಾಗಿ ಶಾಲೆಯಿಂದ ಹೊರಗುಳಿದ ಮಗು ನೇರವಾಗಿ ಕೆ.ಜಿ.ಬಿ.ವಿ. ಪ್ರವೇಶ ಪಡೆಯುವ ಪ್ರಕರಣ. ಜೊತೆಗೆ ಬೇಸಿಗೆ ಚಿಣ್ಣರ ಅಂಗಳದ ಮೂಲಕ ಬಂದ ಎಲ್ಲಾ ಮಕ್ಕಳು ಚಿಣ್ಣರ ಅಂಗಳ ಪಠ್ಯದ ಎಲ್ಲಾ ವಿಷಯವನ್ನು ಕಲಿತಿದ್ದಾರೆ ಎಂದು ಹೇಳಲಾಗದು. ಅವರ ಕಲಿಕೆಯಲ್ಲಿಯೂ ಕೆಲವು ಕೊರತೆಗಳು ಇರಬಹುದು. ಇಂತಹ ಮಕ್ಕಳನ್ನು 6ನೇ ತರಗತಿಯಲ್ಲಿಟ್ಟು ಬೋಧಿಸುವುದರಿಂದ –ಅಂತಿಮವಾಗಿ ಇಂತಹ ಮಕ್ಕಳಲ್ಲಿ ಅನೇಕರು ಶಾಲೆ ತೊರೆಯುತ್ತಾರೆ. ಈ ಸಮಸ್ಯೆಯನ್ನು ನೀಗಲು ಚಿಣ್ಣರ ಅಂಗಳ ಕಾರ್ಯಕ್ರಮವನ್ನು ಕೆ.ಜಿ.ಬಿ.ವಿ. ಶಾಲೆಯಲ್ಲಿಯು ಸಂಘಟಿಸಬೇಕಾದ ಅಗತ್ಯ ಉಂಟಾಗುತ್ತದೆ.

**ಗಮನಿಸಿ :** ಎಲ್ಲಾ ಮಕ್ಕಳು 6ನೇ ತರಗತಿ ಪಠ್ಯಾಂಶಗಳನ್ನು ಕಲಿಯಬಲ್ಲರು ಎಂಬ ವಿಶ್ವಾಸ ಅಧ್ಯಾಪಕ ವರ್ಗಕ್ಕೆ ಬಂದಲ್ಲಿ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ಕೆ.ಜಿ.ಬಿ.ವಿ. ಶಾಲೆಯಲ್ಲಿ ನಡೆಸಬೇಕಾಗಿಲ್ಲ.

ಇಂತಹ ಮಕ್ಕಳಿಗೆ 30ರಿಂದ 45ದಿನಗಳವರೆಗೆ ಚಿಣ್ಣರ ಅಂಗಳ ಕಾರ್ಯಕ್ರಮವನ್ನು ಜೂನ್ ಮತ್ತು ಜುಲೈ ತಿಂಗಳಿನಲ್ಲಿ ನಡೆಸುವುದು. ಇದಕ್ಕೆ ಬೇಕಾದ ಸಾಹಿತ್ಯವು ಚಿಣ್ಣರ ಅಂಗಳದ ಬೋಧಕರ ಕೈಪಿಡಿ ಮತ್ತು ಚಿಣ್ಣರ ಅಂಗಳ ಪಠ್ಯಸಹಿತ ಅಭ್ಯಾಸ ಪುಸ್ತಕಗಳಲ್ಲಿ ದೊರೆಯುತ್ತದೆ. ಪ್ರಸ್ತುತ ತರಬೇತಿಯನ್ನು ಕೆ.ಜಿ.ಬಿ.ವಿ. ಶಿಕ್ಷಕರ ಕೈಪಿಡಿ ಕುರಿತಂತೆ ತರಬೇತಿಯನ್ನು ನಡೆಸುವಾಗಲೇ 02 ದಿನಗಳವರೆಗೆ ನೀಡಲು ತರಬೇತಿಯ ವಿನ್ಯಾಸವನ್ನು ಸಿದ್ದಗೊಳಿಸಲಾಗುತ್ತದೆ.

✓ **ಕಲಿಕೆಯ ಕನಿಷ್ಠ ಮಟ್ಟದ ಪರಿಚಯ :**

ಆಯಾ ತರಗತಿಗೆ ನಿಗದಿಪಡಿಸಿದ ವಿಷಯಗಳ ಭಾಗವನ್ನು ಪ್ರತಿ ಮಗುವೂ ಪರಿಪೂರ್ಣವಾಗಿ ಕಲಿಯಬೇಕು. ತನ್ನ ನಿಜಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕಲಿಕೆಯ ಜ್ಞಾನವನ್ನು ಬಳಸುವ ಕೌಶಲವನ್ನು ಮಗು ಪಡೆಯಬೇಕು. ಪ್ರತಿ ವಿಷಯದ ಕಲಿಕೆಯ ಉದ್ದೇಶಗಳು ಮಕ್ಕಳಲ್ಲಿ ಸಂಪೂರ್ಣವಾಗಿ ಸಾಧಿತವಾಗಬೇಕು. ಪ್ರತಿ ವಿಷಯದ ಮೌಲ್ಯಗಳು ಮಕ್ಕಳಲ್ಲಿ ಮೇಳೈಸಬೇಕು. ಅಂತಹ ಕಲಿಕೆ ಗುಣಾತ್ಮಕ ಕಲಿಕೆ ಎನಿಸಿಕೊಳ್ಳುತ್ತದೆ.

ಉದಾ:
- ಕಲಿತ ಭಾಷೆಯಲ್ಲಿ ಮಕ್ಕಳಲ್ಲಿ ನಿರರ್ಗಳವಾಗಿ ಮಾತಾಡುವಂತಾಗಬೇಕು.

  ಆ ಭಾಷೆಯನ್ನು ಸುಂದರವಾಗಿ, ಶುದ್ಧವಾಗಿ, ತಪ್ಪಿಲ್ಲದಂತೆ ಬರೆಯುವಂತಾಗಬೇಕು.
- ನಿತ್ಯ ಜೀವನದಲ್ಲಿಯ ವ್ಯವಹಾರಿಕ ಲೆಕ್ಕಗಳನ್ನು ಸುಲಭವಾಗಿ ಬಿಡಿಸಲು ಗಣಿತ ಕಲಿಕೆಯಜ್ಞಾನವನ್ನು ಬಳಸುವಂತಾಗಬೇಕು.
- ವಿಜ್ಞಾನದ ಕಲಿಕೆಯಿಂದ ಮೂಢ ನಂಬಿಕೆಗಳು ತೊಲಗಿ ವೈಜ್ಞಾನಿಕ ಮನೋಭಾವನೆಗಳು ಮಕ್ಕಳಲ್ಲಿ ಮೈಗೂಡಬೇಕು. ಪರಿಸರದ ಬಗ್ಗೆ ಕಾಳಜಿ ಮೂಡುವಂತಾಗಬೇಕು.

– ಸಮಾಜ ವಿಜ್ಞಾನದ ಕಲಿಕೆಯಿಂದ ಉತ್ತಮ ನಾಗರಿಕರಾಗಿ ಬಾಳುವ ಕೌಶಲ ಮಗುವಿನಲ್ಲಿ ಬೆಳೆಯಬೇಕು.

**ಕಲಿಕೆಯ ಕನಿಷ್ಠ ಮಟ್ಟಗಳ ಪರಿಕಲ್ಪನೆ**

ಇಲ್ಲಿ ಕಲಿಕೆ, ಕನಿಷ್ಠ ಮತ್ತು ಮಟ್ಟಗಳು ಎಂಬ ಮೂರು ಪದಗಳಿವೆ.

- ವಿದ್ಯಾರ್ಥಿಯ ಜ್ಞಾನ, ಅರ್ಥಗ್ರಹಣ, ಅಭಿವ್ಯಕ್ತಿ ಕೌಶಲ, ಅನ್ವಯ ಕೌಶಲ, ಮೌಲ್ಯಗಳು, ಮನೋಭಾವ ಮತ್ತು ನಡತೆಗಳಲ್ಲಿ ಅಪೇಕ್ಷಿತ ಬದಲಾವಣೆ ಇವೆಲ್ಲವುಗಳ ಒಟ್ಟು ಮೊತ್ತವೆ ಕಲಿಕೆ.
- ಪ್ರತಿಯೊಬ್ಬ ವಿದ್ಯಾರ್ಥಿಯು ನಿರ್ದಿಷ್ಠ ಅವಧಿಯಲ್ಲಿ ಸಾಧಿಸಲೇಬೇಕಾದ ಒಟ್ಟು ಸಾಮರ್ಥ್ಯಗಳನ್ನು ಕನಿಷ್ಠ ಎಂಬ ಪದ ಸೂಚಿಸುತ್ತದೆ.
- ವಿದ್ಯಾರ್ಥಿಯ ಸಾಧನೆಯ ಮಟ್ಟವನ್ನು ಮಟ್ಟಗಳು ಅಥವಾ ಹಂತಗಳು ಎಂಬ ಪದ ಸೂಚಿಸುತ್ತದೆ.

ಎಲ್ಲ ಮಕ್ಕಳೂ ಪ್ರಭುತ್ವ ಮಟ್ಟದಲ್ಲಿ ಸಾಧಿಸಲೇಬೇಕಾದ ಅತ್ಯಂತ ಅಗತ್ಯದ ಸಾಮರ್ಥ್ಯಗಳನ್ನು ಕಲಿಕೆಯ ಕನಿಷ್ಠ ಮಟ್ಟಗಳು ಎಂದು ಹೇಳಬಹುದು.

ಪ್ರತಿಯೊಂದು ಮಗುವು ಜಾತಿ, ಮತ, ಲಿಂಗಬೇಧವಿಲ್ಲದೇ ಯಾವುದೇ ತರಗತಿಯ ಅಥವಾ ಶಿಕ್ಷಣ ಹಂತದ ಕೊನೆಯಲ್ಲಿ ಸಾಧಿಸಬಹುದೆಂದು ನಿರೀಕ್ಷಿಸಲಾದ ಕಲಿಕೆಯ ಸಾಮರ್ಥ್ಯಗಳ ನೈಪುಣ್ಯತೆಯೇ ಕನಿಷ್ಠ ಕಲಿಕಾ ಮಟ್ಟ.

**ಕ್ಷೇತ್ರ ಎಂದರೇನು?**

ಪ್ರತಿ ವಿಷಯದಲ್ಲೂ ಕಲಿಯಬೇಕಾದ ಅಂಶಗಳು ವಿಶಾಲವಾಗಿವೆ. ಹೀಗೆ ವಿಶಾಲವಾದ ವಿಷಯವನ್ನೂ ಇಡಿಯಾಗಿ ತೆಗೆದುಕೊಂಡು ಒಮ್ಮೆಲೆ ಅಭ್ಯಾಸ ಮಾಡುವುದು ಕಷ್ಟ. ಆದ್ದರಿಂದ ಪ್ರತಿ ವಿಷಯವನ್ನು ಕಲಿಯಲು ಸುಲಭವಾಗುವಂತೆ ಹಲವು ಪ್ರಮುಖ ವಿಭಾಗಗಳಾಗಿ ವಿಂಗಡಿಸಿದ್ದಾರೆ. ಈ ಪ್ರಮುಖ ವಿಭಾಗಗಳೇ ಕ್ಷೇತ್ರಗಳು.

**ಕ್ಷೇತ್ರಗಳು ಯಾವುವು?**

**ಭಾಷೆ**

1) ಆಲಿಸುವುದು
2) ಮಾತನಾಡುವುದು
3) ಓದುವುದು
4) ಬರೆಯುವುದು

**ಗಣಿತ**

1) ಪೂರ್ಣಾಂಕಗಳು ಮತ್ತು ಸಂಖ್ಯಾವಾಚಕಗಳು
2) ಗಣಿತದ ಮೂಲಕ್ರಿಯೆಗಳು
3) ಹಣ, ಉದ್ದ, ತೂಕ, ಗಾತ್ರ, ಕ್ಷೇತ್ರ ಮತ್ತು ಕಾಲದ ಮಾನಗಳು
4) ಭಿನ್ನರಾಶಿ ಮತ್ತು ದಶಮಾಂಶಗಳು
5) ರೇಖಾಕೃತಿಗಳು ಮತ್ತು ಸ್ಥಳ ಸಂಬಂಧಗಳ ತಿಳುವಳಿಕೆ

**ಪರಿಸರ ಅಧ್ಯಯನ**

1) ನನ್ನ ಜಗತ್ತಿನಲ್ಲಿ ನಾನು ಮತ್ತು ಇತರರು
2) ನಮ್ಮ ದೇಹ, ಪೌಷ್ಠಿಕತೆ ಮತ್ತು ಆರೋಗ್ಯ
3) ನಮ್ಮ ಸುತ್ತಲಿನ ಜಗತ್ತು
4) ಕಾಲ ಮತ್ತು ದೂರ
5) ನೈಸರ್ಗಿಕ ಸಂಪನ್ಮೂಲಗಳು

**ಸಾಮರ್ಥ್ಯ ಎಂದರೇನು?**

ಪ್ರತಿ ಕ್ಷೇತ್ರವೂ ವಿಸ್ತಾರವಾದುದೆ, ಕ್ಷೇತ್ರದ ಪಟ್ಟಿಯನ್ನು ಗಮನಿಸಿದರೆ ಅರ್ಥವಾಗುತ್ತದೆ. ಆದ್ದರಿಂದ ಕಲಿಯಲು ಸುಲಭವಾಗುವಂತೆ ಪ್ರತಿ ಕ್ಷೇತ್ರವನ್ನು ಇನ್ನೂ ಚಿಕ್ಕ ಚಿಕ್ಕ ಕಲಿಕೆಯ ಅಂಶಗಳಾಗಿ ವಿಂಗಡಿಸಿದ್ದಾರೆ. ಈ ಚಿಕ್ಕ ಕಲಿಕೆಯ ಅಂಶಗಳೇ ಸಾಮರ್ಥ್ಯಗಳು.

**ಗಮನಿಸಿ :** ಕ್ಷೇತ್ರ ಮತ್ತು ಸಾಮರ್ಥ್ಯಗಳ ಹೆಚ್ಚಿನ ವಿವರಗಳಿಗೆ ಕನಿಷ್ಠ ಕಲಿಕಾ ಮಟ್ಟದ ಹೊತ್ತಿಗೆ ನೋಡಿ.

✓ **ಮೌಲ್ಯಮಾಪನ**

ಮೌಲ್ಯಮಾಪನ ಒಂದು ನಿರಂತರವಾದ ಪ್ರಕ್ರಿಯೆ, ಉದ್ದೇಶಗಳು ಮತ್ತು ಅವುಗಳ ಸಾಧನೆ ; ಕಲಿಕೆಯ ವಿಷಯಗಳು, ಕಲಿಕೆಯ ಅನುಭವಗಳು ಮತ್ತು ಮೌಲ್ಯಮಾಪನದ ಸಾಧನಗಳ ಸುಧಾರಣೆಯ ನಿಟ್ಟಿನಲ್ಲಿ ನಡೆಯುವ ಪ್ರಕ್ರಿಯೆ ಮೌಲ್ಯಮಾಪನ. ಸುಧಾರಣೆ ಮೌಲ್ಯಮಾಪನದ ಪ್ರಮುಖವಾದ ಗುರಿಯೇ ವಿನಃ ಕೇವಲ ಮಗುವಿನ ಕಲಿಕೆಯ ಮಟ್ಟವನ್ನು ಅಳೆಯುವುದು ನಮ್ಮ ಗುರಿಯಲ್ಲ. ಬೋಧನೆ –> ಮೌಲ್ಯಮಾಪನ –> ಮರು ಬೋಧನೆ –> ಮರು ಮೌಲ್ಯಮಾಪನ ಹೀಗೆ ಮಗು ನಿರೀಕ್ಷಿತ ಮಟ್ಟ ಸಾಧಿಸುವವರೆಗೆ ಈ ಕ್ರಿಯೆ ನಡೆಯುತ್ತದೆ.

**ಮೌಲ್ಯಮಾಪನ ಏಕೆ ಬೇಕು?**

ಮಗುವಿನ ಪೂರ್ವಜ್ಞಾನವನ್ನು ಅರಿಯಲು

ಮಕ್ಕಳ ಕಲಿಕೆಯ ಮಟ್ಟವನ್ನು ತಿಳಿಯಲು

ನಿಶ್ಚಿತ ಅವಧಿಯೊಳಗೆ ನಡೆದ ಕಲಿಕೆ ಎಷ್ಟರ ಮಟ್ಟಿಕೆ ನಡೆದಿದೆ ಎಂಬುದನ್ನರಿಯಲು

ಮಗುವಿನ ಪ್ರಗತಿಯದಾಖಲೆ, ಪೋಷಕರಿಗೆ ಮಾಹಿತಿ ನೀಡಲು

ಬೋಧನೆ (ಕಲಿಕೆ)ಯಲ್ಲುಂಟಾದ ಯಶಸ್ಸು/ ಕೊರತೆ/ ಬದಲಾವಣೆ ಗುರುತಿಸಿಕೊಳ್ಳಲು. ಪರಿಹಾರ ಕಾರ್ಯಕೈಗೊಳ್ಳಲು

ಬಹುಮಟ್ಟದ ಮಕ್ಕಳನ್ನು ಗುರುತಿಸಲು, ಅವರಿಗೆ ಬೇಕಾದ ಚಟುವಟಿಕೆ ರೂಪಿಸಲು

ಹೊಸ ಕಲಿಕೆಯ ತಂತ್ರಗಳನ್ನು ಅಳವಡಿಸಿಕೊಳ್ಳಲು

ಪುನರಾವರ್ತಿಸಬೇಕಾದ ಅಂಶ ಅರಿಯಲು

**ಗಮನಿಸಿ:** ಮೌಲ್ಯಮಾಪನ 02 ಕೆಲಸಗಳನ್ನು ನಿರ್ವಹಿಸುತ್ತದೆ. (ಮೇಲಿನ ಅಂಶಗಳನ್ನು ಗಮನಿಸಿದಾಗ) ಅವು ಯಾವುವು ಚರ್ಚಿಸಿ– ತೀರ್ಮಾನಿಸಿ.

**ಮೌಲ್ಯಮಾಪನ ಹೇಗಿರಬೇಕು ?**

- ಪ್ರಗತಿದಾಯಕ ಸ್ವಭಾವದ್ದಾಗಿರಬೇಕು.
- ಮೌಲ್ಯಮಾಪನವು ನಿರಂತರ ಮತ್ತು ವ್ಯಾಪಕವಾಗಿರಬೇಕು.
- ಕಲಿಕಾ ಚಟುವಟಿಕೆಯಂತೆಯೇ ಮೌಲ್ಯಮಾಪನ ಚಟುವಟಿಕೆಯು ಸಂತಸದಾಯಕವಾಗಿರಬೇಕು.
- ಮೌಲ್ಯಮಾಪನವು ಅನುಕ್ರಮವಾಗಿರಬೇಕು.
- ಸಾಧ್ಯವಾದಷ್ಟು ಸಾಮರ್ಥ್ಯಗಳನ್ನು ಒಟ್ಟೊಟ್ಟಿಗೆ ಮೌಲ್ಯಮಾಪನ ಮಾಡುವಂತೆ ಇರಬೇಕು.
- ಮಕ್ಕಳಿಗೆ ಗೊತ್ತಾಗದಂತೆಯೇ ಮೌಲ್ಯಮಾಪನವನ್ನು ನಡೆಸಬೇಕು.
- ವಿದ್ಯಾರ್ಥಿಯ ಸಾಧನೆಯನ್ನು ಉತ್ತಮ ಪಡಿಸಲು ಹೆಚ್ಚು–ಒತ್ತು ಕೊಡುವಂತಿರಬೇಕೆ ವಿನಃ ಕಲಿಕೆಯನ್ನು ಮಾತ್ರ ಅಳೆಯುವಂತೆ ಇರಬಾರದು.
- ಭಯ ಗೊಂದಲವನ್ನುಂಟು ಮಾಡುವಂತಿರಬಾರದು.
- ಮಕ್ಕಳ ಆತ್ಮ ವಿಶ್ವಾಸವನ್ನು ಕುಗ್ಗಿಸುವ ಅಥವಾ ಕಲಿಕೆಯನ್ನು ಕುಂಠಿತಗೊಳಿಸುವಂತಿರಬಾರದು.
- ಮಕ್ಕಳ ತಪ್ಪುಗಳನ್ನು ಹುಡುಕದೆ ಅಂಕೆಗಳ ಅರ್ಥದಲ್ಲಿ ಅಳೆದು ಹಣೆಪಟ್ಟಿ ಹಚ್ಚುವ ಪ್ರಕ್ರಿಯೆ ಯಾಗಿರಬಾರದು.

**ಮೌಲ್ಯಮಾಪನದ ಆಧಾರ ಸ್ತಂಭಗಳು**

- ಉದ್ದೇಶಗಳು
- ಕಲಿಕೆಯ ಅನುಭವಗಳು ಮತ್ತು ಕಲಿಕೆಯ ಫಲಗಳು.
- ಸಾಧನೆ ಕಂಡು ಹಿಡಿಯುವ ಪರೀಕ್ಷಾ ತಂತ್ರಗಳು

**ಗಮನಿಸಿ:** ಹೇಗೆ ಇವು ಆಧಾರಗಳಾಗಿವೆ– ಚರ್ಚಿಸಿ ತೀರ್ಮಾನಿಸಿ.

* **ಸಾಮರ್ಥ್ಯ ಆಧಾರಿತ ಮೌಲ್ಯಮಾಪನ**

ಕಲಿಕೆ ವಾತಾವರಣ ಸನ್ನಿವೇಶದಲ್ಲಿ ವಿದ್ಯಾರ್ಥಿಯ ವಿಷಯವಾರು ನಿಗದಿ ಪಡಿಸಿದ ಸಾಮರ್ಥ್ಯ ಅಥವಾ ಕಲಿವಿನ ಅಂಶಗಳನ್ನು ಎಷ್ಟರ ಮಟ್ಟಿಗೆ ತನ್ನದಾಗಿಸಿಕೊಂಡಿದ್ದಾನೆ ಎನ್ನುವುದನ್ನು ಶಿಕ್ಷಕರು ಅರಿಯುವುದೇ ಸಾಮರ್ಥ್ಯ ಆಧಾರಿತ ಮೌಲ್ಯಮಾಪನವಾಗಿರುತ್ತದೆ.

**ಸಾಮರ್ಥ್ಯ ಆಧಾರಿತ ಮೌಲ್ಯಮಾಪನದ ಗುರಿಗಳು**

– ವಿದ್ಯಾರ್ಥಿಗಳ ಪೂರ್ವಜ್ಞಾನ ಪರೀಕ್ಷೆ ಮಾಡುವುದು.

– ಕಲಿಸುವಿಕೆಯಲ್ಲಾದ ನ್ಯೂನತೆ ಅಥವಾ ಬೆಳವಣಿಗೆಯನ್ನು ಗುರುತಿಸುವುದು.

– ಕಲಿಕೆಯ ಪ್ರಕ್ರಿಯೆಯಲ್ಲಿ ಕಂಡು ಬರುವ ವಿವಿಧ ಹಂತದ ವಿದ್ಯಾರ್ಥಿಗಳನ್ನು ಗುರುತಿಸುವುದು.

– ಪುನರಾವರ್ತಿಸಬೇಕಾದ ಕಲಿಕೆಯ ಹಂತ/ ಸಾಮರ್ಥ್ಯವನ್ನು ಗುರುತಿಸುವುದು.

– ವಿದ್ಯಾರ್ಥಿಯ ಪ್ರಗತಿಯ ವಿವರಗಳನ್ನು ಪೋಷಕರಿಗೆ ಅರ್ಥೈಸುವುದು.

– ಸಾಮರ್ಥ್ಯದ ಬೆಳವಣಿಗೆ ಎಷ್ಟರಮಟ್ಟಿಗೆ ಆಗಿದೆ ಎನ್ನುವುದನ್ನು ಶಿಕ್ಷಕರು ಅವಲೋಕನ ಮಾಡುವುದು.

– ಕಿರಿಯ ಪ್ರಾಥಮಿಕ ಹಂತದಲ್ಲಿ ಪ್ರಭುತ್ವಮಟ್ಟದ ಸಾಮರ್ಥ್ಯದ ಗಳಿಕೆಗಾಗಿ ಹೆಚ್ಚು ಒತ್ತುಕೊಟ್ಟಿರುವುದರಿಂದ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಮತ್ತು ಮೌಲ್ಯಮಾಪನ ವಿಧಾನಗಳನ್ನು ಸ್ವಯಂ ಸೇವಕರು ಶಿಕ್ಷಕರು ರೂಪಿಸಿಕೊಳ್ಳಬೇಕು.

**ಸಾಮರ್ಥ್ಯ ಆಧಾರಿತ ಮೌಲ್ಯಮಾಪನದ ಸಾಧನಗಳು:**

– ಚಟುವಟಿಕೆಗಳು.

– ಲಿಖಿತ ಅಭ್ಯಾಸಕ್ಕೆ ಸಂಬಂಧಿಸಿದ ಅಭ್ಯಾಸದ ಹಾಳೆಗಳು

– ಚಿತ್ರಗಳು, ವಸ್ತುಗಳು ಮಿಂಚು ಫಲಕಗಳು (ಎಲ್ಲಾ ರೀತಿಯ ಕಲಿಕೆ ಉಪಕರಣಗಳು)

– ಮೌಖಿಕ ಅಭ್ಯಾಸಕ್ಕೆ ಸಂಬಂಧಿಸಿದ ಸಾಮಗ್ರಿಗಳು

– ವಿಷಯವಾರು ತರಗತಿಯಲ್ಲಿ ಸಿದ್ಧಪಡಿಸಿದ ಸಾಮರ್ಥ್ಯಗಳ ಪಟ್ಟಿ.

**ಮೌಲ್ಯಮಾಪನ ಮಾದರಿ:**

**ಉದಾ 1 :–** ಲಿಖಿತ ಸಾಮರ್ಥ್ಯಗಳ ಗುರುತಿಸುವಿಕೆಯ ಸಾಧನಗಳು.

– ಪದಗಳ ಚಿತ್ರಲೇಖನ ಬರವಣಿಗೆ

– ಚಿತ್ರಗಳ ಬರವಣಿಗೆ

– ಸಮೀಕ್ಷೆಯಿಂದ ಸಂಗ್ರಹಿಸಿದ ಮಾಹಿತಿಗಳ ಪಟ್ಟಿ ತಯಾರಿಕೆ.

– ಒಂದುವಸ್ತು. ಚಿತ್ರ, ವ್ಯಕ್ತಿ ಕುರಿತಂತೆ ಬರೆಯಲ್ಪಡುವ ಪುಟ್ಟ ಲೇಖನಗಳು

– ಪ್ರಶ್ನೋತ್ತರ ಮಾದರಿಗಳು

– ಭೂಪಟಗಳ ರಚನೆ ಮತ್ತು ಅದರಲ್ಲಿ ಸ್ಥಳಗಳನ್ನು ಗುರುತಿಸುವಿಕೆ.

– ಸರಳ ಪ್ರಯೋಗಗಳಿಂದ ಅರಿತ ತೀರ್ಮಾನಗಳು ಬರವಣಿಗೆ.

– ಅಭ್ಯಾಸ ಸಹಿತ ಪಠ್ಯದಲ್ಲಿನ ಹಾಳೆಗಳ ಬರವಣಿಗೆ ಇತ್ಯಾದಿ.

**ಉದಾ2:– ಮೌಖಿಕ ಸಾಮರ್ಥ್ಯಗಳ ಗುರುತಿಸುವಿಕೆಯ ಸಾಧನೆಗಳು**

– ಕಥೆ, ಹಾಡು, ಪ್ರಾಸ ಗೀತೆಗಳ ಅಭಿವೃದ್ಧಿ

– ಸನ್ನಿವೇಶಗಳನ್ನು ವಿವರಿಸುವುದು.

– ಬರಹಗಳಿಗೆ ಉತ್ತರ.

– ವಿವಿಧ ವಿಷಯ ಕುರಿತಂತೆ ಆಶುಭಾಷಣ

– ಪಾತ್ರಾಭಿನಯ, ನಾಟಕ ಪ್ರಹಸನಗಳು

– ಸರಳ ಸಂಭಾಷಣೆಗಳು, ಚಿಕ್ಕ ಚರ್ಚೆಗಳು.

– ಸ್ವರಭಾರ ; ಸ್ಪಷ್ಟ ಉಚ್ಚಾರಣೆಯೊಂದಿಗೆ ಓದುವುದು.

**ಉದಾ 3:– ಅವಲೋಕನ, ವೀಕ್ಷಣೆಯ ಸಾಧನೆಗಳು**

– ವರ್ತನೆ ; ಹೊಂದಾಣಿಕೆ, ಸಹಕಾರ ಮನೋಭಾವ ಅವಲೋಕನ
– ಸೂಚನೆ ಹಾಗೂ ನಿಯಮಗಳ ಪಾಲನೆ
– ಶುಚಿತ್ವದ ಅಭ್ಯಾಸ ವಸ್ತುಗಳ ಶೇಖರಣೆ
– ಹೊರಾಂಗಣ/ಒಳಾಂಗಣ ಚಟುವಟಿಕೆಯಲ್ಲಿ ಪಾಲ್ಗೊಳ್ಳುವಿಕೆ
– ಮಾದರಿಗಳ ತಯಾರಿಕೆ, ಸೃಜನಶೀಲತೆ.

**ಗಮನಿಸಿ:**

– ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯದ ಗಳಿಕೆಯಾಗಿದೆಯೇ ಇಲ್ಲವೆ? ಎಂದು ಕಂಡುಕೊಳ್ಳಲು 3–4 ಚಟುವಟಿಕೆಗಳು ಸಹಾಯ ಮಾಡಬಲ್ಲವು, ಹಾಗೆಯೇ ಒಂದು ಚಟುವಟಿಕೆಯು 1ಕ್ಕಿಂತ ಹೆಚ್ಚು ಸಾಮರ್ಥ್ಯದ ಗುರುತಿಸುವಿಕೆಗೆ ಸಹಾಯ ಮಾಡಬಲ್ಲದು.
– ಪರೀಕ್ಷೆಯಂತೆ ವಾತಾವರಣ ನಿರ್ಮಿಸಬಾರದು.
– ಸಂತಸವಿರಬೇಕು. ಚಟುವಟಿಕೆಗಳಿಂದ ಕೂಡಿರಬೇಕು.
– ಬರವಣಿಗೆಗೆ ಆದ್ಯತೆಯಿರಲಿ.
– ಹೆಚ್ಚಿನ ಕಲಿಕೆಯ ಸಾಮಗ್ರಿಗಳ ಸಂಗ್ರಹವಿರಲಿ.

- **ಶಾಲೆಯಲ್ಲಿ ನಡೆಯುವ ಮೌಲ್ಯಮಾಪನಗಳು**

ಮೌಲ್ಯಮಾಪನ – ಮಗುವಿನ ಕಲಿಕೆ, ಬೋಧನೆಯ ವಿಧಾನ, ಮೌಲ್ಯಮಾಪನದ ಸಾಧನಗಳನ್ನು ಸುಧಾರಿಸಬೇಕು ಎಂಬ ಗುರಿಯನ್ನು ಇಟ್ಟುಕೊಂಡಿದೆ ಎನ್ನುವುದನ್ನು ಇದುವರೆಗಿನ ಚರ್ಚೆಯಿಂದ ಅರಿತಿರುವಿರಿ. ಈಗ ಶಾಲೆಯಲ್ಲಿ ನಡೆಯುವ ಮೌಲ್ಯಮಾಪನದ ಸಂದರ್ಭಗಳ ಪರಿಚಯವನ್ನು ಮಾಡಿಕೊಳ್ಳುತ್ತೀರಿ.

ಸ್ಥೂಲವಾಗಿ ಹೇಳುವುದಾದರೆ ಪ್ರತಿ ಕ್ಷಣದಲ್ಲಿ ಅಧ್ಯಾಪಕ ಮೌಲ್ಯಮಾಪನ ಮಾಡುತ್ತಿರುತ್ತಾರೆ. ಇದು ಅತಿಶಯವೆನಿಸುವುದೇ? ಹಾಗಾದರೆ ಗಮನಿಸಿ;

- ಪ್ರಾರ್ಥನೆಗೆ ಮಕ್ಕಳನ್ನು ನಿಲ್ಲಿಸುತ್ತೀರಿ – ಸರಿಯಾಗಿ ನಿಲ್ಲಲು ಹೇಳುತ್ತೀರಿ
- ಪ್ರಾರ್ಥನೆ ಮಾಡುವಾಗ ಕಂಡುಬಂದ ಕೊರತೆಗಳನ್ನು ತಿಳಿಸುತ್ತೀರಿ
- ಸಾಲಾಗಿ ಹೋಗಲು – ತಿದ್ದಲು ಪ್ರಯತ್ನಿಸುತ್ತೀರಿ
- ತರಗತಿ ಕೋಣೆಯಲ್ಲಿ ಒಪ್ಪವಾಗಿ ಕೂರಲು ಹೇಳುತ್ತೀರಿ
- ಪುಸ್ತಕ ಸರಿಯಾಗಿ ಹಿಡಿಯಲು ಹೇಳುತ್ತೀರಿ
- ವಿವರಿಸುತ್ತೀರಿ – ಪ್ರಶ್ನೆ ಕೇಳುತ್ತೀರಿ – ಪುನರ್ಬಲನ ನೀಡುತ್ತೀರಿ – ಇತ್ಯಾದಿ

ಈ ಚಟುವಟಿಕೆಗಳನ್ನು ಏಕೆ ಮಾಡುತ್ತೀರಿ? ಅದು ಉದ್ದೇಶ ರಹಿತವೆ? ಅದು ಅಪ್ರಜ್ಞಾಪೂರ್ವಕ ಇರಬಹುದು. ಆದರೆ ಅದು ಅನುದ್ದೇಶಿತ ಅಲ್ಲ. ಮಗುವಿನ ವರ್ತನೆಯನ್ನು ಅಪೇಕ್ಷಿತ ನೇರದಲ್ಲಿ ಬದಲಾಯಿಸಲು ನೀವು ನಿರಂತರವಾಗಿ ಪ್ರಯತ್ನಿಸುತ್ತೀರಿ. ಇದನ್ನು ಒಪ್ಪುವುದಾದರೆ ಮೇಲಿನ ಭಾವನೆ 'ಅತಿಶಯ' ಎನ್ನುವುದನ್ನು ದೂರ ಮಾಡಿ. ಆದರೆ ಕಲಿಕೆ

ಮತ್ತು ಪ್ರಜ್ಞಾಪೂರ್ವಕ ಎಂಬ ಅರ್ಥದಲ್ಲಿ ಶಾಲೆಯಲ್ಲಿ ನಡೆಯುವ ಮೌಲ್ಯಮಾಪನಗಳನ್ನು ಮೂರು ಹಂತಗಳಲ್ಲಿ ಗುರುತಿಸಬಹುದು.

- **ತರಗತಿ ಸನ್ನಿವೇಶ :** ತರಗತಿ ಸನ್ನಿವೇಶ ಎನ್ನುವುದನ್ನು – ಒಟ್ಟಾರೆ ಕಲಿಕೆ – ಬೋಧನೆಯ ಸಂದರ್ಭಗಳು ಎಂದು ಪರಿಭಾವಿಸಬೇಕು. ಅದು ಒಳಾಂಗಣ ಅಥವಾ ಹೊರಾಂಗಣವಾಗಿರಬಹುದು. ರೂಪಣ ಮತ್ತು ಸಂಚಯಿತ ಮೌಲ್ಯಮಾಪನ ಅಥವಾ ಅಭ್ಯಾಸ ಮತ್ತು ಅನ್ವಯನ ಹಂತದ ಮೌಲ್ಯಮಾಪನ ಹಂತದ ಮೌಲ್ಯಮಾಪನಗಳೆಂದು ಹಿಂದಿನ ಪ್ಯಾರಾಗಳಲ್ಲಿ ವಿವರಿಸಲಾಗಿದೆ.

**ಗಮನಿಸಿ :** ತರಗತಿಯ ಮೌಲ್ಯಮಾಪನ ಹೇಗಿರಬೇಕು; ಯಾವುದು ಪರಿಣಾಮಕಾರಿ ಎನ್ನುವುದನ್ನು ಚರ್ಚಿಸಿ.

**ತರಗತಿ ಕೋಣೆಯಲ್ಲಿ ಮೌಲ್ಯಮಾಪನದಲ್ಲಿ ನೆನಪಿಡಬೇಕಾದ ಸರಣಿಗಳು**

– ದಿನದ ಅನುಭವವನ್ನು ಹಂಚಿಕೊಳ್ಳುವುದು ಸಮಸ್ಯೆ ದಾಖಲಿಸುವುದು.

– ಮಕ್ಕಳ ಭಾಗವಹಿಸುವಿಕೆಯನ್ನು ಗಮನಿಸುವುದು.

– ಗುಂಪುಗಳ ನಿರ್ವಹಣೆ – ಶಿಕ್ಷಕರ ಪ್ರೋತ್ಸಾಹ ಸಲಹೆ ಸೂಚನೆ.

– ಹಿಂದಿನ ಅನುಭವದ ಆಧಾರದ ಮೇಲೆ ವಿಧಾನ ಬದಲಾವಣೆ ಮಾಡುವುದು.

– ತರಗತಿಯ ಸ್ವಚ್ಛತೆ/ಮಕ್ಕಳ ವರ್ತನೆ/ಬದಲಾವಣೆ ಗುರುತಿಸುವುದು.

– ಉದ್ದೇಶ ಈಡೇರಿಕೆ/ವಿಫಲತೆಯನ್ನು ತಿಳಿಯುವುದು

– ಕಲಿತ ವಿಷಯಗಳ ಅಳವಡಿಕೆ ಸಾಧ್ಯವಾಗಿದೆಯೇ ಎಂಬುದನ್ನು ಗಮನಿಸುವುದು.

**ಪುನರಾವರ್ತಿತ ಮೌಲ್ಯಮಾಪನದ ಅವಶ್ಯಕತೆ**

ಪರೀಕ್ಷೆಗಳು ಕಲಿಕೆಯ ಅವಿಭಾಜ್ಯ ಅಂಗ. ಮೊದಲಲ್ಲಿ ಕಲಿತ ಅಂಶಗಳನ್ನು ಮತ್ತು ಸಾಮರ್ಥ್ಯವನ್ನು ಮುಂದಿನ ದಿನಗಳಲ್ಲಿ ಮಗು ಮರೆತು ಹೋಗುವ ಸಾಧ್ಯತೆಯಿರುವುದರಿಂದ ಪರೀಕ್ಷೆಗಳು ಅವಶ್ಯಕತೆಯಿಲ್ಲದಿದ್ದರೂ ಪುನರಾವರ್ತನೆ ಅವಶ್ಯಕ.

ಉದಾ : ಸಂಕಲನ ಕಲಿತಿದ್ದ ಮಗು ವ್ಯವಕಲನದ ಲೆಕ್ಕ ಕಲಿಯುವಾಗ ಹಿಂದಿನದನ್ನು ಮರೆಯಬಹುದು. ಪರೀಕ್ಷೆಗಳು ಕಲಿಕೆಗೆ ಪೂರಕವಾಗಿ ಮಗುವಿನ ಕಲಿಕೆಯ ಸಮಸ್ಯೆಯನ್ನು ಗುರುತಿಸುವ ಸಾಧನೆಯಾಗಬೇಕು. ಸಮಸ್ಯೆಗೆ ಪರಿಹಾರದ ತಿಳುವಳಿಕೆಯನ್ನು ಕೊಟ್ಟಾಗ ಮೌಲ್ಯಮಾಪನ ಪ್ರಯೋಜನವಾಗುತ್ತದೆ. ಪರೀಕ್ಷೆಯ ಭಯವನ್ನು ದೂರಮಾಡಿ ಖುಷಿಯಾದ ವಾತಾವರಣದಲ್ಲಿ ಕಲಿಕೆಯನ್ನು ಉಂಟು ಮಾಡುವುದರ ಜೊತೆಗೆ ಸಂತಸಕರ ರೀತಿಯಲ್ಲಿ ಮೌಲ್ಯಮಾಪನ ನಡೆಸಿದಾಗ ಮಕ್ಕಳ ಕಲಿಕೆಯ ಅರ್ಥ ಪೂರ್ಣವಾಗುವುದರ ಜೊತೆಗೆ ಸಂತಸಕರ ಕಲಿಕೆಯಾಗುತ್ತದೆ.

- **ಘಟಕ ಮೌಲ್ಯಮಾಪನ (ಪರೀಕ್ಷೆ) ಅಥವಾ ಸಾಮರ್ಥ್ಯಗಳ ಮೌಲ್ಯಮಾಪನ**

  ಒಂದು ಸಾಮರ್ಥ್ಯ ಅಥವಾ ಒಂದು ಘಟಕ ಬೋಧನೆಯ ನಂತರ ಮಕ್ಕಳು ಹೇಗೆ ಕಲಿತಿದ್ದಾರೆ– ಕೊರತೆಗಳೇನು ಎಂದು ತಿಳಿಯಲು ಮೌಲ್ಯಮಾಪನ ಮಾಡುತ್ತೀರಿ. ಇದು ಘಟಕ ಮೌಲ್ಯಮಾಪನ. ಘಟಕ ಮೌಲ್ಯಮಾಪನ ಕೆಳಹಂತದ ತರಗತಿಗಳಿಗೆ ಮೌಖಿಕವಾಗಿ ಇರಬಹುದು. ಆದರೆ ಕೆ.ಜಿ.ಬಿ.ವಿ. ಹಂತದ ಮಕ್ಕಳಿಗೆ ಲಿಖಿತದ ಪ್ರಮಾಣ ಹೆಚ್ಚಾಗಿ ಮತ್ತು ಮೌಖಿಕ ಪ್ರಮಾಣ ಕಡಿಮೆ ಇರುವಂತೆ ಘಟಕ ಮೌಲ್ಯಮಾಪನ ಸಿದ್ದಪಡಿಸುವುದು ಯುಕ್ತ.

ಘಟಕ ಮೌಲ್ಯಮಾಪನಕ್ಕೆ ಪ್ರತ್ಯೇಕ ವೇಳಾಪಟ್ಟಿ ಬೇಡ. ನಿಗದಿತ ಪೀರಿಯಡ್ ಅಥವಾ ಪೀರಿಯಡ್‌ಗಳಲ್ಲಿ ಮೌಲ್ಯಮಾಪನ ಮಾಡಬೇಕು.

ಮಗುವಿನ ಕೊರತೆಯನ್ನು ಪತ್ತೆ ಹಚ್ಚಿ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಆಶಯ ಈ ಮೌಲ್ಯಮಾಪನ ಹೊಂದಿರುವುದರಿಂದ ಪರಿಕಲ್ಪನೆಯ ಪ್ರತಿಯೊಂದು ಆಯಾಮಕ್ಕೆ ಸಂಬಂಧಿಸಿದಂತೆ ಮೌಲ್ಯಮಾಪನ ನಡೆಯಲು ಸಾಧನಗಳನ್ನು ಬಳಸಬೇಕು.

ಮಕ್ಕಳ ಉತ್ತರಗಳನ್ನು ಮಾಪಿಸಿ ಕೊರತೆಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪರಿಹಾರ ಬೋಧನೆ ಕೈಗೊಳ್ಳಬೇಕು. ಬೋಧನೆ–ಮೌಲ್ಯಮಾಪನ–ಪರಿಹಾರ ಬೋಧನೆ ಇದೊಂದು ನಿರಂತರವಾದ ಚಕ್ರ. ಸಾಂಕೇತಿಕವಾಗಿ ಇದನ್ನು ಮುಂದೆ ನೀಡಿದೆ.




**ಅನುಕೂಲಗಳು :**

– ಮಗುವಿನ ವ್ಯಾಸಂಗ ಕ್ರಮ ವ್ಯವಸ್ಥಿತವಾಗುತ್ತದೆ.

– ಕೊರತೆಯನ್ನು ಗುರುತಿಸುವುದರಿಂದ ಅಧ್ಯಾಪಕ/ಮಗುವಿಗೆ ಬೋಧನೆ–ಕಲಿಕೆಯಲ್ಲಿ ಸುಧಾರಣೆ ಮಾಡಿಕೊಳ್ಳಲು ಅನುಕೂಲ.

– ಅಪ್ರಜ್ಞಾಪೂರ್ವಕವಾಗಿ ಮಗುವಿಗೆ ಪ್ರೇರಣೆ ದೊರೆಯುತ್ತದೆ.

– ಇವುಗಳಿಂದ ಕಲಿಕೆಯ ಮಟ್ಟದಲ್ಲಿ ಏರಿಕೆ ಕಂಡು ಬರುತ್ತದೆ.

- **ಸೆಮಿಸ್ಟರ್ ಮತ್ತು ಪ್ರಗತಿ ಪತ್ರ**

ಕೆ.ಜಿ.ಬಿ.ವಿ. ಶಾಲೆಗಳಲ್ಲಿ 6,7 ಮತ್ತು 8ನೇ ತರಗತಿಯಲ್ಲಿ ಮಕ್ಕಳು ಅಭ್ಯಾಸ ಮಾಡುತ್ತಾರೆ. ಈ ಮಕ್ಕಳಿಗೆ ಶಾಲೆಗಳಲ್ಲಿ ನಡೆಯುವಂತೆ ಬೋಧನಾ ಪ್ರಕ್ರಿಯೆ ಹಾಗೂ ಮೌಲ್ಯಮಾಪನವನ್ನು ಮಾಡಬೇಕು.

ಈಗ ಸೆಮಿಸ್ಟರ್ ಪದ್ಧತಿ ಜಾರಿಯಲ್ಲಿರುವುದರಿಂದ ಶಿಕ್ಷಕರು ಇದನ್ನೇ ಅನುಸರಿಸಬೇಕು.

ಮೊದಲನೆಯ ಸೆಮಿಸ್ಟರಿನ ಮಧ್ಯಭಾಗದಲ್ಲಿ ಒಂದು ಹಾಗೂ ಎರಡನೆಯ ಸೆಮಿಸ್ಟರಿನ ಮಧ್ಯಭಾಗದಲ್ಲಿ ಒಂದು ಸೇರಿದಂತೆ ಎರಡು ಕಿರು ಪರೀಕ್ಷೆ ಮಾಡಬೇಕು. ಕಿರು ಪರೀಕ್ಷೆಯನ್ನು ಒಂದು ಅವಧಿಯ (40 ನಿಮಿಷ)ಲ್ಲಿ 25 ಅಂಕಗಳಿಗೆ ಮಾಡುವುದು. ಒಟ್ಟು 2 ಸೆಮಿಸ್ಟರ್‌ಗಳು, ಇದನ್ನು ಸೆಪ್ಟೆಂಬರ್‌ನ ಕೊನೆಯ ಭಾಗ ಹಾಗೂ ಮಾರ್ಚ್‌ನ ಕೊನೆಗೆ ನಡೆಸಬೇಕು. ಸೆಮಿಸ್ಟ್‌ರಿನ ಅಂಕಗಳನ್ನು ಗ್ರೇಡ್‌ಗೆ ಪರಿವರ್ತಿಸಿ ಪ್ರಗತಿ ಪತ್ರದಲ್ಲಿ ನಮೂದಿಸುವುದು.

**ಗ್ರೇಡ್‌ಗಳ ವಿವರಗಳು ಹೀಗಿದೆ. (ಎ– ವಿಭಾಗಕ್ಕೆ)**

| | |
|---|---|
| C | 0–29 |
| C+ | 30–49 |
| B | 50–59 |
| B+ | 60–74 |
| A | 75–89 |
| A+ | 90–100 |

**ಗ್ರೇಡ್‌ಗಳ ವಿವರ (ಬಿ–ವಿಭಾಗಕ್ಕೆ)**

| | |
|---|---|
| C | 49ಕ್ಕಿಂತ ಕಡಿಮೆ |
| B | 50–74 |
| A | 75–100 |

**ಗಮನಿಸಿ :** ಪ್ರಗತಿ ಪತ್ರ ಹಾಗೂ ಹೆಚ್ಚಿನ ವಿವರಗಳಿಗೆ ಸೌರಭ – 2007ನ್ನು ಅನುಸರಿಸುವುದು.

**ಹಿಮ್ಮಾಹಿತಿ ಮತ್ತು ಅದರ ಪ್ರಾಮುಖ್ಯತೆ**

ವೆಂಕಟೇಶ್ (ಹೆಸರು ಬದಲಾಯಿಸಿದೆ) ಪಿಯುಸಿ ಮೊದಲ ವರ್ಷದ ಮಧ್ಯವಾರ್ಷಿಕ ಪರೀಕ್ಷೆಯಲ್ಲಿ ಭೌತಶಾಸ್ತ್ರದಲ್ಲಿ ಗಳಿಸಿದ ಅಂಶಗಳು 30 ಉತ್ತರ ಪತ್ರಿಕೆ ವಿತರಣೆ ಮಾಡುತ್ತಿದ್ದ ಅಧ್ಯಾಪಕರು ಹೇಳಿದ್ದು ಹೀಗೆ; “ವೆಂಕಟೇಶ್ ಗಳಿಸಿದ ಅಂಕಗಳು 80 ಬರೆದ ಉತ್ತರಗಳೆಲ್ಲವೂ ಚೆನ್ನಾಗಿವೆ. ಪ್ರಯತ್ನಿಸಿದರೆ ಇನ್ನೂ ಹೆಚ್ಚಿನ ಅಂಕ ಗಳಿಸಬಹುದು.” ಉತ್ತರ ಬರೆದ ಕ್ರಮವನ್ನು ಆ ಅಧ್ಯಾಪಕ ಗುರುತಿಸಿದ್ದರು. ಇದರಿಂದ ಮುಂದಿನ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು – ಚೆನ್ನಾಗಿ ಓದಿ ಬರೆದು ಗಳಿಸಲು ಅವನಿಗೆ ಸಾಧ್ಯವಾಯಿತು.

ಈ ಪ್ರಕರಣ ಹಿಮ್ಮಾಹಿತಿಯನ್ನು ಹೇಗೆ ಕೊಡಬೇಕು ಎನ್ನುವುದಕ್ಕೆ ಉತ್ತಮ ಉದಾಹರಣೆ. ಹಿಮ್ಮಾಹಿತಿಯಿಂದ ಮಗು ತನ್ನ ಕೊರತೆಗಳನ್ನು ಕಾಣುವ ಬದಲು ತನ್ನ ಸಾಮರ್ಥ್ಯಗಳೇನು ಎಂದು ತಿಳಿಯಲು ಸಾಧ್ಯವಾಗಬೇಕು ಎನ್ನುವ ಸಂಗತಿ ಇಲ್ಲಿ ಹೆಚ್ಚು ಪ್ರಸ್ತುತ.

o **ಹೀಗೆ ಮಾಡಿ.**

- ಹಿಮ್ಮಾಹಿತಿ ನೀಡಿಕೆ. ಆದಷ್ಟು ಶೀಘ್ರವಾಗಿ ನಡೆಯಬೇಕು.
- ಗಳಿಸಿದ ಅಂಕಗಳು/ಗ್ರೇಡುಗಳನ್ನು ತಿಳಿಸಿ
- ಕಳಪೆ ಸಾಧನೆಯವರು ತೋರಿಸಿದ ಉತ್ತಮ ಅಂಶಗಳನ್ನು ವಿವರಿಸಿ. ನಂತರ ಸರಿಯಲ್ಲದ ಉತ್ತರಗಳನ್ನು ಹೇಗೆ ಬರೆಯಬೇಕಿತ್ತು ಎನ್ನುವುದನ್ನು ವಿವರಿಸಿ.
- ಉತ್ತಮ ಉತ್ತರಗಳು ಏಕೆ ಅವು ಉತ್ತಮ ಎನ್ನುವುದನ್ನು ತರಗತಿಗೆ ತಿಳಿಸಿಕೊಡಿ.
- ಪರಿಹಾರ ಬೋಧನೆಯನ್ನು ಮಾಡಿ. ಈ ಹಂತದಲ್ಲಿ ಕಲಿಕೆಯು ವೈಯಕ್ತೀಕರಣ ಬಹಳ ಮುಖ್ಯ.
- ಉತ್ತಮ ಉತ್ತರಗಳನ್ನು ಮುಕ್ತವಾಗಿ ಪ್ರಶಂಸಿಸಿ. ಆದರೆ ಈ ಪ್ರಶಂಸೆ ಪ್ರಾಮಾಣಿಕವಾಗಿ ಇರಲಿ. ಜೊತೆಗೆ ಕಳಪೆ ಸಾಧನೆ ಮಾಡಿದವರು ಹಿಂಜರಿಯುವಂತೆ ಆಗದಿರಲು ಎಚ್ಚರ ವಹಿಸಿ.
- ಪ್ರಗತಿ ಪತ್ರಗಳನ್ನು ಕ್ಲುಪ್ತ ಅವಧಿಯಲ್ಲಿ ವಿತರಿಸಿ. ಪೋಷಕರಿಗೆ ಮಗುವಿನ ಕಲಿಕೆಯ ಪ್ರಗತಿ ಕುರಿತು ಮನವರಿಕೆ ಮಾಡಿ.

o **ಹಿಮ್ಮಾಹಿತಿಯ ಪ್ರಾಮುಖ್ಯತೆ**

- ಕೊರತೆ/ಸಾಮರ್ಥ್ಯ ಗುರುತಿಸಲು ಚಿಕಿತ್ಸೆ ಕ್ರಮಗಳನ್ನು ಮಗು ತೆಗೆದುಕೊಳ್ಳಲು ಸಹಕಾರಿ.
- ಪ್ರೇರಣೆಯನ್ನು ಮಗುವಿಗೆ ಒದಗಿಸುತ್ತದೆ.
- ಮಗುವಿನ ಕಲಿಕೆಯ ಆಲೇಖ ಏರುಮುಖವಾಗಲು ಸಹಾಯಕ
- ಸುಪ್ತ ಪ್ರತಿಭೆಗಳು (ಸಾಮರ್ಥ್ಯ) ಮಗುವಿಗೆ ತಿಳಿಯುವುದರಿಂದ ಆ ನಿಟ್ಟಿನಲ್ಲಿ ಮುಂದುವರೆಯಲು ಸಹಾಯಕ (ಲೇಖಕ, ವಿಜ್ಞಾನಿ, ಇತ್ಯಾದಿ)

✓ **ಬೋಧನಾ ಕಾರ್ಯದಲ್ಲಿ ಅಧ್ಯಾಪಕ ನಿರ್ವಹಿಸಬೇಕಾದ ದಾಖಲೆಗಳು**

- ಪಾಠ ಹಂಚಿಕೆ ಕಾರ್ಯ ತಃಖ್ತೆ
- ಸೇತುಬಂಧ ; ಪೂರ್ವಪರೀಕ್ಷೆ, ಸಾಫಲ್ಯ ಪರೀಕ್ಷೆಗಳ ವೈಯಕ್ತಿಕ ವಹಿ.
- ಪಾಠ ಟಿಪ್ಪಣಿ/ಪಾಠ ಯೋಜನೆ
- ಪಾಠೋಪಕರಣಗಳ ಬಳಕೆ ವಹಿ
- ಓದುವೆ ನಾನು ಕಾರ್ಯಕ್ರಮಕ್ಕೆ ಒಳಪಟ್ಟ ಮಕ್ಕಳ ವಿವರ.
- ಕೆ.ಎಸ್.ಕ್ಯೂ.ಎ.ಓ. ಫಲಿತಾಂಶದ ವಿಷಯವಾರು ಶೇಕಡಾವಾರು ವಿವರ.
- ಪರಿಹಾರ ಬೋಧನೆಗೆ ಒಳಪಟ್ಟ ಮಕ್ಕಳ ವಿವರ (ನಮೂನೆ 5(a)ನಂತೆ)
- ಪ್ರಶ್ನೆ ಪತ್ರಿಕೆಗಳು, ಉತ್ತರ ಪತ್ರಿಕೆಗಳು ಹಾಗೂ ವೈಯಕ್ತಿಕ ಅಂಕವಹಿ
- ಪ್ರಗತಿ ಪತ್ರಗಳು

**ವಿಶೇಷಾಧಿಕಾರಿಗಳು ನಡೆಸುವ ಶಾಲೆಯ ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ನಿರ್ವಹಿಸಬೇಕಾದ ದಾಖಲೆಗಳು**

- ಮಕ್ಕಳ ಕಲಿಕೆಯ ಪ್ರಗತಿ ಅವಲೋಕನ
- ಅಧ್ಯಾಪಕರ ಬೋಧನೆಯ ವೀಕ್ಷಣೆ

- ಅಧ್ಯಾಪಕರ ಪೂರ್ವಸಿದ್ಧತೆ ಅವಲೋಕನ
- ಅಧ್ಯಾಪಕರು ಕೈಗೊಂಡ ಮೌಲ್ಯಮಾಪನ ಅವಲೋಕನ
- ಮಾಹೆಯಾನ ಅಧ್ಯಾಪಕರ ಸಭೆ
- ಶೈಕ್ಷಣಿಕ ಯೋಜನೆಗಳ ತಯಾರಿ ಮತ್ತು ಕಾರ್ಯಾನುಸರಣೆ

✓ **ಶೈಕ್ಷಣಿಕ ಯೋಜನೆಗಳ ತಯಾರಿ ಮತ್ತು ಕಾರ್ಯಾನುಸರಣೆ**

- ಮೇ ಅಂತ್ಯದೊಳಗೆ ಎಲ್ಲಾ ಅಧ್ಯಾಪಕರು ತಯಾರಿಸಿರುವ ವಾರ್ಷಿಕ ಯೋಜನೆ ಪರಿಶೀಲಿಸಿ ಹಿಮ್ಮಾಹಿತಿ ನೀಡುವುದು.
- ಮೇ ಅಂತ್ಯದೊಳಗೆ ಶಾಲೆಯ ವೇಳಾಪಟ್ಟಿಯನ್ನು ತಯಾರಿಸುವುದು.
- ಶೈಕ್ಷಣಿಕ ಯೋಜನೆ/ಶಾಲಾ ಪಂಚಾಂಗ ತಯಾರಿಕೆ ಮೇ ಅಂತ್ಯದೊಳಗೆ
- ವಿವಿಧ ಕಾರ್ಯಗಳ ಹಂಚಿಕೆಯನ್ನು ಅಧ್ಯಾಪಕರಿಗೆ ಮಾಡುವುದು.
- ಈ ಅಂಶಗಳು ಕಾರ್ಯಗತಗೊಳ್ಳುತ್ತಿರುವುದನ್ನು ಮುಖ್ಯೋಪಾಧ್ಯಾಯರು ನಿರಂತರವಾಗಿ ಅವಲೋಕನ ಮಾಡಬೇಕು.

**ಮಕ್ಕಳ ಕಲಿಕೆಯ ಪ್ರಗತಿ ಅವಲೋಕನ**

- ಪ್ರತಿ ತಿಂಗಳಲ್ಲಿ ಕೆಲವು ಗಂಟೆಗಳನ್ನು ಪ್ರತಿ ತರಗತಿಯಲ್ಲಿ ಕಳೆದು ಮಕ್ಕಳು ಕಲಿತಿರುವುದನ್ನು ದಾಖಲಿಸಿ ಅಧ್ಯಾಪಕರಿಗೆ ಹಿಮ್ಮಾಹಿತಿ ನೀಡುವುದು.
- ಈ ಮುಂದಿನ ನಮೂನೆ ಬಳಸುವುದು.

| ತರಗತಿ | ದಾಖಲಾತಿ | ಹಾಜರಾತಿ | ಕನ್ನಡ ಪ್ರಥಮ ಭಾಷೆ | ಇಂಗ್ಲೀಷ್ ದ್ವಿತೀಯ ಭಾಷೆ | ಹಿಂದಿ ತೃತೀಯ ಭಾಷೆ | ಗಣಿತ | ವಿಜ್ಞಾನ/ಪರಿಸರ ಅಧ್ಯಯನ | ಸಮಾಜ ವಿಜ್ಞಾನ |
|---|---|---|---|---|---|---|---|---|
| | | | | | | | | |

**ಸೂಚನೆ**

- ಪ್ರತಿ ವಿಷಯದಲ್ಲಿ ಅಪೇಕ್ಷಿತ ಮಟ್ಟಕ್ಕೆ ಕಲಿತ ಮಕ್ಕಳ ಸಂಖ್ಯೆ ನಮೂದಿಸಿ
- ಕಲಿಯದಿರುವವರು ಯಾವ ಪರಿಕಲ್ಪನೆ ಕಲಿತಿಲ್ಲ ನಮೂದಿಸಿ. ಕಲಿಯುವಂತೆ ಮಾಡಲು ನೀಡಿದ ಸಲಹೆ ದಾಖಲಿಸಿ.
- ಅಧ್ಯಾಪಕರು ನೀಡುತ್ತಿರುವ ಗೃಹಪಾಠ/ಮಕ್ಕಳು ಬರೆಯುತ್ತಿರುವ ಕಾಪಿ ಪುಸ್ತಕ/ಬರೆಸಿರುವ ಲೆಕ್ಕಗಳು – ಪರಿಶೀಲಿಸಿ ಹಿಮ್ಮಾಹಿತಿ ನೀಡಿ.
- ಅಧ್ಯಾಪಕರಿಗೆ ಹಿಮ್ಮಾಹಿತಿ ನೀಡಿ.
- ನೀಡಿದ ಹಿಮ್ಮಾಹಿತಿಯಂತೆ ಕಾರ್ಯಾನುಸರಣೆ ಆಗಿದೆಯೇ ಎಂದು ಪರಿಶೀಲಿಸಿ; ನಮೂದಿಸಿ.

**ಅಧ್ಯಾಪಕರ ಬೋಧನೆಯ ವಿಕ್ಷಣೆ**

**ಮುಖ್ಯೋಪಾಧ್ಯಾಯರಿಂದ ಪಾಠ ವೀಕ್ಷಣೆ**

ಶಾಲೆಯ ಹೆಸರು ಶಿಕ್ಷಕರ ಹೆಸರು ದಿನಾಂಕ

ಕಲಿಸುತ್ತಿರುವ ವರ್ಗ ವಿಭಾಗ ಅವಧಿ

ಪಾಠದ ಹೆಸರು

| ಕ್ರ.ಸಂ | ವಿವರ | ವಸ್ತುಸ್ಥಿತಿ | ಉತ್ತಮ ಪಡಿಸಿಕೊಳ್ಳಲು ನೀಡಿದ ಸಲಹೆ |
|---|---|---|---|
| 1 | ಪಾಠದ/ಘಟಕ ಟಿಪ್ಪಣಿ | | |
| 2 | ಪಾಠ ಹಾಗೂ ವಿಷಯದ ನಿರೂಪಣೆ | | |
| 3 | ಕಲಿಸುವ ವಿಧಾನ | | |
| 4 | ಪೂರಕ ಸಾಹಿತ್ಯದ ಉಪಯೋಗ | | |
| 5 | ಪಾಠೋಪಕರಣಗಳ ಉಪಯೋಗ | | |
| 6 | ಕಪ್ಪುಹಲಗೆಯ ಉಪಯೋಗ | | |
| 7 | ಕಲಿಕಾ ಫಲ | | |
| 8 | ಮಕ್ಕಳ ಪಾಲ್ಗೊಳ್ಳುವಿಕೆ | | |
| 9 | ಮೇಲ್ವಿಚಾರಣೆಯಲ್ಲಿ ಕೊಟ್ಟ ಸಲಹೆ ಸೂಚನೆಗಳು | | |

**ಪ್ರಧಾನ ಗುರುಗಳ ಸಹಿ** **ವರ್ಗಗುರುಗಳ ಸಹಿ**

- ತಿಂಗಳಿಗೊಮ್ಮೆ ಪ್ರತಿ ಶಿಕ್ಷಕರ ಒಂದು ಪಾಠವನ್ನು ವೀಕ್ಷಿಸಿ ಮೇಲಿನಂತೆ ಹಿಮ್ಮಾಹಿತಿ ನೀಡಬೇಕು.

❖ **ಅಧ್ಯಾಪಕರ ಪೂರ್ವಸಿದ್ದತೆ ಪರಿಶೀಲನೆ ಅವಲೋಕನ**

- ಪಾಠ ಯೋಜನೆಯನ್ನು ನಿರಂತರವಾಗಿ ಅಧ್ಯಾಪಕರು ಮಾಡುತ್ತಿರುವರೆ ಎಂದು ಪರಿಶೀಲಿಸಲು ತಾಳೆಪಟ್ಟಿ ರೂಢಿಸುವುದು. (ಮುಂದಿನಂತೆ)

- ವಾರಕ್ಕೊಮ್ಮೆ ಪ್ರತಿ ಶಿಕ್ಷಕರ ಪಾಠ ಯೋಜನೆ ನೋಡಿ – ಮುಖ್ಯೋಪಾಧ್ಯಯರು ಹಿಮ್ಮಾಹಿತಿ ನೀಡುವುದು. ಈ ಕೆಲಸ ಮಾಡಿದ ದಿನಾಂಕ ನಮೂದಿಸುವುದು.

| ಶಿಕ್ಷಕರ ಹೆಸರು | ಪಾಠಯೋಜನೆ ವೀಕ್ಷಿಸಿದ ದಿನಾಂಕ/ ನೀಡಿದ ಹಿಮ್ಮಾಹಿತಿ | ಪಾಠಯೋಜನೆ ವೀಕ್ಷಿಸಿದ ದಿನಾಂಕ/ ನೀಡಿದ ಹಿಮ್ಮಾಹಿತಿ | ಪಾಠಯೋಜನೆ ವೀಕ್ಷಿಸಿದ ದಿನಾಂಕ/ ನೀಡಿದ ಹಿಮ್ಮಾಹಿತಿ | ಪಾಠಯೋಜನೆ ವೀಕ್ಷಿಸಿದ ದಿನಾಂಕ/ ನೀಡಿದ ಹಿಮ್ಮಾಹಿತಿ |
|---|---|---|---|---|
| | | | | |

- ಇದೇ ರೀತಿ ಪಾಠೋಪಕರಣಗಳನ್ನು ಯುಕ್ತವಾಗಿ ಬಳಸುತ್ತಿರುವುದನ್ನು ಗಮನಿಸಿ ಹಿಮ್ಮಾಹಿತಿ ನೀಡುವುದು.

**ಅಧ್ಯಾಪಕರು ಕೈಗೊಂಡ ಮೌಲ್ಯಮಾಪನ ಅವಲೋಕನ**

| ಶಿಕ್ಷಕರ ಹೆಸರು | ಘಟಕ ಪರೀಕ್ಷೆ/ ನಿರಂತರ ಮೌಲ್ಯಮಾಪನ ಅವಲೋಕನ/ ದಿನಾಂಕ ನೀಡಿದ ಹಿಮ್ಮಾಹಿತಿ | 1ನೇ ಕಿರು ಪರಿಕ್ಷೆ/ ಮೌಲ್ಯಮಾಪನ ಮಾಡಿರುವ ಕುರಿತು ಮಾಡಿದ ಅವಲೋಕನ ದಿನಾಂಕ/ನೀಡಿದ ಹಿಮ್ಮಾಹಿತಿ | 2ನೇ ಕಿರು ಪರಿಕ್ಷೆ/ಮೌಲ್ಯಮಾಪನ ಮಾಡಿರುವ ಕುರಿತು ಮಾಡಿದ ಅವಲೋಕನ ದಿನಾಂಕ/ ನೀಡಿದ ಹಿಮ್ಮಾಹಿತಿ | 1ನೇ ಸೆಮಿಸ್ಟ್ರರ್ ಪರೀಕ್ಷೆ/ ಮೌಲ್ಯಮಾಪನ ಮಾಡಿರುವ ಕುರಿತು ಮಾಡಿದ ಅವಲೋಕನ ದಿನಾಂಕ/ ನೀಡಿದ ಹಿಮ್ಮಾಹಿತಿ | 2ನೇ ಸೆಮಿಸ್ಟ್ರರ್ ಪರೀಕ್ಷೆ/ ಮೌಲ್ಯಮಾಪನ ಮಾಡಿರುವ ಕುರಿತು ಮಾಡಿದ ಅವಲೋಕನ ದಿನಾಂಕ/ ನೀಡಿದ ಹಿಮ್ಮಾಹಿತಿ |
|---|---|---|---|---|---|
| | | | | | |

**ಸೂಚನೆ :**

- ಘಟಕ ಪರೀಕ್ಷೆ ಮೌಲ್ಯಮಾಪನ ಕುರಿತಂತೆ ಪ್ರತಿ 15 ದಿನಕ್ಕೊಮ್ಮೆ ಪ್ರತಿ ಅಧ್ಯಾಪಕರು ಮಾಡಿರುವ ಮೌಲ್ಯಮಾಪನ ಕುರಿತು ಪರಿಶೀಲಿಸಿ ಹಿಮ್ಮಾಹಿತಿ ನೀಡಬೇಕು. ಅಂದರೆ – ಪ್ರಶ್ನೆ ಪತ್ರಿಕೆ/ಮೌಲ್ಯಮಾಪನಕ್ಕೆ ಬಳಸಿರುವ ಸಾಧನಗಳ ಯುಕ್ತತೆ ಲಿಖಿತ ಉತ್ತರಗಳು ಅಂಕ ನೀಡಿರುವ ಕ್ರಮ – ಮಗುವಿಗೆ ನೀಡಿದ ಹಿಮ್ಮಾಹಿತಿಯ ಕ್ರಮ – ಪ್ರಗತಿ ಪತ್ರ ಮಗುವಿನ ಪ್ರಗತಿಯನ್ನು ನಮೂದಿಸಿರುವ ಕ್ರಮದ ಯುಕ್ತತೆ ಪರಿಶೀಲಿಸಿ – ಮುಖ್ಯೋಪಾಧ್ಯಾಯರು ಹಿಮ್ಮಾಹಿತಿ ನೀಡಬೇಕು ಮತ್ತು ಹಿಮ್ಮಾಹಿತಿ ನೀಡಿದ ದಿನಾಂಕ ನಮೂದಿಸಬೇಕು. ಕಿರು ಪರೀಕ್ಷೆ/ಸೆಮಿಸ್ಟರ್ ಪರೀಕ್ಷೆ ಮಾಡಿದ ಒಂದು ವಾರದೊಳಗೆ – ಈ ಪ್ರಕ್ರಿಯೆ ಕುರಿತು ಪರಿಶೀಲಿಸಿ ಹಿಮ್ಮಾಹಿತಿ ನೀಡಬೇಕು.

**ಮಾಹೆಯಾನ ಅಧ್ಯಾಪಕರ ಸಭೆ**

- ಪ್ರತಿ ತಿಂಗಳು ಅಧ್ಯಾಪಕರ ಸಭೆ ಮಾಡಬೇಕು.
- ವಾರ್ಷಿಕ ಕಾರ್ಯಯೋಜನೆಯಂತೆ (Programme of work) ಪಾಠಗಳು ನಡೆದಿವೆಯೇ, ಹಿಂದಿನ ತಿಂಗಳಿನಲ್ಲಿ ಆಯೋಜಿಸಿದ – ಶೈಕ್ಷಣಿಕ ಕಾರ್ಯಕ್ರಮ ಮುಗಿಸಲಾಗಿದೆಯೇ – ಕೊರತೆಗಳೇನು, ಯಾವ ಪರಿಹಾರಗಳನ್ನು ಕೈಗೊಳ್ಳಬೇಕು – ಮುಂದಿನ ತಿಂಗಳ ಕಾರ್ಯ ಯೋಜನೆಗಳೇನು ಎಂಬ ಬಗ್ಗೆ ಚರ್ಚಿಸಿ ನಿರ್ಧರಿಸಬೇಕು. ಹಾಗೂ ಅವಶ್ಯ ಹಿಮ್ಮಾಹಿತಿಯನ್ನು ಮುಖ್ಯೋಪಾಧ್ಯಾಯರು ನೀಡಬೇಕು.

# 5. ಸಹಪಠ್ಯ ಚಟುವಟಿಕೆಗಳ ನಿರ್ವಹಣೆ

ಮಕ್ಕಳಿಗೆ ಪಾಠ ಎಷ್ಟು ಮುಖ್ಯವೋ ಸಹಪಠ್ಯ ಚಟುವಟಿಕೆಗಳೂ ಅಷ್ಟೇ ಮುಖ್ಯ. ಮಕ್ಕಳಲ್ಲಿ ಅಗಾಧವಾದ ಪ್ರತಿಭೆ ಅಡಗಿದೆ. ಮಕ್ಕಳು ಬರೀ ಪುಸ್ತಕದ ಹುಳುಗಳಾಗದಂತೆ ತಡೆಯಲು, ಅವರ ಸುಪ್ತ ಪ್ರತಿಭೆಯನ್ನು ಹೆಕ್ಕಿ ತೆಗೆಯಲು, ಸೃಜನಶೀಲತೆಯನ್ನು ಉತ್ತೇಜಿಸಲು, ಅವರ ಸರ್ವತೋಮುಖ ಬೆಳವಣಿಗೆ ಉಂಟು ಮಾಡಲು ಸಹಪಠ್ಯ ಚಟುವಟಿಕೆಗಳು ದಾರಿದೀಪವಾಗುತ್ತವೆ.

ಮಕ್ಕಳನ್ನು ಪ್ರತಿಯೊಂದು ರಂಗದಲ್ಲಿ (ಕ್ಷೇತ್ರದಲ್ಲಿ) ಸರ್ವಾಂಗೀಣ ವ್ಯಕ್ತಿಗಳನ್ನಾಗಿ ಮಾಡಬೇಕಾದ ಮಹತ್ತರವಾದ ಜವಾಬ್ದಾರಿ ಎಲ್ಲರದು. ಈ ನಿಟ್ಟಿನಲ್ಲಿ ಕ್ರೀಡೆಗಳು, ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳು, ಚಿತ್ರಕಲೆ, ಲಲಿತ ಕಲೆ, ಶೈಕ್ಷಣಿಕ ಪ್ರವಾಸ, ಕ್ಷೇತ್ರ ಭೇಟಿ, ವಿಜ್ಞಾನ ಮತ್ತು ಗಣಿತ ಮೇಳಗಳು, ರೂಪಕ, ನಾಟಕಗಳು, ಜಾನಪದ ಮೇಳ ಮುಂತಾದ ಸಹಪಠ್ಯವಿಷಯಗಳು ಮಕ್ಕಳ ಬಹುಮುಖ ಪ್ರತಿಭೆಯನ್ನು ಅರಳಿಸಲು ನೆರವಾಗುತ್ತವೆ. ಮೇಲಾಗಿ ಮಕ್ಕಳಿಗೆ, ಹಾಡು, ಆಟ, ಮನೋರಂಜನೆ ಅಂದರೆ ಪಂಚಪ್ರಾಣ. ಈ ನಿಟ್ಟಿನಲ್ಲಿ ಹಲವಾರು ಸಂಘಗಳನ್ನು / ವೇದಿಕೆಗಳನ್ನು, ಶಾಲಾ ಮಟ್ಟದಲ್ಲಿ ರಚಿಸಿಕೊಳ್ಳಬೇಕಾದಂತ ಅವಶ್ಯಕತೆ ಇದೆ. ಈ ವೇದಿಕೆ ಶಾಲಾ ಸಂಸತ್ತು ಎಂಬ ವ್ಯವಸ್ಥೆಯ ಅಡಿಯಲ್ಲಿ ರೂಪುಗೊಳ್ಳುವುದು ಕಾರ್ಯಕ್ರಮಗಳ ವ್ಯವಸ್ಥಿತ ಜೋಡಣೆ ದೃಷ್ಟಿಯಿಂದ ಸಾಧು.

**ಶಾಲಾ ಸಂಸತ್ತು**

ಸಂವಿಧಾನ ಬದ್ಧವಾಗಿ ವ್ಯಕ್ತಿಗೆ ನೀಡಲ್ಪಟ್ಟ ಮತದಾನದ ಅಧಿಕಾರವು ಅತ್ಯಂತ ಜವಾಬ್ದಾರಿಯುತವಾದದ್ದು. ಇದರ ಬಗ್ಗೆ ಎಳವೆಯಿಂದಲೇ (ಬಾಲ್ಯದಿಂದಲೇ) ಶಾಲಾಮಕ್ಕಳಿಗೆ ತರಬೇತಿ ನೀಡುವುದು ಅವಶ್ಯಕವಾಗಿದೆ. ಹೆಣ್ಣು ಮಕ್ಕಳು ಜವಾಬ್ದಾರಿಯುತವಾಗಿ ಕಾರ್ಯನಿಭಾಯಿಸಲು ಆತ್ಮಸ್ಥೈರ್ಯವನ್ನು ಬಾಲ್ಯದಲ್ಲಿಯೇ ಬೆಳೆಸುವುದು ಅಗತ್ಯ. ಶಾಲಾ ಸಂಸತ್ತಿನ ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೂಲಕ 'ನಾಯಕತ್ವ' ಗುಣ ಮೈಗೂಡಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಶಾಲಾ ಸಂಸತ್ತು ಮುಂದಿನಂತೆ ಸಂರಚನೆಗೊಂಡಿರುವುದು ಶಾಲೆಯ ಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಅನುಕೂಲ. ಅಲ್ಲದೆ ಸಂಸತ್ತಿನ ಕಾರ್ಯಕಲಾಪಗಳನ್ನು ಸಹಜವಾಗಿ ಮಕ್ಕಳು ಇದರಿಂದ ಕಲಿಯುತ್ತಾರೆ.

ಶಾಲಾ ಸಂಸತ್ತು :

- ಪ್ರಧಾನ ಮಂತ್ರಿ
- ಕಲಾ ಸಂಘ
- ಪರಿಸರ ಮತ್ತು ವಿಜ್ಞಾನ ಸಂಘ
- ಕ್ರೀಡಾ ಸಂಘ
- ವಾರ್ತಾ ಮತ್ತು ಪ್ರಚಾರ ಸಂಘ
- ಆರೋಗ್ಯ ಮತ್ತು ನೈರ್ಮಲ್ಯ ಸಂಘ

- ಮೀನಾ ಸಂಘ ಮತ್ತು ಮಕ್ಕಳ ಹಕ್ಕುಗಳ ಸಂಘ
- ಪ್ರವಾಸ ಸಂಘ ಇತ್ಯಾದಿ

**ಶಾಲಾ ಸಂಸತ್ತಿನ ರಚನೆ :**

ಶಾಲಾ ಸಂಸತ್ತನ್ನು ವರ್ಷದ ಪ್ರಾರಂಭದಲ್ಲಿ ರಚಿಸಬೇಕು. ಇದಕ್ಕೆ ಮುನ್ನ ವಿಶೇಷಾಧಿಕಾರಿಯವರು ಎಲ್ಲಾ ಶಿಕ್ಷಕರ ಸಭೆ ಏರ್ಪಡಿಸಿ ಜವಾಬ್ದಾರಿ ಹಂಚಿಕೆಯನ್ನು ಮಾಡಬೇಕು. ಹೀಗೆ ಜವಾಬ್ದಾರಿ ಪಡೆದ ಅಧ್ಯಾಪಕರು ಅಥವಾ ಆಯಾ ಸಂಘದ ಸಂಚಾಲಕರು ವಿವಿಧ ಚಟುವಟಿಕೆಗಳಿಗೆ ಅವಶ್ಯಕ ಸಾಮರ್ಥ್ಯ ಇರುವ ಮಕ್ಕಳನ್ನು ಆಯ್ಕೆ ಮಾಡುವುದು. ಮಕ್ಕಳ ಸಂಖ್ಯೆಯು 05–10ರಂತೆ ಇರುವಂತೆ ವಿವಿಧ ಸಂಘಗಳನ್ನು ರಚಿಸುವುದು. ಇವರಲ್ಲಿ ಒಬ್ಬ ವಿದ್ಯಾರ್ಥಿ ಆ ಸಂಘದ ಅಧ್ಯಕ್ಷರಾಗಿರುತ್ತಾಳೆ.

ಈ ಮಕ್ಕಳು ಸಂಬಂಧಿಸಿದ ಸಂಘಗಳ ಕಾರ್ಯಕಲಾಪಗಳನ್ನು ನಡೆಸಲು ಸಾಪೇಕ್ಷವಾಗಿ ಉತ್ತಮ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಹಾಗೆಂದು ಈ ಮಕ್ಕಳೇ ಆಯಾ ಸಂಘಗಳ ಕೆಲಸವನ್ನು ಪೂರ್ಣವಾಗಿ ಮಾಡಬೇಕು ಎಂದು ಆಶಿಸುತ್ತಿಲ್ಲ. ಬದಲಾಗಿ ಈ ಮಕ್ಕಳು ಇತರ ಮಕ್ಕಳನ್ನು ಯೋಜಿತ ವೇಳಾಪಟ್ಟಿಯಂತೆ ಪ್ರಚೋದನೆ/ಪ್ರೇರಣೆ ನೀಡುವ ಮೂಲಕ ಸಂಘದ ಕಾರ್ಯಗಳಲ್ಲಿ ತೊಡಗುವಂತೆ ಮಾಡುತ್ತಾರೆ.

**ಅವಧಿ :**

ಎಲ್ಲಾ ಮಕ್ಕಳು ಎಲ್ಲಾ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಿ ಪರಿಪೂರ್ಣ ವಿದ್ಯಾರ್ಥಿಯಾಗಿ ಹೊರಹೊಮ್ಮಬೇಕು ಎಂಬ ಆಶಯದಿಂದ ಅವಧಿಯನ್ನು ನಿರ್ಧರಿಸಲಾಗಿದೆ. ಶಾಲಾ ಸಂಸತ್ತಿನ ಅವಧಿ ಸಾಮಾನ್ಯವಾಗಿ ಮೂರು ತಿಂಗಳು. ಮೂರು ತಿಂಗಳು ಕಳೆದ ತರುವಾಯ ಶಾಲೆಯಲ್ಲಿ ಒಂದು ಪುಟ್ಟ ಸಮಾರಂಭ ಏರ್ಪಡಿಸಿ ವಿವಿಧ ಸಂಘಗಳು ಮಾಡಿದ ಒಳ್ಳೆಯ ಕೆಲಸ– ಸಾಧನೆಗಳನ್ನು ಶ್ಲಾಘಿಸಬೇಕು ಹಾಗೂ ಮುಂಬರುವ ಸದಸ್ಯರು ಮಾಡಬೇಕಾದ ಕಾರ್ಯವನ್ನು ಹೊಸ ಸಂಘದ ಸದಸ್ಯರಿಗೆ ಪರಿಚಯ ಮಾಡಿಸಬೇಕು. ವಿಶೇಷ ಸಂದರ್ಭದಲ್ಲಿ ಕನಿಷ್ಠ ಅವಧಿಯನ್ನು (03 ತಿಂಗಳು) ಸಂದರ್ಭಕ್ಕೆ ತಕ್ಕಂತೆ ಬದಲಾಯಿಸಕೊಳ್ಳಬಹುದು.

**ಜವಾಬ್ದಾರಿ.**

| | | |
|---|---|---|
| **ಪ್ರಧಾನ ಮಂತ್ರಿ** | : | ಪ್ರಧಾನ ಮಂತ್ರಿಯು ಎಲ್ಲಾ ಸಂಘಗಳ ಗೌರವ ಆಧ್ಯಕ್ಷರಾಗಿರುತ್ತಾರೆನಿವರು ಸಂಘದ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ. ಇತರ ಸಂಘಗಳಲ್ಲಿ ಜರುಗುತ್ತಿರುವ ಕಲಾಪಗಳನ್ನು ವಿವರಿಸಿ ಸಮನ್ವಯತೆ ಸಾಧಿಸುತ್ತಾರೆ. ಅಲ್ಲದೇ ಸಂಚಾಲಕರಿಗೆ ವಸ್ತುಸ್ಥಿತಿಯನ್ನು ತಿಳಿಸುತ್ತಾರೆ. |
| **ಕಲಾಸಂಘ** | : | ಸಾಂಸ್ಕೃತಿಕ (ಹಾಡು, ನೃತ್ಯ, ನಾಟಕ, ಕೋಲಾಟ ಇತ್ಯಾದಿ...) ಸಾಹಿತ್ಯಿಕ (ಭಾಷಣ, ರಸಪ್ರಶ್ನೆ, ಪ್ರಬಂಧ, ಕವನ, ಕಥೆ... ಇತ್ಯಾದಿ) ಚಟುವಟಿಕೆಗಳ ಆಯೋಜನೆ /ಸ್ಪರ್ಧೆ ನಡೆಸುವುದು. |
| **ಪರಿಸರ ಮತ್ತು ಜ್ಞಾನ ಸಂಘ** | : | ಟಿ.ಎಲ್.ಎಮ್. ತಯಾರಿಕೆ, ಗಣಕ ಯಂತ್ರ ನಿರ್ವಹಣೆ, ಪ್ರಯೋಗಾಲಯ ನಿರ್ವಹಣೆ, ವಿಜ್ಞಾನ/ಗಣಿತ ಸೆಟ್ಗಳ |

ನಿರ್ವಹಣೆ, ಗಿಡನೆಡುವ– ಪೋಷಿಸುವ ಕಾರ್ಯಕ್ರಮ, ನೀರು – ಪ್ಲಾಸ್ಟಿಕ್ – ರಾಸಾಯನಿಕ ವಸ್ತುಗಳ ನಿಯಂತ್ರಣ – ಇತ್ಯಾದಿ ಅಂಶಗಳ ಕುರಿತು ವಿದ್ಯಾರ್ಥಿಗಳಲ್ಲಿ ಅಥವ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು. ಮೆಟ್ರಿಕ್ ಮೇಳ – ಟಿ.ಎಲ್.ಎಮ್. ಮೇಳ ಆಯೋಜನೆ /ಯೋಜನಾ ಕಾರ್ಯ ನಿರ್ವಹಿಸುವುದು.

**ಕ್ರೀಡಾ ಸಂಘ** : ಯೋಗ, ಧ್ಯಾನ, ಸ್ಕೌಟ್ಸ್, ಗೈಡ್ಸ್, ಸೇವಾದಳ, ಕರಾಟೆ, ಕ್ರೀಡೆ, ಬೆಳಗಿನ/ ಸಂಜೆಯ ಪ್ರಾರ್ಥನೆಯ ಸಂಘಟನೆ, ಕಾರ್ಯಕ್ರಮಗಳ ನಿರ್ವಹಣೆ ಮಾಡುವುದು.

**ವಾರ್ತಾ ಮತ್ತು ಪ್ರಚಾರ ಸಂಘ** : ಗ್ರಂಥಭಂಡಾರ ಉಪಯೋಗಕ್ಕೆ ವ್ಯವಸ್ಥೆ, ದಿನಪತ್ರಿಕೆ, ನಿಯತಕಾಲಿಕೆಗಳ ಉಪಯೋಗದ ವ್ಯವಸ್ಥೆ. ತರಗತಿಗೊಂದು ಹಸ್ತಪ್ರತಿ, ವಾರ್ಷಿಕ ನಿಯತಕಾಲಿಕೆ. ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳ ವಿವರವನ್ನು ಸುದ್ದಿ ಮಾಧ್ಯಮಗಳಿಗೆ ಬಿಡುಗಡೆ ಮಾಡುವುದು. ಸಭೆ/ಮೇಳ ಸಂಘಟನೆ, ಪ್ರಕಟಣೆ ಫಲಕದ ನಿರ್ವಹಣೆ, ಶಾಲೆಗೆ ಬರುವ ಸಂದರ್ಶನ ಅಧಿಕಾರಿಗಳು, ಸಾರ್ವಜನಿಕರಿಗೆ ಅಗತ್ಯ ಮತ್ತು ಸಾಮಾನ್ಯ ಮಾಹಿತಿಯ ವಿನಿಮಯ.

**ಆರೋಗ್ಯ ಮತ್ತು ನೈರ್ಮಲ್ಯ ಸಂಘ** : ಮಕ್ಕಳ ಆರೋಗ್ಯ ಮತ್ತು ಶಾಲಾ ಪರಿಸರದ ನೈರ್ಮಲ್ಯ ನಿರ್ವಹಣೆ ಈ ಸಂಘದ ಜವಾಬ್ದಾರಿಯಾಗಿದೆ. ನಿಯಮಿತ ಅವಧಿಯಲ್ಲಿ ವೈದ್ಯರ ಭೇಟಿಗೆ ಏರ್ಪಾಡು, ಅನಾರೋಗ್ಯ ಮಕ್ಕಳ ಶುಶ್ರೂಷೆ. ಶಾಲಾಕೋಣೆ– ಶೌಚಾಲಯ–ಸ್ನಾನಗೃಹ–ಕುಡಿಯುವ ನೀರಿನ ಸ್ವಚ್ಚತೆ ಮತ್ತು ಉಸ್ತುವಾರಿ, ಹಾಗೂ ಆರೋಗ್ಯ ಮತ್ತು ಹೆಣ್ಣು ಮಕ್ಕಳ ಸಮಸ್ಯೆ ಕುರಿತ ಆಪ್ತ ಸಮಾಲೋಚನೆ, ಸಂಘಟನೆ,( ಶಾಲಾ ಸಿಬ್ಬಂದಿಯ ಜೊತೆ ಸಹಕರಿಸುವುದು ಎಂದರ್ಥ – ಪ್ರಧಾನ ಜವಾಬ್ದಾರಿ ಮಕ್ಕಳದು ಎಂದಲ್ಲ.) ಈ ಸಂಘದ ಜವಾಬ್ದಾರಿ.

**ಮೀನಾ ಮತ್ತು ಮಕ್ಕಳ ಹಕ್ಕುಗಳ ಸಂಘ** : ಈ ಸಂಘದ ಅಧ್ಯಕ್ಷರು ಇತರ ಸಂಘಗಳಲ್ಲಿ ಒಬ್ಬ ಸದಸ್ಯರಾಗಿದ್ದು ಜಾಗೃತಿ ಮತ್ತು ಪ್ರಚಾರಗಳಲ್ಲಿ ಕಾರ್ಯಕ್ರಮಗಳು ಪುನರಾವರ್ತನೆಗೊಳ್ಳದಂತೆ ನೋಡಿಕೊಳ್ಳ ಬೇಕಾಗಿದೆ. ಮಕ್ಕಳ ಹಕ್ಕುಗಳನ್ನು ಮತ್ತು ಹೆಣ್ಣು ಮಕ್ಕಳ ಸಮಸ್ಯೆ ಕುರಿತಂತೆ ಹೆಣ್ಣು ಮಕ್ಕಳಲ್ಲಿ ಮತ್ತು ಅವರ ಪೋಷಕರಲ್ಲಿ ಜಾಗೃತಿ ಮೂಡಿಸಬೇಕು. ಇದಕ್ಕಾಗಿ ಭಾಷಣ ಮತ್ತು ಅಭಿನಯ ಕಲೆಯಲ್ಲಿ ಈ ಮಕ್ಕಳು ಪರಿಣತಿ ಹೊಂದಿರುವುದು ಯುಕ್ತ. ಹೆಣ್ಣು ಮಕ್ಕಳ ಶಿಕ್ಷಣ, ಬಾಲ್ಯ ವಿವಾಹ ನಿಷೇಧ, ಲಿಂಗ

ತಾರತಮ್ಯತೆ, ಹೆಣ್ಣು ಮಕ್ಕಳ ಸಬಲೀಕರಣ ಮುಂತಾದ ವಿಷಯಗಳು ಈ ಸಂಘದ ಕಾರ್ಯನಿರ್ವಹಣಾ ಕ್ಷೇತ್ರಗಳಾಗಿವೆ.

**ಪ್ರವಾಸ ಸಂಘ** : ಈ ಸಂಘದ ಅಧ್ಯಕ್ಷರು ಪರಿಸರ ಮತ್ತು ವಿಜ್ಞಾನ ಸಂಘ ಮತ್ತು ಮಿನಾ ಸಂಘದ ಸದಸ್ಯರಾಗಿರುವುದು ಯುಕ್ತ. ಹೊರಸಂಚಾರ, ಚಾರಣ, ಕ್ಷೇತ್ರ ಅಧ್ಯಯನ, ಲಘು ಪ್ರವಾಸ ( ಒಂದು ದಿನದ ಮತ್ತು 20 ಕಿ.ಮೀ ಮೀರದ ದೂರ) ಪ್ರವಾಸಗಳ ಆಯೋಜನೆ – ವರದಿ ತಯಾರಿಕೆ ಇತ್ಯಾದಿ ಕಾರ್ಯಗಳನ್ನು ಈ ಸಂಘ ನಿರ್ವಹಿಸಬೇಕು.

## ಸಂಘಗಳ ಕಾರ್ಯನಿರ್ವಹಣೆಯ ಮಾದರಿ

ಶಾಲಾ ಶೈಕ್ಷಣಿಕ ಯೋಜನೆಯು ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳ ವಾರ್ಷಿಕ ಘಟನಾವಳಿಗಳ ದಾಖಲೆಯಾಗಿದೆ. ಇದನ್ನು ಅಧ್ಯಾಪಕರು ಸಭೆ ಸೇರಿ ಮಾಡುತ್ತಾರೆ. ಇದರಂತೆ ಶಾಲಯಲ್ಲೆ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು. ಪ್ರತಿಯೊಂದು ಕೆಲಸದ ಜವಾಬ್ದಾರಿಯನ್ನು ಸಹೋಪಾಧ್ಯಾಯರಿಗೆ/ಸಂಘಗಳಿಗೆ ನೀಡಬೇಕು. ಉದಾಹರಣೆಗೆ ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿರುವ ಅಧ್ಯಾಪಕರು ಶಿಕ್ಷಕರು ನೀಡುವ ಪ್ರಶ್ನೆ ಪತ್ರಿಕೆಗಳ ಸಂಗ್ರಹಣೆ, ಮುದ್ರಣ, ಹಂಚಿಕೆ, ಗ್ರೇಡುಗಳ ಕ್ರೋಡೀಕರಣ ತಃಖ್ತೆಯ ರೂಢಿಸುವಿಕೆಯ ಉಸ್ತುವಾರಿ, ಪ್ರಗತಿ ಪತ್ರ ವಿತರಣೆ – ಉಸ್ತುವಾರಿ ಮಾಡಬೇಕಾಗಿದೆ. ಇವುಗಳನ್ನು ಇತರರ ಸಹಕಾರದಿಂದ ಮಾಡಬೇಕು.

ಇದೇ ರೀತಿ ಬೆಳಗಿನ ಪ್ರಾರ್ಥನೆಯ ವೇಳೆ ಆವರಣದ ಸ್ವಚ್ಚತೆ ಮತ್ತು ಮಕ್ಕಳ ಸ್ವಚ್ಛತೆಯ ಪರೀಕ್ಷೆಯನ್ನು (ಸ್ವಚ್ಛತಾ ಗಡಿಯಾರ) ಆರೋಗ್ಯ ಮತ್ತು ನೈರ್ಮಲ್ಯ ಸಂಘ ನಿರ್ವಹಿಸಿದರೆ–ಕ್ರೀಡಾ ಸಂಘವು ಮಕ್ಕಳನ್ನು ಶಿಸ್ತಿನಿಂದ ನಿಲ್ಲಿಸುವುದು, ಪ್ರಾರ್ಥನೆ – ನಾಡಗೀತೆ ಹಾಗೂ ರಾಷ್ಟ್ರಗೀತೆಗಳನ್ನು ಹಾಡಲು ಮತ್ತು ಶಿಸ್ತಿನಿಂದ ಮಕ್ಕಳು ಶಾಲಾ ಕೋಣೆಗೆ ತೆರಳಲು ಸಹಕರಿಸುತ್ತದೆ. ಅದೇ ರೀತಿ ವಾರ್ತಾ ಮತ್ತು ಪ್ರಚಾರ ಸಂಘ ಸುದ್ದಿ ವಾಚನ, ನೀತಿ ವಾಕ್ಯ ವಾಚನ, ದಿನದ ವಿಶೇಷತೆಯ ಕುರಿತು ನಾಲ್ಕಾರು ಮಾತುಗಳು, ಇತ್ಯಾದಿ ಅಂಶಗಳನ್ನು ಸಂಘಟಿಸಿ ಪ್ರಾರ್ಥನೆಯ ವೇಳೆಯಲ್ಲಿ ಹೇಳಿಸುವ ವ್ಯವಸ್ಥೆ ಮಾಡುತ್ತದೆ. ಹಾಗೆಯೇ ಪರಿಸರ ಮತ್ತು ವಿಜ್ಞಾನ ಸಂಘವು ಗಿಡಗಳಿಗೆ ನೀರು ಉಣಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತದೆ.

ಈ ಕಾರ್ಯಗಳನ್ನು ಸರಿಯಾಗಿ ಜೋಡಣೆ ಮಾಡಿ ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಣೆಯಾಗಲು ಮಕ್ಕಳು ವಿವಿಧ ತಂಡಗಳಲ್ಲಿ ಕೆಲಸ ಮಾಡುವಂತೆ ವೇಳಾಪಟ್ಟಿಯನ್ನು ರಚಿಸಬೇಕು. ಈ ಕಾರ್ಯವನ್ನು ಅಧ್ಯಾಪಕರು ನಿರ್ವಹಿಸುವುದು. ಈ ವೇಳಾಪಟ್ಟಿ ಮಕ್ಕಳ ಗಮನದಲ್ಲಿ ಇರುವಂತೆ ಕ್ರಮವಹಿಸುವುದು. ಅನುಷ್ಠಾನವನ್ನು ಆಯಾ ಸಂಘಗಳು ಮಾಡಬೇಕು. ಇಂತಹ ಕಾರ್ಯನಿರ್ವಹಣೆಯಲ್ಲಿ ಪ್ರಧಾನ ಮಂತ್ರಿಯೂ ಸೇರಿದಂತೆ ಯಾವ ಸದಸ್ಯರಿಗೂ ವಿನಾಯಿತಿ ಇರುವುದಿಲ್ಲ. ಅವರವರ ಸರತಿಯಂತೆ ಕಾರ್ಯವನ್ನು ಆಯಾ ಅವಧಿಯಲ್ಲಿ ನಿರ್ವಹಿಸಬೇಕು. ಸಕಾರಣಗಳಿದ್ದಾಗ ಮಾತ್ರ ವಿನಾಯಿತಿ ನೀಡಬೇಕು.

## ವಿವಿಧ ಸಂಘಗಳು ನಿರ್ವಹಿಸುವ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸ್ಥೂಲ ಮಾರ್ಗದರ್ಶನ

➢ **ಸಾಂಸ್ಕೃತಿಕ ಕಾರ್ಯಕ್ರಮಗಳು :**

- ನಾಡಗೀತೆ, ರಾಷ್ಟ್ರಗೀತೆ – ದೇಶಭಕ್ತಿಗೀತೆ – ಪ್ರಾರ್ಥನಾ ಗೀತೆಗಳನ್ನು ಹಾಡುವುದನ್ನು ಅಭ್ಯಾಸ ಮಾಡಿಸುವುದು.

- **ಭಾವಗೀತೆ–ಜಾನಪದ ಗೀತೆ** : ಬೀಸುವ ಕಲ್ಲಿನ ಪದ, ಸೋಬಾನೆ ಪದ, ಗೀಗಿ ಪದ, ಭಜನೆ
ಇತ್ಯಾದಿಗಳನ್ನು ಹಾಡಿಸುವುದು.

- ರೂಪಕ, ಸಂಭಾಷಣೆ, ಅಭಿನಯ, ನಾಟಕ, ಯಕ್ಷಗಾನ ನೃತ್ಯ, ಡೊಳ್ಳು ಕುಣಿತ, ಕೋಲಾಟ, ಇತ್ಯಾದಿಗಳನ್ನು ಅಭ್ಯಾಸ ಮಾಡಿಸುವುದು.

- **ಶಾಸ್ತ್ರೀಯ ಸಂಗೀತಾಭ್ಯಾಸ** : ತಬಲ, ಕೊಳಲು, ವೀಣೆ, ಹಾರ್ಮೋನಿಯಂ, ಡೊಳ್ಳು, ಇತ್ಯಾದಿ ವಾದ್ಯಗಳನ್ನು ನುಡಿಸಲು ಕಲಿಸುವುದು.

**ಅನುಷ್ಠಾನ :**

- ಆಯಾ ಕ್ಷೇತ್ರಕ್ಕೆ ಸರಿಹೊಂದುವ ಮಕ್ಕಳನ್ನು ಆಯ್ಕೆ ಮಾಡಿಕೊಳ್ಳುವುದು.
- ಗುಂಪಿನಲ್ಲಿ ಅಭ್ಯಾಸ ಮಾಡಿಸುವುದು. ಇದಕ್ಕೆ ಶಾಲಾ ಅವಧಿಯ ತರುವಾಯದ ಸಮಯ ಪ್ರಶಸ್ತ.
- ನಾಡಗೀತೆ ಮತ್ತಿತರ ಗೀತೆಗಳನ್ನು ಎಲ್ಲರೂ ಕಲಿಯಬೇಕು. ಅದಕ್ಕೆ ಅವಕಾಶ ಮಾಡಿ ಕೊಡುವುದು.
- ತಿಂಗಳಿಗೊಮ್ಮೆ ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವುದು.
- ಪ್ರತಿಭಾ ಕಾರಂಜಿಯ ಚಟುವಟಿಕೆಗಳನ್ನು ಆಯಾ ತಿಂಗಳಿನಲ್ಲಿ ಸಮಾಯೋಜನೆ ಮಾಡುವುದು.
- ವಾರ್ಷಿಕೋತ್ಸವ ವೇಳೆಯಲ್ಲಿ ಎಲ್ಲ ಮಕ್ಕಳು ಭಾಗವಹಿಸಲು ಅವಕಾಶ ಕಲ್ಪಿಸುವುದು.
- ಚಟುವಟಿಕೆಯಲ್ಲಿ ಮಗುವಿನ ಭಾಗವಹಿಸುವಿಕೆ ಪ್ರಧಾನ . ನೈಪುಣ್ಯತೆಗೆ ನಮ್ಮ ಆದ್ಯತೆ ಎರಡನೆಯದು.
- ಸ್ಥಳೀಯ ಸನ್ನಿವೇಶಗಳಿಗೆ ಅನುಗುಣವಾಗಿ ಸ್ಪರ್ಧೆಗಳನ್ನು ನಡೆಸಿ–ಉತ್ತೇಜನ ನೀಡುವುದು.

**ಹಣಕಾಸು :**

- ಕಲಿಕೋಪಕರಣಗಳಿಗೆ 3 ಲಕ್ಷ ರೂಪಾಯಿಗಳಿವೆ. ಇದರಲ್ಲಿ ಅಗತ್ಯವೆನಿಸಿದ ಸಂಗೀತ ವಾದ್ಯಗಳನ್ನು ಖರೀದಿಸಬಹುದು.
- ಈ ಹಣ ಇಲ್ಲವಾದರೆ ಆವರ್ತಕ ವೆಚ್ಚದಲ್ಲಿ ಖರೀದಿಸಲು ಕೇಂದ್ರ ಕಚೇರಿ ಅನುಮತಿ ಪಡೆದು ಖರೀದಿಸಬಹುದು.

➢ **ಸಾಹಿತ್ಯಿಕ ಕಾರ್ಯಕ್ರಮಗಳು :**

- ಭಾಷಣ – ಆಶುಭಾಷಣ – ಚರ್ಚಾಗೋಷ್ಠಿ–ರಸಪ್ರಶ್ನೆ– ಪ್ರಬಂಧ ಬರವಣಿಗೆ.
- ಕಥೆ – ಕವನ ರಚನೆ – ಲೇಖನ ರಚನೆ.
- ಕವನ – ಕಾವ್ಯ ವಾಚನ, ಕಥೆಗಳ ವಾಚನ.

- ಸ್ಥಳಿಯ ಕವಿಗಳ ಭೇಟಿ ; ಸಾಹಿತ್ಯಿಕ ಪ್ರಾಧಾನ್ಯತೆಯುಳ್ಳ ಹತ್ತಿರದ ಸ್ಥಳಗಳಿಗೆ ಭೇಟಿ.

**ಅನುಷ್ಠಾನ :**

- ಆಯಾ ಕ್ಷೇತ್ರದಲ್ಲಿ ಭರವಸೆ ಮೂಡಿಸುವ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸಿ. ಆದರೂ ಎಲ್ಲಾ

  ಮಕ್ಕಳು ಕೆಲವು ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ.

- ವಾರಕ್ಕೆ ಸುಮಾರು 02 ಗಂಟೆಗಳ ಅವಧಿಯನ್ನು (ಶಾಲೆ ಮತ್ತು ಶಾಲೇತರ) ಈ ಚಟುವಟಿಕೆಗಳ ಅಭ್ಯಾಸಕ್ಕೆ ಮೀಸಲಿಡುವುದು..
- ತಿಂಗಳಿಗೊಮ್ಮೆ ಕಾರ್ಯಕ್ರಮದ ಪ್ರದರ್ಶನವನ್ನು ಸಂಘಟಿಸುವುದು.
- ವಾರ್ಷಿಕೋತ್ಸವದ ಸಂದರ್ಭದಲ್ಲಿ ಸ್ಪರ್ಧೆ ಏರ್ಪಡಿಸಬಹುದು.

**ಹಣಕಾಸು :**

- ಇದು ಶೂನ್ಯ ಬಜೆಟ್ ಕಾರ್ಯಕ್ರಮ. ಅಗತ್ಯವೆನಿಸಿದ ಲೇಖನ ಸಾಮಗ್ರಿಗಳನ್ನು ಶಾಲೆಯಿಂದ

  ಪಡೆಯಬಹುದು.

- ಕ್ಷೇತ್ರ ಅಧ್ಯಯನಕ್ಕೆ ಬೇಕಾದ ಹಣ ಹೊಂದಾಣಿಕೆಗೆ –[ ನೋಡಿ ಪ್ರವಾಸ ಸಂಘ ಕಾರ್ಯಕ್ರಮ]

➢ **ಕಲಿಕಾ – ಬೋಧನಾ ಸಾಮಗ್ರಿ ತಯಾರಿಕೆ :**

- ಕಲಿಕೆ ಬೋಧನೆಗೆ ಉಪಯುಕ್ತವೆನಿಸುವ ಸಾಮಗ್ರಿಗಳ ತಯಾರಿಕೆ.
- ಇವುಗಳ ತಯಾರಿಕೆಯಲ್ಲಿ ಮಕ್ಕಳು ಭಾಗವಹಿಸುವುದರಿಂದ ಪರಿಕಲ್ಪನೆಗಳು ಚೆನ್ನಾಗಿ ಮೂಡುತ್ತವೆ.
- ಸ್ಥಳೀಯ ಮತ್ತು ಕಡಿಮೆ ಖರ್ಚಿನ ಸಾಮಗ್ರಿ ತಯಾರಿಕೆ ಅಪೇಕ್ಷಣೀಯ.

**ಅನುಷ್ಠಾನ :**

ಪ್ರತಿ ತರಗತಿ ವಿಷಯದಲ್ಲಿ ಬರುವ ಪರಿಕಲ್ಪನೆಗಳು ಹಾಗೂ ಅವುಗಳನ್ನು ವಿವರಿಸಲು ಬೇಕಾದ ಸಾಮಗ್ರಿಗಳ ಪಟ್ಟಿ ಮೊದಲು ಮಾಡ ಬೇಕು. ಉದಾ : ಹೃದಯದ ಚಿತ್ರ ಮತ್ತು ಅದರ ಭಾಗಗಳು – ವಿಲ್ಲೆ ರಚನೆ – ಚರ್ಮದ ಭಾಗಗಳು – ಕೊಳಾಯಿ ವ್ಯವಸ್ಥೆ – ಮಾದರಿ ಗ್ರಾಮ – ಗೋಬರ್ ಗ್ಯಾಸ್ ಮಾದರಿ, ಸಂಸತ್ತಿನ ರಚನೆ – ಜಿಲ್ಲಾ ಪಂಚಾಯತ್ ರಚನೆ, ಮಿಂಚುಪಟ್ಟಿ – ಸಮಾನಾರ್ಥಕ ಪದಗಳ ಸೂಚಿ – ಕಾರ್ಯನಿರತ ಮಾದರಿಗಳು (ಅಗ್ನಿ ಪರ್ವತ) ಇತ್ಯಾದಿಗಳು.

(ಭಾವ ಚಿತ್ರ ತದ್ರೂಪ ಚಿತ್ರ ಬಿಡಿಸುವ ಕಾರ್ಯಕ್ರಮಗಳು ಬೇಡ).

- ಬೇಕಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು.
- ತಿಂಗಳಲ್ಲಿ ಅರ್ಧ ದಿನ ಈ ಕಾರ್ಯಕ್ರಮಕ್ಕಾಗಿ ವಿನಿಯೋಗಿಸುವುದು. ವಿಶೇಷಾಧಿಕಾರಿಯವರು ಎಲ್ಲ ತರಗತಿಗಳ ಮಕ್ಕಳು ಈ ಕಾರ್ಯದಲ್ಲಿ ತೊಡಗುವಂತೆ

ವ್ಯವಸ್ಥೆಗೊಳಿಸಲಿ. ಈಗಾಗಲೇ ಬೋಧಿಸಿರುವ ಪರಿಕಲ್ಪನೆಗಳಿಗೆ ಸಂಬಂಧಿಸಿದ ಕಲಿಕೆ–ಬೋಧನೆ ಸಾಮಗ್ರಿ ತಯಾರಿಕೆ ಸುಲಭ ಮತ್ತು ಗ್ರಾಹ್ಯ. ಅಲ್ಲದೇ ಕಲಿಕೆಯ ಧೃಡೀಕರಣಕ್ಕೆ ಇದು  ಉತ್ತಮ ಸಾಧನ.

- ವರ್ಷಾಂತ್ಯದಲ್ಲಿ ಒಂದು ಪುಟ್ಟ ಪ್ರದರ್ಶನ ಏರ್ಪಡಿಸಿ. ಹತ್ತಿರದ ಶಾಲೆಯ ಮಕ್ಕಳು, ಪೋಷಕರು, ಸಾರ್ವಜನಿಕರಿಗೆ ವೀಕ್ಷಿಸುವ ಅವಕಾಶ ಕಲ್ಪಿಸುವುದು.

**ಹಣಕಾಸು :**

- ಲೇಖನ ಸಾಮಗ್ರಿಗಳಿಗಾಗಿ ಪ್ರತಿ ತಿಂಗಳಿಗೆ ಪ್ರತಿ ವಿದ್ಯಾರ್ಥಿಗೆ ನೀಡುವ ರೂ.50/–ರಲ್ಲಿ ಇದಕ್ಕೆ ಬೇಕಾದ ಹಣವನ್ನು ಸರಿದೂಗಿಸುವುದು.

➢ **ಗಣಕಯಂತ್ರ – ಪ್ರಯೋಗಾಲಯ – ವಿಜ್ಞಾನ/ಗಣಿತ  ಕಿಟ್‌ಗಳ ನಿರ್ವಹಣೆ :**

- ನಿರ್ವಹಣೆ ಎಂಬುದನ್ನು ಸ್ವಚ್ಛವಾಗಿ, ವಸ್ತುಗಳು ಹಾಳಾಗದಂತೆ ಸುಲಭವಾಗಿ ದೊರೆಯುವಂತೆ ವಸ್ತುಗಳನ್ನು ಸಂರಕ್ಷಿಸಬೇಕು ಎಂಬ ಅರ್ಥದಲ್ಲಿ ಬಳಸಿದೆ.

**ಅನುಷ್ಠಾನ :**

- ಇದಕ್ಕಾಗಿ ರಚಿತವಾದ ಸಂಘದಿಂದ ಇವುಗಳ ನಿರ್ವಹಣೆ ಮಾಡಲು ವ್ಯವಸ್ಥೆ ಮಾಡುವುದು.
- ಪ್ರಬಲ ಆಮ್ಲ ಮತ್ತು ವಿಷ ವಸ್ತುಗಳನ್ನು ಮರದ ಪೆಟ್ಟಿಗೆಯಲ್ಲಿ ಇಡುವುದು ಸೂಕ್ತ.
- ರಾಸಾಯನಿಕಗಳನ್ನು ಶೆಲ್ಫ್‌ನಲ್ಲಿ ಸಂಗ್ರಹಿಸಿ ಇಡುವುದು ಸೂಕ್ತ.
- ಗಣಕ ಯಂತ್ರಗಳ ಮೇಲೆ ಧೂಳು ಕೂರದಂತೆ ವ್ಯವಸ್ಥೆಗೊಳಿಸುವುದು. ಶಾಲೆಯ ನಂತರ ಗಣಕ ಯಂತ್ರ ಕೋಣೆಗೆ ವಿದ್ಯುತ್ ನಿಲುಗಡೆ ಮಾಡುವುದು ಯುಕ್ತ.
- ಸರತಿಯ ಮೇಲೆ ಈ ಸಂಘದ ಸದಸ್ಯರು ಈ ಕಾರ್ಯ ನಿರ್ವಹಿಸುವುದು.
- ವಸ್ತುಗಳ ಸಂರಕ್ಷಣೆಗೆ ನೀಡಿದ ಸೂಚನೆ ಪಾಲಿಸುವುದು.

**ಹಣಕಾಸು :**

- ಶೂನ್ಯ ಬಜೆಟ್ ಕಾರ್ಯಕ್ರಮ

➢ **ಗಿಡನೆಡುವ ಪೋಷಿಸುವ ಕಾರ್ಯಕ್ರಮ**

- ಗಿಡ ನೆಡಲು, ಪೋಷಿಸಲು –  ಶಾಲೆಯ ಜಾಗ ಮತ್ತು ನೀರನ್ನು ಆಧರಿಸಿ ನಿರ್ಧರಿಸಬೇಕು. ಕಟ್ಟಡಕ್ಕೆ ತುಂಬಾ ಹತ್ತಿರವಾಗಿ ದೊಡ್ಡ ಸಸ್ಯಗಳನ್ನು ಬೆಳೆಸುವುದು ಬೇಡ. ಯೋಜಿಸುವಾಗ ನೆರಳಿಗೆ , ಪ್ರಾಣಿ ಪಕ್ಷಿಗಳ ಉಳಿವಿಗೆ , ಸ್ಥಳೀಯ ಸಸ್ಯಗಳಿಗೆ, ಮಕ್ಕಳಿಗೆ ಉಪಯೋಗವೆನಿಸುವ ಗಿಡಗಳಿಗೆ – ಸೌಂದರ್ಯ ವೃದ್ಧಿಗೆ ಅವಕಾಶವಿರುವ ಗಿಡಗಳನ್ನು ಬೆಳೆಸಿ ಪೋಷಿಸಲು ಅವಕಾಶವಿರಲಿ.

- ಇದು ಶೂನ್ಯ ಬಜೆಟ್ ಕಾರ್ಯಕ್ರಮ. ಅಗತ್ಯವೆನಿಸುವ ಪರಿಕರಗಳನ್ನು ಸಾದಿಲ್ವಾರಿಗಾಗಿ ನೀಡಿದ ಹಣದಲ್ಲಿ ಬಳಕೆ ಮಾಡಬಹುದು.

- ಶಾಲೇತರ ಅವಧಿಯಲ್ಲಿ ಈ ಕಾರ್ಯಕ್ರಮ ನಡೆಸುವುದು ಯುಕ್ತ.

## ➢ ವ್ಯಾಯಾಮ – ಕರಾಟೆ – ಯೋಗ – ಪ್ರಾರ್ಥನೆ – ಧ್ಯಾನ ಕಾರ್ಯಕ್ರಮ :

- ಇವು ಪ್ರತಿನಿತ್ಯ ನಡೆಯುವ ಕಾರ್ಯಕ್ರಮಗಳು. ಬೆಳಗಿನ ಅವಧಿ (7.00 ರಿಂದ 7.45)ಮತ್ತು ರಾತ್ರಿಯ ಅವಧಿಗಳನ್ನು (6.30 ರಿಂದ 7.00) ಈ ಕಾರ್ಯಕ್ರಮಕ್ಕೆ ಮೀಸಲಿಟ್ಟಿದೆ.

**ಅನುಷ್ಠಾನ**

- ಮೇಲಿನ ಎಲ್ಲಾ ಕಾರ್ಯಕ್ರಮಗಳು ಬೆಳಗಿನ ಅವಧಿಯಲ್ಲಿ ಇರಲಿ. ರಾತ್ರಿಯ ವೇಳೆ ಪ್ರಾರ್ಥನೆ ಮತ್ತು ಧ್ಯಾನ ಚಟುವಟಿಕೆಗಳನ್ನು ಮಾಡುವುದು.

- ಮೊದಲು ಲಘು ವ್ಯಾಯಾಮ – ಕರಾಟೆ / ಯೋಗ ಚಟುವಟಿಕೆಯನ್ನು ಮಾಡಿಸುವುದು. ಈ ಕಾರ್ಯಕ್ರಮಗಳು ಮಕ್ಕಳಿಗೆ ಹೊರೆಯಾಗಕೂಡದು ಜೊತೆಗೆ **ಪಠ್ಯವಸ್ತುವಿನಲ್ಲಿ ಹೇಳಿರುವಂತೆ ಹಿರಿಯ ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ಸರಿಹೊಂದುವ ಚಟುವಟಿಕೆಗಳನ್ನು ಮಾತ್ರ ಮಾಡಿಸತಕ್ಕದ್ದು.**

- ವ್ಯಾಯಾಮ – ಕರಾಟೆ – ಯೋಗಕ್ಕಾಗಿ ಸುಮಾರು 30 ನಿಮಿಷ ವಿನಿಯೋಗಿಸಿ – ಪ್ರಾರ್ಥನೆ ಮತ್ತು ಧ್ಯಾನಕ್ಕಾಗಿ 15 ನಿಮಿಷ ಬಳಸುವುದು.

- ಯೋಗ ಅಭ್ಯಾಸದಲ್ಲಿ ಪ್ರಾಣಾಯಾಮದ ಕೆಲವು ಸರಳ ಆಸನಗಳನ್ನು ಅಭ್ಯಾಸ ಮಾಡಿಸುವುದು.

- ಸಂಜೆಯ ಅವಧಿಯಲ್ಲಿ ಪ್ರಾಣಾಯಾಮವನ್ನು 05–06 ನಿಮಿಷ ಮಾಡಿಸಬಹುದು.

- ಪ್ರತಿ ಮಗುವಿನ ವಿಕಾಸವನ್ನು ಗಮನಿಸಿ ಮಾರ್ಗದರ್ಶನ ಮಾಡುವುದು.

**ಹಣಕಾಸು :**

ಇದು ಶೂನ್ಯ ಬಜೆಟ್ ಕಾರ್ಯಕ್ರಮ.

## ➢ ಗೈಡ್ಸ್ ಮತ್ತು ಸೇವಾದಳ ಕಾರ್ಯಕ್ರಮಗಳು :

- ಪ್ರತಿ ಕೆ.ಜಿ.ಬಿ.ವಿ. ಶಾಲೆಯಲ್ಲಿ ಒಂದೊಂದು ಗೈಡ್ಸ್ ಮತ್ತು ಸೇವಾದಳ ತಂಡ ರಚನೆಯಾಗಬೇಕು.

**ಅನುಷ್ಠಾನ :**

- ಆಸಕ್ತ ವಿದ್ಯಾರ್ಥಿನಿಯರನ್ನು ಆಯ್ಕೆ ಮಾಡಿಕೊಳ್ಳಿ. ಎಲ್ಲ ಮಕ್ಕಳು ಯಾವುದಾದರೊಂದು ತಂಡದಲ್ಲಿ ಇರುವಂತೆ ವ್ಯವಸ್ಥೆ ಮಾಡುವುದು.

- ಸಮವಸ್ತ್ರಗಳನ್ನು ಆಯಾ ಕಾರ್ಯಕ್ರಮಕ್ಕೆ ತಕ್ಕಂತೆ ನೀಡಬೇಕು.

- ಭಾನುವಾರ ಮತ್ತು ಶನಿವಾರ ಮಧ್ಯಾಹ್ನದ ಕೆಲವು ಗಂಟೆಗಳ ಅವಧಿಯನ್ನು ಈ ಚಟುವಟಿಕೆಗಳಿಗೆ ಮೀಸಲಿಡುವುದು.

- ಸ್ಥಳೀಯವಾಗಿ ನಡೆಯುವ ಕಾರ್ಯಕ್ರಮಗಳ ಪಥಸಂಚಲನಕ್ಕೆ ಈ ಮಕ್ಕಳನ್ನು ಕಳುಹಿಸಬಹುದು.

- ಅದೇ ರೀತಿ ಸ್ಥಳೀಯವಾಗಿ ನಡೆಯುವ ಸೇವಾದಳ /ಗೈಡ್ಸ್ ಸಮಾವೇಶಗಳಿಗೆ ಈ ಮಕ್ಕಳನ್ನು ಕಳುಹಿಸಬಹುದು.

**ಹಣಕಾಸು :**

ಮಕ್ಕಳ ಸಮವಸ್ತ್ರ ಮತ್ತು ಸಮಾವೇಶಗಳ ಭಾಗವಹಿಸುವಿಕೆಗಾಗಿ ವಿದ್ಯಾರ್ಥಿ ವೇತನವನ್ನು ಭರಿಸಬಹುದು. ಅಥವಾ ಸಾದಿಲ್ವಾರು ಬಾಬ್ತಿನಲ್ಲಿ ಉಳಿಕೆಯಾದರೆ ಕೇಂದ್ರ ಕಚೇರಿಯ ಪೂರ್ವ ಅನುಮತಿ ಪಡೆದು ಬಳಸಬಹುದು.

➢ **ಗ್ರಂಥ ಭಂಡಾರ, ದಿನಪತ್ರಿಕೆ ವಾರಪತ್ರಿಕೆಗಳ ಉಪಯೋಗ :**

- ಗ್ರಂಥ ಭಂಡಾರದಲ್ಲಿ ಮಕ್ಕಳಿಗೆ ಉಪಯುಕ್ತವಾಗುವ ಮಕ್ಕಳ ಸಾಹಿತ್ಯ, ನಿಘಂಟುಗಳು, ವಿಶ್ವಕೋಶ, ಮುಂತಾದ ಪುಸ್ತಕಗಳನ್ನು ಸಂಗ್ರಹಿಸಿಡಬೇಕು.

- ದಿನಪತ್ರಿಕೆ ಮತ್ತು ವಾರಪತ್ರಿಕೆಗಳು ಮಕ್ಕಳಿಗೆ ಲಭ್ಯವಾಗಬೇಕು. ಒಂದು ಕನ್ನಡ ಮತ್ತು ಒಂದು ಆಂಗ್ಲ ದಿನಪತ್ರಿಕೆ, ಸುಧಾ , ಕಸ್ತೂರಿ ಚಂದಮಾಮ, ಬಾಲವಿಜ್ಞಾನ ಮುಂತಾದ ರಾಜ್ಯಮಟ್ಟದಲ್ಲಿ ಸರಬರಾಜಾಗುವ ನಿಯತಕಾಲಿಕೆಗಳು ಓದಲು ದೊರೆಯಬೇಕು. ಅಲ್ಪಸಂಖ್ಯಾತ ಶಾಲೆಗಳು ಆಯಾ ಭಾಷೆಯ ಪತ್ರಿಕೆ ತರಿಸಲು ವ್ಯವಸ್ಥೆ ಮಾಡಬಹುದು. ಸರಳ ಕಥೆಗಳಿರುವ (ಇಂಗ್ಲೀಷ್) ಒಂದು ನಿಯತಕಾಲಿಕೆಯನ್ನು ತರಿಸುವುದು.

**ಅನುಷ್ಠಾನ :**

- ಒಂದೇ ಶೀರ್ಷಿಕೆಯ ಹಲವಾರು ಪ್ರತಿಗಳನ್ನು ಸಂಗ್ರಹಿಸುವುದು ಯುಕ್ತವಲ್ಲ. 2/3 ಪ್ರತಿಗಳು ಸಾಕು.

- ಎಲ್ಲ ಮಕ್ಕಳಿಗೆ ದೊರೆಯುವಂತೆ ಪುಸ್ತಕ ಅಥವ ದಿನಪತ್ರಿಕೆ ಅಥವಾ ವಾರಪತ್ರಿಕೆ ಇಡಬೇಕು.

- ಶಾಲೇತರ ಅವಧಿಯಲ್ಲಿ ಮಗು ಓದಲು ಅನುಕೂಲಕರವಾಗುವಂತೆ ಮಕ್ಕಳಿಗೆ ಪುಸ್ತಕ/ನಿಯತಕಾಲಿಕೆಗಳ ಹಂಚಿಕೆ ಮಾಡಬೇಕು. ನಿಯತಕಾಲಿಕೆಗಳನ್ನು ಮಕ್ಕಳ ತಂಡ ಮಾಡಿ ತಂಡಕ್ಕೆ ನೀಡಬಹುದು ಅಥವಾ ಪ್ರತ್ಯೇಕ ಕೋಣೆ ಲಭ್ಯವಿದ್ದರೆ ಮಕ್ಕಳಿಗೆ ಅವಕಾಶ ದೊರೆತಾಗ ಬಂದು ಓದಲು ಅವಕಾಶ ನೀಡಬೇಕು.

- ಹಂಚಿಕೆ ಮುಂತಾದ ಉಸ್ತುವಾರಿಯನ್ನು ಆಯಾ ಸಂಘಕ್ಕೆ ನೀಡಬಹುದು.

- ವಾರಕ್ಕೊಮ್ಮೆ ಮಕ್ಕಳು ಓದಿದ ಸಾಹಿತ್ಯವನ್ನು ಸಂಚಾಲಕರು ಪರಿಶೀಲಿಸಿ ಹಿಮ್ಮಾಹಿತಿ ನೀಡುವುದು.

- ಮಕ್ಕಳು ಓದಿದ ನಂತರ ಓದಿದ ಪುಸ್ತಕದ ಬಗ್ಗೆ ಕನಿಷ್ಠ ಒಂದು ಪುಟ ಬರೆಯಲು ಮಕ್ಕಳಿಗೆ ತಿಳಿಸಬಹುದು.

**ಹಣಕಾಸು :**

- ಗ್ರಂಥ ಭಂಡಾರವನ್ನು ಅಭಿವೃದ್ಧಿ ಪಡಿಸಲು 20 ಸಾವಿರ ರೂಪಾಯಿಗಳನ್ನು ನೀಡಲಾಗಿದೆ. ಇದರ ಜೊತೆಗೆ ನಿರ್ವಹಣಾ ಅನುದಾನವಾಗಿ ಪ್ರತಿ ವರ್ಷ 35,000ರೂಗಳನ್ನು ಪ್ರತಿ ಕೆ.ಜಿ.ಬಿ.ವಿ.ಗೆ ನೀಡಲಾಗುತ್ತದೆ. ಈ ಹಣದ ಸ್ವಲ್ಪ ಭಾಗವನ್ನು ಬಳಸಿ ಗ್ರಂಥಭಂಡಾರ ಅಭಿವೃದ್ಧಿ ಪಡಿಸಬೇಕು.

- **ತರಗತಿಗೊಂದು ಹಸ್ತ ಪ್ರತಿ/ವಾರ್ಷಿಕ ನಿಯತಕಾಲಿಕೆ:**

ಇವುಗಳನ್ನು ಶಾಲೆಯೇ ಹೊರತರಬೇಕು. ಎಲ್ಲ ಮಕ್ಕಳಿಗೆ ಈ ಸಾಹಿತ್ಯ ಓದಲು ಲಭ್ಯವಾಗುವಂತೆ ನೋಡಿಕೊಳ್ಳಬೇಕು.

**ಅನುಷ್ಠಾನ :**

- ವಾರ್ತಾ ಮತ್ತು ಪ್ರಚಾರ ಸಂಘ ಕಲಾ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿರುತ್ತದೆ. ಅಲ್ಲದೆ ಇತರ ಸಂಘಗಳೊಂದಿಗೆ ಸಂಪರ್ಕ ಹೊಂದಿದ್ದು ಅಲ್ಲಿ ನಡೆಯುವ ಮುಖ್ಯ ಘಟನೆಯನ್ನು ಸಂಗ್ರಾಹ್ಯವಾಗಿ ದಾಖಲಿಸುತ್ತದೆ.
- ಮಕ್ಕಳು ಸಂಗ್ರಹಿಸಿದ/ ರಚಿಸಿದ ಸಾಹಿತ್ಯವನ್ನು ತ್ರೈಮಾಸಿಕ ಆವರ್ತಕದಲ್ಲಿ ಕ್ರೋಡೀಕರಿಸಿ ಟೈಪು ಮಾಡಿ ಮಕ್ಕಳು ವಾಚನ ಮಾಡಲು ಅವಕಾಶ ಮಾಡಿಕೊಡುವುದು.
- ಈ ತ್ರೈಮಾಸಿಕ ನಿಯತಕಾಲಿಕೆಗಳಲ್ಲಿನ ಉತ್ತಮ ಸಾಹಿತ್ಯವನ್ನು ಶಾಲೆಯ ವಾರ್ಷಿಕ ನಿಯತಕಾಲಿಕೆಯಲ್ಲಿ ಪ್ರಕಟಿಸುವುದು. ಈ ನಿಯತಕಾಲಿಕೆಗೆ ಸ್ಥಳೀಯವಾದ ಆಕರ್ಷಕ ಹೆಸರನ್ನು ಇಡುವುದು. ಈ ಪುಸ್ತಕ ಎಲ್ಲರೂ ಓದಲು ಲಭ್ಯವಾಗಬೇಕು. ಇದರ ಪ್ರತಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು [ಬಿ.ಇ.ಓ] / ಜಿಲ್ಲಾ ಉಪನಿರ್ದೇಶಕರು [ಡಿ.ಡಿ.ಪಿ.ಐ.] ಮತ್ತು ರಾಜ್ಯ ಯೋಜನಾ ನಿರ್ದೇಶಕರು [ಎಸ್.ಪಿ.ಡಿ.]ಯವರ ಕಛೇರಿಗೆ ಮಾಹಿತಿಗಾಗಿ ಕಳುಹಿಸಬೇಕು. ಈ ಪುಸ್ತಕದ ವಿಸ್ತಾರ 60 ಪುಟ ಮೀರಬಾರದು.
- ವಾರ್ಷಿಕ ನಿಯತಕಾಲಿಕೆ ಕೆಜಿಬಿವಿ ಶಾಲೆಯಲ್ಲಿ ಒಂದು ಶೈಕ್ಷಣಿಕ ವರ್ಷದಲ್ಲಿ ನಡೆದ ಸಮಸ್ತ ಚಟುವಟಿಕೆಗಳನ್ನು ಸಂಗ್ರಹಿಸಿ ದಾಖಲಿಸುತ್ತದೆ.
- ಇದಕ್ಕಾಗಿ ಕೆಲವು ಶೀರ್ಷಿಕೆಗಳ ಅಡಿಯಲ್ಲಿ ದಾಖಲೀಕರಣ ಮಾಡುವುದು ಅಗತ್ಯ. ಉದಾಹರಣೆಗೆ – ಆಡಳಿತ – ಹಣಕಾಸು ನಿರ್ವಹಣೆ – ಶೈಕ್ಷಣಿಕ ಪ್ರಗತಿ – ಶಾಲೆಯಲ್ಲಿ ಜರುಗಿದ ಸಹಪಠ್ಯ ಚಟುವಟಿಕೆಗಳು – ಕಥೆ – ಕವನ – ಹಾಸ್ಯ – ಚುಟುಕು–ಲೇಖನ, ಇತ್ಯಾದಿ (ಮುಖಪುಟ– ಪ್ರಾಸ್ತಾವಿಕ– ಪರಿವಿಡಿ– ವಾರ್ಷಿಕ ಯೋಜನೆ ಮತ್ತು ನಡೆದ ಚಟುವಟಿಕೆಗಳು– ಹಣಕಾಸಿನ ಆಯವ್ಯಯ– ಮಕ್ಕಳು ರಚಿಸಿದ ಕಥೆ, ಕವನ ; ಹಾಸ್ಯ, ಚುಟುಕು ಲೇಖನ ಇತ್ಯಾದಿ ಸಂಗತಿಗಳು ತಾರ್ಕಿಕವಾಗಿ ಮತ್ತು ಆಕರ್ಷಕವಾಗಿ ಜೊಡಣೆಯಾಗಲು ಗಮನಕೊಡಿ).

**ಹಣಕಾಸು :**

ಕೆಜಿಬಿವಿ ನಿರ್ವಹಣಾ ಅನುದಾನದಲ್ಲಿ ಇದಕ್ಕೆ ಬೇಕಾದ ಅನುದಾನವನ್ನು ಒದಗಿಸಿಕೊಳ್ಳಬಹುದು.

➢ **ಶಾಲೆಯ ನೈರ್ಮಲ್ಯ :**

ಪೋಷಕರು ತಮ್ಮ ಮಕ್ಕಳನ್ನು ಇಲಾಖೆಯ ಮೇಲಿನ ಭರವಸೆಯಿಂದ ಶಾಲೆಗೆ ಕಳುಹಿಸಿರುತ್ತಾರೆ. ಆ ಮಕ್ಕಳ ಯೋಗಕ್ಷೇಮ ಹಲವು ನಿಟ್ಟಿನಿಂದ ನಿರೀಕ್ಷಿಸಲ್ಪಡುತ್ತದೆ. ಇವುಗಳಲ್ಲಿ ಪ್ರಮುಖವಾದದ್ದು ಶಾಲೆಯ ನೈರ್ಮಲ್ಯ.

ನೈರ್ಮಲ್ಯವೆಂದರೆ – ಮಗುವಿನ ವೈಯಕ್ತಿಕ ಸ್ವಚ್ಚತೆಯಿಂದ ಹಿಡಿದು – ಮಲಗುವ / ಓದುವ ಕೊಠಡಿ – ಸ್ನಾನಗೃಹ ಶೌಚಾಲಯ – ಅಡುಗೆ ಕೋಣೆ – ಆಹಾರ–ಕುಡಿಯುವ ನೀರಿನ ನೈರ್ಮಲ್ಯವನ್ನು ಒಳಗೊಂಡಿದೆ. ಇವುಗಳನ್ನು ಯುಕ್ತವಾಗಿ ನಿರ್ವಹಣೆ ಮಾಡಬೇಕಾದದ್ದು ಅಗತ್ಯ.

**ಅನುಷ್ಠಾನ:**

- ನೈರ್ಮಲ್ಯದ ಜವಾಬ್ದಾರಿಯನ್ನು ಕಾರ್ಯ ಹಂಚಿಕೆಯ ಮೂಲಕ ವಿದ್ಯಾರ್ಥಿನಿಯರಿಗೆ ವಹಿಸಬೇಕು. ಅದು ಕಾರ್ಯಗತವಾಗುತ್ತಿರುವುದನ್ನು ಆಯಾ ಸಂಘ ಖಾತ್ರಿ ಪಡಿಸಿಕೊಳ್ಳಬೇಕು.
- ಇದರಂತೆ ಎಲ್ಲಾ ಮಕ್ಕಳು ಸ್ವಚ್ಛತೆ ಕಾರ್ಯಕ್ರಮದಲ್ಲಿ ಆವರ್ತಕವಾಗಿ ಪಾಲ್ಗೊಳ್ಳ ಬೇಕು. ಸ್ವಚ್ಛತೆಗಾಗಿ ಸೇವಕರು ಇರುತ್ತಾರೆ. ಅವರಿಗೆ ಸಹಕಾರ ನೀಡುವ ವ್ಯವಸ್ಥೆಯನ್ನು ಕಲ್ಪಿಸಬೇಕು. ಇದಕ್ಕಾಗಿ (ಸ್ಚಚ್ಛತೆಗಾಗಿ) ನಿರ್ದಿಷ್ಟ ಸಮಯ ನಿಗದಿ ಮಾಡಿ – ಆ ಸಮಯದಲ್ಲಿ ಮಕ್ಕಳ ಸಿಬ್ಬಂದಿಗೆ ಸಹಕರಿಸಲು ಮತ್ತು ಸೂಕ್ತ ಉಸ್ತುವಾರಿ ನಡೆಸಲು ಯೋಜಿಸಬೇಕು.

**ಹಣಕಾಸು :**

ಇದು ಶೂನ್ಯ ಬಜೆಟ್‌ನ ಕಾರ್ಯಕ್ರಮ. ಆದರೆ ಸ್ವಚ್ಛತಾ ಕಾರ್ಯಕ್ಕಾಗಿ ಸಾಮಗ್ರಿ ಖರೀದಿ ಮಾಡಬಹುದು.

➢ **ವೈದ್ಯರ ಭೇಟಿ ಆಪ್ತ ಸಮಾಲೋಚನೆ:**

ಮಕ್ಕಳ ಆರೋಗ್ಯ ರಕ್ಷಣೆಗಾಗಿ ನಿಯಮಿತವಾಗಿ ಒಬ್ಬ ಮಹಿಳಾ ವೈದ್ಯರು ಹಾಜರಾಗಿ ಪರೀಕ್ಷೆ ನಡೆಸುವರು.

ಹಾಗೂ ಹೆಣ್ಣು ಮಕ್ಕಳ ಸಮಸ್ಯೆಗಳಿಗೆ ತಜ್ಞರಿಂದ ಆಪ್ತ ಸಮಾಲೋಚನೆ ಮತ್ತು ಭರವಸೆ ತುಂಬುವ ಕೆಲಸವನ್ನು ಮಾಡುವುದು ಅಗತ್ಯವಾಗಿದೆ.

**ಅನುಷ್ಠಾನ:**

- ತಿಂಗಳಿಗೊಮ್ಮೆ ಮಹಿಳಾ ವೈದ್ಯರ ಭೇಟಿಗೆ ವ್ಯವಸ್ಥೆ ಮಾಡಿ, ಪರೀಕ್ಷೆ ನಡೆಸಿ ವಿದ್ಯಾರ್ಥಿನಿಯರಿಗೆ ಬೇಕಾದ ಔಷಧಗಳನ್ನು ಕೊಡಿಸುವುದು.
- ಹೊಂದಾಣಿಕೆ ಸಮಸ್ಯೆ, ತೀವ್ರ ಹಿಂಜರಿಕೆ, ಹೆಣ್ಣು ಮಕ್ಕಳಿಗೆ ಸಂಬಂಧಿಸಿದಂತೆ ಆಪ್ತ ಸಮಾಲೋಚನೆಯನ್ನು ಕನಿಷ್ಠ 3 ತಿಂಗಳಿಗೆ ಒಮ್ಮೆ ಹಮ್ಮಿಕೊಳಬೇಕು.
- ಅಲ್ಲದೇ ಹದಿಹರೆಯದ ಶಿಕ್ಷಣದಲ್ಲಿ ನೀಡುವ ಮಾರ್ಗದರ್ಶನವನ್ನು ಇಲ್ಲಿನ ಹಿರಿಯ ವಯಸ್ಸಿನ ಮಕ್ಕಳಿಗೆ ನೀಡಬೇಕು.
- ಸಂಘಟನೆಗಾಗಿ ಆಯಾ ಸಂಘದ ಸದಸ್ಯರನ್ನು ಬಳಸಿಕೊಳ್ಳಬಹುದು.

- ಯುಕ್ತ ದಾಖಲೆಗಳನ್ನು ರೂಢಿಸುವುದು. ದಾಖಲೆಯು ವೈದ್ಯರ ಭೇಟಿ ನೀಡಿದ ದಿನಾಂಕ , ನೀಡಿದ ಸಲಹೆ, ಕೈಗೊಂಡ ಕ್ರಮಗಳನ್ನು ಒಳಗೊಂಡಿರುತ್ತದೆ.

**ಹಣಕಾಸು :**

ಆರೋಗ್ಯ ನಿರ್ವಹಣೆಗೆ ಮೀಸಲಿಟ್ಟಿರುವ ಹಣದಿಂದ ಈ ಖರ್ಚುಗಳನ್ನು ಭರಿಸಬೇಕು.

### ➢ ಮೀನಾ ಸಂಘ ಮತ್ತು ಮಕ್ಕಳ ಹಕ್ಕುಗಳ ಸಂಘ :

ಮೀನಾ ಸಂಘಗಳ ಸ್ಥಾಪನೆಯ ಪ್ರಮುಖ ಉದ್ದೇಶ ಹೆಣ್ಣು ಮಕ್ಕಳ ಸಬಲೀಕರಣ– ಎರಡನೆಯದು ಸಮುದಾಯದ ಜಾಗೃತಿ.

ಹೆಣ್ಣುಮಕ್ಕಳ ಸಬಲೀಕರಣವು ತಿಳುವಳಿಕೆ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದರಿಂದ ಪ್ರಾಪ್ತವಾಗುತ್ತದೆ. ಮಕ್ಕಳ ಹಕ್ಕುಗಳನ್ನು ತಿಳಿಯುವುದರಿಂದ ಜ್ಞಾನ ಪಡೆಯುತ್ತಾರೆ. ಕ್ರೀಡೆ, ವ್ಯಾಯಾಮ, ಕರಾಟೆ, ಯೋಗದಿಂದ ದೈಹಿಕವಾಗಿ ಹೆಣ್ಣುಮಕ್ಕಳು ಸಬಲರಾಗುತ್ತಾರೆ. ಪ್ರಾರ್ಥನೆ ಮತ್ತು ಧ್ಯಾನದ ಅಭ್ಯಾಸದಿಂದ ಮಾನಸಿಕವಾಗಿ ಸಬಲರಾಗುತ್ತಾರೆ. ಭಾಷಣ, ಪಾತ್ರಾಭಿನಯ, ವಿಚಾರ ವಿನಿಮಯದ ಮೂಲಕ ಉತ್ತಮ ಸಂವಹನಕಾರರಾಗಿ ಬೆಳೆಯುತ್ತಾರೆ. ಇವೆಲ್ಲ ಸಬಲೀಕರಣಕ್ಕಾಗಿ ಶಾಲೆಯಲ್ಲಿ ನಡೆಸ ಬೇಕಾದ ಚಟುವಟಿಕೆಗಳು.

ಜ್ವಲಂತ ಸಮಸ್ಯೆಗಳಾದ, ಬಾಲ ಕಾರ್ಮಿಕತೆ, ಶಿಕ್ಷಣದ ಕುರಿತು ಅನಾದರ, ಬಾಲ್ಯವಿವಾಹ, ಶಾಲೆ ತೊರೆಯುವಿಕೆ, ಲಿಂಗ ತಾರತಮ್ಯ, ಅನಕ್ಷರತೆ ಮುಂತಾದ ಸಮಸ್ಯೆಗಳನ್ನು ನಿವಾರಿಸಲು–ಸಮುದಾಯದ ಜಾಗೃತಿ ಕಾರ್ಯಕ್ರಮವು ಶ್ರಮಿಸಬೇಕು.

**ಅನುಷ್ಠಾನ:**

- ಮೀನಾ ಗುಂಪಿನಲ್ಲಿ ಕೆಲಸ ಮಾಡಲು ಸಾಮರ್ಥ್ಯ ಇರುವ 15 ಮಕ್ಕಳನ್ನು ಆಯ್ಕೆ ಮಾಡಿ ಅವರಿಗೆ ಮಕ್ಕಳ ಹಕ್ಕುಗಳ ಕುರಿತು ತಿಳಿಸಿ, ಮಕ್ಕಳಲ್ಲಿ ಅದನ್ನು ತಿಳಿಸಿ ಹೇಳುವ ಕೌಶಲ್ಯ ಬೆಳೆಸಿ ಪಾತ್ರಾಭಿನಯದ ಮೂಲಾಂಶಗಳನ್ನು ತಿಳಿಸಿಕೊಡಿ–ಅಭ್ಯಾಸ ಮಾಡಿಸಿ, ಸೂಕ್ತ ಕಥೆಗಳನ್ನು ಆಯ್ಕೆ ಮಾಡಿಕೊಂಡು ಬೀದಿ ನಾಟಕ ಪ್ರದರ್ಶನ ಮಾಡಲು ಅಣಿಗೊಳಿಸ ಬೇಕು.

- ಬೀದಿ ನಾಟಕಗಳನ್ನು ಶಾಲೆ ಮತ್ತು ಕೆ.ಜಿ.ಬಿ.ವಿ. ಶಾಲೆಗೆ ಗೈರುಹಾಜರಾಗುವ ಮಕ್ಕಳ ಊರಿನಲ್ಲಿ ಪ್ರದರ್ಶನ ಮಾಡಿಸಿ. ಇಂತಹ ಕಾರ್ಯಕ್ರಮ ಪೂರ್ವ ಸಿದ್ಧತೆಯ ಶಿಬಿರ ಮತ್ತು ನಂತರದ ದಿನಗಳಲ್ಲಿ ನಡೆಸಬೇಕು.

- ಮೀನಾ ಸಂಘಗಳು ಮಾಡಿದ ಉತ್ತಮ ಕಾರ್ಯವನ್ನು ಶ್ಲಾಘಿಸಿ, ಸಮೂಹ ಮಾಧ್ಯಮದ ಮೂಲಕ ಸುದ್ದಿಯಾಗಿ ಪ್ರಕಟಗೊಳ್ಳಲು ವಿಶೇಷಾಧಿಕಾರಿಯವರು ಕ್ರಮ ಮಾಡುವುದು.

- ಮೀನಾ ಸಂಘ ಬೇರೆ ಸಂಘಗಳ ಅಡಿಯಲ್ಲಿ ಜರುಗುವ ಜಾಗೃತಿ ಸನ್ನಿವೇಶಗಳಲ್ಲಿ ತಮ್ಮ ನೈಪುಣ್ಯತೆಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸ ಬೇಕು.

**ಹಣಕಾಸು :**

ಪೂರ್ವ ಸಿದ್ಧತಾ ಶಿಬಿರಗಳಿಗೆ ಮೀಸಲಿರಿಸಿರುವ ಹಣವನ್ನು ಮೀನಾ ಗುಂಪಿನ ಚಟುವಟಿಕೆಗಳಿಗೆ ಮತ್ತು ಆ ಮೂಲಕ ಜಾಗೃತಿ ಮೂಡಿಸಲು ಬಳಸುವುದು.

- **ಪ್ರವಾಸ ಸಂಘ (ಕ್ಷೇತ್ರ ಭೇಟಿ)**

**ನಿರೀಕ್ಷಿತ ಫಲ :**

- ಪ್ರಾಕೃತಿಕ / ಐತಿಹಾಸಿಕ / ಭೌಗೋಳಿಕ / ಸಾಮಾಜಿಕ / ಶೈಕ್ಷಣಿಕ ಸನ್ನಿವೇಶಗಳ ಪರಿಚಯವಾಗುವುದು.
- ವೈಚಾರಿಕ ಪ್ರಜ್ಞೆ ಮೂಡಿಸುವುದರ ಮೂಲಕ ಕಲಿಕೆಯಾಗುತ್ತದೆ.
- ದೇಶದ ಭವ್ಯ ಪರಂಪರೆ, ಶಿಲ್ಪಕಲೆಗಳು, ಕಲಾಕೃತಿಗಳನ್ನು ನೋಡಿ ಆನಂದಿಸುವರು.
- ಸಮೀಪದ ವಿಜ್ಞಾನ, ತಂತ್ರಜ್ಞಾನ ಘಟಕಗಳಿಗೆ ಕ್ಷೇತ್ರ ಭೇಟಿ ಮೂಲಕ ಹೆಚ್ಚಿನ ಜ್ಞಾನ ಪಡೆಯುವುದು. ವಿಜ್ಞಾನವು ನಿತ್ಯ ಜೀವನದಲ್ಲಿ ಹೇಗೆ ಉಪಯೋಗಕಾರಿಯಾಗಿದೆ ಎಂಬುದರ ಅನುಭವವನ್ನು ಪಡೆಯುವುದು.
- ಇದರಿಂದ ಇತಿಹಾಸದ ಒಳನೋಟಗಳನ್ನು ತಿಳಿದುಕೊಳ್ಳುವರು.
- ರಾಜ ಮಹಾರಾಜರ ಭವ್ಯವಾದ ಪರಂಪರೆಯ ಬಗ್ಗೆ ಅರ್ಥೈಸಿಕೊಳ್ಳುವರು.
- ಸಾಂಸ್ಕೃತಿಕ, ವಿಜ್ಞಾನ ತಂತ್ರಜ್ಞಾನಗಳ ಅರಿವು ಮೂಡಿಸಿಕೊಳ್ಳುವರು.

**ಅನುಷ್ಠಾನ :**

- ಪ್ರವಾಸವನ್ನು ಅಕ್ಟೋಬರ್‌ನಿಂದ ಡಿಸೆಂಬರ್ ಒಳಗೆ ಕೈಗೊಳ್ಳುವುದು.
- ಪ್ರವಾಸ ಮಾಡುವ ಸ್ಥಳಗಳು ಆಸುಪಾಸಿನಲ್ಲಿರಲಿ.
- ಪ್ರವಾಸದ ಮುಖ್ಯ ಉದ್ದೇಶ ಅನುಭವ ನೀಡುವಿಕೆಯೇ ಹೊರತು ಹೆಚ್ಚು ಸ್ಥಳಗಳನ್ನು ಸಂದರ್ಶಿಸುವುದಲ್ಲ.
- ಸಮೀಪದಲ್ಲಿರುವ ತಂತ್ರಜ್ಞಾನ, ಸಾಂಸ್ಕೃತಿಕ ಭವನ ವೀಕ್ಷಿಸಲು ಅವಕಾಶ ಮಾಡಿಕೊಡುವುದು.
- ಪ್ರವಾಸದ ಯೋಜನೆ ಮತ್ತು ನಕ್ಷೆಯನ್ನು ಸಿದ್ಧಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆಯುವುದು.
- ವಿದ್ಯಾರ್ಥಿನಿಯರು ಪ್ರವಾಸ / ಕ್ಷೇತ್ರ ಭೇಟಿ ಮಾಡಲಿರುವ ಸ್ಥಳಗಳ ಕುರಿತು ಟಿಪ್ಪಣಿ ಮಾಡಿಕೊಳ್ಳಲು ತಿಳಿಸುವುದು.
- ಪ್ರವಾಸದ ಅವಧಿಯ ಸೂಕ್ತ ಮುನ್ನೆಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳ ಬೇಕು. ಅಧ್ಯಾಪಕಿಯರ ವರ್ತನೆ ಇತರರಿಗೆ ಮೇಲ್ಪಂಕ್ತಿಯಾಗಿರಲಿ.
- ಮಕ್ಕಳ ನಿತ್ಯಕರ್ಮ ಊಟ,ಉಪಹಾರಕ್ಕೆ ಯಾವುದೇ ಕೊರತೆಯಾಗದಂತೆ ಕಾಳಜಿ ವಹಿಸುವುದು.
- 25 ಮಕ್ಕಳಿಗೆ ಒಬ್ಬ ಶಿಕ್ಷಕರನ್ನು ನಿಯೋಜಿಸ ಬೇಕು. ಅವರು ಮಾರ್ಗದರ್ಶನ ನೀಡಲಿ.

- ಪ್ರವಾಸ/ಕ್ಷೇತ್ರ ಭೇಟಿ ಸಂದರ್ಭದಲ್ಲಿ ಒಬ್ಬಂಟಿಯಾಗಿ ಯಾರೂ ಸಂಚರಿಸದಂತೆ ಎಚ್ಚರಿಕೆ ವಹಿಸ ಬೇಕು ಮತ್ತು ಮಕ್ಕಳು ಕ್ಷೇತ್ರ ಭೇಟಿಯ ಮಾಹಿತಿ ಸಂಗ್ರಹಣೆ ಮಾಡಿಕೊಳ್ಳುವುದನ್ನು ಗಮನಿಸುತ್ತಿರಬೇಕು.

- ಪ್ರವಾಸದ/ಕ್ಷೇತ್ರ ಭೇಟಿಯ ನಂತರ ಪ್ರತಿಯೊಬ್ಬ ಮಕ್ಕಳು ಪ್ರವಾಸದ ಪುಟ್ಟ ವರದಿಯನ್ನು ತಯಾರಿಸಿ ಶಾಲಾ ಹಂತದಲ್ಲಿ ತಮ್ಮ ಅನುಭವ ಹಂಚಿಕೆಗಳನ್ನು (ಮೌಖಿಕವಾಗಿ) ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು. ಶಾಲೆಯ ವಾರ್ಷಿಕ ಸಂಚಿಕೆಯಲ್ಲಿ ಈ ಮಾಹಿತಿ ಪ್ರಕಟವಾಗಲಿ.

- ಸಮೂಹ ಮಾಧ್ಯಮಗಳಲ್ಲಿ ಇದರ ಬಗ್ಗೆ ವ್ಯಾಪಕವಾಗಿ ಪ್ರಚಾರ ಮಾಡುವುದು.

**ಹಣಕಾಸು :**

- ➢ ಪ್ರತಿ ಮಗುವಿಗೆ ನೀಡುವ ವಿದ್ಯಾರ್ಥಿ ವೇತನದಲ್ಲಿ [ಶಿಷ್ಯ ವೇತನ] ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.
- ➢ ಮಕ್ಕಳಿಂದ ಯಾವುದೇ ಹಣ ವಸೂಲಿ ಮಾಡಬಾರದು.

**➢ ಶಾಲಾ ವಾರ್ಷಿಕೋತ್ಸವ**

ಕೆ.ಜಿ.ಬಿ.ವಿ ಶಾಲೆಗಳಲ್ಲಿ ನಡೆದ (ವರ್ಷವಿಡೀ) ಚಟುವಟಿಕೆಗಳನ್ನು ಸಮುದಾಯಕ್ಕೆ ತಿಳಿಸಿಕೊಡಲು (ಪ್ರಚಾರ) ಪ್ರತಿ ಕೆ.ಜಿ.ಬಿ.ವಿ ಶಾಲೆಗಳಲ್ಲಿ ಶಾಲಾ ಘಟಿಕೋತ್ಸವವನ್ನು (ಶಾಲಾವಾರ್ಷಿಕೋತ್ಸವ) ಅನುಷ್ಠಾನಗೊಳಿಸುವಂತೆ ಮುಖ್ಯಸ್ಥರು ಸಿಬ್ಬಂದಿ ವರ್ಗದವರು ಶ್ರಮವಹಿಸಬೇಕು. ಇದನ್ನು ಅನುಷ್ಠಾನಗೊಳಿಸಲು ಎಲ್ಲಾ ಸಂಘಗಳವರು ಶ್ರಮಿಸುತ್ತಾರೆ. ಕಾರ್ಯಕ್ರಮದ ಹಂದರ ಮುಂದಿನಂತೆ ಇರಲಿ.

- ಸಾಮೂಹಿಕ ಪ್ರಾರ್ಥನೆ.
- ಪ್ರಾಸ್ತಾವಿಕ ನುಡಿಗಳು/ದಿನದ ಮಹತ್ವ.
- ಮಕ್ಕಳ ಪ್ರಗತಿಯ ಬಗ್ಗೆ ವಿಚಾರಣೆ/ತಿಳಿಸಿಕೊಡುವುದು.
- ಪಠ್ಯ ಮತ್ತು ಸಹಪಠ್ಯ ಚಟುವಟಿಕೆಗಳ ಪ್ರದರ್ಶನ.
- ಮಕ್ಕಳು/ಪೋಷಕರು/ಸಾರ್ವಜನಿಕರಿಗೆ ಸಂದೇಶ.

**ಅನುಷ್ಠಾನ :**

- ಶಾಲೆಯನ್ನು ಅಲಂಕಾರಗೊಳಿಸು (ತಳಿರು ತೋರಣಗಳಿಂದ)ವುದು.
- ಅಧಿಕಾರಿಗಳನ್ನು, ಪ್ರಜಾಪ್ರತಿನಿಧಿಗಳನ್ನು ಆಹ್ವಾನಿಸುವುದು.
- ವರ್ಷವಿಡೀ ನಡೆದ ಚಟುವಟಿಕೆಗಳಲ್ಲಿ ಉತ್ತಮವಾಗಿ ತೊಡಗಿಸಿಕೊಂಡ ಮಕ್ಕಳನ್ನು , ಪ್ರತಿಭಾವಂತರನ್ನು ಆಯಾ ಚಟುವಟಿಕೆಗೆ ಸಂಬಂಧಿಸಿದಂತೆ ಆಯ್ಕೆ ಮಾಡಿಕೊಂಡು ಪ್ರಶಸ್ತಿ ಪ್ರಧಾನ ಮಾಡುವುದು.
- ಹಾಜರಾತಿಯಲ್ಲಿ, ಗುಣಮಟ್ಟದ ಶಿಕ್ಷಣದಲ್ಲಿ ಮತ್ತು ಕ್ರಿಯಾಶೀಲವಾಗಿರುವ ವಿದ್ಯಾರ್ಥಿನಿಯನ್ನು ಪ್ರತಿವರ್ಷ ”ಆದರ್ಶ ವಿದ್ಯಾರ್ಥಿನಿ” ಪ್ರಶಸ್ತಿಗೆ ಆಯ್ಕೆ ಮಾಡಿ ಸನ್ಮಾನಿಸುವುದು.

- ಕ್ರಿಯಾ ಶೀಲ ಶಿಕ್ಷಕಿ/ಕರನ್ನು ಶಾಲಾ ನಿರ್ವಹಣಾ ಸಮಿತಿಯವರು ಗುರುತಿಸಿ ಉತ್ತಮ ಶಿಕ್ಷಕಿ/ಕ ಪ್ರಶಸ್ತಿ ನೀಡಿ ಸನ್ಮಾನಿಸುವುದು.
- ಉತ್ತಮ ಪಾಲಕ/ಪೋಷಕ ಪ್ರಶಸ್ತಿಗೆ ಸೂಕ್ತ ಪೋಷಕರನ್ನು ಆಯ್ಕೆ ಮಾಡಿ ಸನ್ಮಾನಿಸುವುದು. ವಾರ್ಷಿಕೋತ್ಸವ ಅಂಗವಾಗಿ ವಿವಿಧ ತಂಡಗಳಿಂದ ಅಂದರೆ ಮೀನಾ ತಂಡದಿಂದ ರೂಪಕ, ಸಾಹಿತ್ಯ ವೇದಿಕೆಯಿಂದ ಕವಿಗೋಷ್ಠಿ, ಕ್ರೀಡಾಸಂಘದಿಂದ ಪಥಸಂಚಲನ, ಲೇಜಿಮ್, ಸಾಂಸ್ಕೃತಿಕ ಸಂಘದಿಂದ ಮನರಂಜನೆ – ನಾಟಕ, ವಿಜ್ಞಾನ ಮತ್ತು ಗಣಿತ ಸಂಘ ಮೇಳ, ಹೀಗೆ ತಮ್ಮ ಸಂಘದಿಂದ ವಿವಿಧ ರೀತಿಯ ಗೋಷ್ಠಿಗಳನ್ನು ಏರ್ಪಡಿಸುವುದು.
- ಮಕ್ಕಳ ಪ್ರಗತಿಯನ್ನು ತಿಳಿಸುವಾಗ ಯಾರಿಗೂ ನೋವಾಗದಂತೆ, ನವಿರಾಗಿ ಸಂದರ್ಭವನ್ನು ನಿಭಾಯಿಸುವುದು.
- ಅಂದು ಆ ಶಾಲೆ ಹಬ್ಬ ಅಥವಾ ಜಾತ್ರೆಯರೀತಿಯಲ್ಲಿ ಭಾಸವಾಗುವಂತೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ಎರಡು ದಿನ ಹಮ್ಮಿಕೊಳ್ಳುವುದು.
- ಸದರಿ ಕಾರ್ಯಕ್ರಮ ರೂಪುರೇಷೆ ಯೋಜನೆಯನ್ನು ತಯಾರಿಸಿ ಅನುಮೋದನೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದುಕೊಳ್ಳುವುದು.

**ಹಣಕಾಸು :**

ಪೋಷಕರ ಸಭೆ/ಸಮಾರಂಭಗಳಿಗೆ ಮೀಸಲಿಟ್ಟಿರುವ ಸ್ವಲ್ಪ ಹಣವನ್ನು ಖರ್ಚು ಮಾಡುವುದು. ಅಗತ್ಯವೆನಿಸಿದರೆ ಸಾದಿಲ್ವಾರು ಹಣದಲ್ಲಿ ಅನುಮತಿ ಪಡೆದು ವೆಚ್ಚ ಭರಿಸಬಹುದು.

### ➢ ಶಾಲಾ ನಿರ್ವಹಣಾ ಸಮಿತಿ

ಕೆ.ಜಿ.ಬಿ.ವಿ. ಶಾಲೆಗಳಲ್ಲಿ ಅಧ್ಯಯನ ಮಾಡುತ್ತಿರುವ ಮಕ್ಕಳ ಪಾಲಕರು/ಪೋಷಕರ ಪಾತ್ರ ಶಾಲೆಯ ಸರ್ವಾಂಗೀಣ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ವದ್ದು. ಕೆ.ಜಿ.ಬಿ.ವಿ. ನಿರ್ವಹಣಾ ಪುಟ. ಸಂ. 17ರಲ್ಲಿ ಸೂಚಿಸಿದ ರೀತಿಯಲ್ಲಿ ಈ ಕೆಳಗಿನಂತೆ ಸಮಿತಿಯನ್ನು ಚಾಲನೆಯಲ್ಲಿ ಇಡಬೇಕಾಗುತ್ತದೆ.

| ಪದನಾಮ | ಹುದ್ದೆ ಜವಾಬ್ದಾರಿ |
|---|---|
| ಕ್ಷೇತ್ರ ಶಿಕ್ಷಣಾಧಿಕಾರಿಗಳು | ಅಧ್ಯಕ್ಷರು |
| ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು | ಸದಸ್ಯರು |
| ವಾರ್ಡನ್ | ಸದಸ್ಯರು |
| 4 ಪೋಷಕರು (3 ಮಹಿಳೆ + 1 ಪುರುಷ= SC-1 ST_1 ಅ.ಸಂ1. ಇತರೆ 1) | ಸದಸ್ಯರು |
| ಸರ್ಕಾರೇತರ ಸಂಘ ಸಂಸ್ಥೆ – 01 | ಸದಸ್ಯರು |
| ಮಹಿಳಾ ಸಮಾಜದ ಪ್ರತಿನಿಧಿಗಳು–01 | ಸದಸ್ಯರು |
| ದಾನಿಗಳು–1 ಆಸಕ್ತ ಅಭಿಮಾನಿಗಳು–1 ಶಿಕ್ಷಣ ತಜ್ಞರು–1 ಇತರೆ–1 | ನಾಮನಿರ್ದೇಶಿತ ಸದಸ್ಯರು |
| ಕೆ.ಜಿ.ಬಿ.ವಿ. ವಿಶೇಷಾಧಿಕಾರಿಯವರು–1 | ಸಂಚಾಲಕರು/ ಕಾರ್ಯದರ್ಶಿಗಳು |

**ನಿರೀಕ್ಷಿತ ಫಲಗಳು :**

- ಶಾಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಪಾಲಕರ/ಪೋಷಕರ ಸಹಭಾಗಿತ್ವವನ್ನು ಪಡೆಯುವುದು.
- ವಿದ್ಯಾರ್ಥಿನಿಯರು ,ಪಾಲಕರು ಹಾಗೂ ಅಧ್ಯಾಪಕ ವೃಂದದ ನಡುವೆ ಸಮನ್ವಯ ಸಾಧಿಸುವುದು.
- ವಿದ್ಯಾರ್ಥಿನಿಯರ ಸಮಸ್ಯೆಗಳಿಗೆ, ಶಾಲೆಯ ಸಮಸ್ಯೆಗಳಿಗೆ ಉಚಿತವಾದ ಪರಿಹಾರೋಪಾಯಗಳನ್ನು ಕಂಡುಕೊಳ್ಳುವುದು.
- ಮಕ್ಕಳ ಹಾಜರಾತಿಯಲ್ಲಿ ಸ್ಥಿರತೆಯನ್ನು ಸಾಧಿಸುವುದು ಆ ಮೂಲಕ ಅವರು ಗುಣಾತ್ಮಕ ಶಿಕ್ಷಣವನ್ನು ಪಡೆಯುವಂತೆ ಮೇಲುಸ್ತುವಾರಿ ವಹಿಸುವುದು.
- ಪೋಷಕರಿಗೆ ತಮ್ಮ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಹಿಮ್ಮಾಹಿತಿ ನೀಡಿ ಅವರ ಅಭಿಪ್ರಾಯ ಹಂಚಿಕೊಳ್ಳಲು ಸೂಕ್ತ ವಾತಾವರಣ ನಿರ್ಮಿಸುವುದು.
- ಶಾಲೆಯ ನಿರ್ವಹಣೆಗೆ ಅವಶ್ಯಕವಿರುವ ಸಂಪನ್ಮೂಲಗಳನ್ನು ಆಂತರಿಕವಾಗಿ ಹಾಗೂ ಬಾಹ್ಯ ಮೂಲಗಳಿಂದ ಕ್ರೋಢೀಕರಿಸಿ ಮಕ್ಕಳ ಸರ್ವಾಂಗೀಣ ಬೆಳವಣಿಗೆ ಸಾಧಿಸುವುದು.
- ಉತ್ತಮ ಗುಣಮಟ್ಟದ ಊಟ, ಉಪಹಾರ, ವಸತಿ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೌಲಭ್ಯಗಳನ್ನು ಮಕ್ಕಳಿಗೆ ತಲುಪುವ ಬಗ್ಗೆ ಖಾತರಿ ಪಡಿಸಿಕೊಳ್ಳುವುದು ಮತ್ತು ಪರಿಣಾಮಕಾರಿ ಸಂಘಟನೆಗೆ ಸಂಯೋಜನೆ ಮಾಡುವುದು.

**ಅನುಷ್ಠಾನ :**

- ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೆ.ಜಿ.ಬಿ.ವಿ. ಶಾಲಾ ಮುಖ್ಯಸ್ಥರೊಂದಿಗೆ ಕಾಲಕಾಲಕ್ಕೆ ಚರ್ಚಿಸಿ ಪ್ರತಿ ತಿಂಗಳೂ ಈ ಸಮಿತಿಯ ಸಭೆಯನ್ನು ಕರೆಯುವುದು.
- ಪಾಲಕ/ಪೋಷಕರ ಪ್ರಥಮ ಸಭೆಯನ್ನು ಪ್ರಥಮ ಸೆಮಿಸ್ಟರ್ ಪ್ರಾರಂಭದಲ್ಲಿ ಕರೆಯುವುದು ಹಾಗೂ ಎರಡನೇ ಸೆಮಿಸ್ಟರ್ ಅಂತ್ಯಕ್ಕೆ ಶಾಲಾ ಘಟಿಕೋತ್ಸವದ ಪೂರ್ವಭಾವಿಯಾಗಿ ಕರೆಯುವ ಸಭೆಗೆ ಮತ್ತು ಘಟಕೋತ್ಸವಕ್ಕೆ ಮೊದಲು ಕರೆಯುವುದು. ಹಾಗು ಇತರ ಅಗತ್ಯ ಸಂಧರ್ಭಗಳಲ್ಲಿ (ಕನಿಷ್ಠ 03 ಬಾರಿ) ಪಾಲಕ/ಪೋಷಕರ ಸಭೆ ಕರೆಯುವುದು.
- ಶಾಲಾ ಮುಖ್ಯಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಸಮಾಲೋಚಿಸಿ ನಿಗದಿ ಪಡಿಸಿದ ದಿನದಂದು ಸಭೆಯನ್ನು ಸಂಘಟಿಸುವುದು.
- ಈ ಸಭೆಗಳನ್ನು ಕರೆದ ಸಂದರ್ಭದಲ್ಲಿ ಶಿಕ್ಷಕಿ/ಕಯರು ಅವಶ್ಯಕ ದಾಖಲೆಗಳನ್ನು ನಿರ್ವಹಿಸಿ ಸಭೆಯಲ್ಲಿ ಮಂಡಿಸುವುದು.
- **ಹಣಕಾಸಿನ ಹಂಚಿಕೆ**: ಇದಕ್ಕಾಗಿ ಮಾತ್ರ ಮೀಸಲಿಟ್ಟಿರುವ ಹಣದ ನಿವ್ವಳ ಭಾಗ ವಿನಿಯೋಗಿಸುವುದು.

# 6. ಮಕ್ಕಳ ಸಮಸ್ಯೆಗಳು – ಸಮಾಲೋಚನೆ ಮತ್ತು ಮಾರ್ಗದರ್ಶನ :

ಶಾಲೆಗೆ ಬರುವ ಬಹುಪಾಲು ಮಕ್ಕಳು ಅವರದೇ ಆದ ಸಮಸ್ಯೆಗಳಿಂದ ಬಳಲುತ್ತಾರೆ. ವಿಶೇಷವಾಗಿ ಕೆ.ಜಿ.ಬಿ.ವಿ ಮಗು ವಿಶಿಷ್ಟವಾಗಿರುವುದರಿಂದ ಅವರು ಇನ್ನೂ ಹಲವು ಸಮಸ್ಯೆಗಳನ್ನು ಎದುರಿಸುತ್ತಿರಬಹುದು. ಈ ಮಗುವಿಗೆ ತನ್ನ ದೈನಂದಿನ ಸಮಸ್ಯೆಗಳೊಂದಿಗೆ ತನ್ನ ಊರಿನ ನೆನಪು ಮತ್ತು ಅನುಭವಗಳು ಬಾಧಿಸಬಹುದು. ತನ್ನದೇ ಸಮಸ್ಯೆಗಳಿಂದ ತೊಳಲಬಹುದು. ಈ ಸಂದರ್ಭದಲ್ಲಿ ಶಿಕ್ಷಕರು ಸ್ನೇಹಿತರಾಗಿ, ಪಾಲಕರಾಗಿ, ಮಾರ್ಗದರ್ಶಕರಾಗಿ ಮಗುವನ್ನು ನಡೆಸಿಕೊಳ್ಳಬೇಕಾದ ಅವಶ್ಯಕತೆ ಇದೆ. ತಾನು ಬೆಳೆದ ಪ್ರದೇಶದಿಂದ ಬೇರ್ಪಡಿಕೆ, ಪಾಲಕರ ಪ್ರೀತಿಯ ಕೊರತೆ,ಹೊಸ ಸ್ನೇಹಿತರನ್ನು ಆಯ್ದುಕೊಳ್ಳುವಲ್ಲಿನ ಸಮಸ್ಯೆಗಳು, ಹೊಸ ಜೀವನ ಕ್ರಮಕ್ಕೆ ಹೊಂದಾಣಿಕೆ ಸಮಸ್ಯೆ, ಹೊಸ ಆಹಾರ ಕ್ರಮಕ್ಕೆ ಹೊಂದಿಕೊಳ್ಳುವಲ್ಲಿನ ಸಮಸ್ಯೆ, ಒಂಟಿತನ ಇತ್ಯಾದಿಗಳಿಂದ ಬಳಲಬಹುದು. ಅನಾರೋಗ್ಯ , ತಡವಾಗಿ ಎಳುವುದರಿಂದ ಅಥವಾ ಇತರ ಸಮಸ್ಯೆಗಳಿಂದ ನಿತ್ಯ ಕರ್ಮಗಳನ್ನು ಮುಗಿಸದೇ ಇರುವುದು ,ಹದಿಹರೆಯದ ಸಮಸ್ಯೆಗಳು, ಸ್ನೇಹಿತರೊಂದಿಗೆ ಸಂಘರ್ಷಗಳು, ಕೀಳರಿಮೆ, ಕಲಿಕೆಯಲ್ಲಿನ ವ್ಯತ್ಯಯಗಳು, ಕಲಿಕಾ ವೇಗದಲ್ಲಿನ ಕೊರತೆ, ಇತ್ಯಾದಿಗಳಿಂದ ಮಗು ಮಾನಸಿಕವಾಗಿ ಕುಗ್ಗಿ ಹೋಗಬಹುದು.

ಸಮಸ್ಯೆಯನ್ನು ಹೊಂದಿರುವ ಮಕ್ಕಳನ್ನು ಗುರುತಿಸುವುದು ಕೂಡಾ ಅಷ್ಟೊಂದು ಸುಲಭವಲ್ಲ. ಸಮಸ್ಯೆಯನ್ನು ಹೊಂದಿರುವ ಮಗು ನೇರವಾಗಿ ತನ್ನ ಗೆಳೆಯರೊಂದಿಗೆ, ಶಿಕ್ಷಕರೊಂದಿಗೆ ಹೇಳಿಕೊಳ್ಳುತ್ತದೆ ಎಂದು ಭಾವಿಸುವುದು ತಪ್ಪಾಗುತ್ತದೆ. ಮಗು ತನ್ನ ಅನೇಕ ಸಮಸ್ಯೆಗಳನ್ನು ತೀರಾ ವೈಯಕ್ತಿಕ ಎಂದು ಭಾವಿಸುತ್ತದೆ; ಮಾತ್ರವಲ್ಲ ಸಮಸ್ಯೆಯನ್ನು ಇನ್ನೊಬ್ಬರೊಂದಿಗೆ ಹೇಳಿಕೊಳ್ಳುವುದರಿಂದ ತಾನು ಅಪಹಾಸ್ಯದ ವಸ್ತುವಾಗುತ್ತೇನೆ ಎಂಬ ಕಲ್ಪನೆ ಮಗುವನ್ನು ಅಧೀರರನ್ನಾಗಿ ಮಾಡುತ್ತದೆ. ಆದ್ದರಿಂದ ಶಿಕ್ಷಕರು ಎಲ್ಲಾ ರೀತಿಯಿಂದಲೂ ಸೂಕ್ಷ್ಮವಾಗಿ ಅವಲೋಕಿಸಿ ನಿರ್ಧರಿಸಬೇಕಾಗುತ್ತದೆ. ಇಂತಹ ಮಗುವಿನ ವರ್ತನೆಯಲ್ಲಿನ ಕೆಲವು ಬದಲಾವಣೆ ಅಥವಾ ಸಮಸ್ಯೆಗಳನ್ನು ಈ ಕೆಳಕಂಡಂತೆ ಗುರುತಿಸಬಹುದು.

- ಮಗು ಒಂಟಿಯಾಗಿರಲು ಇಚ್ಚಿಸುವುದು.
- ಅಳುವುದು.
- ಉಪಹಾರ/ಆಹಾರ ಸ್ವೀಕರಿಸದೇ ಇರುವುದು.
- ಶೌಚಾಲಯ / ಸ್ನಾನಗೃಹಗಳಲ್ಲಿ ಅವಶ್ಯಕತೆಗಿಂತ ಹೆಚ್ಚು ಹೊತ್ತು ಕಳೆಯುವುದು.
- ಶೌಚಾಲಯವನ್ನು ಪದೇ ಪದೇ ಬಳಸುವುದು.
- ಸ್ನಾನ ಗೃಹಕ್ಕೆ ಹೋಗಿ ಸ್ನಾನ ಮಾಡದೇ ಹಿಂದಿರುಗುವುದು.
- ತನ್ನ ವಸ್ತುಗಳನ್ನು ಒಪ್ಪವಾಗಿ ಜೋಡಿಸಿಕೊಳ್ಳುವಲ್ಲಿ ವಿಫಲವಾಗುವುದು.
- ಮನೆಗೆಲಸ ಮಾಡದೇ ಇರುವುದು.

- ಪದೇ ಪದೇ ದೂರು ನೀಡುವುದು .ಸಾಮಗ್ರಿಗಳನ್ನು ಕಳೆದುಕೊಳ್ಳುವುದು.
- ವಸತಿಗೃಹಗಳಲ್ಲಿ ಪದೇ ಪದೇ ಕಳ್ಳತನವಾಗುವುದು.
- ಉಳಿದ ಸಹಪಾಠಿಗಳಿಗೆ ತೊಂದರೆ ಉಂಟುಮಾಡುವುದು (ದೈಹಿಕಹಿಂಸೆ ನೀಡುವುದು, ಕಾಲುಕೊಟ್ಟು ಬೀಳಿಸುವ್ಯದು, ಆಟದ ಸಾಮಗ್ರಿಗಳು ಲೇಖನ ಸಾಮಗ್ರಿಗಳನ್ನು ಕಸಿದುಕೊಳ್ಳುವುದು ಇತ್ಯಾದಿ)

ಮಗುವಿನ ಒಂದು ದಿನದ ವರ್ತನೆಯನ್ನು ಗಮನಿಸಿ ಸಮಸ್ಯೆಯನ್ನು ಗುರುತಿಸಲಾಗದು. ದೀರ್ಘ ಅವಲೋಕನ–ಸಮಸ್ಯಾತ್ಮಕ ವರ್ತನೆ ಕುರಿತು ಬೆಳಕು ಚೆಲ್ಲಬಹುದು. ಇದಕ್ಕಾಗಿ ವಿದ್ಯಾರ್ಥಿನಿಯ ವೈಯಕ್ತಿಕ ಕಡತ ನಿರ್ವಹಣೆ ಮಾಡಬೇಕು. (ನೋಡಿ:–ದಾಖಲೀಕರಣ) ಇದರೊಂದಿಗೆ ಪ್ರಾಸಂಗಿಕ ಅವಲೋಕನಾ ವಹಿ (anecdotal record) ಅನ್ನು ನಿರ್ವಹಿಸಬೇಕು. ಮಗುವಿನ ನಡವಳಿಕೆಯನ್ನು ಬೇರೆ ಬೇರೆ ಸಂದರ್ಭದಲ್ಲಿ ಗಮನಿಸುತ್ತಾ ;(ವಸತಿಗೃಹ, ಆಟದ ಬಯಲು, ನಿತ್ಯಕರ್ಮ, ಓದುವ ಅವಧಿ, ಹೊರಾಂಗಣದಲ್ಲಿ, ಪ್ರವಾಸ ಇತ್ಯಾದಿ) ಗಮನಾರ್ಹ ಅಂಶವನ್ನು ಈ ವಹಿಯಲ್ಲಿ ದಾಖಲಿಸುತ್ತಾ ಹೋದರೆ ,ಮಗುವಿನ ವ್ಯಕ್ತಿತ್ವದಲ್ಲಿ ಸಮಸ್ಯೆ ಇದ್ದರೆ ಅದರ ಚಿತ್ರಣ ಸಿಗುತ್ತದೆ.

**ಸಮಾಲೋಚನೆ ಮತ್ತು ಮಾರ್ಗದರ್ಶನ:** ಮಗುವಿನ ಸಮಸ್ಯೆಗಳನ್ನು ವಿಶ್ಲೇಷಿಸುವುದು, ಚರ್ಚಿಸುವುದು ಹಾಗೂ ಪರಿಹಾರಾತ್ಮಕ ಕ್ರಮಗಳನ್ನು ಸೂಚಿಸುವುದೇ ಸಮಾಲೋಚನೆ, ಸಮಾಲೋಚನೆಯನ್ನು ಗುಂಪಿನಲ್ಲಿ ಅಥವಾ ವೈಯಕ್ತಿವಾಗಿ ಕೈಗೊಳ್ಳಬಹುದು. ಸಮಾಲೋಚನೆ ಒಂದು ವಿಶೇಷ ಅವಧಿ ಅಲ್ಲ. ನಾನೀಗ ನಿನ್ನೊಂದಿಗೆ ಸಮಾಲೋಚಿಸಬೇಕಾಗಿದೆ ಎಂಬ ನಿರ್ದೇಶನ ಸಲ್ಲ. ಸಮಾಲೋಚನೆ ಅನೌಪಚಾರಿಕವಾಗಿದ್ದಷ್ಟೂ ಸಮಸ್ಯೆಯ ಕಾರಣ ತಿಳಿಯಲು ಸುಲಭ. ಸಮಾಲೋಚನೆ ಮಾಡುವಾಗ ಎದುರಿನ ವ್ಯಕ್ತಿಯ ಬಗ್ಗೆ ನೈಜ ಕಾಳಜಿ ಹೊಂದಿದ್ದೇನೆ ಎಂಬ ಭಾವನೆ ಮೂಡಿಸುವುದು ತೀರಾ ಮುಖ್ಯವಾದುದು. ಸಮಾಲೋಚನೆಯ ನಂತರ ಅಗತ್ಯವಾದ ಟಿಪ್ಪಣಿಗಳನ್ನು ಸಿದ್ಧಪಡಿಸಬೇಕು. ಈ ಸಮಸ್ಯೆಗಳು ಮನೋವೈಜ್ಞಾನಿಕ ಸ್ವರೂಪದ್ದಾಗಿದ್ದರೆ ವೈದ್ಯರ ಸಲಹೆ ಪಡೆಯುವಲ್ಲಿ ಶಿಕ್ಷಕರು ಹಿಂಜರಿಯಬಾರದು. ಸಮಾಲೋಚನೆ ಪ್ರಕ್ರಿಯೆ ನಿರಂತರವಾಗಿದ್ದು ಮಗುವಿನಲ್ಲಿ ಆತ್ಮವಿಶ್ವಾಸ ಮೂಡಿಸುವಲ್ಲಿ ಉತ್ತಮ ಹೆಜ್ಜೆ. ಆದರೆ ಅತಿಯಾದರೆ ಅಮೃತವೂ ವಿಷ ಎಂಬುದನ್ನು ಮರೆಯಲಾಗದು. ಶಿಕ್ಷಕರು/ವಸತಿನಿಲಯ ಪಾಲಕರು ತಾಯಿಯ ಪಾತ್ರವನ್ನು ವಹಿಸಬೇಕಾಗಿದೆ. ಅಲ್ಲದೇ ಇವರಿಗೆ ಇರುವ ಸಾಮಾನ್ಯ ಜ್ಞಾನದಿಂದ ಸಮಾಲೋಚನೆ ಮತ್ತು ಮಾರ್ಗದರ್ಶನ ಸಮಸ್ಯೆಗಳ ಪರಿಹಾರದಲ್ಲಿ ಪರಿಣಾಮಕಾರಿಯಾಗುತ್ತದೆ. ಪ್ರತಿ ಬಾರಿಯು ಸಮಾಲೋಚನೆ ಅದರ ಪರಿಣಾಮಗಳನ್ನು ಮಗುವಿನ ವೈಯಕ್ತಿಕ ಕಡತಗಳಲ್ಲಿ ದಾಖಲಿಸಬೇಕು. ನೂರು ಶಬ್ದಗಳಲ್ಲಿ ತುಂಬಲಾಗದ ಆತ್ಮಸ್ಥೈರ್ಯವನ್ನು ಒಂದು ಬೆನ್ನು ಚಪ್ಪರಿಕೆ ಸಾಧಿಸಬಲ್ಲದು. ಮಹಿಳಾ ಶಿಕ್ಷಕರ ಒಂದು ಅಪ್ಪುಗೆ, ಗಲ್ಲ ಸವರುವಿಕೆ, ನೀನೂ ಮಾಡಬಲ್ಲೆ, ಜಾಣೆ ಎನ್ನುವ ಪದ ಅನೂಹ್ಯ ಪರಿಣಾಮವನ್ನು ಕೆ.ಜಿ.ಬಿ.ವಿ. ಮಗುವಿನ ಮೇಲೆ ಬೀರುತ್ತದೆ ; ನಮ್ಮ ಮಗು ಪ್ರೀತಿ ವಂಚಿತವಾಗಿ ಪರಿಣಾಮಕಾರಿ ಶಿಕ್ಷಣ ಪಡೆಯಲಾರದು ಎಂಬುದನ್ನು ಪ್ರತಿಯೊಬ್ಬರೂ ತಿಳಿದಿರಬೇಕು.

## ಸೃಜನಶೀಲ ಚಟುವಟಿಕೆಗಳು ಮತ್ತು ಮಾರ್ಗದರ್ಶನ :

ಶಿಕ್ಷಣವೆಂದರೆ ಮಗುವಿನಲ್ಲಿ ಹುದುಗಿರುವ ಎಲ್ಲ ಪ್ರತಿಭೆಗಳನ್ನು ಹೊರ ಹಾಕುವುದೇ ಆಗಿದೆ ಎಂದು ಪರಿಣತರು ಹೇಳಿದ್ದಾರೆ. ಆದ್ದರಿಂದ ಮಗುವಿನಲ್ಲಿ ಅದಮ್ಯವಾಗಿರುವ ತುಡಿತಕ್ಕೆ ಸೂಕ್ತ ವೇದಿಕೆ ನಿರ್ಮಾಣ ಮಾಡಬೇಕಾಗಿದೆ. ಉಳಿದ ಶಾಲೆಗಳಲ್ಲಿ ಲಭ್ಯವಾಗುವ ವಿದ್ಯಾರ್ಥಿಗಳಿಗಿಂತ ಕೆಜಿಬಿವಿಯ ಮಕ್ಕಳು ವಿಶಿಷ್ಟರಾದವರು. ಇವರಿಗೆ ಲಭ್ಯವಿರುವ ಜೀವನಾನುಭವಗಳು ಹಾಗೂ

ಬದುಕಿನ ಅವಶ್ಯಕತೆಗಳು ಉಳಿದವರಿಗಿಂತ ಭಿನ್ನ. ಯಾವ ಹುತ್ತದಲ್ಲಿ ಯಾವ ಹಾವಿದೆಯೋ' ಎಂಬಂತೆ ಯಾವ ಮಗು ಎಂತಹ ಸಾಧಕಿಯಾಗಲಿದ್ದಾಳೋ ಎಂಬ ನಿತ್ಯ ನಿರೀಕ್ಷೆಯನ್ನು ಶಿಕ್ಷಕರು ಹೊಂದಿರಬೆಕು. ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಲು ಬೋಧ ಪ್ರಚೋದಕ (brain storming) ಅವಧಿಗಳನ್ನು ನಡೆಸುವುದು. ಸೃಜನಶೀಲತೆಯ ಪೋಷಣೆಗೆ ಸಹಕಾರಿ. ಇವುಗಳ ಜೊತೆ

- ಒಗಟುಗಳು
- ಕತೆಯನ್ನು ಸಂಪೂರ್ಣಗೊಳಿಸುವುದು
- ಅಪೂರ್ಣ ಕಾವ್ಯ
- ಪದಬಂಧ
- ಸುಡುಕೊ
- Reading Scrabbled piece
- ಕಸದಿಂದ ರಸ – Collage
- ರಂಗೋಲಿ
- ಪೇಪರ್ ಕ್ರಾಫ್ಟ್ ನಂತಹ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಬೇಕು.

ಶಿಕ್ಷಕರು ಮಗುವಿನ ನಿರಂತರ ಅವಲೋಕನ ಮತ್ತು ಮಾರ್ಗದರ್ಶನ ಮಾಡುವುದರಿಂದ ಸೃಜನಶೀಲತೆ ಬೆಳೆಯಲು ಸಹಕಾರಿ. ಯಾವಾಗಲೂ ಸಲಹೆ ನೀಡಬಾರದು. ಮಗು ಸಾಧಿಸಿದ ಅಲ್ಪ ಯಶಸ್ಸನ್ನೇ ಗುರುತಿಸಿ ಯುಕ್ತವಾಗಿ ಹೊಗಳಿ, ಯಾವಾಗಲೂ ಧನಾತ್ಮಕ ಪುನರ್ಬಲನಗಳನ್ನೇ ನೀಡಿ. ತಾರೇ ಜಮೀನ್ ಪರ್, ತೊತ್ತೋಜಾನ್ ಕೃತಿಗಳನ್ನು ನಿಮ್ಮ ಸ್ಮರಣೆಗೆ ತಂದುಕೊಳ್ಳಿ.

**ಹದಿಹರೆಯದ ಹೆಣ್ಣು ಮಕ್ಕಳ ಶಿಕ್ಷಣ ಮತ್ತು ಮಾರ್ಗದರ್ಶನ :**

ಹದಿಹರೆಯದ ವಯಸ್ಸು ವ್ಯಕ್ತಿಯ ಜೀವನದಲ್ಲಿ ಒಂದು ಮಹತ್ವದ ಹಂತ. ಇದು ಬದಲಾವಣೆಯ ಸಂಕ್ರಮಣದ ಹಾಗೂ ಗೊಂದಲದ ಅವಧಿ. ಈ ಅವಧಿಯಲ್ಲಿ ಸೂಕ್ತ ಮಾರ್ಗದರ್ಶನದ ಅವಶ್ಯಕತೆ ಇದೆ. (ಹದಿಮೂರರಿಂದ – ಹತ್ತೊಂಬತ್ತರ ವರೆಗೆ – ಹದಿಯಿಂದ ಪ್ರಾರಂಭವಾಗಿರುವುದರಿಂದ ಹದಿ ಹರೆಯ) ಅಥವಾ Thirteen ನಿಂದ Nineteen ನವರೆಗೆ teen ನಿಂದ ಕೊನೆಗೊಳ್ಳುವುದರಿಂದ teen age ಎಂದು ಕರೆಯಲಾಗುತ್ತದೆ) ಈ ಅವಧಿಯಲ್ಲಿ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಲ್ಲಿ ವೇಗೋತ್ಕರ್ಷವನ್ನು ಗಮನಿಸಬಹುದು.

ಹದಿಹರೆಯದ ಹೆಣ್ಣುಮಕ್ಕಳಲ್ಲಿ ಉಂಟಾಗುವ ಬದಲಾವಣೆಗಳೆಂದರೆ ದೇಹದಲ್ಲಿ ಕೊಬ್ಬು ಸಮವಾಗಿ ಹರಡಿಕೊಳ್ಳುವುದು ; ಮುಖ ದುಂಡಗಾಗುವುದು ; ಸ್ವೇದ ಗ್ರಂಥಿಗಳ ಚಟುವಟಿಕೆ ಹಾಗೂ ಸೊಂಕಿನಿಂದಾಗಿ ಮೊಡವೆಗಳು ಕಾಣಿಸಿಕೊಳ್ಳುವುದು; ಸ್ತನಗಳ ಬೆಳವಣಿಗೆ, ಕಂಕುಳು ಮತ್ತು ಜನನಾಂಗದ ಸುತ್ತಲೂ ಕೂದಲು ಬೆಳವಣಿಗೆ, ಅಂಡಾಶಯ ಬೆಳವಣಿಗೆ, ಜನಕ ಹಾರ್ಮೋನುಗಳ ಉತ್ಪತ್ತಿ, ಜನಕ ಹಾರ್ಮೋನುಗಳ ಪ್ರಭಾವದಿಂದ ಅಂಡಾಶಯದಿಂದ ಅಂಡಾಣುವು ಬಿಡುಗಡೆಯಾಗುತ್ತದೆ. ಫಲಿತಗೊಂಡ ಅಂಡಾಣುವನ್ನು ಸ್ವೀಕರಿಸಲು ಗರ್ಭಾಶಯವು ಸಿದ್ಧಗೊಳ್ಳುತ್ತದೆ. ಅಂಡಾಣು ಈ ಅವಧಿಯಲ್ಲಿ ಫಲಿತಗೊಳ್ಳದಿದ್ದರೆ ಈ ಅಂಡಾಣುವು ದೇಹದಿಂದ ಹೊರಹಾಕಲ್ಪಡುತ್ತದೆ. ಆಗ ಗರ್ಭಾಶಯದ ಗೋಡೆಯಿಂದ ರಕ್ತ ಮತ್ತು ಶ್ಲೇಷ್ಮ ಯೋನಿಯ ಮೂಲಕ ಹೊರ ಹಾಕಲ್ಪಡುತ್ತದೆ. ಇದನ್ನೇ ಋತುಸ್ರಾವ ಅಥವಾ ಮುಟ್ಟು ಎಂದು ಕರೆಯಲ್ಪಡುತ್ತದೆ. ಈ ಹಂತವನ್ನು ಮೈನೆರೆಯುವಿಕೆ (Puberty) ಎಂದು

ಕರೆಯಲಾಗುತ್ತದೆ. ಈ ಮುಟ್ಟು ನಿಗದಿತವಾಗಿ ಮುಂದುವರಿಯುತ್ತಾ 28 ರಿಂದ 30 ದಿನಗಳಿಗೊಮ್ಮೆ ಪುನರಾವರ್ತನೆಯಾಗುತ್ತದೆ. ಇದನ್ನು ಋತುಚಕ್ರ ಎಂದು ಕರೆಯುತ್ತಾರೆ.

ಅನೇಕ ಸಂದರ್ಭಗಳಲ್ಲಿ ಪ್ರಾರಂಭಿಕ ಹಂತದಲ್ಲಿ ಋತುಚಕ್ರ ನಿಗದಿತವಾಗಿರಬೇಕೆಂದೇನೂ ಇಲ್ಲ. ಅನಿಗದಿತತೆ ಒಂದು ಖಾಯಿಲೆಯೂ ಅಲ್ಲ. ಈ ಬಗ್ಗೆ ಸರಿಯಾದ ತಿಳುವಳಿಕೆ ಮೂಡಿಸುವುದು ಶಿಕ್ಷಕರ ಕರ್ತವ್ಯವಾಗಿದೆ. ಋತುಸ್ರಾವದ ಸಂದರ್ಭದಲ್ಲಿ ಮಕ್ಕಳು ಅನುಸರಿಸಬೇಕಾದ ವೈಯಕ್ತಿಕ ಸ್ವಚ್ಛತೆಯ ಕ್ರಮಗಳ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡುವುದು ಜೊತೆಗೆ ಈ ಬಗ್ಗೆ ಮಗು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆಯೇ ಎಂದು ಗಮನ ಹರಿಸುವುದು ಕೂಡಾ ಶಿಕ್ಷಕರ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ವೈಯಕ್ತಿಕ ಸ್ವಚ್ಛತೆ ಕಾಯ್ದುಕೊಳ್ಳದಿದ್ದಲ್ಲಿ ಸೋಂಕಿಗೆ ಕಾರಣವಾಗುತ್ತದೆ ಎನ್ನುವ ಎಚ್ಚರಿಕೆಯನ್ನು ಕೂಡಾ ಆಗಾಗ ನೆನಪಿಸುತ್ತಿರಬೇಕು. ಋತು ಸ್ರಾವದ ಸಂದರ್ಭದಲ್ಲಿ ಇರುವ ಮೂಢನಂಬಿಕೆಗಳು ಹಾಗೂ ತಪ್ಪು ಕಲ್ಪನೆಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಋತುಸ್ರಾವದ ಸಂದರ್ಭದಲ್ಲಿ ಉಂಟಾಗುವ ಹೊಟ್ಟೆ ನೋವು ಹಾಗೂ ಮಾನಸಿಕ ಖಿನ್ನತೆಯಿಂದ ಹೊರ ಬರಲು ಮಕ್ಕಳಿಗೆ ಸೂಕ್ತ ಆಪ್ತ ಸಲಹೆ ನೀಡುವ ಬಗ್ಗೆ ಕೂಡಾ ಶಿಕ್ಷಕರು ಗಮನ ಹರಿಸಬೇಕು. ವಸತಿ ಶಾಲೆಯಾಗಿರುವುದರಿಂದ ಈ ಬಗ್ಗೆ ಮಾಹಿತಿ ನೀಡುವುದು ಹೆಚ್ಚು ಸುಲಭ, ಮಾತ್ರವಲ್ಲ ಹೆಚ್ಚು ವೈಯಕ್ತಿಕವಾಗಿಸುವುದು ಸಾಧ್ಯವಾಗುತ್ತವೆ. ಮಕ್ಕಳ ಪ್ರಬುದ್ಧತೆಯ ವಯಸ್ಸನ್ನು ತರಗತಿಗೆ ತಳುಕು ಹಾಕುವುದು ಸರ್ವಥಾ ಸಲ್ಲ. ಕೆಜಿಬಿವಿಗೆ ದಾಖಲಾಗುವ ಮಗುವು ತರಗತಿಯ ವಯೋಮಾನಕ್ಕಿಂತ ಹೆಚ್ಚಿನದ್ದಾಗಿರುತ್ತದೆ ಎಂಬ ಅರಿವು ಶಿಕ್ಷಕರಿಗೆ ಇರಬೇಕಾಗುತ್ತದೆ. ಮಗು ಎದುರಿಸುತ್ತಿರುವ ದೈಹಿಕ ಸಮಸ್ಯೆಗಳಿಗೆ ನಿಯಮಿತವಾಗಿ ಆರೋಗ್ಯ ಪರೀಕ್ಷೆಗೆ ಬರುವ ಮಹಿಳಾ ವೈದ್ಯರಿಂದ ವೈದ್ಯಕೀಯ ತಪಾಸಣೆ/ನೆರವು ಕೊಡಿಸಬೇಕು ಮತ್ತು ಆಪ್ತ ಸಮಾಲೋಚನೆಯನ್ನು ನಡೆಸಬೇಕು.

ಮಕ್ಕಳಿಗೆ ಬೇಕಾದ ನ್ಯಾಪ್‌ಕಿನ್‌ಗಳನ್ನು ಖರೀದಿಸಿ ತಪ್ಪದೇ ನೀಡಬೇಕು. ತನ್ನ ಮನೆಯಲ್ಲಿ ಮಗು ಅನುಭವಿಸುವ ಪ್ರೀತಿ–ವಿಶ್ವಾಸ ಮತ್ತು ಭರವಸೆಯ ಸನ್ನಿವೇಶವನ್ನು KGBV ಶಾಲೆಯಲ್ಲಿಯೂ ಒದಗಿಸಬೇಕು.

**ಪೌಷ್ಠಿಕತೆ ಮತ್ತು ಶಿಕ್ಷಣ :**

**ಮಕ್ಕಳ ವ್ಯಕ್ತಿತ್ವ ವಿಚಾರಗಳು :**

ನೀವು ಒಬ್ಬರು ಒಳ್ಳೆಯ ಈಜುಪಟು ಎಂದು ಭಾವಿಸಿ .ಉಕ್ಕಿಹರಿಯುತ್ತಿರುವ ಪ್ರವಾಹದ ವಿರುದ್ಧ ಸಮರ್ಥವಾಗಿ ಸೆಣಸಿ ಸಣ್ಣದಾದ ಚೆಂಡನ್ನೂ ಹೆಕ್ಕಿ ತರಬಲ್ಲ ಸಾಮರ್ಥ್ಯ ಹೊಂದಿದ್ದೀರಿ. ಒಂದು ದಿನ ನೀವು ಸೊಕ್ಕಿ ಹರಿಯುತ್ತಿರುವ ನದಿಯ ದಡದಲ್ಲಿ ನಿಂತಿದ್ದೀರಿ. ಆಗ ಆ ನದಿಯಲ್ಲಿ ಒಂದು ದೋಣಿಯ ಸಹಾಯದಿಂದ ಹಲವರು ಆ ಪ್ರವಾಹವನ್ನು ದಾಟುತ್ತಿದ್ದಾರೆ. ಆ ದೋಣಿ ದುರಂತಕ್ಕೀಡಾಗುತ್ತದೆ. ಆ ದೋಣಿಯಲ್ಲಿ ಒಬ್ಬ ವೈದ್ಯರಿದ್ದಾರೆ ಅವರ ಸ್ಪರ್ಶವೇ ಸಾವಿನಿಂದ ರೋಗಿಗಳನ್ನು ಬದುಕಿಸುತ್ತದೆ. ಒಬ್ಬರು ಸಂಗೀತಗಾರರಿದ್ದಾರೆ ಅವರ ಸಂಗೀತ ಸಾವಿರಾರು ಜನರ ನೋವನ್ನು ಮರೆಸಬಲ್ಲದು. ಒಬ್ಬ ಇಂಜಿನಿಯರಿದ್ದಾರೆ ಗ್ರಾಮೀಣ ಬದುಕನ್ನು ಸರಳಗೊಳಿಸಬಲ್ಲ ಸಂಶೋಧನೆಯಲ್ಲಿ ತೊಡಗಿದ್ದಾರೆ. ಒಬ್ಬಳು ತಾಯಿ ಮಗುವಿಗೆ ಹಾಲ್ಕುಡಿಸುತ್ತಿದ್ದಾಳೆ. ಈ ಮಗು ಇವರೆಲ್ಲರನ್ನು ಮೀರಿಸಿ ಇನ್ನೇನಾಗಬಲ್ಲನೋ ಗೊತ್ತಿಲ್ಲ. ಒಬ್ಬಳು ಗರ್ಭಿಣಿ ಇದ್ದಾಳೆ ಆಕೆಯನ್ನು ಬದುಕಿಸುವುದರಿಂದ ಏಕ ಕಾಲದಲ್ಲಿ ಎರಡು ಜೀವಗಳಲ್ಲಿ ಉಳಿಸಿದ ಭಾಗ್ಯ ನಿಮ್ಮದಾಗುತ್ತದೆ. ಅಮಾಯಕ ನಾವಿಕನಿದ್ದಾನೆ. ಆತ ಸತ್ತು ಹೋದಲ್ಲಿ ಆತ ಮಾತ್ರವಲ್ಲ ಆತನ ಎರಡು ಮಕ್ಕಳು ಹಾಗೂ ಹೆಂಡತಿ ಹಸಿವಿನಿಂದ ಸಾಯುತ್ತಾರೆ. ನೀವು ನೀರಿಗೆ ಧುಮುಕಿ ಒಬ್ಬರನ್ನು ಮಾತ್ರ ಬದುಕಿಸಬಲ್ಲಿರಿ ನಿಮ್ಮ ಆಯ್ಕೆ ಯಾರು ? ನೀವು ಕೊಡುವ ಉತ್ತರ ಖಂಡಿತ ಭಿನ್ನ. ಅದು ನಮ್ಮ ಸಂಸ್ಕಾರದಿಂದ ಪ್ರೇರಿತವಾಗಿದೆ. ಆದರೆ ಒಮ್ಮೆಯಾದರೂ ನಿಮಗೆ, ನನಗೆ ಎಲ್ಲರೂ ಬೇಕು

ಎಂದು ಅನಿಸಿತು ಅಲ್ಲವೇ? ಆಯ್ಕೆ ಮಾಡಲು ನಿಮಗೆ ಮನಸ್ಸು ಬಾರದು. ಆ ಕ್ಷಣದಲ್ಲಿ ನಿಮಗೆ ಎಲ್ಲರೂ ಸಮಾನರು.

ಹೌದು ನಮ್ಮ ಶಾಲೆಯೂ ಹಾಗೆಯೇ ಪ್ರತಿಯೊಬ್ಬ ಶಿಕ್ಷಕನೂ ಒಬ್ಬ ತೋಟದ ಮಾಲಿಯ ಹಾಗೆ. ಈತ ಎಲ್ಲಾ ಗಿಡಗಳನ್ನು ಸಮಾನವಾಗಿ ನೋಡುತ್ತಾನೆ. ಪರಿಮಳ ಹೊಂದಿರುವ ಗುಲಾಬಿಯ ಗಿಡ ಅಥವಾ ಪರಿಮಳವಿಲ್ಲದ ಆರ್ಕಿಡಕ್ಕೆ, ಬಣ್ಣ ಬಣ್ಣದ ಹೂ ಬಿಡುವ ದಾಸವಾಳದ ಗಿಡಕ್ಕೆ, ಹೂ ಬಿಡದ ಬೇಲಿಯ ಗಿಡಕ್ಕೆ, ಒಂದೇ ರೀತಿಯ ನೀರುಣಿಸುತ್ತಾನೆ. ನಾವು ಶಿಕ್ಷಕರಾಗಿ ಎಲ್ಲಾ ಮಕ್ಕಳ ವ್ಯಕ್ತಿತ್ವವನ್ನು ಸಮಾನ ಗೌರವದಿಂದ ನೋಡುವ ಅಗತ್ಯವಿದೆ. ಅದರಲ್ಲಿಯೂ ಕೆಜಿಬಿವಿ ಶಾಲೆಯ ಮಕ್ಕಳು ವ್ಯವಸ್ಥೆಯಿಂದ ಪರಿತ್ಯಕ್ತ, ಅವಕಾಶ ವಂಚಿತ, ವ್ಯಕ್ತಿತ್ವ ವಿಕಸನಕ್ಕೆ ಮಾರ್ಗದರ್ಶನ ಸಿಗದವರಿದ್ದಾರೆ. ಈ ಮಕ್ಕಳ ವ್ಯಕ್ತಿತ್ವವನ್ನು ಗೌರವಿಸುವ ಅಗತ್ಯವಿದೆ. ಮಕ್ಕಳ ವ್ಯಕ್ತಿತ್ವ ವಿಚಾರಗಳನ್ನು ರೂಪಿಸುವಾಗ ಆತ್ಮ ಸ್ಥೈರ್ಯ, ಸೋಲನ್ನು ಎದುರಿಸುವುದು. ಆತ್ಮಗೌರವ, ಬಾಂಧವ್ಯದ ಬೆಸುಗೆ, ಸೋಲಿನೊಂದಿಗೆ ಹೊಂದಾಣಿಕೆ, ಸಮವಯಸ್ಕರ ಒತ್ತಡಗಳು ಓದುವ ಹವ್ಯಾಸಗಳು ಎಲ್ಲಾ ಅಂಶಗಳಿಗೆ ಸೂಕ್ತ ಒತ್ತು ನೀಡಬೇಕಾಗುತ್ತದೆ.

## ಮಕ್ಕಳು ಹಾಗೂ ಇತರರ ಸಂಬಂಧಗಳು

ಮಾನವ ಒಬ್ಬ ಸಂಘ ಜೀವಿ, ಸಂಘದ ಬದುಕು ಸಾಕಷ್ಟು ಸೌಲಭ್ಯಗಳನ್ನು ಒದಗಿಸುತ್ತದೆ. ಕೆಜಿಬಿವಿ ಒಂದು ವಸತಿ ನಿಲಯವಾಗಿರುವುದರಿಂದ ಮಕ್ಕಳು ಗುಂಪಾಗಿ ವಾಸಿಸುತ್ತಾರೆ. ಆದ್ದರಿಂದ ಮಗುವಿಗೆ ತನ್ನ ಸಮೂಹದೊಂದಿಗೆ ಚಲಿಸುವ ಮನೋಪ್ರವೃತ್ತಿಯನ್ನು (ಹೊಂದಿಕೊಂಡು ನಡೆಯುವ) ಬೆಳೆಸಬೇಕಾಗುತ್ತದೆ. ಅಥವ ಮಗು ತನ್ನ ಓರಗೆಯವರೊಂದಿಗೆ ಹೊಂದಾಣಿಕೆಗೆ ತೆಗೆದುಕೊಳ್ಳುವ ಸಮಯ ವಿಳಂಬವನ್ನು ಹೋಗಲಾಡಿಸುವ ಅವಶ್ಯಕತೆ ಇದೆ. ಇಲ್ಲಿ ಸಮವಯಸ್ಕರೊಂದಿಗೆ ಹಾಗೂ ಭಿನ್ನವಯಸ್ಕರೊಂದಿಗೆ ಹೊಂದಾಣಿಕೆಯ ಗೊಂದಲವಿದೆ. ಪರಿಸರದ / ಆಚಾರದ / ಸಾಮಾಜಿಕ ಕಟ್ಟಳೆಗಳ ಭಿನ್ನತೆ ಇದೆ. ಆದ್ದರಿಂದ ಆರಂಭದಲ್ಲಿ ಹೊಂದಾಣಿಕೆ ಸಮಸ್ಯೆಗೆ ಸೂಕ್ತ ಪರಿಹಾರ ಕಂಡುಹಿಡಿದು ಮಾರ್ಗದರ್ಶನ ಮಾಡಿದರೆ ಮುಂದಿನ ದಿನಗಳಲ್ಲಿ ಹೊಂದಾಣಿಕೆ ಒಂದು ಸಮಸ್ಯೆಯಾಗಿ ಉಳಿಯುವುದಿಲ್ಲ.

**ಸಮವಯಸ್ಕರ ಒತ್ತಡಗಳು** : ಅಂದರೆ ಒಂದೇ ವಯಸ್ಸಿನ ಸ್ನೇಹಿತರು ಒಂದೇ ರೀತಿಯ ಅಭಿರುಚಿ ಹವ್ಯಾಸಗಳು, ಜೀವನದ ಆಗು ಹೋಗುಗಳ ಬಗ್ಗೆ ಸಮಾನ ದೃಷ್ಟಿಕೋನ ಹೊಂದಿರುತ್ತಾರೆ. ಹೀಗಿದ್ದು ಮಕ್ಕಳು ಒತ್ತಡದಿಂದ ಮುಕ್ತರಾಗಿರುತ್ತಾರೆ ಎಂದು ಎಲ್ಲ ಸಂದರ್ಭಗಳಲ್ಲೂ ನೀರಿಕ್ಷಿಸುವುದು ಸರಿಯಲ್ಲ. ವೈಯಕ್ತಿಕ ಮಿತಿಗಳ ಕಾರಣಗಳು ; ಪರಸ್ಪರ ಪ್ರತಿವರ್ತನೆ, ಮುಂತಾದವುಗಳಿಂದ ಮಗುವಿನ ಚಿತ್ತ ಕಲಕುವುದು ಸಹಜ. ಆದು ಮಾನಸಿಕ ಒತ್ತಡವನ್ನು ನಿರ್ಮಿಸುತ್ತದೆ. ಒತ್ತಡವನ್ನು ನಿಭಾಯಿಸುವುದು ಹೇಗೆ ಎಂಬ ಬಗ್ಗೆ ಶಿಕ್ಷಕರು ಸೂಕ್ತ ಮಾರ್ಗದರ್ಶನ ನೀಡುವುದು. ಒಂದು ಸಾಧ್ಯತೆ ಮುಂದಿನಂತೆ ಇರಬಹುದು.

ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಅವರಿಗೆ ಒಂದು ಸನ್ನಿವೇಶ ಘಟನೆಯನ್ನು ಅವರಿಗೆ ವಿವರಿಸಿ ಎಲ್ಲಾ ಗುಂಪಿನವರೂ ಈ ವಿಷಯದ ಬಗ್ಗೆ ಅಭಿಪ್ರಾಯಗಳನ್ನು ಮಂಡಿಸುವಂತೆ / ಕಿರುನಾಟಕವನ್ನು ನಟಿಸುವಂತೆ ತಿಳಿಸುವುದು. ಮಕ್ಕಳ ಅಭಿವ್ಯಕ್ತಿಯನ್ನು ಆಧರಿಸಿ ಆಪ್ತ ಸಮಾಲೋಚನೆಯನ್ನು ಆಯೋಜಿಸಬಹುದು. ಉದಾಹರಣೆಗೆ ಕೆಜಿಬಿವಿ ಶಾಲೆಗೆ ಬಂದ ಮೇಲೆ ಮರೆಯಲಾಗದ ಘಟನೆಯನ್ನು ಪಾತ್ರಾಭಿನಯದ ಮೂಲಕ ಅಭಿನಯಿಸಿ ತೋರಿಸಿ ಅಥವಾ ಬರೆದು ತೋರಿಸಿ ಎಂದು ಕೇಳುವುದರಿಂದ ಪ್ರೀತಿ ದ್ವೇಷಗಳಿರುವ ಸಂಗತಿಯನ್ನು ಮಗು ಹೊರಗೆಡವಬಹುದು. ಇದನ್ನು ಆಧರಿಸಿ ಮಾರ್ಗದರ್ಶನ ನೀಡಬಹುದು. ಎರಡನೆಯದಾಗಿ ಸಮಾಜ ಮಿತಿಯ ತಂತ್ರ ಬಳಸಿ ಯಾವ ಮಗು ಮಕ್ಕಳ ಗೌರವಕ್ಕೆ ಪಾತ್ರವಾಗಿದೆ. ಯಾವ ಮಗು ತಿರಸ್ಕಾರಕ್ಕೆ ಪಾತ್ರವಾಗಿದೆ ಎಂದು ಗುರುತಿಸಬಹುದು. ಇದನ್ನು ಆಧರಿಸಿ ಸಲಹೆ ಮಾರ್ಗದರ್ಶನ

ನೀಡಬಹುದು. ಹಾಗೂ ನಿಮ್ಮ ವರ್ತನೆಯನ್ನು ಆ ಮಗುವಿನೊಡನೆ ಪ್ರತಿವರ್ತಿಸುವ ವೇಳೆ ಮಾರ್ಪಡಿಸಿಕೊಳ್ಳಬಹುದು.

## ಮಕ್ಕಳ ಹಕ್ಕುಗಳ ಅರಿವು

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು ಎಂಬುದು ಒಂದು ಕಲ್ಪನೆ. ಆದರೆ ಇಂದಿನ ಮಕ್ಕಳು ಇಂದಿನ ಪ್ರಜೆಗಳು ಎಂಬುದು ಕೂಡ ಅಷ್ಟೇ ಸತ್ಯ. ಆದ್ದರಿಂದ ಪ್ರತಿಯೊಂದು ಮಗುವನ್ನು ಒಬ್ಬ ಸೂಕ್ಷ್ಮರೂಪದ ವಯಸ್ಕ ಎಂದು ಪರಿಗಣಿಸುವ ಅವಶ್ಯಕತೆ ಇದೆ. ಹೀಗೆ ಭಾವಿಸುವಾಗ ಶಿಕ್ಷಕ ವಿದ್ಯಾರ್ಥಿಗಳ ನಡುವಿನ ಸಂದರ್ಭಗಳ ಪರಿಕಲ್ಪನೆ ಕೂಡಾ ಬದಲಾಗುತ್ತದೆ. ಇಲ್ಲಿ ಶಿಕ್ಷಕ–ಸ್ನೇಹಿತ, ಮಾರ್ಗದರ್ಶಕ, ಸಹ ಕಲಿಕಾರ್ಥಿ ಎಂಬ ಭಾವನೆ ಉಂಟಾಗುತ್ತದೆ. ಮಕ್ಕಳ ಹಕ್ಕುಗಳ ಅರಿವು ಅಧ್ಯಾಪಕಿಗೆ ಆಗುವುದರಿಂದ ; ಸ್ಪಂದನಶೀಲ ಸೂಕ್ಷ್ಮ ಸಂವೇದಿ; ಸಮರ್ಥ ಮಾರ್ಗದರ್ಶಳಾಗಬಲ್ಲರು.

ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿ–ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಯ್ದು ಪ್ರಮುಖ ಪರಿಚ್ಛೇದಗಳನ್ನು ಮುಂದೆ ನೀಡಿದೆ. ಈ ಕುರಿತು ಮಕ್ಕಳಲ್ಲಿ ಜಾಗೃತಿ ಮೂಡಿಸುವುದು.

**ಪರಿಚ್ಛೇದ – 2 : ಮಕ್ಕಳ ನಡುವೆ ತಾರತಮ್ಯ ಭೇದಭಾವ ಇರಬಾರದು.**

ಒಂದೇ ತರಗತಿಯಲ್ಲಿರುವ, ಶಾಲೆಯಲ್ಲಿರುವ ಅಥವಾ ಸಮುದಾಯ ಮನೆಯಲ್ಲಿರುವ ಮಕ್ಕಳ ನಡುವೆ ಭೇದಭಾವ ಮಾಡಿದರೆ ನಿಮಗೆ ಏನು ಅನಿಸುತ್ತದೆ ? ಉದಾಹರಣೆಗೆ, ಹಳ್ಳಿಗಾಡಿನ ಮಗು ನಗರದ ಮಕ್ಕಳೆಂದು ಬೇರೆ ಬೇರೆಯಾಗಿ ನೋಡುವುದು ; ಶ್ರೀಮಂತರ ಮಕ್ಕಳ ಮತ್ತು ಬಡವರ ಮನೆಯ ಮಕ್ಕಳ; ಬೇರೆ ಬೇರೆ ಭಾಷೆ ಮಾತನಾಡುವ ಮಕ್ಕಳ; ವಿವಿಧ ಜಾತಿ ಬಣ್ಣ ಇತ್ಯಾದಿಗಳಿಂದ ಮಕ್ಕಳನ್ನು ಬೇರೆ ಬೇರೆಯಾಗಿ ನೋಡುವುದು. ತಾರತಮ್ಯ ಮಾಡುವುದು. ಸರಿಯೇ?

ಈಗಲೂ ಸಹ ಕೆಲವು ಕಡೆ ಹೆಣ್ಣು ಮಕ್ಕಳೆಂದೋ, ಅಂಗವಿಕಲತೆ ಇರುವವರೆಂದೋ, ತರಗತಿಯಲ್ಲಿ ಚುರುಕಾಗಿ ಉತ್ತರಿಸುವವರು ಎಂದೋ, ಕಲಿಕೆಯಲ್ಲಿ ಹಿಂದುಳಿದವರು ಎಂದೋ, ಭೇದಭಾವ ಮಾಡಿದರೆ ಅವಕಾಶದಿಂದ ವಂಚಿತರಾದ ಮಕ್ಕಳ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಿ, ಅದು ಸದಾಕಾಲ ಅವರನ್ನು ಕಾಡುತ್ತದೆ.ಇಂತಹ ಯಾವುದೇ ತಾರತಮ್ಯ ಯಾವ ಮಕ್ಕಳನ್ನೂ ಕಾಡಬಾರದು. ಮಕ್ಕಳ ನಡುವೆ ಸಮಾನತೆ ಕಾಪಾಡುವುದು ಎಲ್ಲಾ ಶಿಕ್ಷಕರ ಮತ್ತು ಪೋಷಕರ ಜವಾಬ್ದಾರಿಯಾಗಿದೆ.

ಮಕ್ಕಳು ಎಲ್ಲ ಮಕ್ಕಳೊಡನೆ ಸಮಾನ ಭಾವದಿಂದ ವರ್ತಿಸಬೇಕು. ಯಾರಿಂದಲಾದರೂ ತಾರತಮ್ಯ ಮಾಡುವ ಸ್ವಭಾವ, ವರ್ತನೆ ಕಂಡು ಬಂದರೆ ಅದನ್ನು ವಿರೋಧಿಸಬೇಕು ಮತ್ತು ಸಂಬಂಧಿಸಿದವರಿಗೆ ವರದಿ ಮಾಡಲೇಬೇಕು. ಯಾವುದಾದರೂ ಕಾರಣದಿಂದ ಮಕ್ಕಳು ಹಿಂದುಳಿದಿದ್ದರೆ, ಅಂತಹ ಮಕ್ಕಳಿಗೆ ಬೇಕಾದ ಸಹಾಯ ಮಾಡಬೇಕು.

**ಪರಿಚ್ಛೇದ – 3 : ಎಲ್ಲವೂ ಮಕ್ಕಳ ಹಿತದೃಷ್ಟಿಯಿಂದ ಆಗಬೇಕು.**

ಮಕ್ಕಳ ಬದುಕು ಜೀವನದಲ್ಲಿ ಸುಂದರವಾಗಬೇಕು. ಶಾಲೆಯಲ್ಲಿ ಮಕ್ಕಳ ಹಿತದೃಷ್ಟಿಯಿಂದ ಏನು ಮಾಡಬೇಕು ಏನು ಮಾಡುತ್ತಿದ್ದಾರೆ. ಎಂದು ಗಮನಿಸಬೇಕಿದೆ.

ಇಲಾಖೆಗಳಲ್ಲಿ ಶಾಲೆಗಳಲ್ಲಿ ಸಂಬಂಧಪಟ್ಟವರು ಮಕ್ಕಳ ಪರವಾದ ನಿರ್ಧಾರವನ್ನು ಕೈಗೊಳ್ಳಬೇಕು. ಯಾವುದೇ ರೀತಿಯಲ್ಲೂ ಮಕ್ಕಳಿಗೆ ತೊಂದರೆ ಆಗುವಂತಹದನ್ನು ಯಾರು ಮಾಡಬಾರದು.

**ಪರಿಚ್ಛೇದ – 5 : ತಂದೆತಾಯಿಗಳು ಹಾಗೂ ಪೋಷಕರು ಜವಾಬ್ದಾರಿ.**

ಮಕ್ಕಳ ಆರೋಗ್ಯ, ಅಭಿವೃದ್ಧಿ, ಬೆಳವಣಿಗೆಗೆ ಪೋಷಕರೇ ಮೊದಲ ಜವಾಬ್ದಾರರು. ಮಕ್ಕಳ ಈ ಹಕ್ಕನ್ನು ಯಾರು ಕಿತ್ತುಕೊಳ್ಳಬಾರದು. ಕುಟುಂಬ, ಬಂಧು, ಬಳಗ, ಶಿಕ್ಷಕರು ಹಾಗೂ ಸಮುದಾಯಕ್ಕೂ ಈ ಜವಾಬ್ದಾರಿಯಿದೆ. ತಂದೆ/ತಾಯಿ ಇಲ್ಲದ ಅಥವಾ

ಬೇರಾವುದೋ ಕಾರಣದಿಂದ ಬೇರೆ ಬೇರೆ ಪೋಷಕರ ಅಥವಾ ನೋಡಿಕೊಳ್ಳುವವರ ಬಳಿ ಮಕ್ಕಳನ್ನು ಇರಿಸಿದ್ದಲ್ಲಿ ಅವರ ಶ್ರೇಯೋಭಿವೃದ್ಧಿಗೆ ಆ ಪಾಲಕರು ಜವಾಬ್ದಾರರು. ಮಕ್ಕಳ ಈ ಹಕ್ಕನ್ನು ಗೌರವಿಸುತ್ತಲೇ, ಅಕಸ್ಮಾತ್ ಇಂತಹ ರಕ್ಷಣೆಯಲ್ಲಿರುವ ಮಕ್ಕಳಿಗೆ ಶಿಕ್ಷಕರಿಂದಲೇ ತೊಂದರೆಯಿದೆ ಎಂದಾದಲ್ಲಿ ಸರಕಾರ ಮಕ್ಕಳ ಪರವಾದ ಸೂಕ್ತ ಕ್ರಮ ಮತ್ತು ನಿರ್ಧಾರ ತೆಗೆದುಕೊಳ್ಳಬೇಕು. ಬೆಳೆಯುವ ಮಕ್ಕಳ ಮನಸ್ಸಿನ ಮೇಲೆ ಪೋಷಕರ ಮತ್ತು ಶಿಕ್ಷಕರ ಅಧಿಕಾರ ಪ್ರಯೋಗ ಸಲ್ಲದು.

**ಪರಿಚ್ಛೇದ – 6 : ಜೀವಿಸುವ ಹಕ್ಕು**

ಮಕ್ಕಳಿಗೆ ಬದುಕುವ ಹಕ್ಕಿದೆ. ಯಾವುದೇ ಮಗು ಅಸ್ವಾಭಾವಿಕ ಸಾವಿಗೆ ಗುರಿಯಾಗದಂತೆ ಕುಟುಂಬ, ಸಮುದಾಯ ವ್ಯವಸ್ಥೆ ನೋಡಿಕೊಳ್ಳಬೇಕು.

ನಮ್ಮ ರಾಜ್ಯದಲ್ಲಿ ಈಗಲೂ ಜೀವಂತವಾಗಿ ಹುಟ್ಟುವ ಒಂದು ಸಾವಿರ ಮಕ್ಕಳಲ್ಲಿ ಒಂದು ವರ್ಷ ಕಳೆಯುವುದರಲ್ಲಿ 43 ಮಕ್ಕಳು ಸತ್ತು ಹೋಗುತ್ತಾರೆ. ಇದಕ್ಕೆ ಶಿಶು ಮರಣ ಪ್ರಮಾಣ ಎನ್ನುತ್ತಾರೆ. ಹೆಣ್ಣು ಮಗು ಎಂಬ ಕಾರಣಕ್ಕೆ ಭ್ರೂಣ ಹತ್ಯೆ ಮತ್ತು ಅವಾಸ್ತವಿಕ ಮರಣ ಸಂಭವಿಸುತ್ತದೆ. ಇದರ ನಿಯಂತ್ರಣ ಆಗಬೇಕು.

**ಪರಿಚ್ಛೇದ – 12 : ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು**

ಮಕ್ಕಳ ವಿಚಾರಗಳಿಗೆ ಸಂಬಂಧಿಸಿದ ಪ್ರತಿಯೊಂದು ಅಂಶದ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸುವ ಹಕ್ಕು ಮಕ್ಕಳಿಗೆ ಇದೆ. ಆ ಅಭಿಪ್ರಾಯವನ್ನು ಶಿಕ್ಷಕರು ಪೋಷಕರು ಅಡ್ಡಿ ಅಭಿಪ್ರಾಯ, ಆತಂಕ ಒತ್ತಡವಿಲ್ಲದ ವಾತಾವರಣದಲ್ಲಿ ಮಕ್ಕಳ ಮಾತುಗಳನ್ನು ಕೇಳಬೇಕು, ವಿವಿಧ ಮಾಧ್ಯಮಗಳನ್ನು ಉಪಯೋಗಿಸಿ ಅಭಿಪ್ರಾಯ ತಿಳಿಸಲು ಮಕ್ಕಳಿಗೆ ಅವಕಾಶನೀಡಲೇಬೇಕು. ಮಕ್ಕಳು–ತರಗತಿಗಳನ್ನು ತಮ್ಮ ಅಭಿಪ್ರಾಯ ತಿಳಿಸಲು ಒಂದು ಸಮರ್ಥ ವೇದಿಕೆಯಾಗಿ ಬಳಸುವುದನ್ನು ಶಾಲೆಗಳು ನೋಡಿಕೊಳ್ಳಬೇಕು. ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಮಕ್ಕಳ ಪ್ರಾತಿನಿಧಿತ್ವ ಇದ್ದು ಅಲ್ಲಿಯೂ ಮಕ್ಕಳಿಗೆ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಲು ಮುಕ್ತ ವಾತಾವರಣವಿರಬೇಕು. ಇದೇ ರೀತಿ ಮನೆಯಲ್ಲಿ ಪೋಷಕರು ತಮ್ಮ ಮನೆಯಲ್ಲಿ ಮಕ್ಕಳಿಗೆ ಸ್ವಾಭಾವಿಕ ಅವಕಾಶ ನೀಡಬೇಕು.

ಶಾಲೆಗಳಲ್ಲಿ ಮಕ್ಕಳ ಅಭಿಪ್ರಾಯ ವ್ಯಕ್ತ ಪಡಿಸಲು ಪ್ರಶ್ನೆ ಪೆಟ್ಟಿಗೆ, ದೂರು ಪೆಟ್ಟಿಗೆ ಇಡಬೇಕು. ಇವು ಬಳಕೆಯಾಗುವಂತೆ ಮಕ್ಕಳಿಗೆ ಪ್ರಯೋಜನವಾಗುವಂತೆ ನೋಡಿಕೊಳ್ಳಬೇಕು. ಶಾಲೆಯಲ್ಲಿ "ಮಕ್ಕಳ ಹಕ್ಕುಗಳ ಕ್ಲಬ್" ಪ್ರಾರಂಭಿಸುವುದು ಸೂಕ್ತ.

**ಪರಿಚ್ಛೇದ – 24 : ಆರೋಗ್ಯ ರಕ್ಷಣೆ**

ಮಕ್ಕಳ ಆರೋಗ್ಯ ರಕ್ಷಣೆ ಪೋಷಕರ ಶಿಕ್ಷಕರ ಮತ್ತು ಸಮುದಾಯದ ಮೊದಲ ಕೆಲಸ. ಮಕ್ಕಳಿಗೆ ಆರೋಗ್ಯ ಸೇವೆ ಹತ್ತಿರದಲ್ಲಿಯೇ ನಿರಂತರವಾಗಿ ದೊರಕಬೇಕು. ಪೌಷ್ಠಿಕ ಆಹಾರ ಪೂರೈಕೆ, ಶುಚಿತ್ವ ಇರುವಂತೆ ನೋಡಿಕೊಳ್ಳಬೇಕು. ಶಾಲೆಯಲ್ಲಿ ಎಲ್ಲಾ ಮಕ್ಕಳಿಗೆ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಸೌಲಭ್ಯ ದೊರಕುವಂತಾಗಬೇಕು. ಅಂಗವಿಕಲ ಮಕ್ಕಳು ಹೆಣ್ಣು ಮಕ್ಕಳು ಹಾಗೂ ಬುಡಕಟ್ಟು ಜನಾಂಗಗಳ ಮಕ್ಕಳ ಆರೋಗ್ಯದತ್ತ ತೀವ್ರ ನಿಗಾವಹಿಸಬೇಕು.

ಶಾಲಾ ಮಟ್ಟದಲ್ಲಿ ಆರೋಗ್ಯ ಶಿಕ್ಷಣ, ವೈದ್ಯಕೀಯ ತಪಾಸಣೆ ಹಾಗೂ ಚಿಕಿತ್ಸೆ ಸೌಲಭ್ಯ ತಪ್ಪದೆ ಮಾಡುವುದು.

**ಪರಿಚ್ಛೇದ – 27 :** ಮಕ್ಕಳ ದೈಹಿಕ ಮಾನಸಿಕ ಅಭಿವೃದ್ಧಿ ಮತ್ತು ವಿಕಸನಕ್ಕಾಗಿ ಕನಿಷ್ಠ ಸೌಕರ್ಯಗಳು ಬೇಕೇ ಬೇಕು. ಮಕ್ಕಳ ಅಗತ್ಯಗಳನ್ನು ಪೂರೈಸಲು ಬೇಕಾದವರು ನಮ್ಮ ಪೋಷಕರು. ಅವರು ಮಕ್ಕಳನ್ನು ಕಾಪಾಡುವಂತೆ ಮಾಡಬೇಕಾದರೆ, ಸರ್ಕಾರ ಸೂಕ್ತ ವ್ಯವಸ್ಥೆಗಳನ್ನು ಮಾಡಬೇಕು. ಮಕ್ಕಳಿಗಾಗಲೀ ಪೋಷಕರಿಗಾಗಲೀ ಶೋಷಣೆಗೆ, ವೃಥಾ ತೊಂದರೆಗೆ ಈಡಾಗದಂತೆ ಕಾಪಾಡಬೇಕು ಆಡಳಿತಗಾರರ ತಪ್ಪು ಧೋರಣೆ ಮತ್ತು ನೀತಿಗಳಿಂದಾಗಿ ಮಕ್ಕಳು ಬೀದಿಗೆ ಬೀಳುವಂತಾಗಬಾರದು. ಈ ಬಗ್ಗೆ ಶಿಕ್ಷಕರು ಶಾಲೆಗಳಲ್ಲಿ ಈ ದಿಸೆಯಲ್ಲಿ ಕಾರ್ಯವಹಿಸಬೇಕು.

**ಪರಿಚ್ಛೇದ – 28 : ಶಿಕ್ಷಣದ ಹಕ್ಕೂ ಮತ್ತು ಉದ್ದೇಶ.**

ಸ್ವಾತಂತ್ರ್ಯ ನಮ್ಮ ಜನ್ಮ ಸಿದ್ಧ ಹಕ್ಕು. ಇದನ್ನು ಅರ್ಥಪೂರ್ಣಗೊಳಿಸಲು ಎಲ್ಲಾ ಮಕ್ಕಳಿಗೆ ಸಮಾನ ಶಿಕ್ಷಣ ದೊರೆಯಬೇಕು. ಭಾರತ ಸಂವಿಧಾನದ ಪರಿಚ್ಛೇದ 21 ಎ ಭಾರತೀಯರಿಗೆ ಶಿಕ್ಷಣದ ಹಕ್ಕನ್ನು ಖಾತರಿಗೊಳಿಸುತ್ತದೆ. ಎಲ್ಲಾ ಮಕ್ಕಳೂ ಶಾಲೆಗೆ ಸೇರಲೇ ಬೇಕು. ಕಲಿಯಬೇಕು. ಶಾಲೆಯ ಸೌಲಭ್ಯಗಳಾದ ಆಟ ಪಾಠಗಳು, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡೆ ಸಾಂಸ್ಕೃತಿಕ ಚಟುವಟಿಕೆಯೇ ಮೊದಲಾದವುಗಳನ್ನು ಪಡೆಯುವ, ಬಳಸುವ ಅವಕಾಶವಿರಬೇಕು.

ಶಿಕ್ಷಕ ವರ್ಗ ಮಕ್ಕಳ ಸ್ನೇಹಿತರಂತೆ ಪಾಲಕರಂತೆ ರಕ್ಷಕರಂತೆ ಮಾರ್ಗದರ್ಶಕರಂತೆ ಇರಬೇಕು. ದೈಹಿಕ, ಮಾನಸಿಕ, ಸಾಂಸ್ಕೃತಿಕ, ಸಾಮಾಜಿಕ, ಲೈಂಗಿಕ ಆರ್ಥಿಕ, ಧಾರ್ಮಿಕ ಮತ್ತು ಇನ್ನಾವುದೇ ರೀತಿಯ ಹಿಂಸೆ ಒತ್ತಡವನ್ನು ಶಾಲೆ ಅಥವ ಶಿಕ್ಷಕ ಮಕ್ಕಳ ಮೇಲೆ ಹೇರಬಾರದು.

# 7. ಕಾರ್ಯ ಶಿಕ್ಷಣ ಮತ್ತು ಕೆ.ಜಿ.ಬಿ.ವಿ ನಂತರ ಶಿಕ್ಷಣ

ಕೈಕೆಲಸ (Craft) ಎಂಬ ಹೆಸರಿನಲ್ಲಿ ಮಕ್ಕಳ ಕೌಶಲ್ಯ ಬೆಳವಣಿಗೆಗೆ ಅನುಕೂಲವಾಗುವ ಚಟುವಟಿಕೆಗಳನ್ನು ಶಾಲೆಗಳಲ್ಲಿ ಬಹು ಹಿಂದಿನಿಂದಲೂ ಬೋಧಿಸುತ್ತಿದ್ದುದು ನಿಮ್ಮ ನೆನಪಿನಲ್ಲಿದೆ. ಇದರ ಅಡಿಯಲ್ಲಿ ನೂಲುವುದು, ನೆಯ್ಗೆ, ಕೈತೋಟ ಮಾಡುವುದು, ಮಾದರಿ ತಯಾರಿಕೆ, ಹೊಲಿಗೆ – ಇಂತಹ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಲಾಗುತ್ತಿತ್ತು. ಕಿರಿಯ ಹಂತದ ತರಗತಿಯ ಮಕ್ಕಳನ್ನು ಇಂತಹ ಸನ್ನಿವೇಶಗಳಿಗೆ ಕರೆದೊಯ್ದು ಈ ಕೆಲಸಗಳ ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಲಾಗುತ್ತಿತ್ತು.

1978 ನೇ ಸಾಲಿನಲ್ಲಿ ಈಶ್ವರಿಭಾಯಿ ಪಟೇಲ್ ಸಮಿತಿಯು ಶಿಕ್ಷಣದ ಈ ಹರವಿನ ಬಗೆಗೆ ವ್ಯಾಪಕವಾಗಿ ಮಾಹಿತಿ ಸಂಗ್ರಹಿಸಿ; ಸಮಗ್ರವಾದ ವರದಿಯನ್ನು ನೀಡಿದೆ. ಈ ಹಿನ್ನೆಲೆಯಲ್ಲಿ ಸಾಮಾಜಿಕ ಉಪಯುಕ್ತ ಉತ್ಪಾದನಾ ಕಾರ್ಯ (Socially useful and productive work) ಎಂಬ ಹೊಸ ಶೀರ್ಷಿಕೆಯಲ್ಲಿ ಈ ಶಿಕ್ಷಣ ಜಾರಿಯಾಗುತ್ತಿರುವುದನ್ನು ನೀವು ನೋಡಿರುವಿರಿ. 1986 – ಭಾರತದ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲು. ಜನಸಂಖ್ಯೆಯನ್ನು ಒಂದು ಸಂಪನ್ಮೂಲ ಎಂದು ಪರಿಗಣಿಸಲು ಪ್ರೇರಣೆಯಾದದ್ದು – ತರುವಾಯದ ಬೆಳವಣಿಗೆ. ರಾಷ್ಟ್ರೀಯ ಶಿಕ್ಷಣ ನೀತಿ ರೂಪುಗೊಂಡು ಶಿಕ್ಷಣ ಕ್ಷೇತ್ರದ ಓರೆಕೋರೆಗಳನ್ನು ಹಸನಾಗಿಸಲು ಅದಮ್ಯ ಬಲವನ್ನು ಮೈಗೂಡಿಸಿಕೊಂಡ ಕಾಲಘಟ್ಟ. ಈ ದಾಖಲೆಯಲ್ಲಿ SUPW ವಿಷಯವನ್ನು **ಕಾರ್ಯಾನುಭವ (Work experience) ಎಂದು ಕರೆಯಲಾಗಿದೆ**. ಈ ವಿಷಯ ಪ್ರಾಥಮಿಕ ಶಿಕ್ಷಕರ ಶಿಕ್ಷಣದ ಪಠ್ಯ ವಸ್ತುವಿನಲ್ಲಿ ಕಾರ್ಯ ಶಿಕ್ಷಣ ಎಂದು ಕರೆಯಲ್ಪಟ್ಟಿದೆ. ವಾಸ್ತವವಾಗಿ SUPW ಮತ್ತು ಕಾರ್ಯಾನುಭವದ ಆಶಯಗಳು ಮತ್ತು ಅನುಷ್ಠಾನ ಕ್ರಮದಲ್ಲಿ ವ್ಯತ್ಯಾಸಗಳು ಇಲ್ಲ.

❖ **ಕಾರ್ಯ ಶಿಕ್ಷಣದ (SUPW) ಉದ್ದೇಶಗಳು ಮತ್ತು ಅವುಗಳ ವಿಶ್ಲೇಷಣೆ;**

ಕಾರ್ಯ ಶಿಕ್ಷಣ ಹಲವಾರು ಉದ್ದೇಶಗಳನ್ನು ಹೊಂದಿದೆ. ಇವು ಮಗುವಿನಲ್ಲಿ ರೂಪುಗೊಳ್ಳಬೇಕೆಂಬುದು ಈ ವಿಷಯ ಬೋಧನೆಯ ಹಿಂದೆ ಅಡಗಿರುವ ತಾತ್ವಿಕ ಚಿಂತನೆಯಾಗಿದೆ. ಮುಖ್ಯವಾದ ಅಂಶಗಳನ್ನು ಮುಂದಿನಂತೆ ಪಟ್ಟಿ ಮಾಡಿದೆ.

✓ **ಕಾರ್ಯಗೌರವ;** ಕಾರ್ಯ ಶಿಕ್ಷಣದ ಬಹುಮುಖ್ಯ ಸಂಗತಿ ಮಗುವಿನಲ್ಲಿ ಕಾರ್ಯ ಗೌರವದ ಮನೋಭಾವನೆಯನ್ನು ಬೆಳೆಸುವುದು. ಈ ಮನೋಭಾವನೆಯನ್ನು ಕಾರ್ಯ ಶಿಕ್ಷಣ ಅಷ್ಟೇ ಏಕೆ ಇಡೀ ಶಿಕ್ಷಣ ಬೆಳೆಸಿದರೆ ಶಿಕ್ಷಣದ ಆಶಯದಲ್ಲಿ ಪ್ರತಿಶತ 90 ಭಾಗಕ್ಕೂ ಅಧಿಕವಾಗಿ ಸಾಧನೆ ಮಾಡಿದಂತೆ ! ಇದು ಆಶ್ಚರ್ಯವೇ? ಹಾಗಾದರೆ ಮುಂದೆ ಓದಿ.

**'ಕಾರ್ಯಗೌರವ'**– ಹಾಗಂದರೇನು ? ಇದರ ಅರಿವು ನಮಗಾದರೆ ಆಶ್ಚರ್ಯ ಬೇಕಿಲ್ಲ. ಕಾರ್ಯಗೌರವವೆಂದರೆ – ಸ್ಥೂಲವಾಗಿ ಪ್ರಪಂಚದಲ್ಲಿ ಕಾಣಸಿಗುವ ಎಲ್ಲಾ ಕೆಲಸಗಳನ್ನು ಸಮಾನ ಭಾವದಿಂದ ಕಾಣುವ ಮನಸ್ಥಿತಿ. ಅಂದರೆ

ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನೊಬ್ಬ ಮಾಡುವ ಕೆಲಸ ಮತ್ತು ಬೀದಿಯಲ್ಲಿ ಕುಳಿತು ಚಪ್ಪಲಿ ಹೊಲೆಯುವ ಮೋಚಿಯ ಕೆಲಸವನ್ನು ಸಮಾನ ಗೌರವದಿಂದ ಕಾಣುವ ಮನಸ್ಥಿತಿ. ಅರ್ಥ ತುಂಬ ಸರಳ. ಆದರೆ ಅದರ ಅನುಷ್ಠಾನ ಅಷ್ಟು ಸುಲಭವಲ್ಲ. ಅದು ಕಠಿಣಾತಿಕಠಿಣ. ಲಿಯೋ ಟಾಲ್‌ಸ್ಟಾಯ್ ಮತ್ತು ರಸ್ಕಿನ್ನರ ಬರಹಗಳನ್ನು ಓದಿ–ಜೀರ್ಣಿಸಿಕೊಂಡು – ಗಾಂಧೀಜಿಯವರು ಪ್ರಪಂಚಕ್ಕೆ ಪರಿಚಯಿಸಿದ ಮೂಲ ಶಿಕ್ಷಣದ ಸೆಲೆ ಅಡಕವಾಗಿರುವುದು ಈ ಮಾತಿನಲ್ಲಿಯೇ. ಇಡೀ ಸಮುದಾಯ – ಇಡೀ ಶೈಕ್ಷಣಿಕ ವ್ಯವಸ್ಥೆ ತನ್ನೆಲ್ಲ ಶ್ರಮವನ್ನು ವಿನಿಯೋಗಿಸಬೇಕಾಗಿರುವುದು – ಈ ಮನೋಭೂಮಿಕೆಯ ಬೆಳವಣಿಗೆ ಮಾತ್ರ. ಏಕೆಂದರೆ ಇಂತಹ ಮನಸ್ಥಿತಿಗೆ ತಲುಪಿದ ವ್ಯಕ್ತಿ ಯಾವ ವೃತ್ತಿಯನ್ನು (ಕ್ಷಮಿಸಿ – ಕಳ್ಳತನದಂತಹ ಕೆಲಸಗಳನ್ನು ಇಲ್ಲಿನ ವಿವರಣೆಯಲ್ಲಿ ವೃತ್ತಿ ಎಂದು ಭಾವಿಸಿಲ್ಲ) – ನಗಣ್ಯವಾಗಿ ನೋಡಲಾರ/ಳು. ಅಂತಹ ವಾತಾವರಣ ನಿರ್ಮಾಣವಾದಾಗ ಸಮಾಜದಲ್ಲಿ ಮೇಲು–ಕೀಳು; ದ್ವೇಷ–ಅಸೂಯೆಯಂತಹ ನಕಾರಾತ್ಮಕ ಭಾವಗಳು ಶೂನ್ಯವಾಗುತ್ತಾ ಹೋಗುತ್ತವೆ. ಇಂತಹ ಸ್ಥಿತಿ ಆರೋಗ್ಯ ಸಮಾಜದ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ಆರೋಗ್ಯವಂತ ಸಮಾಜದ ಬೆಳವಣಿಗೆ ಸರ್ಕಾರದ, ಪ್ರಜ್ಞಾವಂತರ ಆಶಯವಾಗಿದೆ. ಆದ್ದರಿಂದ ಕಾರ್ಯಗೌರವ ಮನೋಧರ್ಮ ಸಧೃಡ ಸಮಾಜದ ನಿರ್ಮಾಣಕ್ಕೆ ಸಹಕಾರಿಯಾಗಿದೆ.

ಮೇಲಿನದು ತತ್ವ ಅಥವಾ ಆಶಯ. ಆದರೆ ಅದನ್ನು ಆಗು ಮಾಡುವುದು ಹೇಗೆ? ಅಥವಾ ಮಗುವಿನಲ್ಲಿ ಬೆಳೆಯಿಸುವುದು ಹೇಗೆ ಎಂದು ಸಾಧ್ಯತೆಗಳನ್ನು ಮುಂದಿನ ಪ್ಯಾರಾಗಳಲ್ಲಿ ಚರ್ಚಿಸಿದೆ.

ಮೊದಲನೆಯದು ದೈಹಿಕವಾಗಿ ಶ್ರಮದಾಯಕವಾಗಿರುವ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸುವುದು. ಕೆಲಸಗಳಲ್ಲಿ ಬೇಧ–ಭಾವ ಸಲ್ಲ. ಬಡವ–ಬಲ್ಲಿದ; ಉಚ್ಚ–ನೀಚ ಎಂಬ ಬೇಧ–ಭಾವ ಕೂಡದು. ಉದಾಹರಣೆಗೆ ಶೌಚಾಲಯದ ಸ್ವಚ್ಛತೆಗೆ–ವಿದ್ಯಾರ್ಥಿಗಳ ವೇಳಾಪಟ್ಟಿಯನ್ನು ರಚಿಸಿದರೆ–ಇಲ್ಲಿ ತರಗತಿಯ/ಶಾಲೆಯ ಎಲ್ಲಾ ಮಕ್ಕಳು ಸರತಿಯ ಮೇಲೆ ಕೆಲಸ ಮಾಡಲು ಅವಕಾಶವಿರಬೇಕು. ವಿನಾಯಿತಿ ಯಾರಿಗೂ ಇಲ್ಲ. ಅನಿವಾರ್ಯ ಕಾರಣಗಳಿಂದ ಆಯಾ ದಿನದ ಕೆಲಸ ಮಾಡಲು ಸಾಧ್ಯವಾಗದೇ ಹೋದರೆ ಮುಂದಿನ ತಂಡದಲ್ಲಿ ಕೆಲಸ ಮಾಡಲು ವ್ಯವಸ್ಥೆ ಮತ್ತು ಉಸ್ತುವಾರಿ ನಡೆಯಬೇಕು. ದೈಹಿಕವಾಗಿ ಶ್ರಮಿಸಿ ಬದುಕುವ ವ್ಯಕ್ತಿಗಳಲ್ಲಿ ಮೇಲು–ಕೀಳು ಎಂಬ ಬೇಧಭಾವದ ತೀವ್ರತೆ/ಸಾಂದ್ರತೆ ಬಹು ಕಡಿಮೆ.

**ಈ ಕುರಿತು ಚರ್ಚಿಸಿ – ಮುನ್ನಡೆಯಿರಿ**

ಎರಡನೆಯದು ಮಾರ್ಗದರ್ಶನ. ಅದು ಅಧ್ಯಾಪಕರ ಮಾರ್ಗದರ್ಶನ. ಮಗು ಶಾಲೆಗೆ ಬರುವಾಗ ಬೇದಭಾವಗಳ ಮೂಟೆಯನ್ನೇ ತಂದಿರುತ್ತದೆ.(ಅಪವಾದಗಳು ಇರಬಹುದು). ಇವುಗಳನ್ನು ಖಂಡಿಸುವ ಬದಲು – ಅವಕಾಶ ದೊರೆತಾಗ – ಇಂತಹ ಬೇಧ ಭಾವಗಳು ಎಷ್ಟು ಅಸಮಂಜಸ – ಅವೈಜ್ಞಾನಿಕ ಎನ್ನುವುದನ್ನು ತಿಳಿಸಿ. ರಸ್ತೆ ಕಸ ತೆಗೆಯುವವರು ಇಲ್ಲದಿದ್ದರೆ; ಚಪ್ಪಲಿ ರಿಪೇರಿ ಮಾಡುವವರು ಇಲ್ಲವಾದರೆ; ಕ್ಷೌರಿಕರೇ ಇಲ್ಲದಿದ್ದರೆ – ಇಂತಹ ಸನ್ನಿವೇಶಗಳಲ್ಲಿ ಚರ್ಚೆಗೆ ಅವಕಾಶ ನೀಡಿ – ತೀರ್ಮಾನಕ್ಕೆ ಬನ್ನಿ. ಇವು ಒಮ್ಮೆಗೇ ನಾಶವಾಗುತ್ತವೆ ಎಂಬ ಭ್ರಮೆ ಬೇಡ.

ಪ್ರಯತ್ನ ನಡೆಯಬೇಕು. ಇವಿಷ್ಟು ಮಕ್ಕಳ ಬಗ್ಗೆಯಾದರೆ – ಪೋಷಕರು ಇಂತಹ ಕೆಲಸ ಮಾಡಿಸುವುದಕ್ಕೆ ಆಕ್ಷೇಪ ತೆಗೆಯಬಹುದು.

ಇದು ಸಹಜ. ಬಲಿತ ಮನಸ್ಸುಗಳ ಬದಲಾವಣೆ ಕಷ್ಟ. ಆದರೂ ಏಕೆ ವಿಷಯವನ್ನು ಪಠ್ಯವಸ್ತುವಿನಲ್ಲಿ ಸೇರಿಸಿದ್ದಾರೆ – ಇದರಿಂದ ಮಗುವಿಗೆ ಆಗುವ ಲಾಭಗಳು ಏನು – ಒಂದು ವೇಳೆ ವಿನಾಯಿತಿ ಪಡೆಯುವುದರಿಂದ ಎಂತಹ ಮನೋಭಾವನೆ ಮಗುವಿನಲ್ಲಿ ಬೆಳೆಯುತ್ತದೆ – ಇದರಿಂದ ಆಗುವ ಹಾನಿ ಏನು? ಇಂತಹ ವಿಷಯಗಳನ್ನು ಮನದಟ್ಟು ಮಾಡಿದರೆ ಪೋಷಕರ ನಿರಾಕರಣೆ ಇಲ್ಲವಾಗುತ್ತದೆ.

✓ ಕಾರ್ಯ ಪ್ರಪಂಚದ ಅರಿವು ಮೂಡಿಸುವುದು ;ಮನುಷ್ಯನ ಬದುಕು ದಿನದಿಂದ ದಿನಕ್ಕೆ ಸಂಕೀರ್ಣಗೊಳ್ಳುತ್ತಿದೆ. ಇದಕ್ಕೆ ಕಾರಣ ಬದುಕಿಗಾಗಿ ಕಂಡುಕೊಂಡ ವೃತ್ತಿಗಳ ಸಂಖ್ಯೆಯ ಹೆಚ್ಚಳ ಮತ್ತು ಅವುಗಳಲ್ಲಿ ಪರಿಣಿತಿ ಸಾಧಿಸಲು ಪಡೆಯುವ ಜ್ಞಾನ ಮತ್ತದರ ವಿಸ್ತಾರ. ಇವುಗಳೊಂದಿಗೆ ಪ್ರತಿ ವರ್ತಿಸುವ ಮನಸ್ಸು ಹಲವು ಸೂಕ್ಷ್ಮತೆ ಮತ್ತು ಸಂಕೀರ್ಣತೆಗಳನ್ನು ಮೈಗೂಡಿಸಿಕೊಳ್ಳುತ್ತದೆ. ಹಾಗಾಗಿ ಬದುಕು ಸಂಕೀರ್ಣ.

ವೃತ್ತಿಗಳ ಪರಿಚಯ ಎಳವೆಯಲ್ಲಿ ಆಗುವುದರಿಂದ ಮಗುವಿಗೆ ಯಾವ ವೃತ್ತಿಯನ್ನು ತಾನು ಆಯ್ಕೆ ಮಾಡಿಕೊಳ್ಳಬೇಕೆಂಬ ಸಾಧ್ಯತೆಗೆ ಅವಕಾಶ ನೀಡಿದಂತೆ ಆಗುತ್ತದೆ. ಅಲ್ಲದೆ ಎಲ್ಲ ಮಕ್ಕಳು ಬೆಳೆದು ವಯಸ್ಕರಾದ ನಂತರ ಬಿಳಿ ಕಾಲರಿನ ಕೆಲಸಕ್ಕೆ ಹೋಗಲು ಸಾಧ್ಯವಿಲ್ಲ ಮತ್ತು ಅದು ಸಾಧುವೂ ಅಲ್ಲ. ಆದ್ದರಿಂದ ಸ್ವತಂತ್ರವಾಗಿ ಬದುಕಲು ವೃತ್ತಿಯ ಬಗೆಗೆ ಅರಿವು ಅಗತ್ಯ. ಈ ಕೆಲಸವನ್ನು ಶಾಲಾ ಅವಧಿಯಲ್ಲಿ ಮಾಡುವುದು ಅಗತ್ಯ ಮತ್ತು ಅನಿವಾರ್ಯ.

| |
|---|
| **ಪಠ್ಯ ವಸ್ತುವಿನಲ್ಲಿ ಇರುವ ಕಾರ್ಯ ಶಿಕ್ಷಣ ಪಠ್ಯವನ್ನು ಒಮ್ಮೆ ಜ್ಞಾಪಿಸಿಕೊಳ್ಳಲು ಅವಕಾಶ ಕೊಡಿ** |

ಪಠ್ಯ ವಸ್ತುವಿನಲ್ಲಿ ಕಾರ್ಯ ಶಿಕ್ಷಣದ ಚಟುವಟಿಕೆಯನ್ನು 02 ಬಗೆಯಾಗಿ ವಿಂಗಡಿಸಲು ಸಾಧ್ಯ.

ಅ. ಸೇವೆಗಳು

ಆ. ವಿವಿಧ ವಸ್ತುಗಳ ತಯಾರಿಕೆ

**ಅ. ಸೇವೆಗಳು :**

ಮನುಷ್ಯ ಸ್ವತಂತ್ರವಾಗಿ ಜೀವಿಸುವಂತೆ ಆಗಲು ಹಲವರ ನೆರವನ್ನು ಪಡೆದಿರುತ್ತಾನೆ/ಳೆ. ತಂದೆ/ ತಾಯಿ/ ಪೋಷಕ/ ಗುರು; ಸಮಾಜ; ಪ್ರಕೃತಿ. ಇವುಗಳನ್ನು 'ಋಣಗಳು' ಎಂಬ ಉದಾತ್ತ ಭಾವನೆಯ ಹಂದರದಲ್ಲಿ ನಮ್ಮ ಹಿರಿಯರು ಗುರುತಿಸಿದ್ದಾರೆ.

ನಮ್ಮ ಸಮುದಾಯದಲ್ಲಿ ಹಲವು ಅವೈಜ್ಞಾನಿಕ ಆಚರಣೆಗಳಿವೆ –ಅಸ್ಪೃಶ್ಯತೆ; ಸ್ತ್ರೀ ಶೋಷಣೆ; ಶಿಕ್ಷಣದ ಕುರಿತು ಅನಾದರ; ಆರೋಗ್ಯ ಮತ್ತು ನೈರ್ಮಲ್ಯ ಕುರಿತು ನಿಷ್ಕಾಳಜಿ; ಸರಕಾರದ ಯೋಜನೆಗಳ ಕುರಿತು ಅಲ್ಪ / ತಪ್ಪು ತಿಳುವಳಿಕೆ ; ಏಡ್ಸ್ ಕುರಿತ ಅಪಕಲ್ಪನೆಗಳು ಇತ್ಯಾದಿ. ಇವೆಲ್ಲ ನೇರವಾಗಿ ಅಧ್ಯಾಪಕನಿಗೆ / ಮಗುವಿಗೆ – ಕಲಿಕೆ – ಬೋಧನೆಯ ಸಂದರ್ಭಕ್ಕೆ ಸಂಬಂಧಿಸಿಲ್ಲ. ಆದರೆ ಶಿಕ್ಷಣದ ವಿಶಾಲ ವ್ಯಾಪ್ತಿಯ

ಹಿನ್ನೆಲೆಯಲ್ಲಿ – ಸಮಷ್ಟಿಯ ಹಿತದ ಹಿನ್ನೆಲೆಯಲ್ಲಿ – ಮಗು ಇಂತಹ ವಿಷಯಗಳ ಕುರಿತು ಸ್ಪಂದನಶೀಲನಾ/ಳಾಗಲು ಮತ್ತು ಸರಿಪಡಿಸುವ ಜವಾಬ್ದಾರಿಯನ್ನು ಹೊರಲು – ಶಾಲೆ/ಶಿಕ್ಷಣ ವ್ಯವಸ್ಥೆ – ಯುಕ್ತವಾದ ಪರಿಸರ ನಿರ್ಮಾಣ ಮಾಡಬೇಕಾಗಿರುವುದು ಅಗತ್ಯವಾಗುತ್ತದೆ. ಈ ನಿಟ್ಟಿನಲ್ಲಿ – ಜಾಗೃತಿ ಶಿಬಿರಗಳು; ಸ್ವಚ್ಛತಾ ಆಂದೋಲನಗಳು; ಬೋಧಪ್ರದ (Thematic) ಬೀದಿ ನಾಟಕಗಳು; ಆಪ್ತ ಸಲಹೆಯ ಕಾರ್ಯಕ್ರಮಗಳ ಆಯೋಜನೆಗಳು ಸಂಘಟಿಸಬೇಕಾಗುತ್ತದೆ. ಇವು –ಸೇವಾ ವ್ಯಾಪ್ತಿಯಲ್ಲಿ ಬರುತ್ತವೆ.

ವಿದ್ಯಾರ್ಥಿ ಸಕ್ರಿಯವಾಗಿ ಭಾಗವಹಿಸುವುದು (ಇದು ಕಾರ್ಯ ಶಿಕ್ಷಣದ ಎಲ್ಲಾ ಚಟುವಟಿಕೆಗಳಿಗೂ ಪ್ರಸ್ತುತ) ಮುಖ್ಯವೇ ವಿನಃ ಕೆಲಸದ ಪ್ರಮಾಣ ಅಮುಖ್ಯ. ಆದರೆ ಕೆಲಸದ ಪ್ರಮಾಣ ಸಮನಾಗಿ ಹಂಚಿಕೆ ಮಾಡುವುದು ಮತ್ತು ಆ ರೀತಿ ಅನುಷ್ಠಾನಗೊಳಿಸುವಿಕೆಯ ಉಸ್ತುವಾರಿ ಅಗತ್ಯ.

**ಆ. ವಿವಿಧ ವಸ್ತುಗಳ ತಯಾರಿಕೆ;**

ಕಾರ್ಯಶಿಕ್ಷಣದಲ್ಲಿ ತಯಾರಿಸಲಾಗುವ ವಸ್ತುಗಳು ಸ್ಥೂಲವಾಗಿ ಮುಂದಿನ ಆಯಾಮಗಳಿಗೆ ಸೇರುತ್ತವೆ. ಆರೋಗ್ಯ–ನೈರ್ಮಲ್ಯ; ಆಹಾರ; ಉಡುಪು; ವಸತಿ; ಗೃಹೋಪಯೋಗಿ ವಸ್ತುಗಳು

ಈ ಕುರಿತು ಮುಂದಿನ ಪ್ಯಾರಾಗಳಲ್ಲಿ ಹೆಚ್ಚಿನ ಮಾಹಿತಿ ಪಡೆಯುವಿರಿ.

✓ ವೃತ್ತಿ ಕೌಶಲ್ಯ ಬೆಳೆಸುವುದು;

ಕೌಶಲ್ಯ ಎಂದರೆ ಒಂದು ಕೆಲಸವನ್ನು ನಿರಾಯಾಸವಾಗಿ, ಕಡಿಮೆ ಅವಧಿಯಲ್ಲಿ, ನೈಪುಣ್ಯತೆಯಿಂದ ಪೂರೈಸುವುದು ಎಂದರ್ಥ. ಹಿಂದಿನ ಪ್ಯಾರಾಗಳಲ್ಲಿ ವಿವರಿಸಿರುವಂತೆ ಕಾರ್ಯ ಶಿಕ್ಷಣದ ಸ್ಥೂಲ ಭೂಮಿಕೆಯಲ್ಲಿ ನೈಪುಣ್ಯತೆಗೆ ಗೌಣಸ್ಥಾನ. ಆದರೆ ಒಂದು ಕೆಲಸವನ್ನು ಕೌಶಲ್ಯಪೂರ್ಣವಾಗಿ ಮುಗಿಸಿದ್ದ ವೇಳೆ ಅಥವಾ ಇತರ ಕೆಲಸಗಳಿಗಿಂತ ಸಾಪೇಕ್ಷವಾಗಿ ಉತ್ತಮವಾಗಿದೆ ಎಂದು ಹೇಳುವಾಗ – ವಸ್ತುವಿನ ತಯಾರಿಕೆಗೆ ತೆಗೆದುಕೊಂಡ ಕಾಲ ಮತ್ತು ವಸ್ತುವಿನ ಮಾಟ (finishing) ಪರಿಗಣಿಸಬೇಕಾದ್ದು ಅನಿವಾರ್ಯವೆನಿಸುತ್ತದೆ. ಈ ನಿಟ್ಟಿನಲ್ಲಿ ಕೌಶಲ್ಯ ಬೆಳವಣಿಗೆಗೆ ಅವಕಾಶ ಮಾಡಿಕೊಡಬೇಕು. ಹೇಗೆ?

ಯಾವುದೇ ಕೆಲಸವನ್ನು ಪುನರಾವರ್ತನೆ ಮಾಡುವುದರಿಂದ ಕೌಶಲ್ಯ ಬೆಳವಣಿಗೆ ಆಗುತ್ತದೆ ಎಂಬ ಕಲ್ಪನೆಯಿದೆ. ಇದು ಪೂರ್ಣ ಸತ್ಯವಲ್ಲ. ಥಾರ್ನ್‌ಡೈಕ್ ಹುಟ್ಟು–ಕುರುಡರ ಮೇಲೆ ನಡೆಸಿದ ಕೆಲವು ಪ್ರಯೋಗಗಳಿಂದ 2 ಸೆಂಟಿ ಮೀಟರ್‌ನಷ್ಟು ಉದ್ದದ ಗೆರೆಯನ್ನು ಹಲವಾರು ಪ್ರಯತ್ನದ ಬಳಿಕವೂ ಎಳೆಯಲು ಸಾಧ್ಯವಾಗಲಿಲ್ಲ. ಇದಕ್ಕೆ ಕಾರಣ 02 ಸೆಂಟಿ ಮೀಟರ್ ಪರಿಕಲ್ಪನೆ ಮತ್ತು ಮಾದರಿ ನೀಡುವಲ್ಲಿನ ಕೊರತೆ. ಇದು ಇತರ ಕಲಿಕೆಯ ಸಂದರ್ಭದಲ್ಲಿಯೂ ಪ್ರಸ್ತುತ. ಆದ್ದರಿಂದ ಕೌಶಲ್ಯವನ್ನು ಬೆಳೆಸಲು ಹೋಗುವಾಗ; ಸೂಕ್ಷ್ಮಗಳನ್ನು ತಿಳಿಸಿಕೊಡಬೇಕು. ಅಪ್ರಧಾನ ಎಂಬ ನಿಲುವು ಅಥವ ಅದನ್ನು ತಿಳಿಯದಷ್ಟು ದಡ್ಡರಲ್ಲ ಎಂಬ ಅತಿ ವಿಶ್ವಾಸ ಕೂಡದು. ಸಣ್ಣ ಸಣ್ಣ ಸಂಗತಿಯನ್ನು ನಿಧಾನವಾಗಿ ಪ್ರದರ್ಶನ ಮಾಡುತ್ತಾ – ಎಲ್ಲರೂ ನೋಡಿದ್ದಾರೆ ಎಂದು ಖಾತ್ರಿಪಡಿಸಿಕೊಂಡು ಪ್ರದರ್ಶನ ನೀಡಬೇಕು. ಕೌಶಲ್ಯ ಬೆಳವಣಿಗೆಯಲ್ಲಿ ಮಾದರಿ ಒದಗಿಸುವಿಕೆ ಮತ್ತು ಅದರ ಪ್ರದರ್ಶನ ತುಂಬಾ ಮುಖ್ಯ. ಪ್ರದರ್ಶನದಲ್ಲಿ ಬರುವ ವಿವಿಧ ಹಂತಗಳ ಬಗ್ಗೆ ಅರಿಯಿರಿ ಮತ್ತು ಅದರಂತೆ ಪ್ರದರ್ಶನ ನೀಡುವಾಗ ಅನುಸರಿಸಿ. (ಉದ್ದೇಶ ಸ್ಪಷ್ಟಪಡಿಸಿ –

ವಸ್ತುಗಳ ಪರಿಚಯ ಮಾಡಿ– ಎಲ್ಲರಿಗೂ ಕಾಣಲಿ – ಪ್ರದರ್ಶನ ವೇಳೆ ರನ್ನಿಂಗ್ ಕಾಮೆಂಟರಿ ರೀತಿ ನೀವು ಮಾಡುತ್ತಿರುವ ಕೆಲಸ ಹೇಳಿ ಅಥವಾ ಪ್ರಶ್ನಿಸಿ ತಿಳಿಯಿರಿ. ಗುಂಪುಗಳಲ್ಲಿ ವಸ್ತುಗಳ ತಯಾರಿಕೆಗೆ ಅವಕಾಶ ಕೊಡಿ – ಸೂಕ್ತ ಉಸ್ತುವಾರಿ ಮತ್ತು ಹಿಮ್ಮಾಹಿತಿ ಕೊಡಿ.)

❖ **ಕಾರ್ಯ ಶಿಕ್ಷಣದ ಬಗೆಗಿನ ಕೆಲವು ಅಪಕಲ್ಪನೆಗಳು ಮತ್ತು ಪರಿಹಾರ ;**

ಕಾರ್ಯ ಶಿಕ್ಷಣ ಕುರಿತಂತೆ ಹಲವು ತಪ್ಪು ಕಲ್ಪನೆಗಳು ಅಧ್ಯಾಪಕ, ವಿದ್ಯಾರ್ಥಿ ಮತ್ತು ಪೋಷಕರಲ್ಲಿವೆ. ಈಗಾಗಲೇ ಕೆಲವು ಅಂಶಗಳನ್ನು ಹಿಂದಿನ ಪ್ಯಾರಾಗಳಲ್ಲಿ ಪ್ರಾಸ್ತಾವಿಕವಾಗಿ ಪ್ರಸ್ತಾಪಿಸಲಾಗಿದೆ. ಉದಾಹರಣೆಗೆ ತಮ್ಮ ಮಗುವಿನಿಂದ ಶಾಲೆಯ ಕೆಲಸಗಳನ್ನು ಮಾಡಿಸಬೇಡಿ ಎಂಬ ಪೋಷಕರ ಅಗ್ರಹ ಪೂರ್ವಕ ಬೇಡಿಕೆ. ಮಗು ನಿರ್ವಹಿಸುವ ಕೆಲಸವು ವೃತ್ತಿ ನಿರತರು ಮಾಡುವ ಕೆಲಸದ ಗುಣಮಟ್ಟಕ್ಕೆ ಸಮನಾಗಿರಬೇಕು ಇತ್ಯಾದಿ. ಇಂತಹ ಸಂಗತಿಗಳಿಗೆ ಸರಿಯಾದ ಪರಿಹಾರ ಕಂಡುಕೊಂಡು ಮುಂದುವರೆಯದೇ ಹೋದರೆ ಈ ಸಮಸ್ಯೆಗಳು ಉಲ್ಬಣಗೊಂಡು ಕಾರ್ಯಕ್ರಮದ ನಡೆಗೆ ಹಿನ್ನಡೆಯನ್ನು ತರುತ್ತವೆ.

ಪೋಷಕರು ಏಕೆ ತಮ್ಮ ಮಗುವಿನಿಂದ ಕೆಲಸ ಮಾಡಿಸಬೇಡಿ ಎಂದು ಕೇಳುತ್ತಿದ್ದಾರೆ ಎಂದು ತಿಳಿಯಿರಿ. ಅವು ಸಕಾರಣವುಳ್ಳ ಕೋರಿಕೆಗಳಾಗಿರಬಹುದು. ಉದಾಹರಣೆಗೆ – ಕಾಯಿಲೆಯಿಂದ ನರಳುತ್ತಿರುವ / ಅಲರ್ಜಿ ಸಮಸ್ಯೆಗಳು, ಶಾಲೆಯ ಸ್ವಚ್ಛತೆ ಇತ್ಯಾದಿ ಚಟುವಟಿಕೆಗಳು ಕಾಯಿಲೆಯನ್ನು ಹೆಚ್ಚು ಮಾಡಬಹುದು. ಇಂತಹ ವೇಳೆ ಕೆಲವು ಬದಲಾವಣೆ ಮಾಡಿಕೊಳ್ಳಲು ಸಾಧ್ಯವೆ ಯೋಚಿಸಿ. ಕಸ ಗುಡಿಸುವಾಗ ಮೂಗು/ಬಾಯಿಗೆ ಬಟ್ಟೆ ಕಟ್ಟಿ ಕೆಲಸ ಮಾಡುವುದು; ಕಾಯಿಲೆ ವಾಸಿಯಾದ ನಂತರ ಸರತಿಯಂತೆ ಕೆಲಸ ಮಾಡಲು ಅವಕಾಶ ನೀಡಿಕೆ ಇಂತಹ ಸಾಧ್ಯ ಕ್ರಮಗಳನ್ನು ಕೈಗೊಳ್ಳಬಹುದು. ಕೆಲವೊಮ್ಮೆ ಪೋಷಕರ ಅತಿ ಮಮತೆ / ಅಹಂ – ಮಗು ಕೆಲಸ ಮಾಡಿಸದಿರುವಂತೆ ಒತ್ತಾಯಿಸಬಹುದು. ಇಂತಹ ವೇಳೆ ಮಾರ್ಗದರ್ಶನವೊಂದೇ ಪರಿಹಾರ.

ಕಾರ್ಯಶಿಕ್ಷಣವನ್ನು ಇದಕ್ಕಾಗಿ ನಿಯುಕ್ತಗೊಂಡ ಅಧ್ಯಾಪಕರು ಮಾತ್ರ ಚಟುವಟಿಕೆ ಮಾಡಿಸಬೇಕು – ಇತರ ಶಿಕ್ಷಕರು ಆ ಕುರಿತು ಭಾಗವಹಿಸುವ ಅಗತ್ಯವಿಲ್ಲ ಎಂಬ ಆಲೋಚನೆ ಅಧ್ಯಾಪಕರಲ್ಲಿ ಇದೆ. ಆದರೆ ಇದು ಸರಿಯಾದ ಆಲೋಚನೆ ಅಲ್ಲ. ಸೇವೆಯಂತಹ ಚಟುವಟಿಕೆಗಳು; ಗುಂಪುಗಳಲ್ಲಿ ವಸ್ತುಗಳ ತಯಾರಿಕೆಯನ್ನು ಒಬ್ಬ ಅಧ್ಯಾಪಕ ನಿಭಾಯಿಸಲು ಹೇಗೆ ಸಾಧ್ಯ. ಇಂತಹ ವೇಳೆ ಸಹ ಶಿಕ್ಷಕರ ನೆರವು ನೀಡಿಕೆ ಅಗತ್ಯವಾಗುತ್ತದೆ. ಆದ್ದರಿಂದ ಪ್ರತಿ ಶಿಕ್ಷಕರೂ ಒಂದಲ್ಲಾ ಒಂದು ಅವಧಿಯಲ್ಲಿ ಕಾರ್ಯ ಶಿಕ್ಷಣದ ಶಿಕ್ಷಕರಾಗಿ ಕೆಲಸ ಮಾಡುತ್ತಾರೆ.

ಕಾರ್ಯ ಶಿಕ್ಷಣವನ್ನು ವೃತ್ತಿ ಶಿಕ್ಷಣಕ್ಕೆ ಹೊಯ್‌ಕಯ್ಯಾಗಿ ನೋಡುವ ಉತ್ಸಾಹವನ್ನು ಕೆಲವರು ವ್ಯಕ್ತಪಡಿಸುತ್ತಾರೆ. ಈ ಬಗ್ಗೆ ಜಾಗರೂಕತೆ ವಹಿಸಿ. ಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿರುವುದು ಕಾರ್ಯಶಿಕ್ಷಣವೇ ವಿನಃ ವೃತ್ತಿ ಶಿಕ್ಷಣ ಅಲ್ಲ. ಕಾರ್ಯ ಶಿಕ್ಷಣದ ಹಂದರ ತುಂಬಾ ವಿಶಾಲವಾದದ್ದು – ವಿವಿಧ ವೃತ್ತಿಗಳ

ಸ್ಥೂಲ ಜ್ಞಾನವನ್ನು ಪಡೆಯುತ್ತಾರೆಯೇ ವಿನಃ ಪರಿಣತಿಯನ್ನಲ್ಲ. ಪರಿಣತಿ ಬೆಳವಣಿಗೆ ವೃತ್ತಿ ಶಿಕ್ಷಣದ ಉದ್ದೇಶ. ಆದ್ದರಿಂದ ಪದಗಳ ಬಳಕೆಯಲ್ಲಿ ಎಚ್ಚರಿಕೆ ಅಗತ್ಯ. ಅಲ್ಲದೆ ಪ್ರಾಥಮಿಕ ಶಾಲಾ ಹಂತದ ಮಕ್ಕಳಿಗೆ ವೃತ್ತಿ ಶಿಕ್ಷಣದ ಬೋಧನೆಗೆ ಅವಕಾಶವನ್ನು ಕಲ್ಪಿಸಿಲ್ಲ. ಸೈಕಲ್ ಪಂಕ್ಚರ್ ಹಾಕುವ ಕೆಲಸದಲ್ಲಿ – ಈ ಕಾರ್ಯದ ಜ್ಞಾನವನ್ನು ಮಗು ಪ್ರಾತ್ಯಕ್ಷಿಕೆ ಮೂಲಕ ಪಡೆಯುತ್ತಾಳೆ. ಅನುಭವ ಪಡೆಯಲು ಗುಂಪಿನಲ್ಲಿ ಈ ಕೌಶಲ್ಯವನ್ನು ನಿರ್ವಹಿಸುತ್ತಾಳೆ. ಇಂತಹ ಪ್ರಾತ್ಯಕ್ಷಿಕೆ ಮತ್ತು ಅಭ್ಯಾಸದಿಂದ ಉತ್ಪನ್ನವಾದ ವಸ್ತುಗಳನ್ನು ಮಾರಾಟ ಮಾಡಬಹುದು. ಆದರೆ ಮಾರಾಟಕ್ಕೆಂದು ವಸ್ತುಗಳನ್ನು ತಯಾರಿಸಿ ಮಾರಬಾರದು – ಅದು ನಿಷಿದ್ಧ.

ಕರಕುಶಲ ವಸ್ತುಗಳ ತಯಾರಿಕೆ; ಮಾದರಿ ತಯಾರಿಕೆಯಂತಹ ಕೆಲಸಗಳು ಮಾತ್ರ ಕಾರ್ಯ ಶಿಕ್ಷಣದ ವ್ಯಾಪ್ತಿಗೆ ಬರುತ್ತವೆ ಎಂಬ ಕಲ್ಪನೆ ಕೆಲವು ಅಧ್ಯಾಪಕರು ಹೊಂದಿರುತ್ತಾರೆ. ಈ ಕೆಲಸಗಳೇ ಅಲ್ಲದೆ ಸೇವೆಯಂತಹ ಕ್ಷೇತ್ರದ ಕೆಲಸಗಳು ಕೂಡ ಕಾರ್ಯ ಶಿಕ್ಷಣದ ವ್ಯಾಪ್ತಿಗೆ ಬರುತ್ತವೆ.

| |
|---|
| **ಚರ್ಚಿಸಿ – ಇತರ ಅಪ ಕಲ್ಪನೆಗಳು ಇದ್ದಲ್ಲಿ ಅವುಗಳನ್ನು ಹೋಗಲಾಡಿಸಿ** |

❖ **ಕಾರ್ಯ ಶಿಕ್ಷಣದಲ್ಲಿ ಬಳಸುವ ಬೋಧನಾ ವಿಧಾನಗಳು ಮತ್ತು ಮೌಲ್ಯಮಾಪನ ತಂತ್ರಗಳು.**

ಕಾರ್ಯ ಶಿಕ್ಷಣದಲ್ಲಿ ಮುಖ್ಯವಾಗಿ 03 ಬೋಧನಾ ವಿಧಾನಗಳು (ಅಥವ ಬೋಧನಾ ತಂತ್ರಗಳು) ಬಳಕೆಯಾಗುತ್ತವೆ.

- ✓ ಪ್ರಾತ್ಯಕ್ಷಿಕೆ
- ✓ ಕೋಚಿಂಗ್
- ✓ ಉಪನ್ಯಾಸ

ಪ್ರಾತ್ಯಕ್ಷಿಕೆ ವಿಧಾನದಲ್ಲಿ ವಸ್ತುಗಳ ತಯಾರಿಕೆಯ ವಿಧಾನವನ್ನು ಮಕ್ಕಳಿಗೆ ತಿಳಿಸಲು ಬಳಸುತ್ತಾರೆ. ಪ್ರಾತ್ಯಕ್ಷಿಕೆ ಯಶಸ್ವಿಯಾಗಲು – ಅಗತ್ಯವಿರುವ ವಸ್ತುಗಳನ್ನು ಕೈ ಅಳತೆಗೆ ಸಿಗುವಂತೆ ಜೋಡಿಸಿ. ಪ್ರಾತ್ಯಕ್ಷಿಕೆ ಮೂಲ ವಸ್ತುಗಳ ಪರಿಚಯ ಮಾಡಿಕೊಡಿ – ಎಲ್ಲರೂ ನೋಡುವಂತೆ ವಸ್ತುಗಳ ಪ್ರದರ್ಶನ ಮಾಡಿ. ಪ್ರತಿಯೊಂದು ಹಂತದಲ್ಲೂ ವಿದ್ಯಾರ್ಥಿಗಳು ಅಧ್ಯಾಪಕರನ್ನು ಅನುಸರಿಸುತ್ತಿರುವರೆ ಖಚಿತ ಮಾಡಿಕೊಳ್ಳಿ. ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದು ಹಿಮ್ಮಾಹಿತಿ ನೀಡಿ.

ಕೋಚಿಂಗ್ ಬೋಧನಾ ತಂತ್ರವನ್ನು ಪ್ರಾತ್ಯಕ್ಷಿಕೆಯ ತರುವಾಯ ವಿದ್ಯಾರ್ಥಿಗಳು ವಸ್ತುಗಳನ್ನು ತಯಾರಿಸುವ ಸಂದರ್ಭದಲ್ಲಿ ಕೌಶಲ್ಯಗಳ ಕಲಿಕೆಯನ್ನು ವೈಯಕ್ತೀಕರಣಗೊಳಿಸಲು ಬಳಸಬಹುದು. ಕೋಚಿಂಗ್ ತಂತ್ರದಲ್ಲಿ – ಅಧ್ಯಾಪಕಿಗೆ ಪ್ರತಿ ವಿದ್ಯಾರ್ಥಿ ಕಲಿಯುತ್ತಿರುವ (ಕೌಶಲ್ಯ) ಕ್ರಮವನ್ನು ಗಮನಿಸಲು ಅವಕಾಶವಿದೆ. ಪ್ರಮಾದಗಳಾದಾಗ ತಿದ್ದಲು ಅವಕಾಶವಿದೆ. ಮಕ್ಕಳು ಕ್ರಿಯಾಶೀಲರಾಗಿ ಭಾಗವಹಿಸುವುದನ್ನು ಖಾತ್ರಿಪಡಿಸಿಕೊಳ್ಳಿ. ಓರೆಕೋರೆಗಳನ್ನು ವಿದ್ಯಾರ್ಥಿನಿ ಸರಿಪಡಿಸಲು ಸಾಧ್ಯವಿಲ್ಲವಾದರೆ ನೀವೇ ಸರಿಪಡಿಸಿ ತೋರಿಸಿ. ವಿದ್ಯಾರ್ಥಿನಿಯರು ವಸ್ತುಗಳನ್ನು ಚೆನ್ನಾಗಿ ತಯಾರಿಸಬಹುದು. ಇದು ಸಾಧ್ಯವಾಗುವುದು – ಪೂರ್ವ ಕಲಿಕೆ ಆಗಿದ್ದಾಗ ಅಥವ ವಿದ್ಯಾರ್ಥಿನಿಯಲ್ಲಿರುವ ಅಂತರ್ಗತ ಸಾಮರ್ಥ್ಯದ ಕಾರಣ. ಅದೇನೇ ಇರಲಿ –

ಅಂತಹ ಮಕ್ಕಳನ್ನು ಪ್ರೋತ್ಸಾಹಿಸಿ ಮತ್ತು ಅಂತಹವರನ್ನು ಇತರ ಮಕ್ಕಳಿಗೆ ಮಾರ್ಗದರ್ಶನ ನೀಡಲು ಬಳಸಿಕೊಳ್ಳಿ.

ಉಪನ್ಯಾಸ ಅಥವಾ ವಿವರಣೆಯನ್ನು ಸೇವಾ ಕ್ಷೇತ್ರಗಳ ಕೆಲಸವನ್ನು ನಿರ್ವಹಿಸುವಾಗ ಬಳಸಿಕೊಳ್ಳಬಹುದು. ಕಾರ್ಯ ನಿರ್ವಹಿಸಬೇಕಾದ ಕ್ಷೇತ್ರದ ಎಲ್ಲೆಗಳ ಪರಿಚಯ; ಉದಾಹರಣೆಗೆ – ಆಟದ ಮೈದಾನದ ಸ್ವಚ್ಛತೆ ಕಾರ್ಯಕ್ರಮವಾದರೆ – ಯಾವ ಭಾಗವನ್ನು ಸ್ವಚ್ಛ ಮಾಡಬೇಕು? ಯಾರ್‍ಯಾರು ಮಾಡಬೇಕು; ಯಾವ ಕೆಲಸವನ್ನು ಮಾಡಬೇಕು? ಯಾವ ಉಪಕರಣ ಬಳಸಬೇಕು? ಅವಧಿ ಎಷ್ಟು? ಇತ್ಯಾದಿ ಸಂಗತಿಗಳನ್ನು ತರಗತಿಯಲ್ಲಿ ವಿವರಿಸಿದ ತರುವಾಯ ಕೆಲಸ ಮಾಡಲು ತಿಳಿಸಬಹುದು. ಕೆಲಸ ಮಾಡುವಾಗ ಉಸ್ತುವಾರಿ ಮಾರ್ಗದರ್ಶನವನ್ನು ಅಧ್ಯಾಪಕ ನಿರ್ವಹಿಸಬೇಕು. ಅಗತ್ಯವಿದ್ದಲ್ಲಿ ಇತರ ಶಿಕ್ಷಕರ ನೆರವನ್ನು ಪಡೆಯಬಹುದು.

ಕಾರ್ಯ ಶಿಕ್ಷಣದ ಮೌಲ್ಯಮಾಪನಕ್ಕೆ ಮುಖ್ಯವಾದ ಸಾಧನ–ವೀಕ್ಷಣೆ. ವಿದ್ಯಾರ್ಥಿನಿಯ ಕಾರ್ಯ ಪಟುತ್ವ ಮತ್ತು ಕೆಲಸದ ಬಗೆಗಿನ ಮನೋಭಾವನೆಯನ್ನು ವೀಕ್ಷಣೆ ಮೂಲಕ ದಾಖಲಿಸಬೇಕು. ವೀಕ್ಷಣೆಯನ್ನು ಅಧ್ಯಾಪಕರ ತಂಡ ನಿರ್ವಹಿಸಿದರೆ ಆ ಮೌಲ್ಯಮಾಪನ ಹೆಚ್ಚು ನಂಬಿಕಾರ್ಹ.

ಕಾರ್ಯದ ಬಗೆಗಿನ ತಿಳುವಳಿಕೆ (ಜ್ಞಾನ) ಅಳೆಯುವುದು. ಕಾರ್ಯ ಶಿಕ್ಷಣದಲ್ಲಿ ಅನುಷಂಗಿಕ. ಆದರೂ ಕೆಲವೊಮ್ಮೆ ವಸ್ತುಗಳ ತಯಾರಿಕೆಯಲ್ಲಿ ಬಳಸುವ ವಸ್ತುಗಳು – ಇಂತಹ ಅಂಶಗಳನ್ನು ವಿದ್ಯಾರ್ಥಿನಿ ತಿಳಿದಿರುವಳೆ / ಇಲ್ಲವೇ ತಿಳಿಯಲು ಪ್ರಶ್ನಿಸಿ ತಿಳಿಯಬಹುದು. ಆದರೂ ಶೇಕಡಾ 20% ಕ್ಕಿಂತ ಅಧಿಕ ಗುರುತ್ವವನ್ನು ಕಾರ್ಯ ಶಿಕ್ಷಣದಲ್ಲಿನ ಮಗುವಿನ ಜ್ಞಾನವನ್ನು ತಿಳಿಯಲು ಪ್ರಯತ್ನಿಸಬಾರದು.

ಹೀಗೆ ಮನೋಭಾವನೆ, ಕಾರ್ಯಪಟುತ್ವ (ಕೌಶಲ್ಯ) ಮತ್ತು ಜ್ಞಾನವನ್ನು ಅಳೆದ ನಂತರ – ಗ್ರೇಡುಗಳಾಗಿ ಪರಿವರ್ತಿಸಿ ಪ್ರಗತಿಯನ್ನು ನಮೂದಿಸಬೇಕು. ಪ್ರಗತಿ ಪತ್ರದಲ್ಲಿ ಉಲ್ಲೇಖಗೊಂಡಿರುವಂತೆ ಕಿರು ಪರೀಕ್ಷೆ ಮತ್ತು ಪರೀಕ್ಷೆಯಲ್ಲಿ ಗ್ರೇಡುಗಳನ್ನು ನೀಡುವುದು.

❖ **ಕೆ.ಜಿ.ಬಿ.ವಿ ಶಾಲೆಗಳಲ್ಲಿ ಕಾರ್ಯ ಶಿಕ್ಷಣದ ಸಂಘಟನೆ:**

ಸಾಮಾನ್ಯ ಶಾಲೆಗಳ ಕಾರ್ಯ ಶಿಕ್ಷಣದ ಸಂಘಟನೆಗೂ – ಕೆ.ಜಿ.ಬಿ.ವಿ. ಶಾಲೆಗಳಲ್ಲಿನ ಸಂಘಟನೆಗೆ ಸ್ವಲ್ಪ ಮಟ್ಟಿನ ವ್ಯತ್ಯಾಸ ಇರುವುದು ಆಪೇಕ್ಷಣೀಯ. ಇದಕ್ಕೆ ಕಾರಣಗಳು ಮೂರು.

- ✓ ವಸತಿ ವ್ಯವಸ್ಥೆ ಇರುವುದರಿಂದ ಇಲ್ಲಿನ ಮಕ್ಕಳಿಗೆ ಕಾರ್ಯ ಶಿಕ್ಷಣದ ಚಟುವಟಿಕೆಗಳು ಸಾಂದ್ರವಾಗಿರುವುದು ಆಪೇಕ್ಷಣೀಯ
- ✓ ವೃತ್ತಿ ತರಬೇತಿಗೆ ಪ್ರತ್ಯೇಕವಾದ ಅನುದಾನವನ್ನು ಕೆ.ಜಿ.ಬಿ.ವಿ ಆಯ–ವ್ಯಯದಲ್ಲಿ ನೀಡಲಾಗಿದೆ.
- ✓ ಕೆ.ಜಿ.ಬಿ.ವಿ ಮಕ್ಕಳ ಕೌಟುಂಬಿಕ ಮತ್ತು ಆರ್ಥಿಕ ಹಿನ್ನೆಲೆ ಸಾಮಾನ್ಯವಾಗಿ ಕಷ್ಟಕರವಾಗಿರುವುದರಿಂದ ಕೆಲವು ಕೌಶಲ್ಯಗಳನ್ನು ಅಭ್ಯಾಸ ಮಾಡಿಸುವುದು ಅವರ ಭವಿಷ್ಯದ ದೃಷ್ಟಿಯಿಂದ ಹಿತಕರ. ಈ ಅಂಶಗಳನ್ನು ಆಧರಿಸಿ ಕೆ.ಜಿ.ಬಿ.ವಿ ಶಾಲೆಯಲ್ಲಿ ಜರುಗುವ ಕಾರ್ಯಶಿಕ್ಷಣದ ಹರವು ನಿರ್ಧರಿಸಲ್ಪಡುವುದು ಯುಕ್ತ. ಈ ಶಾಲೆಗಳಲ್ಲಿ ಕಾರ್ಯ ಶಿಕ್ಷಣಕ್ಕೆ ದೊರೆಯುವ ಅವಧಿಗಳನ್ನು 02 ಬಗೆಯಾಗಿ

ಪರಿಗಣಿಸಬಹುದು. ಮೊದಲನೆಯದು **ಪಠ್ಯವಸ್ತುವಿನಂತೆ ದೊರೆಯುವ ಅವಧಿಗಳು (ನೋಡಿ – ಸೌರಭ) ಮತ್ತು ಶನಿವಾರ ಮಧ್ಯಾಹ್ನದ ಅವಧಿಯಲ್ಲಿ ತರಗತಿಗಳನ್ನು ಮುಂದುವರಿಸಿ 03 ಅವಧಿಗಳನ್ನು ಕಾರ್ಯ ಶಿಕ್ಷಣಕ್ಕೆ ವಿನಿಯೋಗಿಸುವುದು.**

✓ ನಿರಂತರವಾಗಿ ಎಲ್ಲಾ ಮಕ್ಕಳನ್ನೂ ಶನಿವಾರ ದೊರೆಯುವ ಅವಧಿಯಲ್ಲಿ ಅಳವಡಿಸಲು ಸಾಧ್ಯವಾಗದೇ ಹೋದರೆ ಸ್ಥಳೀಯ ಸನ್ನಿವೇಶಕ್ಕೆ ಅನುಗುಣವಾಗಿ ತಂಡವಾರು ಅಧ್ಯಾಪನ ಕೈಗೊಳ್ಳಬಹುದು. ಈ ಸಂಬಂಧ ವೇಳಾ ಪಟ್ಟಿಯನ್ನು ರಚಿಸಿ – ಅನುಸರಿಸುವುದು.

✓ **ಬೋಧಿಸಬೇಕಾದ ವಿಷಯಗಳು;**

ಅಧ್ಯಾಪನಕ್ಕೆ ದೊರಕುವ ಅವಧಿಗಳ ಹೆಚ್ಚಳ ಮತ್ತು ಕೆಲವು ವೃತ್ತಿಗಳಲ್ಲಿ ಆಳವಾದ ಪರಿಜ್ಞಾನ ಹೊಂದಲು ಅನುಕೂಲವಾಗುವಂತೆ ವಿಷಯಗಳ ಆಯ್ಕೆ ನಡೆಯಬೇಕು. ಒಂದು ಸಂಸ್ಥೆ ಕನಿಷ್ಠ 03 ವಿಷಯಗಳಲ್ಲಿ ವಿಶೇಷ ಪರಿಣತಿಯನ್ನು ಮಕ್ಕಳು ಪ್ರತಿ ವರ್ಷ ಸಾಧಿಸಲು ಯೋಜಿಸುವುದು. ಕೆಲವು ಸಂಭಾವ್ಯ ಕೌಶಲ್ಯಗಳನ್ನು ಪಟ್ಟಿ ಮಾಡಿದೆ.

- ಉಡುಪು ಹೊಲಿಯುವ ಪರಿಜ್ಞಾನ ಮತ್ತು ಪ್ರಾಸ್ತಾವಿಕ ಕೌಶಲ್ಯ
- ಪ್ಲಾಸ್ಟಿಕ್ ಚೀಲದಲ್ಲಿ ಬೀಜಗಳ ಮೂಲಕ; ಕಾಂಡದ ಮೂಲಕ ಸಸಿಗಳನ್ನು ಬೆಳೆಸುವ ಕೌಶಲ
- ಉಣ್ಣೆಯದಾರ ಬಳಸಿ ಹೆಣಿಗೆ ಕೌಶಲ
- ಬಟ್ಟೆಗಳ ಮೇಲೆ ಕಸೂತಿ ಕೌಶಲ
- ಮಣಿ ಮತ್ತು ಇತರ ಅಲಂಕಾರಿಕ ವಸ್ತುಗಳನ್ನು ಬಳಸಿ – ಸರ; ಬೊಂಬೆ, ಇತ್ಯಾದಿ ವಸ್ತುಗಳನ್ನು ಮಾಡುವ ಕೌಶಲ.
- ಫೋಟೋಗ್ರಫಿ ಕೌಶಲ
- ಪ್ಲಾಸ್ಟಿಕ್ ದಾರ ಬಳಸಿ ಕುರ್ಚಿಗಳ ಪ್ಲೇಟ್ ಹೆಣಿಗೆ ಕೌಶಲ
- ಲಿಕ್ವಿಡ್ ಸೋಪ್; ಸಾಬೂನು/ಮಾರ್ಜಕ (ಡಿಟರ್ಜೆಂಟ್); ಫಿನಾಯಿಲ್ ತಯಾರಿಕೆಯ ಕೌಶಲ
- ಮಣ್ಣಿನ ಪರೀಕ್ಷೆ ಮಾಡುವ ಕೌಶಲ
- ಆಹಾರ ತಯಾರಿಕೆ – ಟೊಮೆಟೋ ಸಾಸ್; ಬೆಣ್ಣೆಬಿಸ್ಕತ್; ಸೀಬೆ ಹಣ್ಣಿನ ಜಾಮ್; ಶೇಂಗಾ ಮಿಠಾಯಿ; ನುಗ್ಗೆ ಸೊಪ್ಪಿನ ಪರೋಟ; ತುಳಸಿ ತಂಬುಳಿ; ದಾಳಿಂಬೆ ಸಿಪ್ಪೆಯ ತಂಬುಳಿ; ಜೂಸ್ ಪೌಡರ್; ಆರೆಂಜ್ ಶರಬತ್; ಟ್ಯೂಟಿ–ಫ್ರೂಟಿ; ಈರುಳ್ಳಿ ಉಪ್ಪಿನಕಾಯಿ;
- ಎರೆಹುಳು ಗೊಬ್ಬರ ತಯಾರಿಕೆ ಕೌಶಲ
- ಸ್ವಿಚ್‌ಗಳ ಅಳವಡಿಕೆ; ಫ್ಯೂಸ್ ಹಾಕುವುದು; ಕಾಲಿಂಗ್ ಬೆಲ್ ತಯಾರಿಕೆ ಕೌಶಲ
- ಟ್ರಾನ್ಸಿಸ್ಟರ್/ರೇಡಿಯೋ; ವಿದ್ಯುತ್ ಇಸ್ತ್ರಿ ಪೆಟ್ಟಿಗೆ; ಮೊಬೈಲ್; ಬೈಸಿಕಲ್/ ದೂರದರ್ಶನ; ಭಾಗಗಳ ಪರಿಚಯ ಮತ್ತು ಬಿಚ್ಚಿಡುವ ಮತ್ತು ಪುನರ್ ಜೋಡಿಸುವ ಕೌಶಲ
- ಶಾಲೆಯ ಆವರಣದ ಗಿಡಗಳು ಮತ್ತು ಕೈತೋಟ, ಹುಲ್ಲು ಹಾಸಿನ ನಿರ್ವಹಣೆ

- ಅಕ್ವೇರಿಯಂ ನಿರ್ವಹಣೆ; ಪಾರಿವಾಳಗಳ ನಿರ್ವಹಣೆ; ಜೇನು ಪೆಟ್ಟಿಗೆ ನಿರ್ವಹಣೆ; ಮೊಲಗಳ ನಿರ್ವಹಣೆಯ ಕೌಶಲ
- ಮೇಣದ ಬತ್ತಿ; ಊದುಬತ್ತಿ; ಸೀಮೆಸುಣ್ಣ ತಯಾರಿಕೆ ಕೌಶಲ.
- ಸ್ಥಳೀಯವಾಗಿ ಪ್ರಸ್ತುತವಿರುವ ವೃತ್ತಿಗಳಿಗೆ ಸಂಬಂಧಿಸಿದಂತೆ – ತಾಲ್ಲೂಕು ಸಮಿತಿಯಲ್ಲಿ ನಿರ್ಣಯಿಸಿ ಕೌಶಲ್ಯ ವೆಳವಣಿಗೆಗೆ ಕ್ರಮ ವಹಿಸಬಹುದು.

ಮೇಲೆ ಪಟ್ಟಿ ಮಾಡಿರುವ ಕ್ಷೇತ್ರಗಳಲ್ಲಿ ಪಠ್ಯ ವಸ್ತುವಿನಲ್ಲಿ ಇಲ್ಲದ ಕೆಲವು ಅಂಶಗಳಿವೆ. ಪಠ್ಯ ವಸ್ತುವಿನಲ್ಲಿನ ಸಂಗತಿಗಳನ್ನು ಬೋಧಿಸುವ ಜೊತೆಗೆ ಇಲ್ಲಿ ನೀಡಿರುವ ಪಟ್ಟಿಯಲ್ಲಿನ ಕೌಶಲಗಳ ಬೆಳವಣಿಗೆಗೆ ಕ್ರಮ ಮಾಡುವುದು.

ವೃತ್ತಿ ಕೌಶಲ್ಯ ಬೆಳವಣಿಗೆಗೆ ನೀಡಿರುವ ಹಣದಲ್ಲಿ ಅಗತ್ಯವಿರುವ ವಸ್ತುಗಳ್ನು ಖರೀದಿ ಮಾಡಲು ಅವಕಾಶವಿದೆ. ಇಲ್ಲಿ ಪಟ್ಟಿ ಮಾಡಿರುವ ಕೌಶಲ ಬೆಳೆಸಲು ಕೆಲವು ಸಲಹಾತ್ಮಕ ಸೂಚನೆಗಳನ್ನು ನೀಡಿದೆ.

- ಉಡುಪು ತಯಾರಿಕೆ ; ವಿವಿಧ ಉಡುಪುಗಳನ್ನು ಹೊಲಿಯಲು ; ಕತ್ತರಿಸುವ ಪರಿಜ್ಞಾನ ಮತ್ತು ಹೊಲಿಯುವ ಅಂಶಗಳು ಇಲ್ಲಿ ಸೇರಿವೆ. ಹೊಲಿಗೆಯ ಕೌಶಲ್ಯದ ಬಗ್ಗೆ ಮಕ್ಕಳ ಒಲವು ಹೆಚ್ಚು. ಹಾಗಾಗಿ 04–05 ಹೊಲಿಗೆ ಯಂತ್ರಗಳನ್ನು ಖರೀದಿಸುವುದು. ಅನಾವರ್ತಕ ವೆಚ್ಚದಲ್ಲಿಯೇ ಇದರ ವೆಚ್ಚ ಭರಿಸಬಹುದು. ಹಣ ಇಲ್ಲವಾದರೆ ಈ ಶೀರ್ಷಿಕೆಯ ಆವರ್ತಕ ವೆಚ್ಚದಲ್ಲಿ ಭರಿಸಬಹುದು. ಹಣ ಕಡಿಮೆ ಇದ್ದ ಸಂದರ್ಭದಲ್ಲಿ ವರ್ಷಕ್ಕೆ ಒಂದೊಂದು ಯಂತ್ರಗಳನ್ನು ಕೊಳ್ಳುವುದು ಯುಕ್ತ.

✓ **ಕೆಲವು ಕೌಶಲ್ಯಗಳ ಸಂಘಟನೆಗೆ ಸಲಹೆಗಳು :**

- **<u>ಬೀಜ ಮೊಳೆಯಿಸಿ ಸಸಿ ಬೆಳೆಸುವುದು.</u>** (ಅಥವಾ ಗೂಟಿ ಕ್ರಮ);
  ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ಅಧಿಕಾರಿಗಳಿಂದ ಪ್ರಾತ್ಯಕ್ಷಿಕೆ ಪಡೆದು ಮಕ್ಕಳ ಅನುಭವಕ್ಕಾಗಿ ನೂರಿನ್ನೂರು ಪ್ಲಾಸ್ಟಿಕ್ ಚೀಲದಲ್ಲಿ ಸಸಿ ಬೆಳೆಯಿಸಲು ಕ್ರಮ ಮಾಡಿ. ಬೆಳೆದ ಸಸ್ಯಗಳನ್ನು ಶಾಲೆಯ ಆವರಣ ಇಲ್ಲವೇ ರಸ್ತೆ ಬದಿಯಲ್ಲಿ ನೆಟ್ಟು ಪೋಷಿಸಲಿ.
- **<u>ಉಣ್ಣೆಯ ದಾರ ಬಳಸಿ ಹೆಣಿಗೆ :</u>** ಬಟ್ಟೆಗಳ ಮೇಲೆ ಕಸೂತಿ ಕೆಲಸ; ಸರ–ಬೊಂಬೆ ಇತರ ವಸ್ತುಗಳ ತಯಾರಿಕೆಗೆ ಕುಶಲತೆಯುಳ್ಳ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಸಂಘ/ಎನ್‌ಜಿಒ ಮೂಲಕ ಪಡೆಯಿರಿ. ಪ್ರತಿ ವಿದ್ಯಾರ್ಥಿನಿಯು 03/04 ವಿಧಗಳಲ್ಲಿ ಹೆಣಿಗೆ ಮಾಡುವ ಕೌಶಲ್ಯ ಬೆಳೆಯಿಸಿಕೊಳ್ಳಲು ಅವಕಾಶ ಮಾಡಿಕೊಡಿ.
- **<u>ಫೋಟೋಗ್ರಫಿ ;</u>**
  ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಪಡೆಯಿರಿ. ಫೋಟೋಗ್ರಫಿಯ ಸೂಕ್ಷ್ಮಗಳನ್ನು ವಿವರಣೆಯ ಮೂಲಕ ಕೊಡಿಸಿ. ಪ್ರತಿ ವಿದ್ಯಾರ್ಥಿನಿಯು ಕೆಲವು ದೃಶ್ಯಗಳನ್ನು ಸೆರೆ ಹಿಡಿಯಲಿ. ಫೋಟೋ ಅಭಿವೃದ್ಧಿ ಪ್ರಕ್ರಿಯೆಯ ಪ್ರಥಮ ಅನುಭವ ಕೊಡಿಸಿ.

- **<u>ಪ್ಲಾಸ್ಟಿಕ್ ವೈರ್ ಬಳಸಿ ಕುರ್ಚಿ ಹೆಣೆಗೆ ಮಾಡುವುದು;</u>**
  ಸ್ಥಳೀಯ ಕುಶಲಕರ್ಮಿಗಳಿಂದ ಪ್ರಾತ್ಯಕ್ಷಿಕೆ ಮತ್ತು ಅಭ್ಯಾಸ ಮಾಡಿಸಿ. ಇಂತಹ ಕೌಶಲ್ಯ ಬೆಳೆಸಲು 3 ತಿಂಗಳು ಅವಧಿ ಅಗತ್ಯವಿಲ್ಲ – ಒಂದು ವಾರದೊಳಗೆ ಈ ಕೌಶಲ್ಯ ಕಲಿಸಬಹುದು. ಆದ್ದರಿಂದ ಕಡಿಮೆ ಅವಧಿಗೆ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಬಳಸಿ ಹೆಚ್ಚು ಹೆಚ್ಚು ಕೌಶಲ್ಯಗಳನ್ನು ಬೆಳೆಯಿಸಲು ಸಾಧ್ಯವಿದೆ.
- **<u>ಲಿಕ್ವಿಡ್ ಸೋಪು;</u>** ಸಾಬೂನು;ಮಾರ್ಜಕ; ವಿವಿಧ ಬಗೆಯ ಆಹಾರ ತಯಾರಿಕೆ; ಮೇಣದ ಬತ್ತಿ, ಊದು ಬತ್ತಿ; ಸೀಮೆಸುಣ್ಣ ತಯಾರಿಕೆ;
  ಈ ವಸ್ತುಗಳ ತಯಾರಿಕೆಯೂ ಕೂಡ ಕೆಲವೇ ದಿನಗಳಲ್ಲಿ ಪ್ರಾತ್ಯಕ್ಷಿಕೆ ಮತ್ತು ಕೋಚಿಂಗ್ ಮೂಲಕ ಬೋಧಿಸಬಹುದು.
- **<u>ಮಣ್ಣಿನ ಪರೀಕ್ಷೆ;</u>**
  ಸರಳ ಉಪಕರಣಗಳನ್ನು ಬಳಸಿ ಮಣ್ಣು ಮತ್ತು ನೀರಿನ ಗುಣಮಟ್ಟ ಮತ್ತು ರಸ ಸಾರವನ್ನು ಅಳೆಯಬಹುದು. ಸ್ಥಳೀಯ ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಿ. ಉಪಕರಣ ಪಡೆಯಲು ಮತ್ತು ಪ್ರಾತ್ಯಕ್ಷಿಕೆಗೆ ಮತ್ತು ಕೋಚಿಂಗ್ ನೀಡಲು ಅವರ ಸಹಾಯ ಪಡೆಯಿರಿ.
- **<u>ಎರೆಹುಳು ಗೊಬ್ಬರ ತಯಾರಿಕೆ ;</u>**
  ಕೃಷಿ ಅಧಿಕಾರಿಗಳು ಅಥವಾ ಸ್ಥಳೀಯ ಪ್ರಗತಿಪರ ರೈತರನ್ನು ಆಹ್ವಾನಿಸಿ ಅವರಿಂದ ಪ್ರಾತ್ಯಕ್ಷಿಕೆ ಮತ್ತು ಕೋಚಿಂಗ್ ಮಾಡಲು ವ್ಯವಸ್ಥೆಗೊಳಿಸಿ.
- **<u>ವಿದ್ಯುತ್ ಸಂಪರ್ಕ ಮತ್ತು ಉಪಕರಣಗಳು ;</u>**
  ಎಲೆಕ್ಟ್ರೀಶಿಯನ್ನರ ತಂತ್ರಜ್ಞತೆಯನ್ನು ಬಳಸಿಕೊಳ್ಳುವುದು.
- **<u>ಟ್ರಾನ್ಸಿಸ್ಟರ್ ಮತ್ತಿತರ ಎಲೆಕ್ಟ್ರಾನಿಕ್;</u>** ಉಪಕರಣಗಳ ಪರಿಚಯ ಕೆಟ್ಟುಹೋದ ಟ್ರಾನ್ಸಿಸ್ಟರ್, ಇಸ್ತ್ರಿಪೆಟ್ಟಿಗೆ, ಮೊಬೈಲ್, ಟಿ.ವಿ. ಉಪಕರಣಗಳನ್ನು ಕೊಳ್ಳಬಹುದು. ಸ್ಥಳೀಯ ತಂತ್ರಜ್ಞರ ಸಹಕಾರ ಪಡೆದು ಮಕ್ಕಳು ಭಾಗಗಳ ಪರಿಚಯ – ಬಿಚ್ಚಿಡುವ ಮತ್ತು ಜೋಡಿಸುವ ಕೌಶಲ್ಯ ಪಡೆಯುವಂತೆ ಮಾಡಿ.
- **<u>ಗಿಡಗಳ ಸಂರಕ್ಷಣೆ – ಹುಲ್ಲು ಹಾಸು – ಕೈತೋಟ ನಿರ್ವಹಣೆ;</u>**
  ವಿದ್ಯಾರ್ಥಿಗಳ ತಂಡಕ್ಕೆ ಕೆಲಸ ಹಂಚಿಕೆ ಮಾಡಿ – ನಿರ್ವಹಣೆ ಮಾಡಲು ತಿಳಿಸಬಹುದು.
- **<u>ಅಕ್ವೇರಿಯಂ – ಪಾರಿವಾಳ – ಮೊಲ – ಜೇನುಪೆಟ್ಟಿಗೆ ನಿರ್ವಹಣೆ ;</u>**
  ಉತ್ತಮ ಪರಿಶ್ರಮವುಳ್ಳ ಸಂಪನ್ಮೂಲ ವ್ಯಕ್ತಿಗಳಿಂದ ಪ್ರಾತ್ಯಕ್ಷಿಕೆ ಕೊಡಿಸಿ. ಮಾದರಿಗಾಗಿ ಒಂದೊಂದು ಉಪಕರಣ (ಅಕ್ವೇರಿಯಂ – ಪಾರಿವಾಳಗಳ ಗೂಡಿನ ಪೆಟ್ಟಿಗೆ; ಜೇನುಪೆಟ್ಟಿಗೆ; ಒಂದೆರಡು ಮೊಲದಮನೆ) ವ್ಯವಸ್ಥೆಗೊಳಿಸಬಹುದು.
- **<u>ಬೈಸಿಕಲ್ / ಮೊಫೆಡ್ ಸವಾರಿ ಕಲಿಕೆ :</u>**
  ಹದಿಮೂರು, ಹದಿನಾಲ್ಕು ವಯಸ್ಸಿನ ವಿದ್ಯಾರ್ಥಿನಿ ಮೊಫೆಡ್ ಸವಾರಿ ಮಾಡಲು ವ್ಯವಸ್ಥೆಗೊಳಿಸಿ. ಮೊಫೆಡ್ ಖರೀದಿಸಿ ಬಾಡಿಗೆ ಪಡೆಯಿರಿ. ಸವಾರಿ ಆಟದ ಮೈದಾನದಲ್ಲಿ ಮಾತ್ರ ನಡೆಯಬೇಕು. ಈ ವಯಸ್ಸಿನ ಮಕ್ಕಳು ಕಲಿಕೆಗಾಗಿ

ಪ್ರಯತ್ನಿಸಲಿ. ಹೊರಗಡೆ ರಸ್ತೆಯಲ್ಲಿ ಸವಾರಿ ಮಾಡಲು ಬಿಡಬೇಡಿ.

❖ **ವಸ್ತುಗಳ ತಯಾರಿಕೆಯ ಕ್ರಮಗಳು** : ಕೆಲವು ವಸ್ತುಗಳ ತಯಾರಿಕೆಗೆ ಬೇಕಾದ ವಸ್ತು, ಪ್ರಮಾಣ, ವಿಧಾನ
ಕುರಿತು ಮುಂದೆ ವಿವರಿಸಿದೆ.

**ಅ) ತಿಂಡಿಗಳು : ನುಗ್ಗೆ ಸೊಪ್ಪಿನ ಪರೋಟ**

**ಬೇಕಾಗಿರುವ ಸಾಮಾಗ್ರಿಗಳು** :

| |
|---|
| ಗೋಧಿಹಿಟ್ಟು- 1 ಕಪ್ಪು ನುಗ್ಗೆ ಸೊಪ್ಪಿನ ಚೂರುಗಳು-1/2 ಕಪ್, ಕಾಳು ಮೆಣಸಿನ ಪುಡಿ-1/2 ಚಮಚ ಕೊತ್ತಂಬರಿ ಪುಡಿ-1/2 ಚಮಚ(ಹುರಿದು ಪುಡಿ ಮಾಡಿದ್ದು), ಜೀರಿಗೆ ಪುಡಿ-1/2 ಚಮಚ, ಇಂಗು-ಚೂರು, ರುಚಿಗೆ ಉಪ್ಪು, ಅರಸಿನ ಪುಡಿ- ಒಂದು ಚಿಟಿಕೆ |

**ಮಾಡುವ ವಿಧಾನ** :

ಬಾಣಲೆಯಲ್ಲಿ ಎಣ್ಣೆ ಯಾ ಎರಡು ಚಮಚ ಬೆಣ್ಣೆ ಹಾಕಿ ನುಗ್ಗೆ ಸೊಪ್ಪನ್ನು ಬಾಡಿಸಿ, ಉಳಿದೆಲ್ಲಾ ಸಾಮಗ್ರಿಗಳನ್ನೂ ಸೇರಿಸಿ ಕಲಸಿ ಚಪಾತಿ ಮಾಡುವುದು. ಅಗತ್ಯವಿದ್ದರೆ ಕಾವಲಿಗೆಯಿಂದ ತಟ್ಟೆಗೆ ಹಾಕಿದ ಮೇಲೆ ಬೆಣ್ಣೆ ಸವರಬಹುದು. ಇದೇ ರೀತಿ ಮೆಂತೆ ಸೊಪ್ಪು ಪಾಲಕ್ ಸೊಪ್ಪುಗಳಿಂದಲೂ ಪರೋಟ ಮಾಡಬಹುದು. ಲಿಂಬೆಹುಳಿ ಉಪ್ಪಿನಕಾಯಿ ಹಾಗೂ ಮೊಸರಿನೊಂದಿಗೆ ತಿನ್ನಬಹುದು.

**ಆ) ತೆಂಗಿನ ಕಾಯಿ ಬರ್ಫಿ :**

**ಬೇಕಾಗುವ ಸಾಮಾಗ್ರಿಗಳು :**

| |
|---|
| ತೆಂಗಿನ ಕಾಯಿ ತುರಿ-4 ಕಪ್, ಬೆಲ್ಲದ ಪುಡಿ-2 ಕಪ್, ಅಥವಾ ಜೋನಿ ಬೆಲ್ಲ-2 ಕಪ್, ತುಪ್ಪ-2 ದೊಡ್ಡ ಚಮಚ, ಏಲಕ್ಕಿ ಪುಡಿ-1/2 ಚಮಚ. ನೀರು-1/2 ಕಪ್ |

**ಮಾಡುವ ವಿಧಾನ:**

ಬೆಲ್ಲದ ಪುಡಿಯನ್ನು 1/2 ಗ್ಲಾಸ್ ನೀರು ಹಾಕಿ ಕುದಿಸಿ ಸೋಸಿ, ಆ ಬೆಲ್ಲವನ್ನು ಒಂದು ದಪ್ಪ ತಳದ ಪಾತ್ರೆಯಲ್ಲಿ ಹಾಕಿ ಕುದಿಸಿ. ತೆಂಗಿನಕಾಯಿ ತುರಿ ಮತ್ತು ತುಪ್ಪವನ್ನು ಕುದಿಯುತ್ತಿರುವ ಬೆಲ್ಲಕ್ಕೆ ಸೇರಿಸಿ ಕೆದುಕುತ್ತಾ ಇರಬೇಕು. ಪಾತ್ರೆಗೆ ಮಿಶ್ರಣವು ಅಂಟದಿರುವಾಗ ಗೇರು ಬೀಜದ ಚೂರುಗಳನ್ನು ಮತ್ತು ಏಲಕ್ಕಿ ಪುಡಿಗಳನ್ನು ಸೇರಿಸಿ ಮಿಶ್ರಮಾಡಿ, ತುಪ್ಪ ಸವರಿದ ಪ್ಲೇಟಿಗೆ ಹಾಕಿ ಹರಡಬೇಕು. ಆರಿದ ಮೇಲೆ ತುಂಡು ಮಾಡಿ.

**ಇ) ತಂಬುಳಿಗಳು: ತುಳಸಿ ತಂಬುಳಿ**

**ಬೇಕಾಗುವ ಸಾಮಾಗ್ರಿಗಳು:**

| |
|---|
| ತೆಂಗಿನ ಕಾಯಿ ತುರಿ–1 ಕಪ್, ತುಳಸಿ ಚಿಗುರು–1ಕಪ್. ಜೀರಿಗೆ –1/2 ಚಮಚ, ಮೊಸರು ಯಾ ಮಜ್ಜಿಗೆ –1/2 ಕಪ್, ಉಪ್ಪು. |

**ಮಾಡುವ ವಿಧಾನ :**

ತುಳಸಿ ಚಿಗುರುಗಳನ್ನು ಬಾಣಲೆಯಲ್ಲಿ 1ಚಮಚ ತುಪ್ಪ ಅಥವಾ ಬೆಣ್ಣೆ ಹಾಕಿ ಬಾಡಿಸಬೇಕು. ತೆಂಗಿನ ತುರಿ, ಬಾಡಿದ ತುಳಸಿ, ಜೀರಿಗೆ, ಉಪ್ಪು ಮಜ್ಜಿಗೆಗಳನ್ನು ಮಿಕ್ಸಿಯಲ್ಲಿ ಹಾಕಿ ರುಬ್ಬಿ ಪಾತ್ರೆಗೆ ಹಾಕಿದ ಮೇಲೆ 1/4 ಗ್ಲಾಸ್ ನೀರು ಸೇರಿಸಿ ಮಿಶ್ರ ಮಾಡಬಹುದು.

**ತುಳಸಿಯ ಗುಣಗಳು:–** ತುಳಸಿಯ ಅಪರಿಮಿತ ಔಷಧೀಯ ಗುಣಗಳಿಂದ ಕೂಡಿದೆ. ಕಫ ನಿವಾರಕ, ನೆಗಡಿ, ಶೀತ, ಜ್ವರಗಳಿಗೆ ದಿವ್ಯೌಷಧಿ. ಪಿತ್ತ ಶಮನಕಾರಿ, ವಿಷಹರ ಬಾಯಿಹುಣ್ಣುಗಳನ್ನು ನಿವಾರಣೆ ಮಾಡಿ ಆರೋಗ್ಯ ರಕ್ಷಣೆ ಮಾಡುತ್ತದೆ.

**ಜೀರಿಗೆ:** ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಹೊಟ್ಟೆ ನೂವು (colic pain) ನಿವಾರಣೆ ಮಾಡುತ್ತದೆ. ರಕ್ತವನ್ನು ಶುದ್ಧೀಕರಿಸುತ್ತದೆ. ಕಫವನ್ನು ಶಮನಗೊಳಿಸುತ್ತದೆ.

**ಮೊಸರು ಮಜ್ಜಿಗೆ:** Acidityಯನ್ನು ಶಮನಗೊಳಿಸುತ್ತದೆ. ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಶರೀರವನ್ನು ತಂಪುಗೊಳಿಸುತ್ತದೆ.

**ಈ) ಎಳ್ಳು ಪಾನಕ ಅಥವ ಕಷಾಯ:**

**ಬೇಕಾಗುವ ಸಾಮಾಗ್ರಿಗಳು:**

| |
|---|
| ಕಪ್ಪು ಎಳ್ಳು–2ಚಮಚ, ಬೆಲ್ಲ–1ಚೂರು, ನೀರು–1ಕಪ್ |

**ಮಾಡುವ ವಿಧಾನ:**

a) ಎಳ್ಳನ್ನು ಹಿಂದಿನ ದಿನ ನೀರಿನಲ್ಲಿ ನೆನೆಹಾಕಿ ಮರುದಿನ ತೊಳೆದು ನೀರನ್ನು ಚೆಲ್ಲಿ ಬೇರೆ ನೀರಿನೊಂದಿಗೆ ಬೆಲ್ಲ ಹಾಕಿ ರುಬ್ಬಿ ಕುಡಿಯುವುದು. ಅಗತ್ಯವಿದ್ದರೆ ಹಾಲು ಸೇರಿಸಬಹುದು.

b) ಎಳ್ಳನ್ನು ಹುರಿದು ಹುಡಿಮಾಡಿ, ಒಂದು ಗ್ಲಾಸ್ ಕುದಿಯುವ ನೀರಿಗೆ ಒಂದು ಅಥವಾ ಎರಡು ಚಮಚ ಪುಡಿ ಹಾಕಿ. ಬೆಲ್ಲದೊಡನೆ ಕುದಿಸಿ. ಬೇಕಾದರೆ ಹಾಲು ಸೇರಿಸಬಹುದು.

**ಉ) ನೆಲ್ಲಿಕಾಯಿ ಜ್ಯೂಸ್**

**ಬೇಕಾಗಿರುವ ಸಾಮಾಗ್ರಿಗಳು:**

| |
|---|
| ನೀರು –1/2 ಲೀ. ನೆಲ್ಲಿಕಾಯಿ–5 ಜೇನು ಯಾ ಜೋನಿ ಬೆಲ್ಲ–3–4 ಟೀ ಚಮಚ |

**ಮಾಡುವ ವಿಧಾನ:**

ನೆಲ್ಲಿಕಾಯಿಯನ್ನು ತುರಿದು ಮಿಕ್ಸಿಯಲ್ಲಿ ಸ್ವಲ್ಪ ನೀರಿನೊಂದಿಗೆ (1/4 ಗ್ಲಾಸ್) ರುಬ್ಬಿ, ಜಾಡಿಸಬೇಕು. ಜೇನು ಅಥವ ಜೋನಿಬೆಲ್ಲವನ್ನು ಸೇರಿಸಿ ಕರಗಿಸಬೇಕು.

**ಪಾನಕ:** ಮೇಲಿನ ಮಿಶ್ರಣಕ್ಕೆ ಶುಂಠಿ, ಒಳ್ಳೆಮೆಣಸಿನ ಪುಡಿ, ಏಲಕ್ಕಿ(ಅಗತ್ಯವಿದ್ದರೆ ನಿಂಬೆ) ಸೇರಿಸಬೇಕು.

ನೆಲ್ಲಿಕಾಯಿಯಲ್ಲಿ ವಿಪುಲವಾಗಿ'ಸಿ' ಜೀವಸತ್ವವಿದೆ. ಶೀತ ನೆಗಡಿ ಜ್ವರ, ಕಫ, ಕೆಮ್ಮುಗಳನ್ನು ತಡೆಯಲು ಇದರ ಸೇವನೆಯು ಬಹಳ ಹಿತ ಮಾತ್ರವಲ್ಲ. ಆಹಾರದಲ್ಲಿರುವ ಕಬ್ಬಿಣದ ಅಂಶವನ್ನು ಶರೀರವು ಹೀರಲು 'ಸಿ' ಜೀವಸತ್ವ ವಿರುವ ಆಹಾರವು ಅತಿ ಅಗತ್ಯ.

**ಊ) ತುಳಸಿ ಕಷಾಯ ಯಾ ಪುದಿನ ಕಷಾಯ:**

**ಬೇಕಾಗಿರುವ ಸಾಮಾಗ್ರಿಗಳು:**

ತುಳಸಿ–10 ಕುಡಿ. ನೀರು–2 ಗ್ಲಾಸ್, ಜೇನು ಯಾ ಬೆಲ್ಲ–4 ಚಮಚ, ನಿಂಬೆರಸ–1 ಚಮಚ.

**ಮಾಡುವ ವಿಧಾನ:**

ತುಳಸಿಯನ್ನು ನೀರಿನಲ್ಲಿ ಕುದಿಸಿ ಜೇನು ಮತ್ತು ನಿಂಬೆರಸ ಸೇರಿಸುವುದು. ಇದೇ ರೀತಿ ಪುದಿನ ಸೋಪ್ಪಿನಿಂದಲೂ ಕಷಾಯ ಮಾಡಬಹುದು.(ಕುದಿಯುತ್ತಿರುವ ನೀರಿಗೆ ಸೋಪ್ಪನ್ನು ಹಾಕಿ ಪಾತ್ರೆಯನ್ನು ಮುಚ್ಚಿ 1 ನಿಮಿಷ ಕುದಿಸಬಹುದು.)

**ಋ) ಜ್ಯೂಸ್ ಪೌಡರ್:**

**ಬೇಕಾಗುವ ಸಾಮಾಗ್ರಿಗಳು:**

ಸಕ್ಕರೆ–500 ಗ್ರಾಂ, ಸಿಟ್ರಿಕ್ ಆಮ್ಲದ ಪುಡಿ 1 ಟೀ ಚಮಚ ಆರೆಂಜ್ ಎಮಲ್ಸನ್ 1 ಟೀ ಚಮಚ.

**ಮಾಡುವ ವಿಧಾನ:**

ಎಲ್ಲಾ ವಸ್ತುಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಬಾಟಲಿಯಲ್ಲಿ ತುಂಬಿಡಿ.

ಒಂದು ಲೋಟ ನೀರಿಗೆ ಮೂರು ಚಮಚ ಪುಡಿಯನ್ನು ಸೇರಿಸುವುದು ಅಥವಾ ರುಚಿಗೆ ತಕ್ಕಷ್ಟು.

**ಎ. ಆರೆಂಜ್ ಶರಬತ್:**

**ಬೇಕಾಗುವ ಸಾಮಾಗ್ರಿಗಳು:**

ಸಕ್ಕರೆ–600 ಗ್ರಾಂ, ನೀರು–300 ಮಿ.ಲೀ., ಸಿಟ್ರಿಕ್ ಆಮ್ಲದ ಪುಡಿ 1 ಟೀ ಚಮಚ ಆರೆಂಜ್ ಎಮಲ್ಶನ್ 1/4 ಟೀ ಚಮಚ

**ಮಾಡುವ ವಿಧಾನ:**

ಎಲ್ಲಾ ವಸ್ತುಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಒಂದು ಕುದಿಸಿ ಪಾಕ ಕಾಯಿಸಿ ಶೋಧಿಸಿ ಆರೆಂಜ್ ಎಮಲ್ಸನ್ ಸೇರಿಸುವುದು.

**ಏ. ಟೂಟಿ ಫ್ರೂಟಿ:**

**ಬೇಕಾಗುವ ಸಾಮಾಗ್ರಿಗಳು:**

ಹಸಿ ಪರಂಗಿ ಕಾಯಿ ಹೋಳು 3 ಲೋಟ/ ಸಕ್ಕರೆ 1 ಲೋಟ, ಸಿಟ್ರಿಕ್ ಆಮ್ಲದ ಪುಡಿ 1/4 ಟೀ ಚಮಚ, ಫುಡ್ ಕಲರ್ 4 ಟೀ ಚಮಚ.

**ಮಾಡುವ ವಿಧಾನ:**

1. ಚೆನ್ನಾಗಿ ಬಲಿತ ಪರಂಗಿ ಕಾಯಿಯ ಸಿಪ್ಪೆ ತೆಗೆದು ಸಣ್ಣಗೆ ಹಚ್ಚಿ ಹೋಳುಗಳನ್ನು ಮಾಡಿಕೊಳ್ಳುವುದು.
2. ಹೋಳುಗಳನ್ನು ರಾತ್ರಿಯಿಡೀ ಸುಣ್ಣದ ತಿಳಿನೀರಿನಲ್ಲಿ ಮುಳಗಿಸಿಡಿ. ಒಂದು ಲೀ. ನೀರಿಗೆ ಅರ್ಧ ಟೀ ಚಮಚ ಸುಣ್ಣ ಬಳಸಿ.
3. ಸುಣ್ಣದ ತಿಳಿಯನ್ನು ಬಸಿದು ಮಾರನೆಯ ದಿನ ಶುದ್ಧವಾದ ನೀರಿನಲ್ಲಿ ತೊಳೆಯಿರಿ.
4. ಹೋಳುಗಳನ್ನು ಮುಳುಗುವಷ್ಟು ನೀರು ಹಾಕಿ 10 ನಿಮಿಷ ಬೇಯಿಸಿರಿ.
5. ನೀರನ್ನು ಬಸಿಯಿರಿ. ಬೆಂದ ಹೋಳಿಗೆ ಸಕ್ಕರೆ, ಸಿಟ್ರಿಕ್ ಆಮ್ಲ, ಬಣ್ಣ ಸೇರಿಸಿ ಒಲೆಯ ಮೇಲಿಟ್ಟು ಪಾಕ ಇಂಗುವ ಹಾಗೆ ಬೇಯಿಸಿರಿ.
6. ಪಾಕ ಇಂಗಿದ ಮೇಲೆ ಪಾತ್ರೆ ಕೆಳಗಿಳಿಸಿ. ಹೋಳುಗಳನ್ನು ಆರಿಸಿ ಬಾಟಲಿಯಲ್ಲಿ ಸಂಗ್ರಹಿಸಿಡಿ.

**ಐ. ಈರುಳ್ಳಿ ಉಪ್ಪಿನಕಾಯಿ:**

**ಬೇಕಾಗುವ ಸಾಮಾಗ್ರಿಗಳು:**

ಸಣ್ಣ ಈರುಳ್ಳಿ 500 ಗ್ರಾಂ, ಮೆಂತ್ಯ ಪುಡಿ 2 ಟೀ ಚಮಚ, ಮೆಣಸಿ ಪುಡಿ 2 ಟೀ ಚಮಚ, ಅರಶಿನ ಪುಡಿ 1 ಟೀ ಚಮಚ, ನಿಂಬೆ ರಸ 1 ಲೋಟ, ವಿನಿಗರ್ ಅರ್ಧಲೋಟ, ಉಪ್ಪು ರುಚ್ಚಿಗೆ ತಕ್ಕಷ್ಟು.

**ಮಾಡುವ ವಿಧಾನ:**

ಈರುಳ್ಳಿಯನ್ನು ಸಿಪ್ಪೆ ಸುಲಿದು ಕಡ್ಡಿಯಿಂದ ಚುಚ್ಚಿ ನಂತರ ಮೇಲಿನ ಎಲ್ಲಾ ವಸ್ತುಗಳನ್ನು ಮಿಶ್ರಣ ಮಾಡಿ ಚೆನ್ನಾಗಿ ಕಲಿಸಿ ಬಾಟಲಿಯಲ್ಲಿ ತುಂಬಿ ಬಾಯಿಗೆ ಬಟ್ಟೆ ಕಟ್ಟಿ ಮಾಗಿದ ನಂತರ ಬಳಸುವುದು.

**ಒ. ಲಿಕ್ವಿಡ್ ಸೋಪ್**

**ಬೇಕಾದ ವಸ್ತುಗಳು:**

1. ಆಸಿಡ್ ಸ್ಲರಿ (ಸಾಫ್ಟ್) 500 ಗ್ರಾಂ
2. ಕಾಸ್ಟಿಕ್ ಸೋಡಾ 110 ಗ್ರಾಂ
3. ಯೂರಿಯಾ 250 ಗ್ರಾಂ
4. ನೀರು 4 ಲೀಟರ್

**ತಯಾರಿಸುವ ವಿಧಾನ:**

1. ಒಂದು ಪ್ಲಾಸ್ಟಿಕ್ ಪಾತ್ರೆಯಲ್ಲಿ ಅರ್ಧ ಲೀಟರ್ ಲೋಟ ನೀರು ತೆಗೆದುಕೊಂಡು ಅದಕ್ಕೆ ಕಾಸ್ಟಿಕ್
   ಸೋಡಾ ಸೇರಿಸಿ ಕರಗಿಸಿ (1 ನೇ ಮಿಶ್ರಣ)
2. ಮತ್ತೊಂದು ಪ್ಲಾಸ್ಟಿಕ್ ಪಾತ್ರೆಗೆ ಆಸಿಡ್ ಸ್ಲರಿಯನ್ನು ಸುರಿದು ಅದಕ್ಕೆ ಉಳಿದ 3.5 ನೀರನ್ನು ಸ್ವಲ್ಪ ಸ್ವಲ್ಪವಾಗಿ ಸೇರಿಸಿ ಮರದ ಕೋಲಿನಿಂದ ಬೆರಸಿ (2ನೇ ಮಿಶ್ರಣ)
3. 1ನೇ ಮಿಶ್ರಣವನ್ನು ಸ್ವಲ್ಪ ಸ್ವಲ್ಪವಾಗಿ 2ನೇ ಮಿಶ್ರಣಕ್ಕೆ ಸೇರಿಸಿ ಮರದ ಕೋಲಿನಿಂದ ಬೆರೆಸಿ.
4. ಯೂರಿಯಾ ಸೇರಿಸಿ ಬೆರಸಿ, ಲಿಕ್ವಿಡ್ ಸೋಪನ್ನು ಪ್ಲಾಸ್ಟಿಕ್ ಡಬ್ಬಿಗೆ ತುಂಬಿ ಲೇಬಲ್ ಹಚ್ಚಿ.

ಎಚ್ಚರಿಕೆ: ಕಾಸ್ಟಿಕ್ ಸೋಡಾವನ್ನು ಬರಿಗೈಯಲ್ಲಿ ಮುಟ್ಟಬಾರದು ಮತ್ತು ಬಟ್ಟೆಗೆ ಸೋಕಿಸಬಾರದು.

5. ಕಾಸ್ಟಿಕ್ ಸೋಡಾವನ್ನು ನೀರಿಗೆ ಹಾಕಬೇಕು. ಅದಕ್ಕೆ ಬದಲಾಗಿ ಕಾಸ್ಟಿಕ್ ಸೋಡಾಕ್ಕೆ ನೀರು
   ಸೇರಿಸಬಾರದು.
6. ಲಿಕ್ವಿಡ್ ಸೋಪ್ ತಯಾರಿಕೆಯಲ್ಲಿ ಲೋಹದ ಪಾತ್ರೆಗಳನ್ನು ಬಳಸಬಾರದು.

**ಲಿಕ್ವಿಡ್ ಸೋಪಿನ ಉಪಯೋಗಗಳು:**

1. ಲಿಕ್ವಿಡ್ ಸೋಪನ್ನು ಬೇರೆ ಬೇರೆ ಹೆಸರಿನಲ್ಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. ಲಿಕ್ವಿಡ್ ಸೋಪನ್ನು ಬಟ್ಟೆ ಒಗೆಯಲು ಉಪಯೋಗಿಸಬಹುದು. 10 ಲೀಟರ್ ನೀರಿಗೆ 100 ಮಿ.ಲೀ ಲಿಕ್ವಿಡ್ ಸೋಪನ್ನು ಸೇರಿಸಿ ಕೈಯಾಡಿಸಿ ನೊರೆ ಬಂದ ಮೇಲೆ ಬಟ್ಟೆಯನ್ನು ಅರ್ಧ ಗಂಟೆ ಕಾಲ ನೆನಸಿ ಬಟ್ಟೆ ಒಗೆಯಬೇಕು.
2. ಲಿಕ್ವಿಡ್ ಸೋಪನ್ನು ಪಾತ್ರೆ ತೊಳೆಯಲು, ವಾಹನಗಳನ್ನು ತೊಳೆಯಲು, ಮನೆ ತೊಳೆಯಲು, ಬಚ್ಚಲು ಮನೆ ತೊಳೆಯಲು ಬಳಸಬಹುದು. 10 ಲೀಟರ್ ನೀರಿಗೆ 100 ಮಿ.ಲೀ ಅಥವಾ 1 ಲೀಟರ್ ನೀರಿಗೆ ಮಿ.ಲೀ. ಲಿಕ್ವಿಡ್ ಸೋಪ್ ಬಳಸಬಹುದು.
3. ಮೇಲೆ ತಿಳಿಸಿದ ಪ್ರಮಾಣದಲ್ಲಿ ಲಿಕ್ವಿಡ್ ಸೋಪನ್ನು ನೀರಿಗೆ ಸೇರಿಸಿ. ಸಾಕುಪ್ರಾಣಿಗಳನ್ನು ಅಂದರೆ ಹಸು, ಕುರಿ, ನಾಯಿ, ಬೆಕ್ಕು, ಮುಂತಾದ ಪ್ರಾಣಿಗಳನ್ನು ತೊಳೆಯಲು ಬಳಸಬಹುದು.

   ಎಚ್ಚರಿಕೆ:

   ಇದು ಶಾಂಪು ಅಲ್ಲ. ಇದನ್ನು ನಾವು ಕೈ ತೊಳೆಯಲು ಬಳಸಬಹುದು ಆದರೆ ಕೂದಲನ್ನು ತೊಳೆಯಲು ಬಳಸಬಾರದು.

**ಓ. ಡಿಟರ್ಜೆಂಟ್ ವಾರ್ಷಿಂಗ್ ಪೌಡರ್ (1ನೇ ವಿಧಾನ)**

**ಬೇಕಾದ ವಸುಗಳು:**

| | |
|---|---|
| 1. ಆಯೋಡೆಟ್ | 1 ಕೆ.ಜಿ |
| 2. ವಾಷಿಂಗ್ ಸೋಡಾ | 1 ಕೆ.ಜಿ |
| 3. ಟ್ರೈಸೋಡಿಯಂ ಫಾಸ್ಪೇಟ್(ಟಿ ಎಸ್ ಪಿ) | 250 ಗ್ರಾಂ |
| 4. ರಾಣಿಪಾಲ್ | 50 ಗ್ರಾಂ |
| 5. ಲಿಕ್ವಿಡ್ ಸೋಪ್ | 250 ಮಿ.ಲೀ. |
| 6. ಪಿಗ್ಮೆಂಟ್ ಬ್ಲೂ | 1/2 ಟೀ ಸ್ಪೂನ್ |
| 7. ಲೆಮನ್ ಗ್ರಾಸ್ ಆಯ್ಲ್ | 10 ಹನಿ |

**ತಯಾರಿಸುವ ವಿಧಾನ:**

1. ಆಯೋಡೆಟ್, ವಾಷಿಂಗ್ ಸೋಡಾ, ಟ್ರೈ ಸೋಡಿಯಂ ಫಾಸ್ಫೇಟ್ ಮತ್ತು ರಾಣಿಪಾಲ್‌ನ್ನು ಒಂದು ಪ್ಲಾಸ್ಟಿಕ್ ಪಾತ್ರೆಗೆ ಹಾಕಿ ಚೆನ್ನಾಗಿ ಬೆರೆಸಿ.
2. ಲಿಕ್ವಿಡ್ ಸೋಪ್ ಸೇರಿಸಿ ಬೆರೆಸಿ.
3. ಪಿಗ್ ಮಂಟ್ ಬ್ಲೂ ಮತ್ತು ಲೆಮನ್ ಗ್ರಾಸ್ ಆಯಿಲ್ ಸೇರಿಸಿ ಬೆರೆಸಿ.
4. ಈ ಮಿಶ್ರಣವನ್ನು ಒಂದು ಗಂಟೆಯ ಕಾಲ ನೆರಳಲ್ಲಿ ಒಣಗಿಸಿ ಜರಡಿ ಮಾಡಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ತುಂಬಿಸಿ ಇಡಿ.

**ಉಪಯೋಗಿಸುವ ವಿಧಾನ:**

10 ಲೀಟರ್ ನೀರಿಗೆ ಒಂದು ಹಿಡಿ (ಸುಮಾರು 50 ಗ್ರಾಂ) ಡಿಟರ್ಜೆಂಟ್ ಪೌಡರನ್ನು ಸೇರಿಸಿ ಕೈಯಾಡಿಸಿ ನೊರೆ ಬಂದ ಮೇಲೆ ಬಟ್ಟೆಯನ್ನು ಅರ್ಧಗಂಟೆ ನೆನೆಸಿ ಒಗೆಯಿರಿ.

ಸೂಚನೆ: ಬಟ್ಟೆಯ ಮೇಲೆ ಕೊಳೆ ಅಧಿಕವಾಗಿ ಕಂಡ ಭಾಗಗಳಲ್ಲಿ ಸ್ವಲ್ಪ ಡಿಟರ್ಜೆಂಮಟ್ ವಾರ್ಷಿಂಗ್ ಪೌಡರನ್ನು ಸಿಂಪಡಿಸಿ ಬ್ರಶ್ ಮಾಡಿ ಕೊಳೆ ತೆಗೆಯಬಹುದು.

**ಔ. ಡಿಟರ್ಜೆಂಟ್ ವಾಷಿಂಗ್ ಪೌಡರ್ (2ನೇ ವಿಧಾನ)**

**ಬೇಕಾದ ವಸ್ತುಗಳು:**

| | |
|---|---|
| 1. ಆಯೋಡೆಟ್ | 1 ಕೆ.ಜಿ. |
| 2. ವಾಷಿಂಗ್ ಸೋಡಾ | 2 ಕೆ.ಜಿ. |
| 3. ಟ್ರೈಸೋಡಿಯಂ ಫಾಸ್ಪೇಟ್ | 250 ಗ್ರಾಂ |
| 4. ರಾಣಿಪಾಲ್ | 50 ಗ್ರಾಂ |
| 5. ಲಿಕ್ವಿಡ್ ಸೋಪ್ | 500 ಮಿ.ಲೀ. |
| 6. ಪಿಗ್ಮೆಂಡ್ ಬ್ಲೂ | 1/2 ಟೀ ಸ್ಪೂನ್ |
| 7. ಲೆಮನ್ ಗ್ರಾಸ್ ಆಯ್ಲ್ | 10 ಹನಿ |

**ತಯಾರಿಸುವ ವಿಧಾನ**

1. ಆಯೋಡೆಟ್, ವಾರ್ಷಿಂಗ್ ಸೋಡಾ, ಟ್ರೈಸೋಡಿಯಮ ಫಾಸ್ಫೇಟ್ ಮತ್ತು ರಾಣಿಪಾಲನ್ನು ಒಂದು ಪ್ಲಾಸ್ಟಿಕ್ ಪಾತ್ರೆಗೆ ಹಾಕಿ ಚೆನ್ನಾಗಿ ಬೆರೆಸಿ.
2. ಲಿಕ್ವಿಡ್ ಸೋಪ್ ಸೇರಿಸಿ ಬೆರೆಸಿ.
3. ಪಿಗ್ಮೆಂಟ್ ಬ್ಲೂ ಮತ್ತು ಲೆಮನ್ ಗ್ರಾಸ್ ಆಯಿಲ್ ಸೇರಿಸಿ ಬೆರೆಸಿ.
4. ಈ ಮಿಶ್ರಣವನ್ನು ಒಂದು ಗಂಟೆಯ ಕಾಲ ನೆರಳಲ್ಲಿ ಒಣಗಿಸಿ ಜರಡಿ ಮಾಡಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ತುಂಬಿಡಿ.

**ಅಂ. ಡಿಟರ್ಜೆಂಟ್ ವಾಷಿಂಗ್ ಪೌಡರ್ (3ನೇ ವಿಧಾನ)**

**ಬೇಕಾದ ವಸ್ತುಗಳು:**

| | |
|---|---|
| 1. ಆಯೊಡೆಟ್ | 1 ಕೆ.ಜಿ. |
| 2. ಟ್ರೈಸೋಡಿಯಂ ಫಾಸ್ಪೇಟ್ | 125 ಗ್ರಾಂ |
| 3. ರಾಣಿಪಾಲ್ | 50 ಗ್ರಾಂ |
| 4. ಪಿಗ್ಮೆಂಟ್ ಬ್ಲೂ | 1/4 ಟೀ ಸ್ಪೂನ್ |
| 5. ಲೆಮನ್ ಗ್ರಾಸ್ ಆಯ್ಲ್ | 5 ಹನಿ |

**ತಯಾರಿಸುವ ವಿಧಾನ:**

1. ಆಯೋಡೆಟ್, ಟ್ರೈಸೋಡಿಯಂ ಪಾಸ್ಪೇಟ್ ಮತ್ತು ರಾಣಿಪಾಲನ್ನು ಒಂದು ಪ್ಲಾಸ್ಟಿಕ್ ಪಾತ್ರೆಗೆ ಹಾಕಿ ಚೆನ್ನಾಗಿ ಬೆರೆಸಿ.
2. ಪಿಗ್ಮೆಂಟ್ ಬ್ಲೂ ಮತ್ತು ಲೆಮನ್ ಗ್ರಾಸ್ ಆಯಿಲ್ ಬೆರೆಸಿ. ಜರಡಿ ಮಾಡಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ತುಂಬಿಸಿ ಇಡಿ.

**ಉಪಯೋಗಿಸುವ ವಿಧಾನ:**

10 ಲೀಟರ್ ನೀರಿಗೆ ಅರ್ಧ ಹಿಡಿ ( ಸುಮಾರು 20 ಗ್ರಾಂ) ಪೌಡರನ್ನು ಸೇರಿಸಿ ಕೈಯಾಡಿಸಿ ಬಟ್ಟೆಗಳನ್ನು ಅರ್ಧಗಂಟೆ ನೆನಸಿ ಒಗೆಯಿರಿ.

**ಸೂಚನೆ:** ಮೇಲಿನ ತಯಾರಿಕೆ ಮಾರುಕಟ್ಟೆಯಲ್ಲಿ ತುಂಬಾ ದುಬಾರಿ ಬೆಲೆಗೆ ಮಾರಾಟವಾಗುವ ಸಾಬೂನು ಪೌಡರಿನಷ್ಟೇ ಚೆನ್ನಾಗಿದೆ.

### ಅಃ. ಫಿನಾಯಿಲ್

**ಬೇಕಾದ ವಸ್ತುಗಳು:**

| | |
|---|---|
| 1. ಫೈನ್ ಆಯಿಲ್ | 250 ಮಿ.ಲೀ. |
| 2. ಲಿಕ್ವಿಡ್ ಸೋಪ್ | 250 ಮಿ.ಲೀ. |

**ತಯಾರಿಸುವ ವಿಧಾನ:**

1. ಲಿಕ್ವಿಡ್ ಸೋಪ್ ಮತ್ತು ಫೈನ್ ಆಯಿಲನ್ನು ಒಂದು ಪ್ಲಾಸ್ಟಿಕ್ ಪಾತ್ರೆಗೆ ಹಾಕಿ ಚೆನ್ನಾಗಿ ಕಲಸಿ.
2. ಫಿನಾಯಿಲನ್ನು ಬಾಟಲಿಗೆ ತುಂಬಿ.

**ಉಪಯೋಗಿಸುವ ವಿಧಾನ:**

1. ಫಿನಾಯಿಲ್ ಕ್ರಿಮಿನಾಶಕ ಮತ್ತು ಕೊಳೆ ನಿವಾರಕವಾಗಿ ಕೆಲಸ ಮಾಡುತ್ತದೆ.
2. ಒಂದು ಲೀಟರ್ ನೀರಿಗೆ ಎರಡು ಟೀ ಸ್ಪೂನ್ (10ಮಿ.ಲೀ.) ಫಿನಾಯಿಲ್ ಸೇರಿಸಿ ಬಳಸಬೇಕು.
3. ಮನೆ ತೊಳೆಯಲು ಮತ್ತು ಬಚ್ಚಲು ತೊಳೆಯಲು ಸೂಕ್ತವಾಗಿರುತ್ತದೆ.

**ಸೂಚನೆ:** ಫಿನಾಯಿಲ್ ಮಿಶ್ರಣವನ್ನು ಬಳಸುವಾಗ ಬಾಟಲನ್ನು ಚೆನ್ನಾಗಿ ಕುಲಕಬೇಕು.

### ಕ. ಟೂತ್ ಪೌಡರ್ (1ನೇ ವಿಧಾನ)

**ಬೇಕಾದ ವಸ್ತುಗಳು:**

| | |
|---|---|
| 1. ಕ್ಯಾಲ್ಸಿಯಂ ಕಾರ್ಬೋನೆಟ್ | 400 ಗ್ರಾಂ |
| 2. ಮೆಗ್ನೀಷಿಯಂ ಕಾರ್ಬೋನೆಟ್ | 400 ಗ್ರಾಂ |
| 3. ಮೆಂಥಾಲ್ | 1 ಗ್ರಾಂ |
| 4. ಪಚ್ಚ ಕರ್ಪೂರ | 1/2 ಗ್ರಾಂ |
| 5. ಲವಂಗ ತೈಲ | 1 ಮಿ.ಲೀ. |
| 6. ಮಿಥೈಲ್ ಸ್ಯಾಲಿಸಿಲೇಟ್ (SLS) | 2 ಟೀ ಸ್ಪೂನ್ |
| 7. ಸೋಡಿಯಂ ಲಾರೆಲ್ ಸಲ್ಫೇಟ್ | 2 ಟೀ ಸ್ಪೂನ್ |
| 8. ಸ್ಯಾಕರಿನ್ ಪುಡಿ | 1/2 ಟೀ ಸ್ಪೂನ್ |

**ತಯಾರಿಸುವ ವಿಧಾನ:**

1. ಕ್ಯಾಲ್ಸಿಯಂ ಕಾರ್ಬೋನೆಟ್ ಮತ್ತು ಮೆಗ್ನೀಷಿಯಂ ಕಾರ್ಬೋನೆಟ್ ಅನ್ನು ಒಂದು ಸ್ಟೀಲ್ ಪಾತ್ರೆಗೆ

ಹಾಕಿ ಚೆನ್ನಾಗಿ ಬೆರೆಸಿ.

2. ಮೆಂಥಾಲ್, ಪಚ್ಚ ಕರ್ಪೂರ, ಲವಂಗದ ತೈಲ ಮತ್ತು ಮಿಥೈಲ್ ಸ್ಯಾಲಿಸಿಲೇಟ್ ಮತ್ತೊಂದು
   ಸ್ಟೀಲ್ ಪಾತ್ರಗೆ ಹಾಕಿ ಚೆನ್ನಾಗಿ ಬೆರೆಸಿ. (ಮೆಂಥಾಲ್ ಮಿಶ್ರಣ)
3. ಮೆಂಥಾಲ್ ಮಿಶ್ರಣವನ್ನು ಸ್ವಲ್ಪ ಸ್ವಲ್ಪವಾಗಿ ಕ್ಯಾಲ್ಸಿಯಂ ಕಾರ್ಬೋನೇಟ್ ಮಿಶ್ರಣಕ್ಕೆ ಸೇರಿಸಿ ಬೆರೆಸಿ.
4. ಎಸ್.ಎಲ್.ಎಸ್.ಮತ್ತು ಸ್ಯಾಕರೀನ್ ಪುಡಿಯನ್ನು ಸೇರಿಸಿ ಬೆರೆಸಿ ಬಾಟಲಿಗೆ ತುಂಬಿ.

**ಸೂಚನೆ:** ಟೂತ್ ಪೌಡರನ್ನು ತುಂಬಿಡಲು ಪ್ಲಾಸ್ಟಿಕ್ ಬಳಸಬಾರದು.

**ಟೂತ್ ಪೌಡರ್ (2ನೇ ವಿಧಾನ)**

**ಬೇಕಾದ ವಸ್ತುಗಳು:**

| | |
|---|---|
| 1. ಕ್ಯಾಲ್ಸಿಯಂ ಕಾರ್ಬೋನೇಟ್ | 400 ಗ್ರಾಂ |
| 2. ಮೆಂಥಾಲ್ | 1/2 ಗ್ರಾಂ |
| 3. ಪಚ್ಚ ಕರ್ಪೂರ | 1/4 ಗ್ರಾಂ |
| 4. ಲವಂಗ ತೈಲ | 20 ಹನಿ |
| 5. ಮಿಥೈಲ್ ಸ್ಯಾಲಿಸಿಲೇಟ್ | 2 ಟೀ ಸ್ಪೂನ್ |
| 6. ಸೋಡಿಯಂ ಲಾರೆಲ್ ಸಲ್ಫೇಟ್ | 1 ಟೀ ಸ್ಪೂನ್ |
| 7. ಸ್ಯಾಕರಿನ್ ಪುಡಿ | 1/2 ಟೀ ಸ್ಪೂನ್ |

**ತಯಾರಿಸುವ ವಿಧಾನ:**

1. ಕ್ಯಾಲ್ಸಿಯಂ ಕಾರ್ಬೋನೇಟ್‌ನ್ನು ಒಂದು ಸ್ಟೀಲ್ ಪಾತ್ರೆಗೆ ಹಾಕಿ.
